
ಆಗಸ್ಟ್ ೧೯೭೮
ಕಸ್ತೂರಿ
೧-೨೫

'ಕಸ್ತೂರಿ'ಯ ಅರ್ಧವಾರ್ಷಿಕ ಪರಿವಿಡಿ

ಮಾರ್ಚ್ ೧೯೭೮ ರಿಂದ ಅಗಸ್ಟ್ ೧೯೭೮ ರ ವರೆಗೆ

ಕ್ರಮ : ಲೇಖನದ ಹೆಸರು, ತಿಂಗಳು, ಪುಟಸಂಖ್ಯೆ

ಮಾ= ಮಾರ್ಚ್, ಎ= ಎಪ್ರಿಲ್, ಮೇ= ಮೇ, ಜೂ= ಜೂನ್,
ಜು= ಜುಲೈ, ಅ= ಅಗಸ್ಟ್,

ಅನುಭವ

ಆರೋಗ್ಯ-ವೈದ್ಯಕೀಯ

ಇತಿಹಾಸ

ರಹಸ್ಯ-ಸಾಹಸ-ಸೋಜಿಗ

ವಿಜ್ಞಾನ

ಸಾಮಾನ್ಯ

ಹರಟೆ-ನಗೆಬರಹ

ಕಸ್ತೂರಿ

✡

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

✡

ಸಂಪಾದಕ :
ಪ. ಸು. ಭಟ್ಟ

✡

ಕಲೆ :
ಕೆ. ಬಿ. ಕುಲಕರ್ಣಿ

✡

ಮುಖಪುಟ :
ಛಾಯಾ-ಕಾಂತಾ

✡

ಚಂದಾ ದರ:

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

ಬೆಳಕಿಂಡಿ

ಮದುವೆಯಾಗುವ ಮುಂಚೆ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದರ ಬಗ್ಗೆ ಆರಂಭದ ಸೂತ್ರವೊಂದನ್ನು ರೂಪಿಸಿಕೊಂಡಿದ್ದೆ. ಆದರೀಗ ನನಗೆ ಆರು ಮಕ್ಕಳಿವೆ, ಸೂತ್ರ ಮರೆತುಹೋಗಿದೆ.

-ಲಾರ್ಡ್ ರೊಚೆಸ್ಟರ್

ಕೆಲ ಪುರುಷರು ವಿಚಿತ್ರ ಪ್ರಾಣಿಗಳು. ವರುಷಗಟ್ಟಲೇ ತಮ್ಮ ಹೆಂಡಂದಿರನ್ನು ಅವರು ಚುಂಬಿಸುವುದೇ ಇಲ್ಲ. ಆದರೆ ಯಾರಾದರೂ ಹಾಗೆ ಮಾಡಿದರೆ ಅವರನ್ನು ಹೊಡೆಯದೇ ಇರುವುದೂ ಇಲ್ಲ.

-ಥೆಲ್ಮಾ ಕಾರ್ಪೆಂಟರ್

ವಿವಾಹವಾಗಬೇಕೋ ಬೇಡವೋ ಎಂಬ ಬಗ್ಗೆ ಸಂದಿಗ್ಧಭಾವ ಬೇಡವೇಬೇಡ. ನನ್ನನ್ನು ಕೇಳಿದರೆ ನೀವು ಅನುಮಾನವಿಲ್ಲದೆ ವಿವಾಹವಾಗಿರಿ. ಒಳ್ಳೆಯ ಹೆಂಡತಿ ಸಿಕ್ಕಿದರೆ ನಿಮಗೆ ಸ್ವರ್ಗಕ್ಕೆ ಮೂರೇ ಗೇಣು. ಕೆಟ್ಟ ಗಯ್ಯಾಳಿಯಾದ ಹೆಂಡತಿ ಸಿಕ್ಕಿದರೆ ನೀವಾಗಿಯೇ ತತ್ತ್ವಜ್ಞಾನದತ್ತ ಒಲವು ತೋರುತ್ತೀರಿ. ಹೇಗೂ ತತ್ತ್ವಜ್ಞಾನ ಎಲ್ಲರಿಗೂ ಒಳ್ಳೆಯದೇ ತಾನೇ?

-ಸಾಕ್ರೆಟೀಸ್

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು, ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು, ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ

ಹರ್ಮನ್ ವೋಗ್ಲಿಂಗ್

ಜುಲೈ ೭೮ ರ 'ಕಸ್ತೂರಿ'ಯಲ್ಲಿ ಕನ್ನಡ ಪತ್ರಿಕಾಬ್ರಹ್ಮ ಹರ್ಮನ್ ಮೋಗ್ಲಿಂಗ್ ಇವರ ಬಗ್ಗೆ ಬರೆಯಲ್ಪಟ್ಟ ಮೋಹನ ಹೆಗಡೆಯವರ ಲೇಖನ ತುಂಬ ಮೆಚ್ಚುಗೆಯಾಯಿತು. ಸಾವಿರಾರು ಮೈಲಿ ದೂರದ ಜರ್ಮನಿಯಿಂದ ನಮ್ಮ ನಾಡಿಗೆ ಬಂದು ನಮ್ಮ ಭಾಷೆಯನ್ನು ಕಲಿತು ಕನ್ನಡದ ಮೊತ್ತ ಮೊದಲ ಪತ್ರಿಕೆ ಪ್ರಕಟಿಸಿದನೆಂದರೆ ಅತ್ಯಾಶ್ಚರ್ಯವಾಗುತ್ತದೆ. ಕನ್ನಡ ಭಾಷೆ, ಸಾಹಿತ್ಯಕ್ಕೆ ಬಾಸೆಲ್ ಮಿಷನ್ನಿನವರ ಕೊಡುಗೆ ಬಹಳ ಹೆಚ್ಚಿನದು. ನಿಜವಾಗಿಯೂ ಹರ್ಮನ್ ಮೋಗ್ಲಿಂಗ್ ಕನ್ನಡಿಗರೆಲ್ಲರ ಹೃದಯದಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡಿದ್ದಾನೆ.

ದಾವಣಗೆರೆ —ವಿಲ್‌ಹೆಲ್ಮಿನಾ ರೋಸಿ

ಭ್ರಷ್ಟಾಚಾರ

ತಮ್ಮ ಜುಲೈ ತಿಂಗಳ 'ಕಸ್ತೂರಿ'ಯಲ್ಲಿ ಲಾಂಗೂಲಾಚಾರ್ಯರು ಭ್ರಷ್ಟಾಚಾರದ ಪರಿಚಯ ಮಾಡುವಾಗ ನಾವು ನಿತ್ಯ ಕಾಣುವ ಸತ್ಯವನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಲೇಖನದ ಕೊನೆಯ ಪ್ಯಾರ ಓದಿದಾಗ ಈ ಬಗ್ಗೆ ಹಿರಿಯರೊಬ್ಬರು ಹೇಳಿದ್ದು ನೆನಪಿಗೆ ಬಂತು. ಅದು ಹೀಗಿದೆ: "ನೋಡ್ರಿ, ನಮ್ಮ ಕಾಲದಾಗ ಲಗ್ನ ಮಾಡಿ ಹೋಳಿಗಿ ಉಣ್ಣೋಣ ಅಂತಿದ್ರು; ಈಗ ಹೋಳಗಿ ಉಂಡು ಲಗ್ನ ಮಾಡೋಣ ಅನ್ನಾರೆ."

ಧಾರವಾಡ —ಕೇಶವ ಮೊಕಾಶಿ

ಮುಖಪುಟ

ಜುಲೈ ತಿಂಗಳ 'ಕಸ್ತೂರಿ' ಮುಖಪುಟ ಆಕರ್ಷಣೀಯವಾಗಿದೆ. 'ಕಸ್ತೂರಿ' ತನ್ನ ಘನತೆಯನ್ನು ಉಳಿಸಿಕೊಂಡುಬಂದುದು ಸಂತೋಷದ ವಿಷಯ.

ಹೆಗ್ಗೋಡು —ಕೃಷ್ಣಮೂರ್ತಿ ಭಾಗಿ

ಒಳ್ಳೆಯ ಸಂಚಿಕೆ

ಜುಲೈ ೭೮ ರ 'ಕಸ್ತೂರಿ' ಸಂಚಿಕೆ ಅತ್ಯುತ್ತಮವಾಗಿದೆ. ಎಲ್ಲ ಕಥೆಗಳೂ ಲೇಖನಗಳೂ ಉತ್ತಮ ಮಟ್ಟದವು. ವಿ. ಗೋವಿಂದರಾಜರ 'ಒಂಟಿ ಸಲಗದೊಡನೆ ಮುಖಾಮುಖಿ' ರೋಮಾಂಚಕವಾಗಿದೆ. ಎಂ. ಜಿ. ಭೀಮರಾವ್‌ರವರ 'ಅಮರ ಶಿಲ್ಪಿ' ಕಥೆಗಳಲ್ಲೆಲ್ಲಾ ಉತ್ತಮ. ಇತ್ತೀಚೆಗೆ ಪ್ರತಿ ಸಂಚಿಕೆಯಲ್ಲೂ ತಪ್ಪದೆ ಬರುತ್ತಿರುವ ಜಿ. ಟಿ. ನಾರಾಯಣರಾಯರ ವೈಜ್ಞಾನಿಕ ಲೇಖನಗಳು 'ಕಸ್ತೂರಿ'ಗೊಂದು ಕಳೆ ನೀಡುತ್ತವೆ.

ಸಿದ್ದಯ್ಯನಪುರ — ಎಲ್. ಪ್ರೇಮಶೇಖರ

ಸಸ್ಯಶಾಸ್ತ್ರಜ್ಞರಿಗೊಂದು ಸವಾಲು

ಜುಲೈ ತಿಂಗಳ 'ಕಸ್ತೂರಿ'ಯ ೯೭ನೇ ಪುಟದಲ್ಲಿ ಮೇಲಿನ ಶಿರೋನಾಮೆಯಲ್ಲಿ ಪ್ರಕಟವಾದ 'ಕಾಕೆಮಾನಿ'ಯವರ ಲೇಖನ ಓದಿ ಅಚ್ಚರಿ ಆಯಿತು.

ತಲಕಾವೇರಿಯ ಸ್ಥಳಪುರಾಣದಲ್ಲಿ 'ಅಶ್ವತ್ಥನಾರಾಯಣ'ನ ವಿಚಾರ ಇರುವುದೇನೊ ನಿಜ. ಆ ಸ್ಥಾನದಲ್ಲಿ ಈಗಲೂ ಒಂದು ಗಿಡವಿರುವುದೂ ಸರಿಯೆ. ಆದರೆ ಈ ಅಶ್ವತ್ಥಗಿಡ ಸುಮಾರು ಹತ್ತು ಹನ್ನೆರಡು ವರ್ಷಗಳಿಗಿಂತ ಹೆಚ್ಚು ಹಳೆಯದಲ್ಲವೆಂದು ಹೇಳುವುದು ಸತ್ಯ. ಇದಕ್ಕೆ ಯಾವ ಸಸ್ಯಶಾಸ್ತ್ರದ ತಿಳಿವಳಿಕೆಯೂ ಅನಗತ್ಯ. ೧೯೬೭, ೬೮, ೬೯ ಈ ಮೂರು ವರ್ಷಗಳಲ್ಲಿ ತಲಕಾವೇರಿಯಲ್ಲಿ ನಡೆದ ಅನೇಕ ಘಟನೆಗಳ ಅನುಭವ ಇರುವ ಯಾರನ್ನು ಕೇಳಿದರೂ ಈ ವಿಚಾರ ಸ್ಪಷ್ಟವಾಗುವುದು. ಬಹುಶಃ ಈ ಸಮಯದಲ್ಲಿ ಸ್ಥಳೀಯ ದೈನಿಕಗಳಲ್ಲಿ ಬಂದ ವರದಿಗಳನ್ನು ನೋಡಿದರೆ ನಿಜಾಂಶ ತಿಳಿಯಲೂ ಬಹುದು. ಲೇಖಕರು ಸಸ್ಯಶಾಸ್ತ್ರಜ್ಞರಿಗೆ ಸವಾಲು ನೀಡಿದುದು ವಿಜ್ಞಾನಕ್ಕೇ ಎಸಗಿದ ಅಪಚಾರ. "ತೊಂಭತ್ತು ನೂರರ ಗಡಿ ದಾಟಿರುವವ"ರಿರಲಿ, ೧೯೬೭, ೬೮, ೬೯ರಲ್ಲಿ ತಲಕಾವೇರಿಯಲ್ಲಿದ್ದ, ನೋಡಿ ತಿಳಕೊಳ್ಳುವ ಬುದ್ಧಿ ಬಲಿತ ಬಾಲಕರೇ ಈ "ರಹಸ್ಯಮಯ ಶಕ್ತಿ" ಆ ಗಿಡದಲ್ಲಿರುವುದೊ ಅಥವಾ ಅದು ಲೇಖಕರ ಕಪೋಲಕಲ್ಪಿತವೊ ಎಂಬುದನ್ನು ಬಯಲಿಗೆಳೆಯಬಲ್ಲರು.

ಚಾರಿತ್ರಿಕ ಘಟನೆಗಳು ಕಾಲಾಂತರಗಳಲ್ಲಿ ಸಂಭವಿಸುವವು ಎಂಬುದು ಸರ್ವವಿದಿತ. ಆದರೆ ಇದೇ ವರದಿಯಾಗಿ ಚರಿತ್ರೆಗೆ ತಲುಪಿದಾಗ ವೈಪರೀತ್ಯ ಇಲ್ಲವೆ ರೂಪಾಂತರ ಪೊಂದಿ, ನಡೆದ ಘಟನೆಗೂ ಚರಿತ್ರೆಯ ಉಲ್ಲೇಖಕೂ ಸಂಬಂಧವಿಲ್ಲದೆ ಚರಿತ್ರೆ ಹೇಗೆ ಬರೆದಿಟ್ಟ ಅಸತ್ಯದ ಕಂತೆಯಾಗುವುದು ಎಂಬುದಕ್ಕೆ ಇದೊಂದು ಅತ್ಯುತ್ತಮ ನಿದರ್ಶನ. ಅಲ್ಲದೆ ಮಾನವಕುಲದಲ್ಲಿ ಮೂಢ ನಂಬಿಕೆಯೊಂದು ಬೆಳೆದು ಬಾಳುವಂತೆ ಮಾಡುವ ಚಳಕ "ಸಾವಿರಾರು ವರ್ಷಗಳಿಂದ ಬದಲಾಗದೆ ಚಿರಂಜೀವಿಯಂತಿರುವ ಈ ವೈಚಿತ್ರ್ಯ..." ಎಂಬಲ್ಲಿ ಎದ್ದು ಕಾಣುತ್ತದೆ.

ಡೆಂಡ್ರೊಕ್ರೊನೋಲೊಜಿ (Dendrochronology) ಎಂಬ ಶಾಸ್ತ್ರವಿಭಾಗ ಮರಗಳ ಬೆಳವಣಿಗೆಯ ಬಗೆಯರಿತು ಅವುಗಳ ವಯೋಮಿತಿ ನಿರ್ಣಯ ಮಾಡುವಲ್ಲಿ ಸಹಾಯಕವಾಗಿದೆ. ಇದು ಅರಣ್ಯ ಇಲಾಖೆಯಲ್ಲಿ ಬಳಕೆಯಲ್ಲಿದೆ. ಅಂತೆಯೆ ಜಪಾನಿನಲ್ಲಿ ಬೊನ್‌ಸ್ಸ್ಯಾ (Bonsai) ಕ್ರಮದಲ್ಲಿ ಸಸ್ಯಗಳನ್ನು ಬೆಳೆಸುವುದೂ ಹಲವು ದಶಕಗಳು ಬೆಳೆದ ಮರಗಳು ವಾಮನಾಕಾರದಲ್ಲಿರುವುದೂ ವಾಚಕ ಮಹಾಶಯರಿಗೆ ತಿಳಿದಿರಬಹುದು. ಹೀಗಿರುವಾಗ ಕೆಲವು ಶತಕಗಳಿಂದ ಬೆಳೆಯುತ್ತಿದ್ದರೂ ಪೌಷ್ಟಿಕಾಂಶಗಳ ತೀವ್ರ ಅಭಾವದಿಂದಲೂ ನೈಸರ್ಗಿಕ ಪರಿಸ್ಥಿತಿಗಳಿಂದಲೂ ಮರ ವಾಮನಾಕಾರವಾಗಿದ್ದರೂ ವಿಚಿತ್ರವಾಗದು. ತಲಕಾವೇರಿಯ ಕ್ಷೇತ್ರದಲ್ಲಿದ್ದ ಏಳು (ಈಗ ಆರು ಮಾತ್ರ ಉಳಿದಿವೆ) ಅತ್ತಿ (ಔದುಂಬರ) ಮರಗಳು ನೀರಿರುವ ಜಾಗಗಳನ್ನು ಬೊಟ್ಟುಮಾಡಿ ತೋರಿಸುವುದರಿಂದ (Water indicators) ನಿಜವಾಗಿಯೂ ಮಾನವ ಜನಾಂಗದ ಗಮನ ಸೆಳೆಯತಕ್ಕವು.

ಈ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೇ ಹೊರತು 'ರಹಸ್ಯಮಯ' ಎಂದು ಭಕ್ತಾದಿಗಳನ್ನು ವಿವಿಧ ರೀತಿಯಲ್ಲಿ ವಂಚಿಸುವುದು ಬುದ್ಧಿಜೀವಿಗಳೆನಿಸಿದವರಿಗೆ ಭೂಷಣವಲ್ಲ. ತಲಕಾವೇರಿಯ ಸ್ಥಳ ಮಾಹಾತ್ಮ್ಯವಾಗಲಿ ಆ ಪುಣ್ಯಕ್ಷೇತ್ರದ ಮಹಿಮೆಯಾಗಲಿ ಅಲ್ಲಿಯ 'ಅಶ್ವತ್ಥನಾರಾಯಣ'ನ ಪ್ರಾಮುಖ್ಯವಾಗಲಿ ಈ ತರಹದ ಬರಹಗಳಿಂದ ವ್ಯತ್ಯಾಸವಾಗಲಾರವು.

ಕುಮಾನಾ ವೆನೆಝ್ಯುಯೇಲ
ದ. ಅಮೆರಿಕ — ಪಿ. ಕೇಶವಭಟ್ಟ

['ಕಾಕೇಮಾನಿ'ಯವರು ಈ ಲೇಖನವನ್ನು 'ಕಸ್ತೂರಿ'ಗೆ ೧೪-೧-೬೫ ರಂದು ಕಳಿಸಿದ್ದರು. ಹದಿಮೂರು ವರ್ಷಗಳಿಂದ ನಮ್ಮ ಫೈಲುಗಳಲ್ಲಿ ಉಳಿದುಬಿಟ್ಟಿದ್ದ ಈ ಕಿರುಲೇಖನ ಸ್ವಾರಸ್ಯಕರವಾಗಿ ಕಂಡುದರಿಂದ ಜುಲೈ 'ಕಸ್ತೂರಿ'ಯಲ್ಲಿ ಪ್ರಕಟಿಸಿದೆವಷ್ಟೆ. ಲೇಖನದ ಜೊತೆಗಿದ್ದ ಪತ್ರದ ಪೂರ್ತಿಪಾಠವಿಲ್ಲಿದೆ: —ಸಂ.

'ಸಸ್ಯಶಾಸ್ತ್ರಜ್ಞರಿಗೊಂದು ಸವಾಲು' ಎಂಬ ಲೇಖನವನ್ನು 'ಕಸ್ತೂರಿ'ಯಲ್ಲಿ ಪ್ರಕಟಣೆಗಾಗಿ ಕಳುಹಿಸಿದ್ದೇನೆ. ಬರೆಯಲ್ಪಟ್ಟಿರುವ ಈ ಅಶ್ವತ್ಥ ಗಿಡವು ಕಾವೇರಿ ತಾಯಿಯ ಉಗಮಸ್ಥಾನದಲ್ಲಿದೆ. ಲಕ್ಷಾಂತರ ಜನರು ಬಂದು ಈ ವಿಚಿತ್ರ ಗಿಡದ ದರ್ಶನವನ್ನು ಮಾಡುತ್ತಲೇ ಇರುವರಾದರೂ ಯಾರೂ ಈ ಗಿಡವು ಬದಲಾಗದಂತೆ ಶತಮಾನಗಳಿಂದ ಇರುವ ಕಾರಣವನ್ನು ಕಂಡುಹಿಡಿಯುವ ಸಾಹಸ ಮಾಡಲಿಲ್ಲ. ಈ ಸತ್ಯತೆಯನ್ನು ಯಾರೂ ಬಂದು ಕಾಣಬಹುದು. ನನ್ನ ತಂದೆಗೆ ಇಂದು ೯೮ ಪ್ರಾಯ. ಅವರು, ಒಂಭತ್ತು ವಯಸ್ಸಿನವರಿರುವಾಗಲೇ ಈ ಗಿಡವನ್ನು ನೋಡಿದ್ದು. ಅದು ಇಂದೂ ಅದೇ ತರಹದಲ್ಲಿರುವ ಸತ್ಯತೆಯನ್ನು ಅವರು ಒಪ್ಪುತ್ತಾರಾದ್ದರಿಂದ ಇದರಲ್ಲಿ ಯಾವುದೋ ಒಂದು ಪ್ರಬಲ ಒಳ ಕಾರಣ ಇರಲೇಬೇಕೆಂದಾಗದೆ? ಈ ಸತ್ಯತೆಯನ್ನು ವಿಮರ್ಶಿಸಿಸಲು, ಯಾರೇ ಆಶಿಸಿದರೂ ಅವರಿಗೆ ಆಹ್ವಾನವೀಯಲು ನಾನು ಸಿದ್ಧನಿದ್ದು, ಸಂಶೋಧನೆಗೆ ಸಕಲ ಸಹಾಯ ಮಾಡಲೂ ತಯಾರಿರುತ್ತೇನೆ.

ಬಲ್ಯ ಮುಂಡೂರು
೧೨-೧-೬೫ ಕಾಕೇಮಾನಿ]

ಕಸ್ತೂರಿ

ಸಂಚಿಕೆ: ೧೨ | ಕಸ್ತೂರಿ, ಅಗಸ್ಟ ೧೯೭೮ | ವರ್ಷ: ೨೨

ದೃಷ್ಟಿದೋಷ

ಖಲೀಲ ಗಿಬ್ರಾನ್

ಒಂದು ದಿನ ಸಂಜೆ ಒಂದು ಮೊಸಳೆ ಹಾಗೂ ಒಂದು ಕತ್ತೆಕಿರುಬ ನದೀತಟದಲ್ಲಿ ಭೇಟಿಯಾದುವು. ಎರಡೂ ಪರಸ್ಪರರನ್ನು ಅಭಿನಂದಿಸಿದ ನಂತರ ಸುಖದುಃಖದ ಮಾತುಕತೆಯಾಡಲಾರಂಭಿಸಿದುವು.

ಕತ್ತೆಕಿರುಬ ಮೊಸಳೆಯನ್ನು ಪ್ರಶ್ನಿಸಿತು:

"ಏನು ಮೊಸಳೇರಾಜ, ಆರೋಗ್ಯವೇ?"

ಮೊಸಳೆ ಅಳುತ್ತ ಹೇಳಿತು:

"ಸ್ನೇಹಿತನೇ! ಎಲ್ಲಿಯ ಆರೋಗ್ಯ-ಏನು ಕತೆ? ನನ್ನ ದುಃಖ ಅಪಾರ; ವೇದನೆ ಹಾಗೂ ಶೋಕದಿಂದ ವ್ಯಾಕುಲನಾಗಿ ನಾನು ಯಾವಾಗ ಕಣ್ಣೀರು ಸುರಿಸಿದರೂ ಈ ಹಾಳು ಜನ ಹೇಳುತ್ತಿರುತ್ತಾರೆ, 'ಓಹೋ! ಇದು ಮೊಸಳೆಯ ಕಣ್ಣೀರಲ್ಲವೇ?!' ಎಂದು.

"ಈ ಶಬ್ದಗಳನ್ನು ಪದೇ ಪದೇ ಕೇಳಿ ಕೇಳಿ ನನ್ನ ಹೃದಯ ಎಷ್ಟೊಂದು ಚೂರು ಚೂರಾಗಿರಲಿಕ್ಕಿಲ್ಲ. ನೀನೇ ಯೋಚಿಸು."

ಕತ್ತೆಕಿರುಬ ತನ್ನ ಆಲಾಪನೆ ಶುರುಮಾಡಿತು:

"ಸರಿಯಾಗಿ ಹೇಳಿದೆ ಬಂಧು! ಪ್ರಪಂಚದ ಈ ಹಾಳು ಜನರಿಂದಾಗಿ ನಿನ್ನಂತೆಯೇ ನಾನೂ ದುಃಖ ಅನುಭವಿಸುತ್ತಿದ್ದೇನೆ. ನಾನಾದರೂ ಅಷ್ಟೆ; ಯಾವಾಗಲಾದರೊಮ್ಮೆ ರೆಪ್ಪೆ ಹೊಡೆಯದೆ ಈ ಪ್ರಪಂಚದ ಸೃಷ್ಟಿ ಸೌಂದರ್ಯ, ಚಮತ್ಕಾರ, ವಿಚಿತ್ರಗಳನ್ನು ನೋಡುತ್ತಾ ಆನಂದಾತಿರೇಕದಿಂದ ಸಂತೃಪ್ತಿಯ ನಗೆ ನಕ್ಕಾಗ ಈ ಹಾಳು ಜನ ಹೇಳುತ್ತಿರುತ್ತಾರೆ: 'ಓಹೋ!... ಇದು ಕತ್ತೆ ಕಿರುಬನ ಅಟ್ಟಹಾಸವಲ್ಲವೇ?!' ಎಂದು.

"ಆಗ ನನ್ನ ಹೃದಯಕ್ಕೆ ಎಂಥ ವೇದನೆಯಾಗುತ್ತದೆ, ನನ್ನ ಮನಸ್ಸು ಎಷ್ಟು ನೊಂದುಕೊಳ್ಳುತ್ತದೆ, ಎಂಬುದನ್ನು ನೀನೇ ಊಹಿಸು!"

ಅವರವರ ದೃಷ್ಟಿ

ಒಬ್ಬ ರೈತ ತನ್ನ ಹೊಲದಲ್ಲಿ ಉಳುತ್ತಿದ್ದಾಗ, ಒಂದು ಅಮೃತಶಿಲೆಯ ಸುಂದರವಾದ ಮೂರ್ತಿ ಸಿಕ್ಕಿತು. ಈ ಅಮೃತಶಿಲೆಯ ಮೂರ್ತಿ ಬಹಳ ವರ್ಷಗಳದಾಗಿತ್ತು. ರಮ್ಯವಾದ ಹಾಗು ದುರ್ಲಭವಾದ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸವಿದ್ದ ಧನಿಕನೊಬ್ಬನಲ್ಲಿಗೆ ಈ ಪ್ರತಿಮೆಯನ್ನು ಆ ರೈತ ಕೊಂಡೊಯ್ದ. ಕಲೋಪಾಸಕನಾದ ಆ ಶ್ರೀಮಂತ ರೈತನಿಗೆ ಹೆಚ್ಚು ಹಣ ಕೊಟ್ಟು ಶಿಲಾಮೂರ್ತಿಯನ್ನು ಕೊಂಡುಕೊಂಡ.

ಪ್ರತಿಮೆಯನ್ನು ಮಾರಿದ ರೈತನ ಮನಸ್ಸಿನಲ್ಲಿ ವಿಚಾರಗಳ ಬಿರುಗಾಳಿಯೇ ಎದ್ದಿತು.

'ಇಷ್ಟೊಂದು ಅಗಾಧ ಹಣದಿಂದ ನನ್ನ ಜೀವನ ಎಷ್ಟೊಂದು ಪರಿವರ್ತನೆಯಾಗಲಿಕ್ಕಿಲ್ಲ! ಎಷ್ಟೋ ವರ್ಷಗಳಿಂದ ಭೂಮಿಯಲ್ಲಿ ಹುದುಗಿ ಹೋದ ಕೆತ್ತಿದ ಕಲ್ಲಿನ ಪ್ರತಿಮೆಗೆ ಇಷ್ಟೊಂದು ಹಣ ಸಿಗುತ್ತದೆಂದು ಎಷ್ಟು ಜನಕ್ಕೆ ಗೊತ್ತುಂಟು?! ಈ ಜನರಾದರೂ ಎಂಥವರು?! ಹಣವನ್ನು ಹೀಗೆ ಬರಿದೇ ಹಾಳುಮಾಡಿಕೊಳ್ಳುತ್ತಿದ್ದಾರಲ್ಲ!'

ಇತ್ತ, ಕಲೋಪಾಸಕ ಧನಿಕ ತನ್ನದೇ ವಿಚಾರಗಳ ತಾಕಲಾಟದಲ್ಲಿ ತೊಡಗಿದ್ದ.

'ಆಹಾ! ಮೂರ್ತಿಯದು ಎಂತಹ ಸ್ನಿಗ್ಧ ಸೌಂದರ್ಯ!

'ಇದು ದೊರೆತು ಎಂತಹ ಕನಸು ನನಸಾದಂತಾಗಿದೆ. ಎಷ್ಟೋ ವರ್ಷಗಳ ನಿದ್ರೆಯಿಂದ ಎಚ್ಚೆತ್ತು ಈ ಶಿಲಾಮೂರ್ತಿ ಹೊಚ್ಚ ಹೊಸದಾಗಿ ಹೊಸ ಹುರುಪಿನಿಂದ ಮಧುರವಾಗಿ ನನ್ನೆದುರು ನಿಂತಂತಿದೆ.

'ಜಡ-ವ್ಯರ್ಥ ಧನಕ್ಕೆ ಬದಲಾಗಿ ಯಾರಾದರೂ ಇಂತಹ ಸುಂದರವಾದ ಪ್ರತಿಮೆಯನ್ನು ಮಾರಲು ಸಾಧ್ಯವೇ?!'

ಸಂಗ್ರಹ: ಎಸ್. ವಿಶ್ವನಾಥ

'ಎಲ್ಲಾ ಜನಗಳಿಂದಲೇ...'

ಪ್ರಸಿದ್ಧ ವಿಜ್ಞಾನಿ ಥಾಮಸ್ ಎಡಿಸನ್ನನನ್ನು ಒಮ್ಮೆ ಉತ್ತರ ಕೆರೋಲಿನಾದ ರಾಜ್ಯಪಾಲರು ಬಹಳ ಹೊಗಳಿದರು, ಅವನು ಮಾಡಿದ್ದ ಅದ್ಭುತ ಸಂಶೋಧನೆಗಾಗಿ.

"ನಾನೇನೂ ಅಂತಹ ಸಂಶೋಧಕನಲ್ಲ ಬಿಡಿ. ನಿಜ ಹೇಳಬೇಕೆಂದರೆ ಅದರಲ್ಲಿ ಒಂದೋ ಎರಡೋ ಪೂರ್ಣವಾಗಿ ನನ್ನ ಸ್ವಂತದ್ದು. ಮಿಕ್ಕದ್ದೆಲ್ಲಾ ಜನಗಳಿಂದ ವಿಷಯ ಸಂಗ್ರಹಿಸಿ ಸಂಶೋಧಿಸಿದ್ದು" ಎಂದ ಎಡಿಸನ್ ವಿನಯದಿಂದ.

"ಏನು !? ನನಗೆ ಅರ್ಥವೇ ಆಗುತ್ತಿಲ್ಲ" ಎಂದರು ರಾಜ್ಯಪಾಲರು.

ಅದಕ್ಕೆ ಎಡಿಸನ್ "ನೋಡಿ ನಾನು ಸ್ಪಂಜಿನಂತೆ; ಎಲ್ಲಾ ಮೂಲಗಳಿಂದಲೂ, ಎಲ್ಲಾ ಜನಗಳಿಂದಲೂ ವಿಷಯ ಸಂಗ್ರಹಿಸುತ್ತೇನೆ. ಸಂಗ್ರಹಿಸಿ ಅವುಗಳನ್ನು ಜನರಿಗೆ ಉಪಯೋಗವಾಗುವಂತೆ ಸಂಶೋಧನೆಗಳಿಗೆ ಬಳಸಿಕೊಳ್ಳುತ್ತೇನೆ. ಹೆಚ್ಚಿನ ಸಂಶೋಧನೆಗಳಿಗೆ ನಾನು ಬಳಸಿಕೊಳ್ಳುವ ಉಪಾಯಗಳು, ವಿಷಯಗಳು, ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಬಾರದೆ ಬಿಟ್ಟು ಬಿಟ್ಟ ಜನಗಳಿಂದಲೇ ಸಂಗ್ರಹಿಸಿದ್ದು" ಎಂದ.

–ಸಂಗ್ರಹ: ಎಂ. ಕೆ. ಬದರಿನಾಥ್

ಜಗತ್ತಿನಲ್ಲಿಂದು ಇದರಷ್ಟು ಜನಪ್ರಿಯ ಆಟ ಬೇರೊಂದಿಲ್ಲ



ವಿಶ್ವಕಪ್ ಮತ್ತು ಫುಟ್‌ಬಾಲ್ ಪ್ರಭುತ್ವ

ಶಿವಾನಂದ ಜೋಶಿ

ಕ್ರೀಡೆ ಇಂದು ಅಂತಾರಾಷ್ಟ್ರೀಯ ಪ್ರತಿಷ್ಠೆಯ ಅಳತೆಗೋಲು. ಶ್ರೀಮಂತ ರಾಷ್ಟ್ರಗಳ ನಡುವೆ ಈ ಪ್ರತಿಷ್ಠೆಗಾಗಿ ಭಾರಿ ಪೈಪೋಟಿ. ಈ ಪೈಪೋಟಿ ಕೆಲವು ಕ್ರೀಡೆಗಳ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಇಂದು ಯಾವುದೊಂದು ಕ್ರೀಡೆ ಎಷ್ಟು ಶ್ರೀಮಂತವೋ, ಆಟಗಾರರೂ ಅಷ್ಟೇ ಶ್ರೀಮಂತರು. ಇಂದು ಟೆನಿಸ್ ಮತ್ತು ಫುಟ್‌ಬಾಲ್‌ಗಳಲ್ಲಿರುವಷ್ಟು ಹಣ ಬೇರೆ ಯಾವ ಕ್ರೀಡೆಗಳಲ್ಲೂ ಇಲ್ಲ. ಇದೀಗ ಕ್ರಿಕೆಟ್, ಹಣದ ಮಾನದಿಂದ ಬೆಳೆಯ ತೊಡಗಿದೆ. ಕ್ರಮೇಣ ಒಂದೊಂದೇ ಕ್ರೀಡೆಯಲ್ಲಿ ವಿಶ್ವಕಪ್ ಸ್ಪರ್ಧೆ ಆರಂಭವಾದಂದಿನಿಂದ ಆಯಾ ಕ್ರೀಡೆಯ ಪರಾಭವಿಗಳ ಮತ್ತು ವಿಜಯಿಗಳ ಪ್ರತಿಷ್ಠೆಗೆ ಎಲ್ಲೆಯಿಲ್ಲ. ಸರಿಸಾಟಿ ಇಲ್ಲ. ಗೆದ್ದ ರಾಷ್ಟ್ರದಲ್ಲಿ ಅಂದು ಹಬ್ಬ. ಇತ್ತೀಚೆಗೆ ಅರ್ಜೆಂಟಿನಾ ಫುಟ್‌ಬಾಲ್ ವಿಶ್ವಕಪ್ ಗೆದ್ದಾಗ ಬ್ಯೂನೋಸ್ ಏರಿಸ್ ಬೀದಿಗಳಲ್ಲಿ ಕಂಡುಬಂದ, ಕೇಳಿಬಂದ ಕೇಕೆ, ಕುಣಿತ, ಸಂಭ್ರಮ ಯಾವುದೇ ರಾಷ್ಟ್ರದ ಪ್ರಥಮ ಸ್ವಾತಂತ್ರ್ಯೋತ್ಸವದಲ್ಲಿ ಕಂಡುಬರುವ ವೈಭವಕ್ಕಿಂತ ಕಡಿಮೆ ಆಗಿರಲಿಲ್ಲ. ಈ ಮಾತು ಹಾಗಿರಲಿ. ಗೆದ್ದ ಟೀಮಿನ ಪ್ರತಿಯೊಬ್ಬ ಆಟಗಾರನಿಗೆ ದೊರೆತ ಹಣ ಎಷ್ಟು ಗೊತ್ತೆ? ಬಹುಮಾನ, ಪ್ರೋತ್ಸಾಹಧನ, ಜಾಹೀರಾತು ಶುಲ್ಕ ಎಲ್ಲ ಸೇರಿ ಅರ್ಜೆಂಟಿನಾದ ಪ್ರತಿಯೊಬ್ಬ ಆಟಗಾರನಿಗೆ ಕನಿಷ್ಟ ಹತ್ತು ಲಕ್ಷ ರೂ. ಕೈಸೇರಿತೆಂದು ಅಂದಾಜು. ವಿಶ್ವಕಪ್ ೧೮ ಕ್ಯಾರೆಟ್ ಚಿನ್ನದ ತಯಾರಿಕೆ. ಅದರ ಮೌಲ್ಯ ಒಂದು ಲಕ್ಷ ಮಾರ್ಕುಗಳು. ಇದಲ್ಲದೆ ವಿಜಯೀ ಟೀಮಿನ ಪ್ರತಿ ಆಟಗಾರ ಮತ್ತು ಅಧಿಕಾರಿಗೆ ಸ್ವರ್ಣ ಪದಕ. ರನರ್‌ಅಪ್ ಟೀಮಿನ ಎಲ್ಲರಿಗೂ ಚಿನ್ನದ ಲೇಪವಿರುವ ರಜತಪದಕಗಳು. ಅರ್ಜೆಂಟಿನಾದ ಪ್ರತಿಯೊಬ್ಬ ಆಟಗಾರ, ಸ್ಪರ್ಧೆಯ ಮೊದಲ ಹಂತ ದಾಟಿದಾಗಲೇ ೫೦೦೦ ಡಾಲರ್ ಪಡೆದಿದ್ದ. ಟೀಮು ಅಂತಿಮ ಪಂದ್ಯಕ್ಕೆ ಬಂದಾಗ ಪ್ರತಿಯೊಬ್ಬನಿಗೆ ಮತ್ತೆ ೨೫,೦೦೦ ಡಾಲರ್ ಬಂದವು. ವಿಶ್ವಕಪ್ ಗೆದ್ದರೆ ಪ್ರತಿಯೊಬ್ಬ ಆಟಗಾರನಿಗೆ ೨೨,೦೦೦ ಡಾಲರ್ ಬಹುಮಾನ ಕೊಡುವುದಾಗಿ ಬ್ರೆಜಿಲ್‌ನ ಕ್ರೀಡಾಮಂಡಳಿ ಪ್ರಕಟಿಸಿತ್ತು. ನಂತರ ಆಟಗಾರರು ೬೦,೦೦೦ ಡಾಲರ್ ಕೇಳಿದರು. ಮೊದಲು ಗೆದ್ದುಕೊಂಡು ಬನ್ನಿ, ಕೊಡುತ್ತೇವೆ ಎಂದರು. ಅರ್ಜೆಂಟಿನಾ ೭೦ ಕೋಟಿ ಡಾಲರುಗಳ ವೆಚ್ಚದಿಂದ ಕಟ್ಟಿಸಿದ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಕುಳಿತು ನೋಡಿದವರಿಗಿಂತ ನೂರು ಪಾಲು ಹೆಚ್ಚು ಮಂದಿ (೧೨೫ ರಾಷ್ಟ್ರಗಳಲ್ಲಿ) ಟೆಲಿವಿಜನ್ ಸೆಟ್‌ಗಳ ಮೇಲೆ ಪಂದ್ಯಗಳನ್ನು ವೀಕ್ಷಿಸಿದರು. ೧೯೮೨ರ ವಿಶ್ವಕಪ್ ಸ್ಪೇನ್‌ನಲ್ಲಿ. ಅಲ್ಲಿಯ ಪಂದ್ಯಗಳ ಟೆಲಿ

ವಿಜನ್ ಹಕ್ಕುಗಳನ್ನು ಕೊಳ್ಳಲು ಒಂದು ಅಮೇರಿಕನ್ ಸಂಸ್ಥೆ ೨॥ ಕೋಟಿ ಡಾಲರುಗಳನ್ನು ಕೊಡಲು-ಮುಂದೆ ಬಂದಿದೆ. ಆದರೆ ಅಂತಾರಾಷ್ಟ್ರೀಯ ಫುಟ್‌ಬಾಲ್ ಮಹಾಮಂಡಳ ೫ ಕೋಟಿ ಡಾಲರ್‌ಗಳನ್ನು ಕೇಳಿದೆ.

ಆದರೆ ೪೮ ವರ್ಷಗಳ ಹಿಂದೆ ಉರುಗ್ವೆಯಲ್ಲಿ ಮೊದಲ ವಿಶ್ವಕಪ್ ಫುಟ್‌ಬಾಲ್ ನಡೆದಾಗ ಇದ್ದ ಪರಿಸ್ಥಿತಿಯೇ ಬೇರೆ. ಯುರೋಪಿನ ಅನೇಕ ರಾಷ್ಟ್ರಗಳಿಗೆ ಆಸಕ್ತಿ ಇರಲಿಲ್ಲ. ೧೯೦೪ರಲ್ಲಿ ಅಸ್ತಿತ್ವಕ್ಕೆ ಬಂದ ಅಂತಾರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆಯಲ್ಲಿ ಐರೋಪ್ಯರ–ಮುಖ್ಯವಾಗಿ ಫ್ರೆಂಚ್ ಮತ್ತು ಬೆಲ್ಜಿಯನ್‌ರ–ಪ್ರಭಾವ ಹೆಚ್ಚಾಗಿತ್ತು. ಸಂಸ್ಥೆಯ ಅಧ್ಯಕ್ಷ ರಾಬರ್ಟ್ ಗೆರ್ಲಿನ್ ವಿಶ್ವಕಪ್ ವಿಚಾರ ಪ್ರಸ್ತಾಪ ಮಾಡಿದಾಗ ಯಾರಿಂದಲೂ ಉತ್ತೇಜಕ ಪ್ರತಿಕ್ರಿಯೆ ದೊರೆಯಲಿಲ್ಲ. ೧೯೨೪ (ಪಾ ರಿಸ್)ಮತ್ತು ೧೯೨೮ (ಆ್ಯಮಸ್ಟರ್‌ಡ್ಯಾಮ್) ಒಲಿಂಪಿಕ್‌ನಲ್ಲಿ ಸ್ವರ್ಣ ಪದಕ ಗೆದ್ದು ಫುಟ್‌ಬಾಲ್‌ಗೆ ಹೊಸ ರೂಪ, ಚೇತನ ನೀಡಿದ ಉರುಗ್ವೆ ಪ್ರಬಲ ಶಕ್ತಿಯಾಗಿ ಬೆಳೆದಾಗ ವಿಶ್ವಕಪ್ ವಿಚಾರಕ್ಕೆ ಮತ್ತೆ ಚಾಲನೆ ದೊರೆಯಿತು. ಪ್ಯಾರಿಸಿನ ಕೋಯುಂಪ್ ಸ್ಟೇಡಿಯಂನಲ್ಲಿ ಅಂತಾರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆ ತಾನೆ ವಿಶ್ವಕಪ್ ಟೂರ್ನಿ ನಡೆಸಲು ನಿರ್ಧರಿಸಿತು. ಆದರೆ ಸಂಘಟನೆಯ ಭಾರ ಯಾರು ಹೊರಬೇಕು? ೧೯೩೦ ರಲ್ಲಿ ತನ್ನ ಸ್ವಾತಂತ್ರ್ಯದ ಶತಮಾನೋತ್ಸವ ಸಂದರ್ಭದಲ್ಲಿ ನಡೆಸಲು ಅನುಮತಿ ನೀಡಿದರೆ ಸಂಘಟನೆಯ ಹೊಣೆ ಹೊರುವುದಾಗಿ ಉರುಗ್ವೆ ಪ್ರಕಟಿಸಿತು. ಭಾಗವಹಿಸುವ ಟೀಮುಗಳ ಪ್ರಯಾಣ, ಊಟ, ವಸತಿ ವೆಚ್ಚ ನಿಭಾಯಿಸಲು ಅದು ಒಪ್ಪಿತು. ಯುರೋಪಿನ ರಾಷ್ಟ್ರಗಳಿಗೆ ಉರುಗ್ವೆ ಈ ಗೌರವ ಗಿಟ್ಟಿಸುವುದು ಬೇಡವಾಗಿತ್ತು. ಆದರೆ ವೆಚ್ಚದ ಪ್ರಶ್ನೆ ಅವುಗಳಿಗೆ ಆತಂಕವಾಗಿ ಪರಿಣಮಿಸಿರಬೇಕು. ಉರುಗ್ವೆ ೪೫ ಲಕ್ಷ ಪೌಂಡ್ ವೆಚ್ಚದಲ್ಲಿ ರಾಜಧಾನಿ ಮಾಂಟೆವಿಡೋವಿನಲ್ಲೆ ೭೦,೦೦೦ ಪ್ರೇಕ್ಷಕರಿಗೆ ಸಾಲುವಷ್ಟು ದೊಡ್ಡದಾದ ಕ್ರೀಡಾಂಗಣ ನಿರ್ಮಾಣ ಆರಂಭಿಸಿತು. ಮಳೆಯ ಆತಂಕ ಎದುರಿಸಿ, ೧೯೩೦ರ ಜುಲೈ ೧೮ರ ಆರಂಭೋತ್ಸವಕ್ಕೆ ಕ್ರೀಡಾಂಗಣ ಅಣಿಗೊಳಿಸಿದರು ಉರುಗ್ವೆ ಉತ್ಸಾಹಿಗಳು.

ಆದರೆ ಇದೇ ಉತ್ಸಾಹ ಐರೋಪ್ಯ ಟೀಮುಗಳಿಗೆ ಇರಲಿಲ್ಲ. ಇಟಲಿ, ಸ್ಪೇನ್, ಆಸ್ಟ್ರಿಯಾ, ಹಂಗರಿ, ಆಮಂತ್ರಣ ನಿರಾಕರಿಸಿದವು. ದೊರೆ ಕ್ಯಾರಲ್‌ರ ಆದೇಶದಂತೆ ರುಮಾನಿಯಾ ಒಪ್ಪಿತು. ಬೆಲ್ಜಿಯಮ್, ಫ್ರಾನ್ಸ್ ಮತ್ತು ಯುಗೋಸ್ಲಾವಿಯಾ ಸಹ ಮಾಂಟೆವಿಡೋ ಪ್ರಯಾಣಕ್ಕೆ ಸಜ್ಜಾದವು. ಇತ್ತ ಉರುಗ್ವೆ, ಯು. ಎಸ್. ಎ. ಮತ್ತು ಅರ್ಜೆಂಟಿನಾ. ಆ್ಯಮಸ್ಟರಡ್ಯಾಮ್ ಒಲಿಂಪಿಕ್ಸ್ ಫೈನಲ್‌ನಲ್ಲಿ ಸೆಣಸಿದ ಉರುಗ್ವೆ ಮತ್ತು ಅರ್ಜೆಂಟಿನಾ ಇಲ್ಲಿಯೂ ಅಂತಿಮ ಹೋರಾಟಕ್ಕೆ ಸಜ್ಜು. ಮೊದಲ ಸುತ್ತಿನಲ್ಲಿಯೇ ಅರ್ಜೆಂಟಿನಾಕ್ಕೆ ಭಾರಿ ಫ್ರೆಂಚ್ ಸವಾಲು. ೮೧ ನಿಮಿಷ ಕಾಲಗಳವರೆಗೆ ಫ್ರೆಂಚ್ ಗೋಲಿನ ಬಳಿ, ಪ್ರಚಂಡ ಅರ್ಜೆಂಟಿನಾ ಆಟಗಾರರಿಗೆ ಸುಳಿಯಲು ಕೂಡ ಅಸ್ಪದ ಇಲ್ಲ. ಇದ್ದಕ್ಕಿದ್ದ ಹಾಗೆ ಮಾಂಟೆ,



ಪೀಲೆ

ಮೊದಲ ವಿಶ್ವಕಪ್ ಟೂರ್ನಿಯ ಹಿರೋ, ಫ್ರೀ ಕಿಕ್‌ನಿಂದ ಅರ್ಜೆಂಟಿನಕ್ಕೆ ಮುನ್ನಡೆ ದೊರಕಿಸಿ ಕೊಟ್ಟನು. ಫ್ರೆಂಚರು ಧೃತಿಗೆಡಲಿಲ್ಲ. ಅರ್ಜೆಂಟಿನಾ ಸಂರಕ್ಷಣೆಯ ಮೇಲೆ ಮುಗಿಬಿದ್ದರು. ಇನ್ನೇನು, ಲ್ಯಾಂಗಿಟರ್ ಅರ್ಜೆಂಟಿನಾ ಗೋಲು ಹತ್ತಿರಕ್ಕೆ ನುಗ್ಗಿ ಚೆಂಡನ್ನು ಗುರಿ ಮುಟ್ಟಿಸಬೇಕು ಎನ್ನುತ್ತಿರುವಾಗಲೇ ಅಂಪಾಯರನ ಸೀಟಿಯ ಸಪ್ಪಳ. ಫ್ರೆಂಚರಿಂದ ಪ್ರತಿಭಟನೆ. ಇದು ೮೪ನೇ ನಿಮಿಷ, ಇನ್ನೂ ಆರು ನಿಮಿಷಗಳ ಆಟ ಇದೆ ಎಂದು ಅವರ ವಾದ. ೧೫ ನಿಮಿಷಗಳ ಅಡೆ ತಡೆಯ ನಂತರ ಮತ್ತೆ ಆಟ ಆರಂಭ. ಫ್ರೆಂಚರಲ್ಲಿ ಉತ್ಸಾಹ ಉಳಿದಿರಲಿಲ್ಲ. ಸ್ಕೋರು ಬದಲಾಗಲಿಲ್ಲ. ಉರುಗ್ವೆ ಪ್ರೇಕ್ಷಕರು ಫ್ರೆಂಚರನ್ನು ಹೆಗಲ ಮೇಲೆ ಹೊತ್ತು ಕುಣಿದರು. ಇದು ತನಗೆ ಅವಮಾನ ಎಂದು ಅರ್ಜೆಂಟಿನಾದವರ ಅಸಮಾಧಾನ.

ಸೆಮಿಫೈನಲ್‌ನಲ್ಲಿ ಉರುಗ್ವೆ, ಯು. ಎಸ್. ಎ. ವಿರುದ್ಧ, ಅರ್ಜೆಂಟಿನಾಕ್ಕೆ ಯುಗೊಸ್ಲಾವಿಯಾ ವಿರುದ್ಧ ಸುಲಭ ೬–೧ ಜಯ. ಫೈನಲ್ ಸುರಳೀತವಾಗಿರಲಿಲ್ಲ. ಆಟಕ್ಕೆ ತಮ್ಮ ದೇಶದಲ್ಲಿ ತಯಾರಾದ ಚೆಂಡೇ ಬೇಕೆಂದು ಅರ್ಜೆಂಟಿನಾದ ಆಗ್ರಹ. ಉರುಗ್ವೆ ಒಪ್ಪಲಿಲ್ಲ. ರೆಫರಿ ಎರಡೂ ಚೆಂಡುಗಳನ್ನು ತಂದು ಟಾಸ್ ಮಾಡಿದರು. ಅರ್ಜೆಂಟಿನಾ ಚೆಂಡಿನ ಪರ ನಿರ್ಣಯ ಬಂತು. ಉದ್ವೇಗದ ವಾತಾವರಣದಲ್ಲಿ ಪಂದ್ಯ ಆರಂಭ. ಕೆಲವೇ ನಿಮಿಷಗಳಲ್ಲಿ ಅರ್ಜೆಂಟಿನಾ ಗೋಲು ಮಾಡಿತು. 'ಆಫ್ ಸೈಡ್' ಎಂದು ಎದುರು ಪಕ್ಷದ ತಕರಾರಿಗೆ ಮನ್ನಣೆ ಸಿಗಲಿಲ್ಲ. ಅರ್ಜೆಂಟಿನಾ ೨–೧ರಿಂದ ಮುಂದೆ ಇದ್ದಾಗ ಉರುಗ್ವೆ ಅಭಿಮಾನಿಗಳ ಮುಖ ಸಪ್ಪಗೆ. ಅರ್ಜೆಂಟಿನಾ ಚೆಂಡು ಎಂದ ಮೇಲೆ ಹೀಗೇ ಆಗುವುದೆಂದು ಅವರ ಸಂಬುಗೆ. ೬೦,೦೦೦ ಪ್ರೇಕ್ಷಕರ ಮುಖದಲ್ಲಿ ಪ್ರೇತಕಳೆ. ದ್ವಿತೀಯಾರ್ಧದ ಹತ್ತನೇ ನಿಮಿಷ ಮಿಚಾಟೊ ಗೋಲು ಹೊಡೆದ. ಸ್ಕೋರು ಸಮ. ಮತ್ತೆ ಕೆಲ ನಿಮಿಷಗಳಲ್ಲಿ ಇರಿಯಾರ್ಟ್ ಮತ್ತು ಕ್ಯಾಸ್ಟ್ರೋ ಚೆಂಡನ್ನು ಗುರಿ ಮುಟ್ಟಿಸಿದರು. ಪ್ರಥಮ ವಿಶ್ವಕಪ್ ಉರುಗ್ವೆ ಉಡಿಯಲ್ಲಿ. ಜೋಸ್ ನಾಸಾರಿಝಿ ಉರುಗ್ವೆ ಟೀಮಿನ ನಾಯಕ, ಅದನ್ನು ಸ್ವೀಕರಿಸಿದ ಮೊದಲ ಫುಟ್‌ಬಾಲ್ ಪಟು. ಒಲಿಂಪಿಕ್ ಸ್ವರ್ಣ ಪದಕ ಹಾಗೂ ವಿಶ್ವಕಪ್ ಎರಡನ್ನೂ ಉರುಗ್ವೆ ಬಾಚಿಕೊಂಡಾಗ. ತಮ್ಮ ತಂಡವೇ ಗೆಲ್ಲುತ್ತದೆ, ಗೆಲ್ಲಲಿ ಎಂದು ಬ್ಯೂನೋ ಐರಿಸ್‌ನ ಬೀದಿ ಬೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ಮತ್ತು ರಿವರ್ ಪ್ಲೇಟ್ ನದಿಯಾಚೆ ದಡದಿಂದ ನಾವೆಗಳಲ್ಲಿ ಉರುಗ್ವೆಗೆ ಬಂದಿದ್ದ ಅರ್ಜೆಂಟಿನಾ ಫುಟ್‌ಬಾಲ್ ಪ್ರೇಮಿಗಳಿಗೆ ಆದ ನಿರಾಸೆ ಅಷ್ಟಿಷ್ಟಲ್ಲ. ಅವರು ವಿಶ್ವಕಪ್ ಗೆಲ್ಲಲು ೪೮ ವರ್ಷಗಳೇ ಬೇಕಾದವು. ಅಲ್ಲಿಯವರೆಗೆ ಅರ್ಜೆಂಟಿನಾ ಮತ್ತೊಮ್ಮೆ ಫೈನಲ್‌ಗೆ ಕೂಡ ಬಂದಿರಲಿಲ್ಲ.

ಅಂದಿನಿಂದ ಇಂದಿನ ವರೆಗೆ ಒಟ್ಟು ಹನ್ನೊಂದು ವಿಶ್ವಕಪ್ ಟೂರ್ನಿಗಳು ನಡೆದಿವೆ. ಇವುಗಳಲ್ಲಿ ಐದನ್ನು ಆತಿಥೇಯ ಟೀಮುಗಳೇ ಗೆದ್ದಿವೆ. ೧೯೩೦ ರಲ್ಲಿ ಉರುಗ್ವೆ, ೧೯೩೪ರಲ್ಲಿ ಇಟಲಿ, ೧೯೬೬ರಲ್ಲಿ ಇಂಗ್ಲಂಡ್, ೧೯೭೪ರಲ್ಲಿ ಪಶ್ಚಿಮ ಜರ್ಮನಿ ಮತ್ತು



ಲಿಯೋಪೋಲ್ಡೊ ಲೂಕ್

೧೯೭೮ರಲ್ಲಿ ಅರ್ಜೆಂಟಿನಾ. ಬ್ರೆಜಿಲ್ ಮೂರು ಸಲ (೧೯೫೮, ೧೯೬೨ ಮತ್ತು ೧೯೭೦). ಉರುಗ್ವೆ ಎರಡು ಸಲ (೧೯೩೦, ೧೯೫೦). ಇಟಲಿ ಎರಡು ಸಲ (೧೯೩೪, ೧೯೩೮) ಮತ್ತು ಪಶ್ಚಿಮ ಜರ್ಮನಿ ಎರಡು ಸಲ (೧೯೫೪, ೧೯೭೪) ವಿಶ್ವಕಪ್ ಜಯಿಸಿವೆ. ಇಂಗ್ಲೆಂಡ್ (೧೯೬೬) ಮತ್ತು ಅರ್ಜೆಂಟಿನಾ (೧೯೭೮) ಒಂದು ಸಲ ಗೆದ್ದುಕೊಂಡಿವೆ.

ವಿಶ್ವಕಪ್ ಟೂರ್ನಿಯಲ್ಲಿ ಅಗ್ರಪಟ್ಟಕ್ಕಾಗಿ ಯುರೋಪ್ ಮತ್ತು ದಕ್ಷಿಣ ಅಮೇರಿಕಗಳ ನಡುವೆಯೇ ಸದಾ ಹೋರಾಟ. ದಕ್ಷಿಣ ಅಮೇರಿಕ ಆರು ಸಲ ಗೆದ್ದರೆ, ಯುರೋಪ್ ಐದು ಸಲ. ಮೂರು ಸಲ ಗೆದ್ದ ಬ್ರೆಜಿಲ್‌ಗೆ ಜ್ಯೂಲಿಯಸ್ ರಿಮೆಟ್ ಟ್ರಾಫಿಯನ್ನು ಶಾಶ್ವತವಾಗಿ ಕೊಡಲಾಗಿದೆ. ೧೯೭೪ರಿಂದ ಅಂತಾರಾಷ್ಟ್ರೀಯ ಫುಟ್‌ಬಾಲ್ ಫೆಡರೇಶನ್‌ನ ಹೊಸ ಟ್ರಾಫಿಗಾಗಿ ಹೋರಾಟ ನಡೆಯುತ್ತಿದೆ.

(೧೯೬೬ರಲ್ಲಿ ಇಂಗ್ಲಂಡಿನಲ್ಲಿ ವಿಶ್ವಕಪ್ ಟೂರ್ನಿಯು ಸಿದ್ಧತೆ ನಡೆಯುತ್ತಿರುವಾಗಲೇ ಕಳುವಾಗಿ ಹೋದ ರಿಮೆಟ್ [ಸ್ವರ್ಣಖಚಿತ] ಟ್ರಾಫಿಯನ್ನು ಸ್ಕಾಟ್‌ಲಂಡ್ ಯಾರ್ಡ್ ಪತ್ತೆ ಮಾಡಿತು).

ವಿಶ್ವಕಪ್ ಟೂರ್ನಿಗೆ ಪ್ರವೇಶ ಪಡೆಯಲು ೧೯೩೪ರಿಂದ ಅರ್ಹತಾ ಪಂದ್ಯಗಳನ್ನು ಆರಂಭಿಸಲಾಯಿತು. ವಿಶ್ವದ ಶ್ರೇಷ್ಠತಮ ಟೀಮುಗಳು ಮಾತ್ರ ವಿಶ್ವಕಪ್‌ಗಾಗಿ ನೇರ ಹೋರಾಡಬೇಕೆಂಬುದು ಈ ವ್ಯವಸ್ಥೆಯ ಉದ್ದೇಶ. ಅರ್ಹತಾ ಸುತ್ತುಗಳಿಂದ ೧೬ ಶ್ರೇಷ್ಠ ಟೀಮುಗಳು ಮುಖ್ಯ ಟೂರ್ನಿಗೆ ಆಯ್ಕೆಯಾಗುತ್ತವೆ. ೧೯೩೦ರ ನಂತರ ಕೇವಲ ನಾಲ್ಕೇ ವರ್ಷಗಳಲ್ಲಿ ಫುಟ್‌ಬಾಲ್ ಅಪಾರ ಜನಪ್ರಿಯತೆಯನ್ನು, ಮುಖ್ಯವಾಗಿ ಯುರೋಪ್‌ನಲ್ಲಿ, ಗಳಿಸಿತು. ೧೯೩೪ ರಲ್ಲಿ ವಿಶ್ವಕಪ್‌ಗೆ ಇಟಲಿಯ ಆತಿಥ್ಯ. ಚಾಂಪಿಯನ್ ಉರುಗ್ವೆ ಬರಲಿಲ್ಲ. (೧೯೩೦ ರಲ್ಲಿ ಇಟಲಿ, ಉರುಗ್ವೇದ ಆಮಂತ್ರಣ ನಿರಾಕರಿಸಿತ್ತಲ್ಲ) ಫ್ಯಾಸಿಸ್ಟ್ ಸತ್ತೆಯ ಸರ್ವಾಧಿಕಾರಿ ಬೆನಿಟೊ ಮುಸೋಲಿನಿ ಟೂರ್ನಿಯನ್ನು ತನ್ನ ಪ್ರಭಾವ ಹೆಚ್ಚಿಸಲು ಉಪಯೋಗಿಸಿಕೊಂಡನು. ಇಟಲಿ ಆಗಿನ ಅತ್ಯುತ್ತಮ ಟೀಮುಗಳಲ್ಲಿ ಒಂದಾಗಿತ್ತೆಂಬುದು ನಿಜ. ಆದರೆ ಮಾಂಟೆವಿಡಿಯೊ ಅಂತಿಮ ಪಂದ್ಯದಲ್ಲಿ ಕಾರ್ಯನಿರ್ವಹಿಸಿದ ಬೆಲ್ಜಿಯಂ ರೆಫರಿ ಜಾನ್ ಲ್ಯಾಂಜೆನಸ್, ಅಧಿಕಾರಿಗಳು ಇಲ್ಲಿ ನಿಯಮ ಮೀರಿ ನಡೆದರೆಂದು ಹೇಳಿದ್ದು ಗಮನಾರ್ಹ. ಫೈನಲ್‌ನಲ್ಲಿ ಇಟಲಿ, ಝೆಕೊಸ್ಲೋವಾಕಿಯಾವನ್ನು ೨–೧ ಅಂತರದಿಂದ ಸೋಲಿಸಿತು.

೧೯೩೮ರ ವಿಶ್ವಕಪ್ ಟೂರ್ನಿ ಪ್ಯಾರಿಸಿನಲ್ಲಿ. ಜಾಗತಿಕ ಯುದ್ಧದ ಕಾರ್ಮೋಡಗಳು ಮುಸುಕಿದ ಕಾಲ. ಇಡೀ ಯುರೋಪ್ ಯುದ್ಧಭಯದಿಂದ ತತ್ತರಿಸಿತ್ತು. ಮಾರ್ಚ್‌ನಲ್ಲಿ ನಾಝಿ ಜರ್ಮನಿ ಆಸ್ಟ್ರಿಯಾವನ್ನು ಕಬಳಿಸಿತು. ಟೂರ್ನಿಯಲ್ಲಿ ಆಸ್ಟ್ರಿಯಾಕ್ಕೆ ಪ್ರತ್ಯೇಕ ಅಸ್ತಿತ್ವ ಸಿಗಲಿಲ್ಲ. ಆಸ್ಟ್ರಿಯನ್ನರು ಜರ್ಮನ್ ಟೀಮಿನಲ್ಲಿ ಆಡಬೇಕೆಂದು ಹಿಟ್ಲರ್‌ನ ಆಜ್ಞೆ. ಫಲಿತಾಂಶ ಭಾರಿ ಸೋಲು. ಬ್ರೆಜಿಲ್‌ನ ಫುಟ್‌ಬಾಲ್ ಕೌಶಲ ಇಲ್ಲಿ ಪ್ರಥಮ ಬಾರಿ ಪ್ರದರ್ಶನಕ್ಕೆ. ಆದರೆ ಇಟಲಿ ವಿರುದ್ಧ ಸೆಮಿಫೈನಲ್ ಆಡುವಾಗ ಬ್ರೆಜಿಲ್ ಟೀಮಿನ ಮ್ಯಾನೇಜರ್ ಅತ್ಯುತ್ತಮ ಆಟಗಾರರಾದ ಲಿಯೊನಿದಾಸ್ ಮತ್ತು ಟಿಮ್ ಇಬ್ಬರಿಗೂ "ಫೈನಲ್‌ಗೆ ಕಾದಿಟ್ಟಿದ್ದೇವೆ" ಎಂದು ಹೇಳಿ ವಿಶ್ರಾಂತಿ ಕೊಟ್ಟ. ಅಂದಿನ ಶ್ರೇಷ್ಠ ಸೆಂಟರ್ ಫಾರ್ವರ್ಡ್ ಪಯೋಲಾ ಪೆನಾಲ್ಟಿ ಕಾರ್ನರ್ ಮೂಲಕ ಹೊಡೆದ ಗೋಲು ಬ್ರೆಜಿಲ್‌ನ ಮುನ್ನಡೆ ತಡೆಗಟ್ಟಿತು. ಫೈನಲ್‌ನಲ್ಲಿ ಹಂಗೆರಿ ವಿರುದ್ಧ ಇಟಲಿಗೆ ೪–೦ ಸುಲಭ ಜಯ. ಇಡೀ ಟೂರ್ನಿಯಲ್ಲಿ ಪಯೋಲಾ ನಂತರ ಹೆಚ್ಚಾಗಿ ಎದ್ದು ಕಂಡ ಆಟಗಾರ ಎಂದರೆ ಹಂಗರಿಯ ನಾಯಕ ಜಾರ್ಜಿಸ್ ಸರೋಸಿ. ಈತ ಫಿಲಾಸಫಿಯಲ್ಲಿ ಡಾಕ್ಟರೇಟ್ ಮಾಡಿದ ಮೇಧಾವಿ. ಆಟಕ್ಕೆ ಕಲಾತ್ಮಕ ಮತ್ತು ವಿಚಾರಶೀಲ ತಿರುವು ಕೊಟ್ಟ ಘನವಂತ.

ಯುದ್ಧದ ನಿಮಿತ್ತ ೧೯೪೨ ಮತ್ತು ೧೯೪೬ರಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿಲ್ಲ. ೧೯೫೦ರಲ್ಲಿ ಬ್ರೆಜಿಲ್ ಆತಿಥ್ಯ ನೀಡಿತು. ಎರಡು ಲಕ್ಷ ಮಂದಿಗೆ ಕುಳಿತುನೋಡುವ ಸ್ಥಳಾವಕಾಶವುಳ್ಳ ಮರಾಕಾನಾ ಸ್ಟೇಡಿಯಂನ ನಿರ್ಮಾಣ ಇನ್ನೂ ಅಪೂರ್ಣವಾಗಿದ್ದಾಗಲೇ ಟೂರ್ನಿ ಆರಂಭ. ೧೯೩೮ರಲ್ಲೇ ಗೆಲ್ಲಬೇಕಾಗಿದ್ದ ಬ್ರೆಜಿಲ್ ಈ ಸಲ ಗೆದ್ದೇ ತೀರುವ ಹಟದಿಂದ ಚೆಂಡು ಒದ್ದಿತು. ಸೆಮಿಫೈನಲ್ ಲೀಗ್‌ನಲ್ಲಿ ಸ್ವೀಡನ್ ವಿರುದ್ಧ ೭–೧; ಸ್ಪೇನ್ ಮೇಲೆ ೬–೧ ರಿಂದ ಗೆದ್ದಾಗ ಬ್ರೆಜಿಲ್

ವಿಶ್ವಕಪ್ ಜಯಿಸುವ ಬಗ್ಗೆ ಯಾರ ಮನಸ್ಸಿನಲ್ಲೂ ಸಂಶಯ ಇರಲಿಲ್ಲ. ಆದರೆ ಆತಿಥೇಯ ಟೀಮಿನ ಕೋಚ್ ಮಾತ್ರ ಬಾಯಿ ಬಿಡಲಿಲ್ಲ. ಕಾರಣ ಉರುಗ್ವೆಯ ಅಂತಃಸತ್ವದ ಅರಿವು ಅವನಿಗೆ ಇತ್ತು. ಜುಆನ ಶಿಯಾಫಿನೊ ಮತ್ತು ಅಲ್ಸಿಡೆ ಘಿಗಿಯಾ ಹೊಡೆದ ಗೋಲುಗಳು ಉರುಗ್ವೆಗೆ ಎರಡನೇ ಸಲ ವಿಶ್ವಕಪ್ ಗೆದ್ದು ಕೊಟ್ಟವು. ಆಗ ವಿಶ್ವಕಪ್ ಬ್ರೆಜಿಲ್‌ಗೆ ಇನ್ನೂ ಎಂಟು ವರ್ಷ ದೂರದಲ್ಲಿತ್ತು.

೧೯೫೪ರಲ್ಲಿ ಸ್ವಿಜರ್‌ಲಂಡ್‌ನಲ್ಲಿ ವಿಶ್ವಕಪ್ ಟೂರ್ನಿ ನಡೆದಾಗ ಟೆಲಿವಿಜನ್ ಬಂದಿತ್ತು. ಪ್ರೇಕ್ಷಕರ ಸಂಖ್ಯೆ ದೇಶ ವಿದೇಶಗಳಲ್ಲಿ ಬೆಳೆದಿತ್ತು. ಹಂಗರಿ ಮತ್ತು ಪಶ್ಚಿಮ ಜರ್ಮನಿ ಫೈನಲ್‌ಗೆ. ಎರಡೂ ಒಂದೇ ಗುಂಪಿನಿಂದ ಮುನ್ನಡೆದು ಬಂದಿದ್ದವು. ಗುಂಪು ಪಂದ್ಯದಲ್ಲಿ ಹಂಗರಿ, ಪ. ಜರ್ಮನಿಯನ್ನು ೮–೩ ರಿಂದ ಸೋಲಿಸಿದ್ದರಿಂದ ಅದರ ವಿಜಯ ಖಚಿತ ಎನಿಸಿತ್ತು. ಫೈನಲ್ ಆರಂಭವಾದ ಎಂಟೇ ನಿಮಿಷಗಳಲ್ಲಿ ಹಂಗರಿಗೆ ೨–೦ ಮುನ್ನಡೆ. ಮೊಳಕಾಲು ನೋವಿನಿಂದ ಬಳಲುತ್ತಿದ್ದ ಪುಸ್ಕಾಸನಿಂದಲೇ ಮೊದಲ ಗೋಲು. ಝಿಬೋರ್ ಎರಡನೇ ಗೋಲು ದಾಖಲಿಸಿದನು. ಧೃತಿಗೆಡದ ಜರ್ಮನ್‌ರು ಅವಕಾಶಕ್ಕಾಗಿ ಕಾಯುತ್ತಿದ್ದರು. ಮೊರ್ಲಾಕ್ ಮತ್ತು ರಾನ್ ಇದ್ದಕ್ಕಿದ್ದ ಹಾಗೆ ಮುನ್ನುಗ್ಗಿ ಸ್ಕೋರು ಸಮ ಮಾಡಿದರು. ಚಕಿತ ಹಂಗರಿಯ ಜಂಘಾಬಲವೇ ಉಡುಗಿತು. ಫ್ರಿಜ್ ವಾಲ್ಟರ್ ಒದಗಿಸಿದ ಪಾಸ್‌ನಿಂದ ರಾನ್ ವಿಜಯದ ಗೋಲು ಹೊಡೆದನು.

೧೯೫೮ರ ಜೂನ್ ೮ರಿಂದ ೨೯ರ ವರೆಗೆ ಸ್ವೀಡನ್ನಿನಲ್ಲಿ ಆರನೇ ವಿಶ್ವಕಪ್ ಟೂರ್ನಿ. ಇಟಲಿ ಮತ್ತು ಉರುಗ್ವೆ ಅರ್ಹತಾ ಸುತ್ತುಗಳಲ್ಲೇ ಸೋತು ಹೋದ ಕಾರಣ ಉಳಿದ ಪ್ರಬಲ ಟೀಮುಗಳಲ್ಲಿ ಯಾರು ಗೆಲ್ಲಬಹುದೆಂಬ ತರ್ಕದ ನಡುವೆಯೇ ಆತಿಥೇಯ ಸ್ವೀಡನ್‌ಗೆ ಗೆಲ್ಲುವ ವಿಶ್ವಾಸ. ಅದು ಗೆಲುವಿಗೆ ತೀರ ಹತ್ತಿರ ಬಂದುದೇನೋ ನಿಜ. ವಿಶ್ವಕಪ್‌ಗಾಗಿ ಬಹು ಕಾಲದಿಂದ ಕಾದು ಕುಳಿತ ಬ್ರೆಜಿಲ್‌ಗೆ ಇಲ್ಲಿ ಕೊನೆಗೊಮ್ಮೆ ಜಯ. ಫುಟ್‌ಬಾಲ್ ಕ್ಷಿತಿಜದಲ್ಲಿ ಹೊಸ ತಾರೆ–ಕಿಂಗ್ ಪೀಲೆ–ಉದಯಿಸಿದ್ದು ಇಲ್ಲಿಯೇ. ವಿಶ್ವಕಪ್ ಪೀಠಿಕೆಯಲ್ಲಿ ರಶಿಯದ ಪ್ರಥಮ ಪ್ರಯತ್ನಕ್ಕೆ ಇಲ್ಲಿ ನಾಂದಿ. ಎರಡನೇ ಪಂದ್ಯದಲ್ಲಿ ರಶಿಯ ವಿರುದ್ಧ ಪೀಲೆಯ ಮೊದಲನೇ ವಿಶ್ವಕಪ್ ಆಟ. ವೇಲ್ಸ್ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ ಅವನ ಮೊದಲನೇ ಗೋಲು. ೭೩ನೇ ನಿಮಿಷದಲ್ಲಿ ವೇಲ್ಸ್‌ನ ಸಂರಕ್ಷಣೆಯನ್ನು ಏಕಾಏಕಿ ಭೇದಿಸಿ ಚೆಂಡನ್ನು ಗುರಿ ಮುಟ್ಟಿಸಿದನು.ಸ್ವೀಡನ್ ವಿರುದ್ಧ ಅಂತಿಮ ಪಂದ್ಯ. ಬ್ರೆಜಿಲ್‌ಗೆ ಸುಲಭ ಗೆಲುವಿನ ವಿಶ್ವಾಸ. ಸ್ವೀಡನ್‌ಗೆ ಆರಂಭದಲ್ಲೇ ಮುನ್ನಡೆ ದೊರೆತಾಗ ಆಘಾತ. ಪೀಲೆಯಿಂದ ಎದುರಾಳಿಗಳ ರಭಸಕ್ಕೆ ತಡೆ. ಕೊನೆಯಲ್ಲಿ ಬ್ರೆಜಿಲ್‌ಗೆ ೫–೨ ವಿಜಯ. ಪೀಲೆಯಿಂದ ಎರಡು ಗೋಲುಗಳು.

೧೯೬೨. ಮತ್ತೊಮ್ಮೆ ದಕ್ಷಿಣ ಅಮೇರಿಕದಲ್ಲಿ ವಿಶ್ವಕಪ್‌ಗಾಗಿ ಹೋರಾಟ. ಚಿಲಿಯ ಆತಿಥ್ಯ. ಐರೋಪ್ಯ ರಾಷ್ಟ್ರಗಳ ಪ್ರಬಲಪ್ರಾತಿನಿಧ್ಯ. ಲ್ಯಾಟಿನ್ ಅಮೇರಿಕೆಯ ಫುಟ್‌ಬಾಲ್ ಪ್ರತಿಷ್ಠೆಗೇ ದೊಡ್ಡ ಸವಾಲು. ಆದರೆ ಐರೋಪ್ಯ ಟೀಮುಗಳ ನಡುವೆಯೇ ಹಿಂಸೆ. ಫುಟ್‌ಬಾಲ್ ಜಾಣ್ಮೆಯೊಂದಿಗೇ ಬಿರುಸುತನದ ಪ್ರದರ್ಶನ. ಯುಗೋಸ್ಲಾವಿಯಾ – ರಶಿಯಾ ಪಂದ್ಯದಲ್ಲಿ ಯುಗೋಸ್ಲಾವ್ ಆಟಗಾರ ಡೌಬಿನ್‌ಸ್ಕಿ ಕಾಲು ಮುರಿದುಕೊಂಡ.ಸ್ವಿಸ್ ಫಾರ್ವರ್ಡ್ ಎಷ್ಮನ್, ರಶಿಯದ ಮೆಟ್ರಿವೆಲ್ಲಿ ಮುಖ ಊದಿಸಿಕೊಂಡರು. ಇಟಲಿ–ಚಿಲಿ ಪಂದ್ಯ ಫೌಲ್‌ಗಳಿಗೆ ಕೊರತೆ ಇಲ್ಲ. ಇಟಲಿಯ ಇಬ್ಬರನ್ನು ಅಂಪಾಯರ್ ಹೊರಗೆ ಹಾಕಿದ. ವಿಶ್ವ ಚಾಂಪಿಯನ್ ಬ್ರೆಜಿಲ್‌ನ ಮುನ್ನಡೆ ತಡೆಯಲು ಎಲ್ಲ ಎದುರಾಳಿಗಳ ಪ್ರಯತ್ನ. ಪೀಲೆ ಮೇಲೆ ಎಲ್ಲರ ಕಣ್ಣು. ಮೆಕ್ಸಿಕೋ ವಿರುದ್ಧ ಪಂದ್ಯ ಗೆದ್ದು ಕೊಟ್ಟ ಪೀಲೆ, ಝೆಕೊಸ್ಲೋವಾಕಿಯಾ ವಿರುದ್ಧ ಆಡುವಾಗ ಸ್ನಾಯು ತೊಡಕಿನಿಂದ ನಿವೃತ್ತನಾದ. ಎದುರಾಳಿಗಳಿಗೆ ಖುಷಿಯೋ ಖುಷಿ. ಆದರೆ ಪೀಲೆ ಸ್ಥಳದಲ್ಲಿ ಬಂದ ಅಮಾರಿಲ್ಡೊ ಎಲ್ಲರ ನಿರೀಕ್ಷೆ ಮೀರಿ ಕೊರತೆ ತುಂಬಿದ. ನಂತರ ವಾವಾ ಮತ್ತು ಗ್ಯಾರಿಂಚಾ ಬ್ರೆಜಿಲ್‌ನ ಮುನ್ನಡೆಗೆ ಕಾರಣಕರ್ತರು. ಚಿಲಿ ಮತ್ತು ಇಂಗ್ಲಂಡ್ ಅವರಿಂದ ಹೊಸ ಫುಟ್‌ಬಾಲ್ ಪಾಠ ಬೋಧನೆ. ಇನ್ನೊಂದು ಕಡೆಯಿಂದ ರಶಿಯಾ, ಯುಗೋಸ್ಲಾವಿಯಾಗಳು ಲೆಕ್ಕ ಬಿಡದೇ ಬೇಗಾಗಿ ಝೆಕೊ

ಮಾರಿಯೊ ಕೆಂಪೆಸ್ — ಪೀಲೆ, ಬೆಕೆನ್‌ಬಾರ್ ಇಲ್ಲವೆ ಬಾಬಿ ಮೂರರ ಸಾಲಿನಲ್ಲಿ ಸೇರದಿರಬಹುದು. ಆದರೆ ಈತ, ೧೯೭೮ ರ ವಿಶ್ವಕಪ್ ಟೂರ್ನಿಯ ಹೀರೊ ಎಂಬುದೇನೂ ಸುಳ್ಳಲ್ಲ.

ಕೆಂಪೆಸ್ ಏಳು ಪಂದ್ಯಗಳಲ್ಲಿ ಹೊಡೆದ ಆರು ಗೋಲುಗಳು ಒಂದು ವಿಕ್ರಮ ಅಲ್ಲವಾದರೂ ಆ ಆರೂ ಗೋಲುಗಳು ಅರ್ಜೆಂಟಿನಾದ ಅಂತಿಮ ವಿಜಯಕ್ಕೆ ಹಾದಿ ಮಾಡಿ ಕೊಟ್ಟವು.



ಮಾರಿಯೊ ಕೆಂಪೆಸ್

ಎರಡನೇ ಸುತ್ತಿನ ಕೊನೆಯ ಪಂದ್ಯದಲ್ಲಿ ಪೆರುವಿನ ವಿರುದ್ಧ ಕನಿಷ್ಟ ನಾಲ್ಕು ಗೋಲುಗಳ ಅಗತ್ಯ ಇತ್ತು. ಎರಡನ್ನು ಹೊಡೆದವನು ಕೆಂಪೆಸ್. ಫೈನಲ್‌ನಲ್ಲಿ ಹಾಲೆಂಡ್ ವಿರುದ್ಧ ಅವನು ಹೊಡೆದ ಮತ್ತೆರಡು ಗೋಲುಗಳು ಅರ್ಜೆಂಟಿನಾಕ್ಕೆ ವಿಶ್ವಕಪ್ ಗೆದ್ದುಕೊಟ್ಟವು.

ಕೆಂಪೆಸ್ ಫುಟಬಾಲ್‌ಪಟುವಾಗಲೆಂದೇ ಹುಟ್ಟಿದವ ಎಂದು ಹೇಳಬಹುದು. ಮಗುವಾಗಿದ್ದಾಗ ಆತನ ಎಡಗಾಲು ಸ್ಥಿರವಾಗಿರಲಿಲ್ಲ. ಆಗ ಅದು ದೈಹಿಕ ನ್ಯೂನತೆ. ಇಂದಿಗೂ ಆ ಎಡಗಾಲು ಸುಮ್ಮನಿರುವುದಿಲ್ಲ. ಈಗ ಅದು ಗೋಲು ಕೀಪರ್‌ಗಳಿಗೆ ಸದಾ ಗಂಡಾಂತರಕಾರಿ. ಎಡಗಾಲಿನಿಂದ ಆತ ಒದ್ದ ಚೆಂಡು ಕೊನೆಯ ಎರಡು ಪಂದ್ಯಗಳಲ್ಲಿ ಅರ್ಜೆಂಟಿನಾದ ಭವಿತವ್ಯ ನಿರ್ಧರಿಸಿತು.

೧೯೭೪ ರ ವಿಶ್ವಕಪ್ ಟೂರ್ನಿ ಕೆಂಪೆಸ್ ಮಟ್ಟಿಗೆ ತೀರ ನಿರಾಶಾದಾಯಕ. ಒಂದಾದರೂ ಗೋಲು ಅವನ ಲೆಕ್ಕಕ್ಕೆ ಸಿಗಲಿಲ್ಲ. ಹೊರಗೆ ಮಾತ್ರ ಎಡಗಾಲು ಚುರುಕಾಗೆ ಇತ್ತು. ಸ್ಪೇನಿನ ವೆಲೆನ್ಸಿಯೊ ಕ್ಲಬ್ ಪರವಾಗಿ ಗೋಲುಗಳನ್ನು ಹೊಡೆಯುತ್ತಲೇ ಇತ್ತು. ಅದಕ್ಕಾಗಿಯೇ ಅರ್ಜೆಂಟಿನಾ ಫುಟಬಾಲ್ ಸಂಸ್ಥೆ ಆತನನ್ನು ಮನವೊಲಿಸಿ ಮರಳಿ ಕರೆಸಿಕೊಂಡಿತು. ದೇಶದ ಪರವಾಗಿ ಆಡಿದ ೩೦ ಪಂದ್ಯಗಳಲ್ಲಿ ಕೆಂಪೆಸ್‌ನ ಸ್ಕೋರು ೨೩. ಕ್ಲಬ್ ಪಂದ್ಯಗಳನ್ನು ಹಿಡಿದರೆ ೧೦೦ ದಾಟುತ್ತದೆ.

ಕೆಂಪೆಸ್‌ಗೆ ಈಗ ೨೩ ವರ್ಷ. ಆತನ ಎಡಗಾಲು ಚುರುಕಾಗಿರುವವರೆಗೆ ಆತ 'ಸೂಪರ್‌ಸ್ಟಾರ್'.

ಸ್ಲೋವಾಕಿಯಾ ಫೈನಲ್‌ಗೆ. ಯುರೋಪ್, ದ. ಅಮೇರಿಕ ನಡುವೆ ಇನ್ನೊಂದು ಹೋರಾಟಕ್ಕೆ ಇಲ್ಲಿ ಕಣ ಸಜ್ಜು. ೧೫ನೇ ನಿಮಿಷದಲ್ಲಿ ಮ್ಯಾಸ್ಸೊಪ್ರುಸ್ಟ್ ಜೆಕ್‌ಟೀಮಿಗೆ ಮುನ್ನಡೆ ದೊರಕಿಸಿದನು. ಅಮಾರಿಲ್ಡೊ ಮತ್ತೊಮ್ಮೆ ಪೀಲೆಯ ಅನುಪಸ್ಥಿತಿಯ ಕೊರತೆ ತುಂಬಿದ. ಸ್ಕೋರು ಸಮ. ವಾವಾ ವಿಜಯದ ಗೋಲು ಹೊಡೆದ. ರಿಮೆಟ್ ಟ್ರಾಫಿ ಮತ್ತೆ ಬ್ರೆಜಿಲ್ ಕೈಗೆ. ಮನೆಗೆ ಮರಳಿದಾಗ ರಾಷ್ಟ್ರಪತಿಗಳಿಂದಲೇ ಆಟಗಾರರಿಗೆ ಸ್ವಾಗತ.

೧೯೬೬. ಫುಟ್‌ಬಾಲ್‌ನ ತವರು ಇಂಗ್ಲೆಂಡಿಗೆ ವಿಶ್ವಕಪ್‌ನ ಸವಾರಿ. ೧೯೭೦ರ ವರೆಗೆ ಅಲ್ಲಿಯೇ ಅದರ ವಾಸ್ತವ್ಯ. ಇಂಗ್ಲಿಷ್ ಟೀಮ್ ಮ್ಯಾನೆಜರ್ ಆಲ್ಫ್ ರ್‍ಯಾಮ್ಸೆ ಹಾಕಿದ ಸವಾಲಿಗೆ ಉತ್ತರ ಬರಲಿಲ್ಲ. ಬಾಬಿ ಮೂರ್, ಬಾಬಿ ಚಾರ್ಲ್‌ಟನ್ ಇಂಗ್ಲೆಂಡಿನ ಹಾದಿಯನ್ನು ಸುಗಮಗೊಳಿಸಿದರು. ಇಂಗ್ಲೆಂಡ್–ಅರ್ಜೆಂಟಿನಾ ಪಂದ್ಯದಲ್ಲಿ ಗೊಂದಲವೋ ಗೊಂದಲ. ಅರ್ಜೆಂಟಿನಾ ನಾಯಕ ರ್‍ಯಾಟಿನ್‌ಗೆ ಹೊರಗೆ ನಡೆಯಲು ರೆಫರಿ ಆಜ್ಞೆ. ಅತ ನಿರಾಕರಿಸಿದಾಗ ಎರಡೂ ತಂಡಗಳ ಮ್ಯಾನೇಜರ್‌ರು, ಆಟಗಾರರ ನಡುವೆ ವಾಗ್ವಾದ. ೧–೦ ದಿಂದ ಇಂಗ್ಲೆಂಡ್‌ಗೆ ಗೆಲುವು. ಫೈನಲ್‌ನಲ್ಲಿ ಪಶ್ಚಿಮ ಜರ್ಮನಿ ಎದುರು. ಯುರೋಪಿಗೇ ಗೆಲುವು ನಿಶ್ಚಿತ. ಭದ್ರ ಸೌರಕ್ಷಣೆ ಎರಡೂ ಟೀಮುಗಳ ವೈಶಿಷ್ಟ್ಯ. ಫ್ರಾಂಜ್ ಬೆಕೆನ್‌ಬಾರ್ ಎಲ್ಲ ದೃಷ್ಟಿಯಿಂದ ಪೀಲೆಗೆ ಸರಿಸಮಾನ ಆಟಗಾರನಾಗಿ ಬೆಳೆದು ನಿಂತಿದ್ದ. ಪ. ಜರ್ಮನಿಯ ವಿಜಯ ಆಸೆಗೆ ಆಸರೆಯಾಗಿದ್ದ. ಚಿತ್ರಕರ ವಾತಾವರಣದಲ್ಲಿ ಫೈನಲ್ ಆರಂಭ. ಹಾಲರ್ ಜರ್ಮನಿಗೆ ಮುನ್ನಡೆ ದೊರಕಿಸಿಕೊಟ್ಟರೂ ಮುನ್ನಡೆ ಬಾಳಲಿಲ್ಲ. ಹರ್ಸ್ಟ್ ಹಾಗೂ ಪೀಟರ್ಸ್ ಇಂಗ್ಲೆಂಡನ್ನು ವಿಜಯದ ಅಂಚಿಗೆ ತಂದರು. ಕೊನೆಯ ಕ್ಷಣದಲ್ಲಿ ವೆಬರ್ ಸ್ಕೋರು ಸಮಗೊಳಿಸಿದ. ಹೆಚ್ಚಿನ ವೇಳೆಯಲ್ಲಿ ಹರ್ಸ್ಟ್ ಮತ್ತೊಂದು ಗೋಲು ಬಾರಿಸಿದ. ಆಲ್ಫ್ ರ್‍ಯಾಮ್ಸೆ ಕಂಡ ಕನಸು ನನಸಾಗಿತ್ತು. ಅತ ಸರ್ ರ್‍ಯಾಮ್ಸೆ ಆದ. ೧೯೬೬ರ ವೈಶಿಷ್ಟ್ಯ ಎಂದರೆ ಸಂಪರ್ಕ ಉಪಗ್ರಹದ ಮೂಲಕ ವಿಶ್ವದಾದ್ಯಂತ ಪಂದ್ಯಗಳ ಪ್ರತ್ಯಕ್ಷ ಟೆಲಿವಿಜನ್ ಪ್ರಸಾರ.

ಮತ್ತೆ ನಾಲ್ಕು ವರ್ಷಗಳ ನಂತರ ಮೆಕ್ಸಿಕೊದತ್ತ ಟೀಮುಗಳ ಪ್ರಯಾಣ. ಇಲ್ಲಿ ಮತ್ತೊಮ್ಮೆ ಪೀಲೆಯ ದರ್ಬಾರು. ಬ್ರೆಜಿಲ್‌ನ ಸಮಗ್ರ ಫುಟ್‌ಬಾಲ್ ಕೌಶಲ ಪ್ರದರ್ಶನ ಮರೆಯಲಾರದ ಅನುಭವ. ಸೆಮಿಫೈನಲ್‌ನಲ್ಲಿ ಬ್ರೆಜಿಲ್–ಉರುಗ್ವೆ ಮತ್ತು ಇಟಲಿ–ಪಶ್ಚಿಮ ಜರ್ಮನಿ ನಡುವೆ ಹೋರಾಟ. ಬ್ರೆಜಿಲ್–ಇಟಲಿ ಫೈನಲ್‌ಗೆ. ಇಟಲಿಗೆ ಬ್ರೆಜಿಲ್ ಕಬ್ಬಿಣದ ಕಡಲೆ. ೧೯೩೮ ರ ನಂತರ ಪ್ರಥಮ ಸಲ ಫೈನಲ್‌ಗೆ ಬಂದನಂತರ ಬಹುಕಾಲ ಉಳಿಯಲಿಲ್ಲ. ಪೀಲೆ, ಜೈರ್‌ಝಿನೊ ಮುಂದೆ ಅವರ ಆಟ ಸಾಗಲಿಲ್ಲ. ಜೂನ್ ೧೭ಃ ಪೀಲೆ ತಲೆಯಿಂದ ಚೆಂಡು ಇಟಲಿಯ ಗೋಲಿಗೆ ಸಿಡಿಯಿತು. ಬೊನಿನೇಗಾ ಇಟಲಿಯನ್ನು ಸಮಸ್ಥಿತಿಗೆ ತಂದದ್ದೇ ದೊಡ್ಡ ಮಾತು. ಗೆರ್ಸನ್ ಮತ್ತು ಜೈರ್‌ಝಿನೊ ಮತ್ತೆರಡು ಗೋಲು ಬಾರಿಸಿದಾಗ ಬ್ರೆಜಿಲ್‌ಗೆ ಅಭೇದ್ಯ ೩–೧ ಮುನ್ನಡೆ. ಕೊನೆಯ ನಿಮಿಷಗಳಲ್ಲಿ ಪೀಲೆ ಸಿದ್ಧಪಡಿಸಿಕೊಟ್ಟ ಸ್ಥಾನದಿಂದ ನಾಯಕ ಕಾರ್ಲೊಸ್ ಆಲ್ಬರ್ಟೊ ಚೆಂಡನ್ನು ಗುರಿ ಮುಟ್ಟಿಸಿದ. ಮೂರನೇ ಸಲ ಬ್ರೆಜಿಲ್‌ಗೆ ವಿಶ್ವಕಪ್. ಜೂಲಿಯಸ್ ರಿಮೆಟ್ ಟ್ರಾಫಿ ಶಾಶ್ವತವಾಗಿ ಬ್ರೆಜಿಲ್ ವಶಕ್ಕೆ. ರಾಷ್ಟ್ರದ ಸಂತೋಷಕ್ಕೆ ಸ್ವಲ್ಪ ಕುಂದು, ದಣಿದ ಛಾಯೆ. ಪೀಲೆ ನಿವೃತ್ತಿ ಘೋಷಿಸಿದ.

೧೯೭೪ರ ಟೂರ್ನಿಗೆ ಅಂತಾರಾಷ್ಟ್ರೀಯ ಫುಟ್‌ಬಾಲ್ ಮಹಾಮಂಡಳಿ ಹೊಸ ಕಪ್ ಸಿದ್ಧಪಡಿಸಬೇಕಾಯಿತು. ಅದರೊಂದಿಗೇ ಹೊಸ ಅಧ್ಯಕ್ಷನ ಆಯ್ಕೆ. ಇಂಗ್ಲೆಂಡಿನ ಸ್ಟಾನ್ಲೆ ರೌಸ್‌ರಿಂದ ಬ್ರೆಜಿಲ್‌ನ ಜೋವಾ ಹ್ಯಾವೆಲಾಂಗ್ ಕೈಗೆ ಅಧಿಕಾರ. ಆದರೆ ಬ್ರೆಜಿಲ್‌ಗೆ ಹೊಸ ಕಪ್ ದಕ್ಕಲಿಲ್ಲ. ಸ್ಪೇನ್, ಹಂಗೆರಿ, ಬೆಲ್ಜಿಯಮ್, ಜೆಕೋಸ್ಲೊವಾಕಿಯಾ, ಪೋರ್ತುಗಾಲ, ರಶಿಯಾ, ಫ್ರಾನ್ಸ್ ಮತ್ತು ಇಂಗ್ಲೆಂಡ್ ಅರ್ಹತಾ ಸುತ್ತುಗಳಲ್ಲೇ ನಿರ್ಗಮಿಸಿದ್ದರಿಂದ ಹೊಸಬರಿಗೆ ಅವಕಾಶ. ಪೀಲೆ, ಗೆರ್ಸನ್ ಇಲ್ಲದ ಬ್ರೆಜಿಲ್ ಗಾದಿ ಉಳಿಸಲಿಲ್ಲ. ಹೊಸ ಫುಟ್‌ಬಾಲ್ ಶಕ್ತಿಯಾಗಿ

ಹಾಲೆಂಡಿನ ಉದಯ. ೧೯೭೪ ರ ವೈಶಿಷ್ಟ್ಯ. ಪೂರ್ವ ಮತ್ತು ಪಶ್ಚಿಮ ಜರ್ಮನಿ ಇಲ್ಲಿ ಮೊದಲ ಸಲ ಎದುರು ಬದುರು. ಪಶ್ಚಿಮದ ಕಡೆಯಲ್ಲಿ ಮ್ಯೂಲರ್, ಬೆಕೆನ್‌ಬಾರ್ ಅವರಂಥ ಪ್ರಚಂಡರಿದ್ದರು. ೧-೦ ಅಂತರದಿಂದ ಪೂರ್ವ ಜರ್ಮನಿಗೆ ಜಯ. ಪಶ್ಚಿಮ ಜರ್ಮನಿಯ ಸೋಲಿಗೆ ಕಾರಣ ಏನು? ಕ್ವಾರ್ಟರ್ ಫೈನಲ್‌ನಲ್ಲಿ ಬಲಹೀನ ಎದುರಾಳಿಯನ್ನು ಸಂಧಿಸಲೆಂದೆ? ಸಂಶಯ ನಿವಾರಣೆ ಆಗಲಿಲ್ಲ.

ಹಾಲೆಂಡಿನ "ಸಮಗ್ರ ಫುಟ್‌ಬಾಲ್" ಇಲ್ಲಿ ಪ್ರತ್ಯಕ್ಷ ನಿದರ್ಶನಕ್ಕೆ ಉರುಗ್ವೆ ವಿರುದ್ಧ ಸುಲಭ ಜಯ. ಆದರೆ ಸ್ವೀಡನ್ ಮೇಲೆ ಗೆಲ್ಲಲಿಲ್ಲ; ಸೋಲಲಿಲ್ಲ. ಎರಡನೇ ಸುತ್ತಿನಲ್ಲಿ ಹಾಲೆಂಡ್ ಕೈ ಮೇಲು. ಪೂರ್ವ ಜರ್ಮನಿ ವಿರುದ್ಧ ಜಯ. ಅರ್ಜೆಂಟಿನಾಕ್ಕೆ ಅವರಿಂದ ಹೊಸ ಪಾಠ. ಆದರೆ ಬ್ರೆಜಿಲ್ ಇನ್ನೂ ಸ್ಪರ್ಧೆಯಲ್ಲಿತ್ತು. ಪಶ್ಚಿಮ ಜರ್ಮನಿ ಮತ್ತು ಪೋಲೆಂಡ್ ಒಂದು ಸೆಮಿ ಫೈನಲ್‌ನಲ್ಲಿ; ಹಾಲೆಂಡ್ ಮತ್ತು ಬ್ರೆಜಿಲ್ ಇನ್ನೊಂದು ಸೆಮಿಫೈನಲ್‌ನಲ್ಲಿ. ನೀರು ನಿಂತ ಸ್ಟೇಡಿಯಂನಲ್ಲಿ ಪೋಲೆಂಡ್ ಮೇಲೆ ಪಶ್ಚಿಮ ಜರ್ಮನಿಗೆ ೧-೦ ಪರಿಶ್ರಮದ ಜಯ. ಇನ್ನೊಂದರಲ್ಲಿ ವಿಶ್ರಾಂತಿ ವೇಳೆವರೆಗೆ ಸರಿಸಮ ಹೋರಾಟ. ದ್ವಿತೀಯಾರ್ಧದಲ್ಲಿ ಹಾಲೆಂಡಿನ ಕೈ ಮೇಲು. ನೆಸ್ಕೆನ್ಸ್ ಹಾಗೂ ಕ್ರುಯಿಫ್ ಗಳಿಸಿದ ಗೋಲುಗಳಿಂದ ಹಾಲೆಂಡ್ ಫೈನಲ್‌ಗೆ.

ಹಾಲೆಂಡ್-ಪ. ಜರ್ಮನಿ ಫೈನಲ್. ಅವುಗಳ ನಾಯಕರಾದ ಕ್ರುಯಿಫ್ ಮತ್ತು ಬೆಕೆನ್‌ಬಾರ್ ನಡುವಿನ ಹೋರಾಟವಾಗಿತ್ತು. ಆರಂಭದ ನಡೆಯಲ್ಲೇ ಕ್ರುಯಿಫ್ ಜರ್ಮನ್ ಕೋಟೆಯಲ್ಲಿ ನುಗ್ಗಿದಾಗ ಜರ್ಮನ್ ಪ್ರೇಕ್ಷಕರು ಉಸಿರು ಬಿಗಿ ಹಿಡಿದು ಕುಳಿತರು. ಆದರೆ ಕ್ರುಯಿಫ್ ಪೆನಾಲ್ಟಿ ಏರಿಯಾದಲ್ಲಿ ಫೌಲ್ ಮಾಡಿದಾಗ ಪ. ಜರ್ಮನಿಗೆ ಫ್ರೀ ಅವಕಾಶ. ನೆಸ್ಕೆನ್ಸ್ ಗೋಲು ಒದ್ದನು. ಇಂಥದೇ ಪೆನಾಲ್ಟಿಯಿಂದ ಹಾಲೆಂಡಿನ ಬ್ರೈಟ್ನರ್ ಸ್ಕೋರು ಸಮ ಮಾಡಿದನು. ವಿಶ್ರಾಂತಿಗೆ ಎರಡು ನಿಮಿಷ ಮುನ್ನ ಗೆರ್ಡ್ ಮ್ಯೂಲರ್ ಆತಿಥೇಯ ಟೀಮಿಗೆ ಮತ್ತೆ ಮುನ್ನಡೆ ಗಳಿಸಿಕೊಟ್ಟನು. ದ್ವಿತೀಯಾರ್ಧದಲ್ಲಿ ಪ. ಜರ್ಮನಿಯ ಸಂರಕ್ಷಣೆ ಅಭೇದ್ಯವಾಗಿತ್ತು.

೧೯೭೮ರಲ್ಲಿ ಅರ್ಜೆಂಟಿನಾಕ್ಕೆ ಬರುವ ವೇಳೆಗೆ ಪಶ್ಚಿಮ ಜರ್ಮನಿಗೆ ವಿಶ್ವಕಪ್ ಉಳಿಸಿಕೊಳ್ಳುವ ಶಕ್ತಿ ಇರಲಿಲ್ಲ. ಬೆಕೆನ್‌ಬಾರ್ ಇಲ್ಲದೆ ಅದು ಗೆಲ್ಲುವಂತೆ ಕಾಣಲಿಲ್ಲ.. ಅರ್ಜೆಂಟಿನಾ, ಬ್ರೆಜಿಲ್, ಹಾಲೆಂಡ್ ಮತ್ತು ಇಟಲಿ-ಇವುಗಳಲ್ಲಿ ಒಂದು ಗೆಲ್ಲುವುದಾಗಿ ಲೆಕ್ಕ ಹಾಕಲಾಗಿತ್ತು. ನಾಲ್ಕನೇ ಸಲ ವಿಶ್ವಕಪ್ ಗೆದ್ದು ಹೊಸ ವಿಕ್ರಮ ಸ್ಥಾಪಿಸುವ ಸನ್ನಾಹದಿಂದ ಬಂದ ಬ್ರೆಜಿಲ್ ಮೇಲೆಯೇ ಹೆಚ್ಚಾಗಿ ಎಲ್ಲರ ಕಣ್ಣು. ಗುಂಪು ಪಂದ್ಯದಲ್ಲಿ ಇಟಲಿಗೆ ಸೋತು ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ದ್ವಿತೀಯ ಸುತ್ತಿನಲ್ಲಿ ಕಾಲಿರಿಸಿದ್ದ ಅರ್ಜೆಂಟಿನಾ ಅಂತಿಮ ಪಂದ್ಯಕ್ಕೆ ಬರುವವರೆಗೆ ಗೆಲುವಿನ ಲೆಕ್ಕಕ್ಕೆ ಬಂದಿರಲಿಲ್ಲ. ಆಟವನ್ನು ಗೆಲ್ಲುವ ಹದಕ್ಕೆ ತಂದುಕೊಂಡಿದ್ದ ಬ್ರೆಜಿಲನ್ನು ಗೋಲು ಸರಾಸರಿಯಲ್ಲಿ ಹಿಂದೆ ಹಾಕಿ ಬಂದ ಅರ್ಜೆಂಟಿನಾ ಫೈನಲ್‌ನಲ್ಲಿ ಹಾಲೆಂಡ್ ವಿರುದ್ಧ ಗೆದ್ದೇ ತೀರುವುದೆಂದು ಖಚಿತವಾಗಿ ಯಾರೂ ಹೇಳಲಿಲ್ಲ. ಹಾಲೆಂಡಿನ ಶಿಸ್ತು ಮತ್ತು ಸಂಯೋಜನೆಗೆ ಪ್ರತಿಯಾಗಿ ದಾಳಿಪ್ರಧಾನ ಆಟ ರೂಪಿಸಿಕೊಟ್ಟ ಮ್ಯಾನೇಜರ್ ಸೀಜರ್ ಮೆನೋಟಿ ಮಾತ್ರ ಅರ್ಜೆಂಟಿನಾ ಟೀಮಿನಲ್ಲಿ ಗೆಲುವಿನ ವಿಶ್ವಾಸ ಮೂಡಿಸಿದ್ದರು. ನಿಯಮಿತ ವೇಳೆ ಮುಗಿದಾಗ ಸ್ಕೋರು ೧-೧. ಹೆಚ್ಚಿನ ವೇಳೆಯಲ್ಲಿ ಅರ್ಜೆಂಟಿನಾಕ್ಕೆ ಮತ್ತೆರಡು ಗೋಲು.

ಪೆರು ವಿರುದ್ಧ ಕನಿಷ್ಟ ನಾಲ್ಕು ಗೋಲುಗಳನ್ನು ಗಳಿಸದಿದ್ದರೆ ಅರ್ಜೆಂಟಿನಾ ಫೈನಲ್‌ಗೆ ಬರುತ್ತಿರಲಿಲ್ಲ. ಆದರೆ ಅದು ನಾಲ್ಕಲ್ಲ, ಆರು ಗೋಲುಗಳನ್ನು ಗಳಿಸಿತು. ಬ್ರೆಜಿಲ್‌ಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಅರ್ಜೆಂಟಿನಾ ಮೂಲದ ಪೆರು ಗೋಲ್‌ಕೀಪರ್‌ನ "ಕಿತಾಪತಿ" ಇದು ಎಂದು ಬ್ರೆಜಿಲ್ ಆಪಾದಿಸಿತು. ಆದರೆ ಈ ಆಪಾದನೆಯನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ವಿಶ್ವಕಪ್ ಟೂರ್ನಿಯ ೧೦೦೦ ನೇ ಗೋಲು ಅರ್ಜೆಂಟಿನಾ ಟೂರ್ನಿಯ ಒಂದು ವೈಶಿಷ್ಟ್ಯ. ಈ ಗೌರವ ಸಂದಿದ್ದು ಹಾಲೆಂಡಿನ ರಾಬ್‌ರೆನ್ಸೆನ್ ಬ್ರಿಂಕ್‌ಗೆ. ಸ್ಕಾಟ್‌ಲೆಂಡ್ ವಿರುದ್ಧ ಆಡಿದ ಪಂದ್ಯದಲ್ಲಿ. ಈ ಪಂದ್ಯವನ್ನು ಸ್ಕಾಟ್‌ಲೆಂಡ್ ೩-೨ರಿಂದ ಜಯಿಸಿತು.

ಹಿಂದಿನವರು ಹೇಳಿದ್ದು ....

- ಕಾಳಕೂಟದ ತೊರೆಗಳಲಿ ಜಲಕೇಳಿಯೇ ?

— ಕುಮಾರವ್ಯಾಸ

- ಕುಜನ ಸಂಗದೊಳುಂಟೆ ಸುಖ ?

— ಭಾಸ್ಕರ

- ಪುಟ್ಟಿದುದಂಜದಲ್ಲದೊಡೆ ಮುಟ್ಟಿದುದಂಜದು

— ಮುಗ್ಗಿಯ ಮಾಯಿದೇವ

- ಬೆಂದ ಹುಣ್ಣನು ಕೀಸುವರೆ ಕುಂಬಿಯಲಿ ?

— ಚಾಮರಸ

- ನೀರಡಿಸಿ ಬಳಿಕ್ಕ ಬಾವಿಯನಗುಳ್ವವರೆ ?

— ಚಂದ್ರಕವಿ

- ಹೂವಿಂದ ನಾರು ಗತಿವಡೆದಂತೆ ?

— ಬೊಮ್ಮರಸ

- ಹಿಂದೆ ಭವನಾಶ, ಮುಂದೆ ಕೈವಲ್ಯ

— ಸ್ವತಂತ್ರ ಸಿದ್ಧಲಿಂಗೇಶ್ವರ

- ಕೆನೆ ಸಾಧ್ಯವಾದ ಬಳಿಕ, ಹಾಲಿನ ಹಂಗೇತಕ್ಕೆ ?

— ಘನಲಿಂಗಿದೇವರು

- ಹುಲ್ಲುರಿ ದಾವರದ ದೊಂಬಿಂಗೆ ನೀರಹುದೆ ?

— ಕುಮಾರವಾಲ್ಮೀಕಿ

ಪ್ರತಿ ಸೋಮವಾರ ಸಂಜೆಯ ವೇಳೆ ನಾನು, ನನ್ನ ಮಡದಿ, ಮಗ ಹಾಗೂ ಮಗಳೊಂದಿಗೆ ವಿಶ್ವೇಶ್ವರಪುರದಲ್ಲಿನ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಪೂಜೆಗಾಗಿ ಹೋಗುವ ಪದ್ಧತಿ ಉಂಟು. ಅದರಂತೆಯೇ ಆ ದೊಂದು ಸೋಮವಾರ ಮಾಮೂಲಿನಂತೆ ಪೂಜೆ ಮಾಡಿಸಿಕೊಂಡು ಹೊರಬಂದೆವು.

ಹೊರಬಂದನಂತರ "ನನಗೆ, ನನಗೆ" ಎಂದು ಭಿಕ್ಷುಕ ಬಾಲಕ-ಬಾಲಕಿಯರು ಹಣಕ್ಕಾಗಿ ನಮ್ಮನ್ನು ಕಾಡಲಾರಂಭಿಸಿದರು. ಅವರಿಗೆ ಚಿಲ್ಲರೆ ಹಣವನ್ನು ನೀಡಿ ಮುಂದೆ ಬರಲು ಅಲ್ಲಿ ನಲವತ್ತೈದು ಅಥವಾ ನಲವತ್ತೆಂಟರ ವಯಸ್ಸಿನ ಓರ್ವ ಹೆಂಗಸು ಅಳುಮುಖ ಮಾಡಿಕೊಂಡು ಎಡಗಾಲಿಗೆ ಮೊಣಕೈ ಊರಿಕೊಂಡು ತನ್ನಲ್ಲಿ ತಾನು ಮಾತನಾಡಿಕೊಳ್ಳುತ್ತಾ ಬಲಗೈಯನ್ನು ದೇವರತ್ತ, ಆಕಾಶದತ್ತ ತೋರಿಸುತ್ತಾ ಕುಳಿತಿದ್ದಳು. ಗೀರುಗೀರಿನ ಹತ್ತಿಯ ಹಸಿರು ಸೀರೆಯನ್ನುಟ್ಟಿದ್ದಳು. ಆ ಸೀರೆ ಏಳೆಂಟು ಕಡೆ ಹರಿದಿದ್ದು, ನಾನಾ ಬಗೆಯ ದಾರಗಳ ಹೊಲಿಗೆಗಳನ್ನು ಕಂಡಿತ್ತು. ಆಕೆ ತೊಟ್ಟಿದ್ದ ಕುಪ್ಪುಸ ಅಲ್ಲಲ್ಲಿ ಬಹಳವಾಗಿ ಹರಿದು ಹೋಗಿತ್ತು. ಪಕ್ಕದಲ್ಲಿ ನಾಲ್ಕೈದು ವರ್ಷದ ಓರ್ವ ಬಾಲಕ ಆಕೆಗೆ ಒರಗಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದ. ಅವನು ಧರಿಸಿದ್ದ ಬಟ್ಟೆಗಳೆಲ್ಲವೂ ಕೊಳೆಯಾಗಿದ್ದು, ಹರಿದುಹೋಗಿದ್ದುವು. ಆ ದೃಶ್ಯವನ್ನು ಕಂಡು ನನಗೆ ಬಹು ಮರುಕವುಂಟಾಗಿ ಆಕೆಯತ್ತ ಹೆಜ್ಜೆ ಹಾಕಿದೆ.

"ಅಮ್ಮಾ..." ಎಂದೆ.

ಆಕೆ ಬಹು ಕ್ಷೀಣವಾದ ಸ್ವರದಲ್ಲಿ "ಆಂ..." ಎಂದಳು.

"ತಗೋಳ್ಳೀಮ್ಮಾ" ಎಂದು ನಾಲ್ಕಾಣೆಯ ಚಿಲ್ಲರೆಯನ್ನು ಆಕೆಯ ಕೈಗೆ ನೀಡಲು ಹೋದಾಗ ಆಕೆ ಮುಖವೆತ್ತಿ ನೋಡಿ ತಲೆಯಲ್ಲಾಡಿಸಿ ಬೇಡವೆನ್ನುವಂತೆ ಕೈ ಅಲ್ಲಾಡಿಸಿದಳು. "ಪರವಾಗಿಲ್ಲ, ತಗೋಳ್ಳೀಮ್ಮಾ..." ಎಂದೆ. ಒಂದು ಬಾರಿ ನನ್ನತ್ತ ಹಾಗೂ ನನ್ನ ಮಡದಿಯತ್ತ ನೋಡಿ ಗದ್ಗದಿತಕಂಠಳಾಗಿ ಕಣ್ಣೀರನ್ನೊರಸಿಕೊಳ್ಳುತ್ತಾ "ಅಪ್ಪಾ ಮಗೂ, ನಾನು ಭಿಕ್ಷೆ ಕೇಳೋಕ್ಕೂತ್ಕೊಳ್ಳಿಲ್ಲಪ್ಪಾ. ಮನೇನಲ್ಲಿ ಅಸಾಧ್ಯ ಗಲಾಟೆ. ಮನಸ್ಸಿಗೆ ಶಾಂತಿಯಿಲ್ಲ; ಸೊಸೆಯ ಕಾಟ ಬೇರೆ. ಮೂರು ಹೊತ್ತೂ ನನ್ನನ್ನ ಹುರ್ಕೊಂಡ ತಿನ್ತಾಳೆ. ಮಗನೂ ಅವಳ್ನಡೇನೇ ಮಾತಾಡ್ತಾನೆ. ಇವನು ನನ್ನ ಮೊಮ್ಮಗ. ಮೂರು ಹೊತ್ತೂ ವಿನಾಕಾರಣ ಇವನನ್ನ ಹೊಡೀತಿರ್ತಾಳೆ; ಪೀಡೆ, ಪೀಡೆ ಅಂತ ಬೈತಿರ್ತಾಳೆ. ಇವತ್ತು ಏನೋ ನೆಪ ಮಾಡ್ಕೊಂಡು ನನ್ನನ್ನ ಹುಚ್ಚಾಬಟ್ಟೆ ಹೊಡೆದಳು. ಇವನನ್ನೂ ಹೊಡೆದಳು. ಭಿಕ್ಷೆ ಕೇಳೋಕ್ಬರಲಿಲ್ಲಪ್ಪಾ. ದೇವಸ್ಥಾನದ ಹತ್ತಿರ ಬಂದು ಕೂತ್ಕೊಂಡ್ರೆ ಮನಸ್ಸಿಗೆ ಸ್ವಲ್ಪ ಶಾಂತಿ ಸಿಗಬಹುದೇನೋ ಅಂತ ಇಲ್ಲಿ ಕೂತಿದ್ದೀನಪ್ಪಾ. ದೇವರು ನಿನಗೆ ಒಳ್ಳೇದು ಮಾಡಲಿ" ಎಂದಳು. ಚಾಚಿದ್ದ ಬಲಗೈ ಅಂತೆಯೇ ಹಿಂದಕ್ಕೆ ಬಂತು.

–ಶ್ರೀಲಕ್ಷ್ಮೀಸುತ

ಆರು ತಿಂಗಳ ಮಗು ಕೇಶವನನ್ನು ಕೈಯಲ್ಲೆತ್ತಿಕೊಂಡು ರೈಲಿನಲ್ಲಿ ಘಾಟಕೋಪರದಿಂದ ಮುಳುಂದಕ್ಕೆ ಹೋಗಬೇಕಾಗಿತ್ತು. ಬಂದ ರೈಲುಗಳೆಲ್ಲಾ ಜನರಿಂದ ತುಂಬಿ ಬರುತ್ತಿದ್ದರೂ ಅದರಲ್ಲೇ ನುಗ್ಗದೇ ನಿರ್ವಾಹವಿರಲಿಲ್ಲ. ಕಷ್ಟಪಟ್ಟು ಲೇಡಿಸ್ ಕಂಪಾರ್ಟಮೆಂಟನಲ್ಲಿ ನುಗ್ಗಿ ಒಂದು ಬದಿಯಲ್ಲಿ ನಿಂತೆ. ಒಳಗೆ ಗದ್ದಲವೇ ಗದ್ದಲ; ಉಸಿರಾಡಲೂ ಕಷ್ಟವಾಗುತ್ತಿತ್ತು. ಐದು ನಿಮಿಷ ಕಳೆದಿರಬಹುದು. ಮಗು ರಚ್ಚೆ ಹಿಡಿದು ಅಳತೊಡಗಿತು. ಸಮಾಧಾನ ಮಾಡಲು ಪ್ರಯತ್ನಪಟ್ಟಷ್ಟೂ ಅಳು ಹೆಚ್ಚುತ್ತಿತ್ತು. ರೈಲು ಮುಳುಂದಕ್ಕೆ ತಲುಪಿ ನಾನು ಸ್ಟೇಶನ್ನಿನಿಂದ ಹೊರಬಂದಾಗ

ಕೇಶವ ಅತ್ತು ಅತ್ತು ದಣಿದು ಮಲಗಿದ್ದ. ಸ್ಟೇಶನ್ನಿನ ಬಳಿಯ ಮಾರ್ಕೆಟ್ಟಿನಲ್ಲಿ ತರಕಾರಿ ಕೊಂಡು ಹಣ ಕೊಡಲು ಚೀಲಕ್ಕೆ ಕೈ ಹಾಕಿದಾಗ ಎದೆ ಧಸಕ್ ಎಂದಿತು. ಚೀಲದಲ್ಲಿಟ್ಟ ಹಣದ ಪರ್ಸ್ ಮಾಯ! ಪ್ಲಾಸ್ಟಿಕ್ಕಿನ ಚೀಲವನ್ನು ಬ್ಲೇಡಿನಿಂದ ಕತ್ತರಿಸಿ ಅದರೊಳಗಿದ್ದ ಹಣದ ಪರ್ಸನ್ನು ಯಾರೋ ತೆಗೆದಿದ್ದರು. ಗುರುತಿನ ತರಕಾರಿಯವನಿಗೆ ಹಣ ನಾಳೆ ಕೊಡುತ್ತೇನೆಂದು ಹೇಳಿ ಜೋಲು ಬಿದ್ದ ಮುಖ ಹೊತ್ತು ಮನೆಗೆ ಬಂದೆ. ಮಗುವಿನ ಬಟ್ಟೆ ಬದಲಿಸುವಾಗ ನನಗೆ ಅದರ ಕಾಲುಗಳ ಮೇಲೆ ಉಗುರಿನ ಗುರುತುಗಳನ್ನು ಕಂಡು ಅಚ್ಚರಿಯಾಯಿತು. ಉಗುರನಿಂದ ಗೀರಿದ ಸ್ಥಳ ಕೆಂಪಾಗಿ ರಕ್ತ ಬರುವಂತಿತ್ತು. ಮಗುವಿನ ಕಾಲಿಗೆ ಉಗುರುಗಳಿಂದ ಗಾಯ ಮಾಡುವುದರ ಮೂಲಕ ಅದು ಅಳುವಂತೆ ಮಾಡಿ ನನ್ನ ಧ್ಯಾನವನ್ನು ಮಗುವಿನ ಕಡೆಗೆ ತಿರುಗಿಸಿ ಹ್ಯಾಂಡ್ ಬ್ಯಾಗಿನಲ್ಲಿದ್ದ ಪರ್ಸ್ ಅಪಹರಿಸಿದ್ದರು ಕಿಸೆಗಳ್ಳರು. ಅಬ್ಬಾ! ಎಂದುಕೊಂಡೆ ಮನದಲ್ಲೇ.

ಶ್ರೀಮತಿ ಜಿ. ಪಿ. ಕಾಮತ್

ಮೈಸೂರಲ್ಲಿ ಮಿತ್ರರೊಬ್ಬರು ಪ್ರೇಕ್ಷಣೀಯ ಸ್ಥಳ ತೋರಿಸಲೆಂದು ಒಂದು ಕಾರು ಗೊತ್ತು ಮಾಡಿದರು. ನಾವಿದ್ದ ಹತ್ತು ದಿನಗಳವರೆಗೆ ನಿತ್ಯ ಸಾಯಂಕಾಲ ೫ ಘಂಟೆಗೆ ನಮ್ಮನ್ನು ಕರೆದುಕೊಂಡು ಹೋಗಿ ಸ್ಥಳದರ್ಶನ ಮಾಡಿಸುವುದು ಆ ಕಾರ್ ಚಾಲಕನ ಕೆಲಸ. ಎರಡನೆ ದಿವಸ ನಾವು ಹೊರಟದ್ದು ಚಾಮುಂಡಿ ಬೆಟ್ಟಕ್ಕೆ. ಹೋಗುತ್ತಾ ಹೋಗುತ್ತಾ ವರ್ಣಿಸುವುದು ಆ ಚಾಲಕನ ಸ್ವಭಾವ. ಆ ಪ್ರಕಾರ ಆತ ಲಲಿತಮಹಲನ್ನು ವರ್ಣಿಸಿ, ಈಗ ಅದು ಹೊಟೆಲಾಗಿದೆ, ಬಹಳ ದುಬಾರಿ, ಅದೆಲ್ಲಾ ವಿದೇಶಿ ಪ್ರವಾಸಿಗರಿಗೆ ಸಾಧ್ಯ ಎನ್ನುತ್ತ "ಈ ಮಹಲುಗಳು, ಹೋಟಲಗಳು, ಅರಮನೆಗಳು ವಿದೇಶಿ ವಿನಿಮಯಕ್ಕಾಗಿ ಸ್ವಾಮಿ. ನಮಗೆ ಈ ರಾಗಿ ಮುದ್ದೆ ತಪ್ಪಿಲ್ಲ-" ಹೇಳ್ತಾ ಇದ್ದ ಡ್ರೈವರ್. ಅಷ್ಟರಲ್ಲಿ ನಮ್ಮಲ್ಲಿಯ ತುಂಟ ಪ್ರಾಧ್ಯಾಪಕರೊಬ್ಬರು ನಡುವೆ ಬಾಯಿ ಹಾಕಿ, ಉತ್ತರ ಕರ್ನಾಟಕ ಭಾಷೆಯಲ್ಲಿ, "ಹೀಂಗಂತಿಯಾ? ನಿಮ್ಮ ಮಹಾರಾಜರು ಹಣ ಖರ್ಚ ಮಾಡಿ ಮಹಲು, ಅರಮನೆ ಮಾಡಿದರು... ಬಡವರಿಗೆ ಏನೂ ಮಾಡಲಿಲ್ಲ..." ಇನ್ನೂ ಏನೇನೋ ಹೇಳುವವರಿದ್ದರು. ಅಷ್ಟರಲ್ಲಿ ಆ ಡ್ರೈವರ್ ಅವರ ಬಾಯಿಗೆ ಬ್ರೆಕ್ ಹಾಕಿದ. "ನೀವು ಏನು ಬೇಕಾದರೂ ಹೇಳಿ, ಮಹಾರಾಜರಿಗೆ ಏನೂ ಅನ್ನಬೇಡಿ ಸರ್, ಅವರು ಬಡವರ ಬಂಧು. ಈ ಮೈಸೂರನ್ನು ಜಾಗತಿಕ ಪ್ರಸಿದ್ಧಿಗೆ ಬರುವಂತೆ ಮಾಡಿದವರು ಅವರೇ. ನಿಮ್ಮಂತವರು ಬರ್ತಾರೆ; ನಮ್ಮಂತವ್ರ ಗಾಡಿಯೊಳಗೆ ಅಡ್ಡಾಡಿ ಸಂತೋಷಪಟ್ಟು, ಎರಡು ಕಾಸು ಹೆಚ್ಚಿಗೆ ಕೊಡ್ತಾರೆ. ಆವಾಗ ನಾವು ನೆನೆಯುವದು ಯಾರನ್ನ? ಸ್ವಾಮಿ, ಮಹಾರಾಜರಲ್ಲವೆ?" ಎಂದ. ಮುಂದೆ ಎಂಟು ದಿವಸಗಳವರೆಗೆ ಆತ ನಮ್ಮನ್ನು ಊರಲ್ಲೆಲ್ಲ ತಿರುಗಾಡಿಸಿದರೂ ಆ ವಿಷಯ ಏನೂ ಮಾತಾಡಲಿಲ್ಲ. ಅವನಿಗಾದ ಸಂಸ್ಕಾರವನ್ನು ಹೊಟ್ಟೆಗೆ ಹಿಟ್ಟು ಕಡಿಮೆ ಅಂತಾ ಅಳಿಸಿ ಹಾಕಬಹುದೆ?

-ಎಸ್. ಬಿ. ಬೋದಾನಪುರ




ಆತನ ಕಣ್ಣು ಕುರುಡಾದರೇನಂತೆ
ಹೃದಯ ವಿಶಾಲ, ನಿರ್ಮಲ

ಸೂರದಾಸ: ಭಕ್ತ ಕವಿಶ್ರೇಷ್ಠ

ತಿಪ್ಪೇಸ್ವಾಮಿ

ಹಿಂದಿಯಲ್ಲಿ ಬಹಳವಾಗಿ ಪ್ರಚಲಿತವಾಗಿರುವ ಒಂದು ಪ್ರಶಸ್ತಿ ಗೀತೆಯು 'ಸೂರ ಸೂರ್ ತುಲಸೀ ಸಸಿ' ಅಂದರೆ ಸೂರದಾಸನನ್ನು 'ಸೂರ್ಯ' ಎಂದು ಹೇಳುತ್ತದೆ. ಈ ಸಾಲು ಹಿಂದೀ ಜನರಲ್ಲಿ ಎಷ್ಟರ ಮಟ್ಟಿಗೆ ಪ್ರಚಲಿತ ಹಾಗೂ ಸವಕಲು ನಾಣ್ಯದಂಥ ಉಕ್ತಿಯಾಗಿದೆ ಎಂದರೆ ಸೂರದಾಸನನ್ನು ಕುರಿತು ಮಾತನಾಡುವ, ಬರೆಯುವ ಯಾವೊಬ್ಬನೂ ಇದನ್ನು ಉದ್ಧರಿಸದೆ ಬಿಡುವುದಿಲ್ಲ. ನಾನು ಈ ಪಂಕ್ತಿಯನ್ನು ಓದುವಾಗಲೆಲ್ಲ ಮತ್ತೆ ಮತ್ತೆ ಯೋಚಿಸಿದ್ದೇನೆ, ಸೂರದಾಸ 'ಸೂರ್ಯ' ಹೇಗೆ ಎಂದು. ಸೂರ್ಯನ ಪ್ರಖರತೆಯಾಗಲಿ, ತೀಕ್ಷ್ಣತೆಯಾಗಲಿ ಕಿಂಚಿತ್ತೂ ಇಲ್ಲದ ಈ ಭಕ್ತಕವಿಯನ್ನು 'ಸೂರ' ನೆಂದು ಕರೆದು ನಮ್ಮ ವಿಮರ್ಶಕರು ಆತನಿಗೆ, ಆತನ ಕಾವ್ಯಕ್ಕೆ ತುಂಬಾ ಅನ್ಯಾಯಮಾಡಿದ್ದಾರೆ ಎಂದೇ ಅನ್ನಿಸುತ್ತದೆ. ವಾಸ್ತವವಾಗಿ ಸೂರದಾಸ ಹಿಂದೀ ಸಾಹಿತ್ಯದ ಚಂದ್ರ. ಈ ಚಂದ್ರನ ಕಾವ್ಯ [illegible] ಶೃಂಗಾರ ಮತ್ತು ವಾತ್ಸಲ್ಯ ರಸ ಧಾರೆಯ ಮಂದಾಕಿನಿ ಭಕ್ತರನ್ನು, ರಸಿಕರನ್ನು ಎಷ್ಟರ ಮಟ್ಟಿಗೆ ಆಕರ್ಷಿಸಿದೆ ಎಂದರೆ ಈತನ ಕಾವ್ಯ ಚಂದ್ರನಷ್ಟೇ ಶೀತಲ, ಬೆಳದಿಂಗಳಷ್ಟೇ ಆಪ್ಯಾಯಮಾನ.

ಕ್ರಿ.ಶ. ೧೪೭೮ರಲ್ಲಿ ದಿಲ್ಲಿಯ ಬಳಿಯ ಸೀಹಿ ಎಂಬ ಗ್ರಾಮದಲ್ಲಿ ಕೃಷ್ಣ ಭಕ್ತಿಯ ಅಮರ ಗಾಯಕ ಸೂರದಾಸ ಜನ್ಮತಾಳಿದನು. ಕಡು ಬಡತನದಲ್ಲಿದ್ದ ಸಾರಸ್ವತ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದ ಸೂರದಾಸ ಹುಟ್ಟು ಕುರುಡ. ಆದರೂ ಸ್ಪರ್ಶ, ಅನುಭವ ಹಾಗೂ ಆಘ್ರಾಣಿಸುವ ಇಂದ್ರಿಯ ಶಕ್ತಿಯಿಂದಾಗಿ ಸೂರದಾಸನು ತನ್ನ ಅನುಭವ ಪ್ರಪಂಚವನ್ನು ವಿಸ್ತರಿಸಿಕೊಂಡನು. ಆದರೆ ತಾನು ಕುರುಡನೆಂಬ ಸ್ವೈಚ್ಛಾನುಸಂಧಾನದಿಂದಾಗಿ ಸೂರದಾಸ ಬಹಳವಾಗಿ ಪರಿತಪಿಸಿರುವುದನ್ನು ಆತನು ಬರೆದಿರುವ ವಿನಯ ಹಾಗೂ ದಾಸ್ಯಭಾವದ ಗೀತೆ



ಗಳಲ್ಲಿ ಗುರುತಿಸಬಹುದು. ತನ್ನ ಬಗೆಗೇ ಒಂದು ರೀತಿಯ ತಿರಸ್ಕಾರದ ಭಾವ ಹಾಗೂ ತನಗೆ ಜನ್ಮಪಿತ್ತ ಭಗವಂತನನ್ನು ಆಕ್ಷೇಪಿಸುವ ಅನೇಕ ಉಪಾಲಂಬ ಗೀತೆಗಳು ಅಂದಿನ ದಿನಗಳಲ್ಲಿದ್ದ ಆತನ ಮನಃಸ್ಥಿತಿಯನ್ನು ನಿರೂಪಿಸುತ್ತವೆ. 'ಪ್ರಭು–ಮೈ ಪತಿತನ್ ಕೋ ಟೀಕೋ/ ಕರಮ್ ಹೀನ್ ಜನಮ್ ಕೌ ಅಂಧೌ' ಎಂದು ಮುಂತಾಗಿ ಬೇಸರದ ಭಾವವನ್ನು ಅಭಿವ್ಯಂಜಿಸುವ ಗೀತೆಗಳು ಬದುಕಿನಲ್ಲಿ ದಾರಿಗಾಣದೆ ನಿಂತ ಸೂರದಾಸನ ಮನಃಸ್ಥಿತಿಯನ್ನು ಕುರಿತು ಹೇಳುತ್ತವೆ.

ಸೂರದಾಸನನ್ನು ಶೂರನನ್ನಾಗಿ ಮಾಡಿದ, ಆತನ ಅನಿಶ್ಚಿತ ವ್ಯಕ್ತಿತ್ವವನ್ನು ರೂಪಿಸಿದ ಕೀರ್ತಿ ಆಚಾರ್ಯ ವಲ್ಲಭಾಚಾರ್ಯರಿಗೆ ಸಲ್ಲಬೇಕು. ತನ್ನ ಅಕ್ಕ ಪಕ್ಕದ ವಾತಾವರಣದಿಂದ ಬೇಸರಗೊಂಡ ಸೂರದಾಸನು ತನ್ನ ೧೧ನೇ ವಯಸ್ಸಿನಲ್ಲಿಯೇ ಮನೆ,ಮಠ ತೊರೆದು ಬಂದು ಮಥುರಾ ಬಳಿಯ ರುಕನತಾ ಎಂಬ ಹಳ್ಳಿಯಲ್ಲಿರತೊಡಗಿದನು. ಈ ಹಳ್ಳಿಯಲ್ಲಿಯೇ ಅವನು ವಲ್ಲಭಾಚಾರ್ಯರನ್ನು ಭೇಟಿಯಾದದ್ದು. ಈ ಹೊತ್ತಿಗಾಗಲೇ ಸೂರದಾಸನು ಸಾಕಷ್ಟು ಪ್ರಸಿದ್ಧಿ ಹೊಂದಿದ್ದು, ವಲ್ಲಭಾಚಾರ್ಯರು ಈತನ ಬಗೆಗೆ ಕೇಳಿದ್ದರು. ಯುವಕ ಸೂರದಾಸನನ್ನು ನೋಡಿ ಹಾಡು ಎಂದರು. ಸೂರದಾಸ ಹಾಡಿದಾಗ, ಆತನ ಕಂಠಮಾಧುರ್ಯಕ್ಕೆ ಮನಸೋತ, ಆದರೆ ಆತನ ದೀನವಾಣಿಯಿಂದ ಮನಕರಗಿದ ವಲ್ಲಭಾಚಾರ್ಯರು, "ಸೂರ್ ಹೋಯ್ ಕಾಹೆ ಘಿಘಿಯಾತ್ ? ಅಂದರೆ ಶೂರನಾಗಿದ್ದುಕೊಂಡು ಏಕೆ ಅಳುತ್ತೀಯೆ? ದೀನನಾಗಿ ಏಕಿದ್ದೀಯೇ?" ಎಂದೆಲ್ಲ ಕೇಳಿ, ಧೈರ್ಯ ತುಂಬಿ ಉತ್ತೇಜಿಸಿದ ಮೇಲೆ ಸೂರದಾಸನಲ್ಲಿದ್ದ ನೈಚ್ಯಾನುಭಾವ ತೊಲಗಿತು. ಮುಂದೆ, ಸೂರದಾಸನಲ್ಲಿ ಅಪ್ರತಿಮ ಪರಿವರ್ತನೆ ತೋರಿಬಂತು. ಬಾಹ್ಯರೂಪಕ್ಕೆ ಕುರುಡನಾದ ಈತನಿಗೆ ಗುರುವಿನ ಆಶೀರ್ವಾದ ಕಣ್ಣುಗಳ ರೂಪದಲ್ಲಿ ಲಭ್ಯವಾಯಿತು. ಮಹಾಪ್ರಭು ವಲ್ಲಭಾಚಾರ್ಯರಿಂದ ಜ್ಞಾನಚಕ್ಷು ಹಾಗೂ ಅಂತಃಚಕ್ಷುಗಳನ್ನು ಪಡೆದುಕೊಂಡ ಸೂರದಾ–ಸನು ವಲ್ಲಭಾಚಾರ್ಯರಿಂದ ದೀಕ್ಷಿತಗೊಂಡು 'ಅಷ್ಟಛಾಪ್' (ಎಂಟು ಜನ ಭಕ್ತಕವಿಗಳ ಮಂಡಲಿ) ಕವಿಗಳಲ್ಲಿ ಅಗ್ರಣಿಯಾದನು.

ಸೂರದಾಸನ ವಿದ್ಯಾಭ್ಯಾಸಕೆ ಸಂಬಂಧಿಸಿದಂತೆ ಯಾವ ಉಲ್ಲೇಖವೂ ಆತನ ಕೃತಿಗಳಲ್ಲಿ ಕಂಡು ಬರುವುದಿಲ್ಲ. ಹರಿರಾಯರು ಬರೆದಿರುವ ಪ್ರಕಾರ ಸೂರದಾಸ ತನ್ನ ಹಳ್ಳಿಯಿಂದ ನಾಲ್ಕಾರು ಮೈಲಿ ದೂರದಲ್ಲಿದ್ದುಕೊಂಡು ತನ್ಮಯನಾಗಿ ಹಾಡುತ್ತಿದ್ದನು. ಈತ ಸಂಗೀತದಲ್ಲಿ ಪ್ರವೀಣನಾಗಿದ್ದನು.

ಸೂರದಾಸನಿಂದ ಬರೆಯಲಾದ ಕೃತಿಗಳೆಂದು ಸುಮಾರು ೨೫ ಗ್ರಂಥಗಳನ್ನು ಪಟ್ಟಿಯನ್ನು ವಿದ್ವಾಂಸರು ಕೊಡುವರಾದರೂ ಸೂರ ಸಾಗರ, ಸೂರ ಸಾರಾವಲಿ, ಸಾಹಿತ್ಯ ಲಹರೀ ಸೂರ ಪಚಿಪಿ, ಸೂರ ರಾಮಾಯಣ, ಸೂರಸಾಠ, ರಾಧಾ ರಸಕೇಲಿ ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಸೂರಸಾಗರ ಹಾಗೂ ಸಾಹಿತ್ಯ ಲಹರಿ ಸೂರದಾಸನ ಶ್ರೇಷ್ಠ ಕೃತಿಗಳೆಂಬ ಗೌರವಕ್ಕೆ ಪಾತ್ರವಾಗಿವೆ. ಇವನ ಇನ್ನೊಂದು ಪ್ರಸಿದ್ಧ ಕೃತಿಯಾದ ಸೂರ ಸಾರಾವಲಿಯನ್ನು ಅನೇಕ ವಿದ್ವಾಂಸರು ಅಪ್ರಾಮಾಣಿಕವೆಂದು ಹೇಳಿದರೆ, ಮತ್ತೆ ಕೆಲವರು ಇದನ್ನು ಸೂರಸಾಗರದ ಅಂಶವೆಂದೇ ಅಭಿಪ್ರಾಯ ಪಡುತ್ತಾರೆ.

ಸೂರದಾಸನ ಪ್ರಸಿದ್ಧ ಕೃತಿಯಾದ 'ಸೂರ ಸಾಗರ' ಶ್ರೀಕೃಷ್ಣನ ಲೀಲೆಗಳನ್ನು ವರ್ಣಿಸುವ ಒಂದು ಮಧುರ ಕಾವ್ಯ. ಇದುಭಾಗವತದ ಆಧಾರದ ಮೇಲೆ ದ್ವಾದಶಸ್ಕಂದಗಳಲ್ಲಿ ವಿಭಾಗಿಸಲ್ಪಟ್ಟಿದ್ದು ಇಲ್ಲಿ ಭಗವಂತನ ನಾನಾ ಅವತಾರಗಳ, ಆತನ ಲೀಲೆಯ ಗಾಯನವಿದೆ. ಈ ದೃಷ್ಟಿಯಿಂದ 'ಸೂರ ಸಾಗರ' ಭಾಗವತಕ್ಕೆ ಋಣಿಯಾಗಿದ್ದರೂ ಸಹ ಇದನ್ನು ಅದರ ಪ್ರತಿಕೃತಿ ಅಥವಾ ಅನುವಾದವೆಂದು ಹೇಳುವುದು ತಪ್ಪಾಗುತ್ತದೆ. ಮಹಾಕವಿ ಸೂರದಾಸನ ಅಸಾಧಾರಣ ಪ್ರತಿ–ಭೆಯ ಮೂಸೆಯಿಂದ ಮೂಡಿ ಬಂದಿರುವ 'ಸೂರ ಸಾಗರ'ದಲ್ಲಿ ಅನೇಕ ಮೌಲಿಕ ಪ್ರಸಂಗಗಳು ಚಿತ್ರಿತವಾಗಿರುವುದಲ್ಲದೆ, ಭಾಗವತದಲ್ಲಿಲ್ಲದ ಅನೇಕ ವರ್ಣನೆಗಳು ಮೋಹಕಶೈಲಿಯಲ್ಲಿ ಚಿತ್ರಿತಗೊಂಡಿವೆ. ಉದಾಹರಣೆಗೆ ರಾಧೆಯ ಹೆಸರು ಸಹ ಭಾಗವತದಲ್ಲಿ ಬರುವುದಿಲ್ಲ. ಆದರೆ 'ಸೂರ ಸಾಗರ'ದಲ್ಲಿ ರಾಧೆಗೆ ಪ್ರಮುಖವಾದ ಸ್ಥಾನವಿದ್ದು ರಾಧಾ–ಕೃಷ್ಣರ ಪ್ರೇಮದ ಬದುಕನ್ನು ಆರಂಭದಿಂದ ಕೊನೆಯವರೆಗೆ ಅತ್ಯಂತ ಆಕರ್ಷಕ ರೀತಿಯಲ್ಲಿ ಸೂರದಾಸ ಚಿತ್ರಿಸಿದ್ದಾನೆ. ಭಾಗವತದಲ್ಲಿ ಶ್ರೀಕೃಷ್ಣ

ನ ಸಂದೇಶವನ್ನು ಹೊತ್ತು ತಂದ ಉದ್ಧವನ ಮಾತುಗಳನ್ನು ಗೋಪಿಯರು ತಲೆಬಾಗಿ ಒಪ್ಪು-ತ್ತಾರೆಯಾದರೆ. 'ಸೂರ ಸಾಗರ'ದಲ್ಲಿ ಈ ಪ್ರಸಂಗ 'ಭ್ರಮರಗೀತ'ವಾಗಿ ನಿರೂಪಿತಗೊಂಡು ಸೂರನ ಅಪೂರ್ವ ಪ್ರತಿಭೆಗೆ, ಆತನ ಕಾವ್ಯಶೈಲಿಗೆ ಸರ್ವೋತ್ಕೃಷ್ಟ ಉದಾಹರಣೆಯಾಗಿ ಬಂದಿದೆ. ಈ 'ಭ್ರಮರ ಗೀತೆ'ಯ ಪ್ರಸಂಗವನ್ನು ಕವಿ ತನ್ನ ಆಧ್ಯಾತ್ಮಿಕ ಜೀವನ ದರ್ಶನದ ಪ್ರತಿಪಾದನೆಗೆ ಬಳಸಿಕೊಂಡು ನಿರ್ಗುಣ' ಸಗುಣ, ಜ್ಞಾನ ಹಾಗೂ ಭಕ್ತಿಮಾರ್ಗದ ಸಿದ್ಧಾಂತಗಳ ಖಂಡನೆ–ಮಂಡನೆಯನ್ನು ಮಾಡಿದ್ದಾನೆ. ಧ್ವನಿಕಾವ್ಯಕ್ಕೆ ಈ ಪ್ರಸಂಗ ಶ್ರೇಷ್ಠ ಉದಾಹರಣೆಯಾಗುವುದರಲ್ಲಿ ಸಂದೇಹವಿಲ್ಲ.

'ಸೂರ ಸಾಗರ' ಶಾಸ್ತ್ರೀಯ ಪರಿಭಾಷೆಯಲ್ಲಿ ಮಹಾಕಾವ್ಯವೇನೂ ಅಲ್ಲ. ಇದೊಂದು ಗೀತೆಗಳ ಗುಚ್ಛ. ಕಟ್ಟಿದರೆ ಹಾರ, ಹರಡಿದರೆ ಬಿಡಿ ಬಿಡಿ ಹೂಗಳಂತೆ ಇಲ್ಲಿನ ಗೀತೆಗಳು. ಇವುಗಳನ್ನು ಕ್ರಮವಾಗಿ ಪೋಣಿಸಿದ್ದೇ ಆದರೆ ಕಥೆಯ ಎಳೆ ದೊರೆಯು [illegible] ಓಟ ತೀವ್ರ, ಮಂದಗತಿಯಲ್ಲಿ-ಸಾಗುವುದರಿಂದ ಇದನ್ನು ಕಥಾಕಾವ್ಯವೆನ್ನುವುದಕ್ಕಿಂತ ಮುಕ್ತಕ ಕಾವ್ಯವೆನ್ನುವುದು ಅತ್ಯಂತ ಸೂಕ್ತ. ವ್ರಜಭೂಮಿಯಲ್ಲಿ ಶ್ರೀಕೃಷ್ಣನ ಅಸಂಖ್ಯ ಲೀಲೆಗಳ ದರ್ಶನ ಮಾಡಿಸುವುದೇ 'ಸೂರ ಸಾಗರ'ದ ಪ್ರಮುಖ ಧ್ಯೇಯಗಳಲ್ಲೊಂದಾಗಿದೆ.

'ಸೂರಸಾಗರ ಒಂದು ಗೇಯ ಕಾವ್ಯ. ಈ ಕಾವ್ಯ ಸಾಗರದ ಒಂದೊಂದು ಗೇಯ ಗೀತೆಯೂ ಶ್ರೀಕೃಷ್ಣನ ವಿವಿಧ ಲೀಲೆಗಳನ್ನು ಚಿತ್ರಿಸುತ್ತಾ ಹೋಗುವಂತೆ ಓರ್ವ ಭಕ್ತನ ಪರವಶತೆ, ಸಾಧನೆ ಮತ್ತು ಆತನ ತಲ್ಲೀನತೆ ಹಾಗೂ ಸಿದ್ಧಿಗಾಗಿ ಚಡಪಡಿಸುವ ಸಾಧನ ಉತ್ಸುಕತೆಯನ್ನು ಜೀವಂತವಾಗಿ, ಆತ್ಮೀಯವಾಗಿ ಬಣ್ಣಿಸುತ್ತದೆ. 'ಸೂರ ಸಾಗರ'ದಲ್ಲಿ ಭಗವಂತನ ನಾಮ ಸಂಕೀರ್ತನೆ, ಕೃಷ್ಣನನ್ನು ಅವತಾರಿಯನ್ನಾಗಿ ಪರಿಭಾವಿಸಿ ಆತನ ಮಹಿಮೆಯ ಸುತ್ತಿಗಾನ, ಮತ್ತೆ ಪರಮಾತ್ಮ[illegible]ದ ಪರಿತ್ಯಕ್ತನಾದ ಭಕ್ತನ ಹೃದಯದ ತಳಮಳ, ವಿರಹ–ಹೀಗೆ ಕೃಷ್ಣನೊಡನೆ ತನ್ನ ಸಂಬಂಧಗಳನ್ನು ಗಾಢಗೊಳಿಸಿಕೊಳ್ಳುತ್ತ ಹೋಗುವ ಕವಿಯ ಕೋಮಲಭಾವ ತನ್ನೆಲ್ಲ ಪೂರ್ಣತೆಯೊಂದಿಗೆ ಹೊರಹೊಮ್ಮಿ ಓದುಗರನ್ನು ತಲ್ಲೀನರಾಗಿಸಿಕೊಳ್ಳುತ್ತ ಹೋಗುವುದು ಇಲ್ಲಿನ ವಿಶೇಷಗಳಲ್ಲೊಂದಾಗಿದೆ.

ಸೂರದಾಸನು ಅನುಸರಿಸಿದ ಭಕ್ತಿಮಾರ್ಗಕ್ಕೆ 'ಪುಷ್ಟಿಮಾರ್ಗ' ಎಂದು ಹೆಸರು. ಭಕ್ತನ ಮೇಲೆ ಭಗವಂತನ ಕೃಪೆ ಅಥವಾ ಅನುಗ್ರಹವೇ ಪುಷ್ಟಿ. ಪೋಷಣಂ ತದನುಗ್ರಹಃ. ಈ ಪುಷ್ಟಿಮಾರ್ಗದಲ್ಲಿ ಎರಡು ವಿಧ – ಸಾಧನೆಯ ರೂಪ, ಸಾಧ್ಯರೂಪ. ಸಾಧನೆಯ ರೂಪದಲ್ಲಿ ಭಕ್ತನ ಸಾಧನೆಗೇ ಅತ್ಯಂತ ಮಹತ್ವ. ಆದರೆ ಸಾಧ್ಯರೂಪದಲ್ಲಿ ಸಾಧಕ ತನ್ನದೆಂಬುದೆಲ್ಲವನ್ನೂ ಪರಿತ್ಯಜಿಸಿ ಭಗವಂತನ ಚರಣಾರವಿಂದಗಳಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡು ಬಿಡುತ್ತಾನೆ. ಸೂರದಾಸನ ಉಪಾಸನಾ ಪದ್ಧತಿಯಲ್ಲಿ ಈ ಭಗವದನುಗ್ರಹಕ್ಕೆ ಅಗ್ರ ಪೂಜೆ. ಜ್ಞಾನ, ಕರ್ಮ, ಯೋಗ ಹಾಗೂ ಯಾವ ವಿಧವಾದ ಉಪಾಸನೆಯೂ ಇಲ್ಲಿ ನಿರರ್ಥಕ. ನಾರದ ಭಕ್ತಿಸೂತ್ರದಲ್ಲಿ ನಿರೂಪಿಸಲಾಗಿರುವ ಹನ್ನೊಂದು ರೂಪಗಳಲ್ಲೂ ಸೂರದಾಸ ಕೃಷ್ಣನನ್ನು ಕುರಿತು ಹಾಡಿದ್ದರೂ ಸಖ್ಯ–ವಾತ್ಸಲ್ಯ–ಶೃಂಗಾರಕ್ಕೆ ಸಂಬಂಧಿಸಿದಂತೆ ರಚಿಸಿರುವ ಗೀತೆಗಳು ಅವನನ್ನು ಜಗದ್ವಿಖ್ಯಾತನನ್ನಾಗಿ ಮಾಡಿವೆ. ಯಾವುದೇ ಭಾಷೆಯಲ್ಲಿ ಬಂದಿರಬಹುದಾದ ಈ ಬಗೆಯ ಗೀತೆಗಳಿಗೆ ಸೂರದಾಸನ ಈ ಗೀತೆಗಳು ಸರಿಸಾಟಿಯಾಗಿ ನಿಲ್ಲಬಲ್ಲವು.

ಸೂರದಾಸರಿಗಿಂತ ಮುಂಚೆ ಸಂಸ್ಕೃತದಲ್ಲಾಗಲಿ, ಹಿಂದಿಯಲ್ಲಾಗಲಿ ವಾತ್ಸಲ್ಯ ಭಾವವನ್ನು ಕಾವ್ಯದಲ್ಲಿ ಇಷ್ಟರ ಮಟ್ಟಿಗೆ ಅಭಿವ್ಯಕ್ತಿಸಿರುವ ಕವಿ ಇನ್ನೊಬ್ಬನಿಲ್ಲವೆಂದರೆ ಅತಿಶಯೋಕ್ತಿಯಾಗಲಾ-ರದು. ಸೂರದಾಸ ವಾತ್ಸಲ್ಯ ಭಾವವನ್ನು ಇಷ್ಟು ತನ್ಮಯನಾಗಿ ವರ್ಣಿಸಲು ಮುಖ್ಯಕಾರಣವೇನೆಂದರೆ ಅವನು ಪುಷ್ಟಿಮಾರ್ಗದ ಭಕ್ತನು. ಇದಕ್ಕೆ ಭಗವಂತನ ಅನುಕಂಪೆಯ ಅನುಗ್ರಹ ಬೇಕು. ಈ ಅನುಕಂಪವನ್ನು ಪಡೆಯಲು ಭಕ್ತ ಆರಾಧ್ಯ ದೈವದ ಚರಣಾರವಿಂದಗಳಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡು ಬಿಡುತ್ತಾನೆ. ಪ್ರಸ್ತುತ ಬಾಲಲೀಲೆಯ ವರ್ಣನೆಯ ಸಂದರ್ಭಗಳಲ್ಲಿ ಸೂರದಾಸ ಕೃಷ್ಣನಿಗೆ ತಾಯಿ ಯಶೋದೆಯು ಹಾಗೂ ರಾಧೆ ಅಥವಾ ಗೋಪಿಯ ರೂಪದಲ್ಲಿ ತನ್ನನ್ನು ತಾನು ಅರ್ಪಿಸಿಕೊಂಡು ಬಿಡುತ್ತಾನೆ. ಹೀಗಾಗಿ ವಾತ್ಸಲ್ಯ

ರಸದ ವರ್ಣನೆಯನ್ನು ಪ್ರಮುಖವಾಗಿ ಸ್ವೀಕರಿಸಲು ಸೂರದಾಸನ ದಾರ್ಶನಿಕ ಸಿದ್ಧಾಂತವೂ ಒಂದು ಕಾರಣವಾಗಿದೆ.

ಹೀಗೆ, ಗೋಕುಲವಾಸಿ ಗೋವರ್ಧನ ಗಿರಿಧಾರಿಯ ಲೀಲೆಗಳು 'ಸೂರ ಸಾಗರ'ವನ್ನು ಪಾವನಗೊಳಿಸಿವೆ. ಸೂರನ ಒಂದೊಂದು ಗೀತೆಯಲ್ಲೂ ಕೃಷ್ಣನ ಲೋಕರಂಜಕರೂಪ ತನ್ನೆಲ್ಲ ಸೊಬಗು–ಸೌಂದರ್ಯ, ಮುಗ್ಧತೆಯೊಡನೆ ಮೂಡಿಬಂದು ಅತ್ಯಂತ ಅಪ್ಯಾಯಮಾನವಾಗಿದೆ.

ವಾತ್ಸಲ್ಯ ಮತ್ತು ಶೃಂಗಾರ ಸೂರದಾಸನ ಕಾವ್ಯದ ಎರಡು ಕಣ್ಣುಗಳು. ವಾತ್ಸಲ್ಯದಲ್ಲಿ ಸೂರದಾಸ ಮೆರೆದಿರುವಂತೆ ಶೃಂಗಾರದಲ್ಲೂ ವಿಜೃಂಭಿಸಿದ್ದಾನೆ. ವೈಷ್ಣವ ಸಂಪ್ರದಾಯದಲ್ಲಿ ಮಾಧುರ್ಯ ಪ್ರೇಮಕ್ಕೆ ಶ್ರೇಷ್ಠ ಸ್ಥಾನವಿದ್ದು. ಅಲ್ಲಿ ಶ್ರೀಕೃಷ್ಣನ ಅನೇಕ ಲೀಲೆಗಳಲ್ಲಿ ಮಾಧುರ್ಯಭಾವವನ್ನು ಅಭಿವ್ಯಂಜಿಸುವ ಅನೇಕ ಪ್ರಸಂಗಗಳಿವೆ. ಈ ಪ್ರಸಂಗಗಳಲ್ಲಿ ಪರಮಾತ್ಮನ ಅಸೀಮ ಶಕ್ತಿಯನ್ನು ಪತಿಯ ರೂಪದಲ್ಲಿ ಸ್ವೀಕರಿಸಿ, ಆರಾಧಿಸಿ ಗೋಪಿಯರು ಅತೀವ ಸುಖವನ್ನು ಅನುಭವಿಸುತ್ತಾರೆ.

ಸೂರದಾಸನ ಗೀತೆಗಳಲ್ಲಿ ಬರುವ ಅತಿ ಶೃಂಗಾರಿಕ ಅಥವಾ ವಾಸನಾಪ್ರಧಾನ ಗೀತೆಗಳ ಆಧಾರದ ಮೇಲೆ ಗೋಪಿಯರ ಪ್ರೇಮ ಇಂದ್ರಿಯಜನ್ಯವಾದುದು ಎಂದು ಹೇಳಿದರೆ ತಪ್ಪಾಗುತ್ತದೆ. 'ಭ್ರಮರ ಗೀತೆಯಲ್ಲಿ ಬರುವ ಗೋಪಿಯರ ಉಕ್ತಿಗಳಲ್ಲಿ - ಕೃಷ್ಣನ ಪ್ರೇಮಕ್ಕೆ, ಅವರ ಚಡಪಡಿಕೆ ವ್ಯಕ್ತವಾಗುವಂತೆ ಅವುಗಳಲ್ಲಿ ಅವರ ಹೃದಯದ ನಿಷ್ಕಲ್ಮಷ ಭಾವ, ನಿಶ್ಚಲತೆ ಅನನ್ಯತೆ ಪತಿವ್ರತಾಭಾವ ಹಾಗೂ ಸಮರ್ಪಣ ಭಾವೂ ಮೈ ತುಂಬಿಕೊಂಡಿದೆ. ಜ್ಞಾನವನ್ನು ಉಪದೇಶಿಸಲು ಬಂದ ಉದ್ಧವ ಸಹ ಪ್ರೇಮ ಭಕ್ತಿಯನ್ನು ಸ್ವೀಕರಿಸುವುದು, ಸೂರದಾಸನ ಮಾಧುರ್ಯ ಭಕ್ತಿಯಲ್ಲಿನ ಪಾವಿತ್ರ್ಯವನ್ನೇ ಪ್ರತಿಪಾದಿಸುವತ್ತದೆ.

ರಾಧಾ–ಕೃಷ್ಣರಸಂಯೋಗ ಹಾಗೂ ಪ್ರೇಮ 'ಸೂರಸಾಗರ'ದಲ್ಲಿನ ಒಂದು ಮೋಹಕ ಅಂಶ. ಕಿಶೋರಾವಸ್ಥೆ ದಾಟಿ ಯುವಾವಸ್ಥೆಗೆ ಹೆಜ್ಜೆ ಇಟ್ಟ ಯುವಕ ಕೃಷ್ಣನ ಪ್ರೇಮದ ನೂರು ಬಣ್ಣಗಳಿಗೆ ಬೆರಗಾಗಿ ಅವನನ್ನೇ ನಿಟ್ಟಿಸುವ ಅವನೊಡನೆ ಕೂಡಿ ಆಡಿ ನಲಿಯುವ ರಾಧೆಯೂ ಸಹ ಯುವತಿಯೇ. ಇಬ್ಬರೂ ಸಮ ವಯಸ್ಕರೇ. ಪ್ರೇಮದ ಕಾರಂಜಿಯಲ್ಲಿ ಪಟಪಟನೆ ಪುಟಿಯುವ ರಾಧಾ–ಕೃಷ್ಣರ ಬದುಕಿನ ಅತ್ಯಂತ ಸುಖದ ಕ್ಷಣಗಳನ್ನೂ ನಲಿವಿನ ಅಮೃತ ಘಳಿಗೆಗಳನ್ನೂ ಸೂರದಾಸ ತನ್ನ ಕಾವ್ಯದಲ್ಲಿ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಕೃಷ್ಣ.ರಾಧೆಯರ ಬೀಗುತ್ತಿರುವ ಸೌಂದರ್ಯವನ್ನು 'ಅದ್ಭುತ ಅವರ ಒಂದೊಂದು ಭಾಗ' ಎಂದು ಹೇಳಿ ಅವರ ಪ್ರೇಮವನ್ನು 'ಒಂದು ಪ್ರಾಣ ಎರಡು ದೇಹ' ಎಂದು ಸೂಚಿಸುವುದರ ಮೂಲಕ ಓದುಗನನ್ನು ರಸವಶನನ್ನಾಗಿಸಿ ಮಾಡುತ್ತಾನೆ.

■

ಇನ್ನೊಂದು ಪ್ರಸಂಗದಲ್ಲಿ, ಕೃಷ್ಣ ಆಡಲು ಹೋದರೆ ಬಲರಾಮ ತನ್ನ ಸಂಗಡಿಗರೊಡನೆ ಸೇರಿಕೊಂಡು ಚುಡಾಯಿಸುತ್ತಾನೆ. ಹೀಗೆ ಚುಡಾಯಿಸಲು ಮುಖ್ಯ ಕಾರಣ ಕೃಷ್ಣನ ಬಣ್ಣ. ಯಶೋದೆ



"ನೀವು ತಪ್ಪು ತಿಳಿದಿದ್ದೀರಿ ಮಿಸ್ಟರ್. ಫೈಲಾದರೆ ಫೀಸು ವಾಪಸ್' ಅಂತ ನಾವು, ಜಾಹಿರಾತು ಪ್ರಕಟಿಸಿದುದು ಫೈಲಾದರೆ ಫೀಸು ವಾಪಸ್ ಕಟ್ಟಬೇಕಾಗುತ್ತದೆ ಎಂಬ ಅರ್ಥದಲ್ಲಿ."


ಹಾಗೂ ನಂದರು ಬೆಳ್ಳಗಿದ್ದು ನೀನು ಶ್ಯಾಮಲನಾಗಿರುವುದರಿಂದ ನೀನು ಅವರ ಮಗನಲ್ಲ, ನಿನ್ನನ್ನು ಅವರು ಬೆಲೆಗೆ ಕೊಂಡಿದ್ದಾರೆ ಎಂದು ಮುಂತಾಗಿ ಬಲರಾಮ ಮತ್ತು ಆತನ ಸಂಗಡಿಗರು ರೇಗಿಸುತ್ತಾರೆ. ಪಾಪ! ಬಾಲಕೃಷ್ಣನೇ ಒಂದು ಕಡೆ, ಆ ದೊಡ್ಡ ಹುಡುಗರ ಹಿಂಡೆಲ್ಲ ಒಂದು ಕಡೆ. ಅವರ ವಿರೋಧವನ್ನು ಒಮ್ಮೆಗೆ ಕಟ್ಟಿಕೊಳ್ಳುವಂತೆಯೂ ಇಲ್ಲ. ಆದರೆ ಸಹನೆಗೂ ಮಿತಿಯುಂಟು. ಒಂದು ದಿನ ರೋಸಿ ಹೋದ ಅವನು ಅಮ್ಮನಲ್ಲಿಗೆ ಬಂದು ಅಳುತ್ತ' 'ನಾ ಇನ್ನೆಂದೂ ಬಲರಾಮನ ಬಳಿ ಆಡಲು ಹೋಗುವುದಿಲ್ಲ' ಎಂದು ಕೋಪದಿಂದ ಹೇಳುತ್ತಾನೆ,

ಕೃಷ್ಣನ ಈ ಪರಿಯ ದೂರುಗಳು ಯಶೋದೆಗೆ ಬಹಳ ಪ್ರಿಯವಾದುವುಗಳಾಗಿವೆ. ಶ್ರೀಕೃಷ್ಣನ ಗೋಕುಲ ಲೀಲೆಗಳು ತಾಯಿಗೆ ಆಹ್ಲಾದದಾಯಕವಾಗಿರುವಂತೆ ಗೋಪಿಯರಿಗೆ ಬಾಧಕವಾದುವುಗಳಾಗಿವೆ. ಏಕೆಂದರೆ ಗೋಪಿಯರ ಮನೆಯಲ್ಲಿ ಇಟ್ಟ ಬೆಣ್ಣೆ ಇಟ್ಟ ಕಡೆ ಇರುವುದಿಲ್ಲ. ಇಟ್ಟ ಮೊಸರು ಇಟ್ಟ ಕಡೆ ಇರುವುದಿಲ್ಲ. ಗೆಳೆಯರ ಬಳಗದೊಂದಿಗೆ ಯಾವಾಗಲೋ ಬಂದು ಕಳ್ಳತನದಲ್ಲಿ ಕುಡಿದು-ತಿಂದು ಹೋಗುವ ಕೃಷ್ಣನ ಕಳ್ಳತನ ಗೋಪಿಯರಿಗೆ ತಲೆನೋವು ತರುವಂಥವು. ಒಂದು ದಿನ ಏನಾಯಿತೆಂದರೆ, ಒಬ್ಬ ಗೋಪಿ ಕೃಷ್ಣ ಕದ್ದು ಬೆಣ್ಣೆ ತಿನ್ನುತ್ತಿದ್ದಾಗಲೇ ಹಿಡಿದಳು. ಸರಿ' ಯಶೋದೆಯ ಬಳಿ ಕರೆತಂದು "ತಾಯಿ ಯಶೋದೆ, ನಿನ್ನ ಮಗ ನಿನಗೆ ಪ್ರಿಯ, ನಮಗೇನು?" ಎಂದು ದೂರಿದಾಗ, ಕೃಷ್ಣ, 'ನಾನು ಕದಿಯಲಿಲ್ಲ, ಕದ್ದು ತಿಂದವರು ಸ್ನೇಹಿತರು, ಸಿಕ್ಕಿ ಬಿದ್ದವನು ನಾನು' ಎಂದು ತನ್ನ ವಿವಶತೆಯನ್ನು ಅತ್ಯಂತ ಮುಗ್ಧತೆಯಿಂದ ಹೇಳುತ್ತಾನೆ.

ಸೂರದಾಸ ಶಬ್ದಶಿಲ್ಪಿ, ಕುಶಲ ಚಿತ್ರಕಾರ. ವ್ರಜಭಾಷೆಯ ಅದ್ವಿತೀಯ ಸೌಂದರ್ಯವನ್ನು ಅದರ ಎಲ್ಲ ಶಕ್ತಿ ಸಾಮರ್ಥ್ಯದೊಡನೆ ದುಡಿಸಿಕೊಂಡ ಈತನ ಕಾವ್ಯ ರಸ, ಅಲಂಕಾರಗಳ ಸಂಗಮ.

ಸೂರದಾಸ ಜನ್ಮ ತಾಳಿ ಈ ವರ್ಷಕ್ಕೆ ಐದು ನೂರು ವರ್ಷಗಳು ಕಳೆದವು. ೧೫೮೩ರಲ್ಲಿ ದೈವಾಧೀನನಾದ ಸೂರದಾಸ ಬದುಕಿದ್ದುದು ೧೦೫ ವರ್ಷಗಳು. ಹುಟ್ಟು ಕುರುಡನಾದರೂ ಅದನ್ನೊಂದು ಶಾಪವೆಂದು ಸ್ವೀಕರಿಸದೆ, ಅದನ್ನೂ ಶ್ರೀಕೃಷ್ಣ ಲೀಲೆ ಎಂದೇ ಪರಿಭಾಷಿಸಿದ ಭಕ್ತ ಶಿರೋಮಣಿ ಈತ.

'ಸೂರಸಾಗರ'ದ ಮುಕ್ತಕ ಗೀತೆಗಳಲ್ಲಿ ಬರುವ ಕೃಷ್ಣ ಯಶೋದೆ, ರಾಧೆ, ಬಲರಾಮ, ಗೋಪಿಯರ ಪಾತ್ರಗಳು ತಮ್ಮ ತಮ್ಮ ವೈಶಿಷ್ಟ್ಯದಿಂದಾಗಿ ನೂರಾರು ವರ್ಷಗಳಿಂದ ತಮ್ಮ ಪ್ರೇಮ ವಾತ್ಸಲ್ಯ, ಮುಗ್ಧ ಸ್ವಭಾವದಿಂದ ಇಡೀ ಮನುಕುಲವನ್ನು ಸಾಕುತ್ತಿವೆ, ಬಾಳಿಗೊಂದು ವಿಶ್ವಾಸವನ್ನು ದಯಪಾಲಿಸಿವೆ. ಈ ಪಾತ್ರಗಳು ಬದುಕಿನ ಚೆಲುವನ್ನು ಅರಹುತ್ತಿರುವಂತೆ ಬದುಕಿನ ಸಾರ್ಥಕತೆಯ ರಹಸ್ಯವನ್ನು ತಮ್ಮ ಲೋಕರಂಜಕ ವ್ಯಕ್ತಿತ್ವಗಳ ಮೂಲಕ ತಿಳಿಸುತ್ತಿವೆ. ✡



ದಿಟವಯ್ಯ, ನಿಜ ಮಾತು; ನಮ್ಮ ನಾಗರಿಕತೆಯ
ಅಕ್ಷರಾಭ್ಯಾಸ ಉಲ್ಲಾಸಕರ: ಬರೆದು ನೋದಲ ಅಕಾರ
ಅದನೆ ಅಳಿಸುವುದು ಮತ್ತದನೆ ಬರೆವುದು. ಹೀಗೆ
ನಮ್ಮ ಗತಿ ಪ್ರಗತಿ; ಮುಂದಕೊಂದಡಿಯಿಟ್ಟು
ಹಿಂದಕೊಂದಡಿಯಿಡುವ ಮನದ ಸಮತೂಕವಿದು.

–ಎಂ. ಗೋಪಾಲಕೃಷ್ಣ ಅಡಿಗರ
'ನಾಗರಿಕತೆ'ಯಿಂದ

ನಗೆಮಲ್ಲಿಗೆ

ಭಾಷಣ ಚತುರರ ಭಾಷಣದ ಪ್ರಾರಂಭಕ್ಕೆ ತುಂಬಿದ್ದ ಹಾಲ್ ಅರ್ಧಗಂಟೆಯೊಳಗಾಗಿ ಅರ್ಧಕ್ಕೂ ಮಿಕ್ಕಿ ಖಾಲಿಯಾಯಿತು. ಆದರೆ ಆ ಮಹಾಶಯರ ಉತ್ಸಾಹ ದ್ವಿಗುಣಗೊಂಡಿತು. ಉಳಿದರ್ಧದಲ್ಲಿ ಮತ್ತೆ ಕೆಲವರೆದ್ದಾಗ, "ಅಲ್ಲೇ ಕೂತ್ಕೊಳ್ಳಿ... ಯಾರೂ ಏಳ್ಬೇಡಿ" ಗಡಸು ದನಿಯೊಂದಿಗೆ ಕೈಲಿದ್ದ ಲಾಠಿಯನ್ನು ನೆಲಕ್ಕೆ ಬಡಿದು ಹೇಳಿದ ಆತ.

ಭಾಷಣಚತುರರು ಆತನನ್ನು ನೋಡಿ ನಡುಗತೊಡಗಿದರು. "ದಯವಿಟ್ಟು ನನಗೆ ಹೊಡೀಬೇಡಪ್ಪಾ, ಭಾಷಣ ಮುಗಿಸ್ತೇನೆ" ಎಂದು ಅಂಗಲಾಚಿದರು.

ಆ ಗಡಸು ದನಿಯವ ಹೇಳಿದ, "ನಿಮಗ್ಯಾಕ್ ಸ್ವಾಮೀ ಹೊಡೀಲಿ... ನಿಮ್ಮನ್ ಕರೆಸಿದ ಮೂರ್ಖನನ್ನು ಹುಡುಕಿ ಹೊಡೀತೀನಿ... ನೀವು ಭಾಷಣ ಮುಂದೊರ್ಸಿ..."

*

"ಹಲೋ... ಹೌದ್ಹೌದು, ಹೌಸ್-ಕಾಲ್ ಕನ್ಸಿಡರ್ ಮಾಡ್ತಾರೆ..." ಉತ್ತರಿಸಿದ ನರ್ಸ್ ನಂತರ ಕೇಳಿದಳು,

"ಅಂದ್ಹಾಗೆ ನೀವು ಎಷ್ಟು ಗಂಟೆಗೆ ಡಾಕ್ಟರರ ಮನೇಲಿರ್ತೀರಿ?"

*

ವಧುಪರೀಕ್ಷೆ ನಡೆದಿತ್ತು. ದಿಟ್ಟ ಆ ಹುಡುಗಿ. ಕೇಳಿದ ಪ್ರಶ್ನೆಗಳಿಗೆಲ್ಲಾ ಸರಿಯಾಗೇ ಉತ್ತರಿಸಿದಳು. ವರನಿಗೆ 'ಒಳ್ಳೇ ಜೊತೆಗಾತಿ' ಸಿಕ್ಕಿದಳೆಂಬ ಸಂತೋಷ. ಕೊನೆಗೆ ವರನ ತಾಯಿ ಆ ಹುಡುಗಿಯನ್ನು ಪ್ರಶ್ನಿಸಿದಳು:

"ಹಾಡಲಿಕ್ಕೆ ಬರತ್ತೇನಮ್ಮಾ?"

"ಹೌದು. ನಿಮ್ಮ ಮಗನಿಗೆ ಗಣಿತ ಬರತ್ತಾ?"

ತಟ್ಟನೇ ಪ್ರಶ್ನಿಸಿದಳು ದಿಟ್ಟ ಹುಡುಗಿ.

*

ತನ್ನ ಪತ್ನಿ ಸತ್ತುಹೋದಾಗ ಗೋರಿಯ ಮೇಲೆ ಒಬ್ಬಾತ ಕೆತ್ತಿಸಿದ ವಾಕ್ಯಗಳಿವು: "ನಾನೆಷ್ಟು ದುಃಖಿಸಿದರೂ ನೀನಿನ್ನು ಮರಳಿ ಬರಲಾರೆ ಪ್ರಿಯೆ, ಇದನ್ನು ನೆನೆದೇ ನಾನು ನಿನ್ನ ಕುರಿತು ದುಃಖಿಸುತ್ತಿದ್ದೇನೆ."

*

ವ್ಯಾಪಾರಸ್ಥ ಮಗನಿಗೆ ಬುದ್ಧಿವಾದ ಹೇಳುತ್ತಿದ್ದ, "ಮಗೂ, ವ್ಯವಹಾರದಲ್ಲಿ ಜಯಗಳಿಸಬೇಕಾದರೆ ಮುಖ್ಯವಾಗಿ ಎರಡು ಗುಣಗಳು ಬೇಕು ಎನ್ನುವುದನ್ನು ಲಕ್ಷ್ಯದಲ್ಲಿಟ್ಟುಕೋ. ಅದರಲ್ಲಿ ಒಂದನೆಯದು



"ಓದು ಮಗಾ, ಓದು. ಓದಿ ದೊಡ್ಡೋನಾಗು. ನಮ್ಗೂ ದೊಡ್ಡ ಮನುಷ್ಯನ ತಂದೆ-ತಾಯಿ-ಅನಿಸ್ಕೊಬೇಕಾಗೈತೆ..."

ಪ್ರಾಮಾಣಿಕತನ ಮತ್ತು ಎರಡನೆಯದು ಚಾಣಾಕ್ಷತನ. ಪ್ರಾಮಾಣಿಕತನವೆಂದರೆ ಕೊಟ್ಟ ಮಾತಿಗೆ ಎಂದೂ ತಪ್ಪದಿರುವುದು; ಎಂಥ ಪ್ರಸಂಗ ಬಂದರೂ ಕೊಟ್ಟ ಮಾತನ್ನು ನಡೆಸಿಕೊಡುವುದು.'' ಇಷ್ಟು ಹೇಳಿ ವ್ಯಾಪಾರಸ್ಥ ಸುಮ್ಮನಾದ.

''ಅದು ಸರಿ. ಆದರೆ ಚಾಣಾಕ್ಷತನವೆಂದರೆ ಏನು ಎನ್ನುವುದನ್ನು ಹೇಳಲೇ ಇಲ್ಲವಲ್ಲ.''

''ಮಾತನ್ನೇ ಕೊಡದಿರುವುದು.''

*

ಚಿತ್ರಕಲಾ ಚತುರರಿಬ್ಬರ ಸಂಭಾಷಣೆ:

''ನಾನೆಂಥಾ ಚಿತ್ರ ಬಿಡಿಸಬಲ್ಲೆ ಗೊತ್ತಾ? ಹೋದ ವರ್ಷ ದ್ರಾಕ್ಷಿ ಗೊಂಚಲೊಂದರ ಚಿತ್ರ ಮುಗಿಸಿ ಗೋಡೆಗೆ ತೂಗು ಹಾಕಿದ್ದೇ ತಡ, ಎಲ್ಲಿಂದಲೋ ಹಕ್ಕಿಯೊಂದು ಹಾರಿಬಂದು ಚಿತ್ರದ ಬಳಿ ಹಾರಾಡಿ ಹಣ್ಣು ಕುಕ್ಕತೊಡಗಿತು...'' ಹೆಮ್ಮೆಯಿತ್ತು ಧ್ವನಿಯಲ್ಲಿ.

''ಎಲ್ಲಿಂದಲೋ ಯಾಕೆ ಬಂತಪ್ಪಾ? ಅದು ನನ್ನ ಹಕ್ಕಿ.'' ಎಂದ ಇನ್ನೊಬ್ಬ.

''ಆಂ? ನಿನ್ನದಾ? ಯಾವಾಗ್ನಿಂದ ಸಾಕಿದ್ದೆ?''

''ಸಾಕಿದ್ದಲ್ಲಾ, ಅದೇ ಆ ಹಕ್ಕಿಯ ಚಿತ್ರ ಮುಗಿಸಿ ಕುಂಚ ತೊಳೀತಾ ಇದ್ದ ಹಾಗೇ ಅದು ಹಾರಿ ಹೋಗಿಬಿಡ್ತು. ಹೊರಗೆ ಬಂದು ನೋಡ್ತೀನಿ, ನಿನ್ನ ಮನೆಯ ಕಿಡಕಿ ಹೊಕ್ಕಿತು...''

*

ಒಂದು ಎಚ್ಚರಿಕೆ: ''ಯುವಕ ಡಾಕ್ಟರ್ ಮತ್ತು ಮುದುಕ ಕ್ಷೌರಿಕನಿಂದ ದೂರವಿರಿ...''

*

ಮಂತ್ರಿ ಮಹಾಶಯರ ಕುಂಡಲಿ ನೋಡಿದ ಮೇಲೆ ಜ್ಯೋತಿಷ್ಯರತ್ನರು ಹೇಳಿದ್ದು;

''ನಿಮಗೀಗ 'ಸತ್ಯಾಗ್ರಹ'ದ್ದೊಂದೇ ಹಿಡಿ...''

*

''ಏನ್ರೀ? ಅರ್ಧಾ ಗಂಟೆಯಿಂದ ಫೋನು ಹಿಡಕೊಂಡು ನಿಂತಿದೀರಿ, ಒಂದು ಮಾತೂ ಆಡ್ತಾ ಇಲ್ವಲ್ಲ?''

''ಶ್, ಸುಮ್ನಿರಿ, ನನ್ನ ಹೆಂಡ್ತಿ ಮಾತಾಡ್ತಿದಾಳೆ...''

*

''ಯಾಕಿಷ್ಟು ನಗ್ತಿದಾನೆ ಆತ?''

''ಇವತ್ತು ನಗಲಿಕ್ಕೆ ಕೊನೇ ದಿನ.''

''ಅಂದ್ರೆ?''

''ನಾಳೆ ಆತನ ಮದ್ವೆ.''

*

''ಏನು? ನೀನು ಕೆಲಸ ಹುಡುಕ್ತಾ ಇದೀಯಾ?''

ನಿರುದ್ಯೋಗಿಯೊಬ್ಬನಿಂದ ನಿರುದ್ಯೋಗಿಗೆ ಪ್ರಶ್ನೆ.

''ಹಾಗೇನಿಲ್ಲ. ಕೆಲಸದ ಅವಶ್ಯಕತೆ ಇಲ್ಲ. ನಾನು ನೌಕರಿ ಮಾತ್ರ ಅವಶ್ಯವಾಗಿ ಹುಡುಕ್ತಿದೇನೆ...''

*

''ಅಲ್ರೀ... ನನ್ನ ಛತ್ರಿ ಕೇಳಿ ತೊಗೊಂಡು ಹೋಗಿ ಇಷ್ಟು ದಿನಾ ಆದ್ರೂ ವಾಪಸ್ ಕೊಟ್ಟೇ ಇಲ್ಲಲ್ರೀ... ಲಗೂ ಕೊಡದಿದ್ರ...''

''ತಡೀ ಸಾ... ತಡ್ರಿ... ನಿಮ್ಮತ್ರ ನಾ ಛತ್ರಿ ಕೇಳೇ ಇಲ್ಲ. ಕೇಳಿದ್ರೂ ನೀವು ಕೊಟ್ಟೇ ಇಲ್ಲ. ನೀವು ಕೊಟ್ಟದ್ರೂ ನಾ ತೊಗೊಂಡೇ ಇಲ್ಲ. ತೊಗೊಂಡೀನಿ ಅಂತs ತಿಳಕೋರಿ, ಅವತ್ತs ತಿರಗಿ ಮುಟ್ಟಿಸೀನಿ. ತಿರಗಿ ಮುಟ್ಟಿಸಿಲ್ಲಾಂದ್ರ ಏನಾತು, ಇನ್ನ ತಿರಗಿ ಕೊಡೊಂಗೂ ಇಲ್ಲ. ಯಾಕಂದ್ರ...'' ಅಷ್ಟರಲ್ಲೇ ಧೋಧೋ ಮಳೆ.

ಬೇಕಾಗಿದ್ದಾರೆ

ಏಳು ಅಡಿ ಸಮಸಮೀಪ ಎತ್ತರದ ಸದೃಢಕಾಯನಾದ ಜೂಡೋ-ಕರಾಟೆ ಪ್ರವೀಣ ತರುಣನೊಬ್ಬ ಬೇಕಾಗಿದ್ದಾನೆ. ಸಂಬಳ ಸಾಕಷ್ಟು. ಅನುಭವ ಇದ್ದರೆ ಸಾಕು. ಕೆಲಸ: ಚಂದಾ ವಸೂಲಿ ಮಾಡುವುದು.

ಕೂದಲಿಗೆ ಹಚ್ಚುವ ಬಣ್ಣ

ಮುಡಿಯಲ್ಲಿಯು ನಾಗರಹಾವೆ?

ಡಾ. ಎಂ. ಎಸ್. ಎಸ್. ಮೂರ್ತಿ

ತಲೆಯ ಮೇಲಿನ ಕಪ್ಪು ಕೂದಲಿನ ನಡುವೆ ರಜತ ರೇಖೆಯೊಂದು ಕಾಣಿಸಿಕೊಂಡರೆ ಅದು ಅನುಭವಯುತವಾದ ಜ್ಞಾನದ ಸಂಕೇತವೆಂದು ಹೇಳುವುದು ವಾಡಿಕೆ. ಆದರೆ ಈ ರಜತರೇಖೆ ಜ್ಞಾನದ ಉದಯವಾಗುವ ಮೊದಲೇ ಕಾಣಿಸಿಕೊಂಡಲ್ಲಿ ಆದರಿಂದ ಆತಂಕವೇ ಉಂಟಾಗುತ್ತದೆ. ಮಧ್ಯವಯಸ್ಸು ಮೀರುವ ಮುಂಚಿತವಾಗಿಯೇ ಬಿಳಿ ಕೂದಲು ಬಂದಲ್ಲಿ ಯಾರಿಗೆ ತಾನೆ ಇಷ್ಟವಾಗುತ್ತದೆ? ಆದರೂ ಅಕಾಲಿಕ ಬಿಳಿ ಕೂದಲು ತೋರುವುದು ಅಪರೂಪವೇನಲ್ಲ. ಎಂದಿನಂತೆ ವಿಜ್ಞಾನ ಈ ಸಂದರ್ಭದಲ್ಲೂ ಸಂಕಟ ಪರಿಹಾರಕ್ಕಾಗಿ ಕೂದಲು ಬಣ್ಣ (Hair dyes) ವನ್ನು ಸೃಷ್ಟಿಸಿದೆ. ಪ್ರಕೃತಿಯ ತಪ್ಪನ್ನು ವಿಜ್ಞಾನ ಸರಿಪಡಿಸಲು ಮುಂದೆ ಬಂದಿದೆ. ಬಿಳಿಗೂದಲನ್ನು ಕಪ್ಪಾಗಿ ಕಾಣುವಂತೆ ಮಾಡಲು ಬಣ್ಣ ಉಪಯೋಗಿಸುವುದು ನಮಗೆ ತಿಳಿದಿರುವುದಕ್ಕಿಂತಲೂ ಹೆಚ್ಚು ಸಾಮಾನ್ಯವಾಗಿದೆ. ಭಾರತದಲ್ಲೇ ಸುಮಾರು ಒಂದು ಡಜನ್ನಿಗೂ ಹೆಚ್ಚು ವಿಧವಾದ ಕೂದಲು ಬಣ್ಣಗಳನ್ನು ತಯಾರಿಸಲಾಗುತ್ತದೆ.

ಸೌಂದರ್ಯವು ನೋಡುವ ಕಣ್ಣಿನಲ್ಲಿದೆ ಎಂದು ಹೇಳುವುದು ವಾಡಿಕೆ. ಆದರೆ ಸೌಂದರ್ಯ ಸಾಧನದಿಂದ ಉಂಟಾಗಬಹುದಾದ ಹಾನಿ ಕಣ್ಣು ಮುಚ್ಚಿದರೂ ತಪ್ಪಲಾರದು. ಕೂದಲಿನ ಬಣ್ಣವನ್ನು ಬದಲಿಸುವ ಈ ಸಾಧನಗಳು ಅದನ್ನು ಉಪಯೋಗಿಸುವವರಿಗೆ ಹಾನಿಕರವೆ? ಎಂಬ ಪ್ರಶ್ನೆಯನ್ನು ಸಂರಕ್ಷಣಾ ವಿಜ್ಞಾನಿಗಳು ಇಂದು ಪರಿಶೀಲಿಸುತ್ತಿದ್ದಾರೆ.

ಹಿನ್ನೆಲೆ

ಇದರಿಂದ ಉಂಟಾಗಬಹುದಾದ ಹಾನಿ ಯಾವ ರೀತಿಯದೆಂದು ವಿಮರ್ಶಿಸಲು ಅದಕ್ಕೆ ಸ್ವಲ್ಪ ಹಿನ್ನೆಲೆ ಬೇಕಾಗುತ್ತದೆ. ಈ ಸಂದರ್ಭದಲ್ಲಿ "ಹಾನಿ" ಎಂದರೆ ನಮ್ಮ ನೆನಪಿಗೆ ಬರುವುದು ನಿಮಿತ್ತದ ಹಾನಿಗಳು. ಕೂದಲು ಉದುರುವುದು, ಚರ್ಮ-ಬಿರಿಯುವುದು, ಕಣ್ಣಿಗೆ ಆಘಾತವಾಗುವುದು ಇತ್ಯಾದಿ. ಆದರೆ ಇಂದು ಮಾರುಕಟ್ಟೆಯಲ್ಲಿ ಸಿಗುವ ಕೂದಲು ಬಣ್ಣದ ಬಳಕೆಯಿಂದ ಈ ರೀತಿಯ ಹಾನಿಗಳು ಉಂಟಾಗದೇ ಇರಬಹುದು. ನಾವು ಇಂದು ಪರಿಗಣಿಸಬೇಕಾದದ್ದು ಇದಕ್ಕೂ ಸೂಕ್ಷ್ಮವಾದ ಆದರೆ ಇನ್ನೂ ಭಯಂಕರವಾದ ಹಾನಿಗಳು: ಇವೆಂದರೆ ಕ್ಯಾನ ರ್ ಮತ್ತು ವಂಶವಾಹಿಗಳಲ್ಲಿನ ಬದಲಾವಣೆಗಳು.

ಮಾನವಜೀವನವನ್ನು ಹೆಚ್ಚು ಸುಖದಾಯಕವಾಗಿ ಮಾಡಲು ವಿಜ್ಞಾನ ಈ ಶತಮಾನದ ಆದಿಯಿಂದಲೂ ಸತತವಾಗಿ ಶ್ರಮಿಸುತ್ತಿದೆ. ಈ ಶ್ರಮದ ಫಲವಾಗಿ ನಮ್ಮ ನಿತ್ಯ ಬಳಕೆಗೆ ಅನೇಕ ವಿಧವಾದ ಪ್ಲಾಸ್ಟಿಕ್, ರಬ್ಬರ್, ಕೃತಕ ಬಟ್ಟೆ, ಬಟ್ಟೆಗೆ ಬಣ್ಣ, ಔಷಧಿ, ಆಹಾರದಲ್ಲಿ ಸೇರಿಸಲಾಗುವ ಬಣ್ಣ ಹಾಗೂ ರಕ್ಷಕ ವಸ್ತುಗಳು, ಸೌಂದರ್ಯ ಪ್ರಸಾಧನಗಳು ಇತ್ಯಾದಿ ದೊರೆತಿವೆ. ಅಮೃತದ ಜೊತೆಗೆ ಹಾಲಾಹಲ ಇದ್ದೇ ಇರಬೇಕಲ್ಲ. ಈ ಎಲ್ಲ ಸಲಕರಣೆಗಳ ಹಿನ್ನೆಲೆಯಲ್ಲಿರುವುದು ಲಕ್ಷಾಂತರ ರಾಸಾಯನಿಕ ವಸ್ತುಗಳು. ಇಂದು ವಿಜ್ಞಾನ ೪೦ ಲಕ್ಷಕ್ಕೂ ಹೆಚ್ಚು ರಾಸಾಯನಿಕ ವಸ್ತುಗಳನ್ನು ತಯಾರು ಮಾಡಿದೆ. ಇದರಲ್ಲಿ ಸಾವಿರಾರು ನಮ್ಮ ನಿತ್ಯ ಬಳಕೆಯಲ್ಲಿವೆ. ಅನೇಕ ರಾಸಾಯನಿಕ ವಸ್ತುಗಳು ಮನುಷ್ಯನಿಗೆ ಉಪಯುಕ್ತವಾಗುವುದಲ್ಲದೇ ಹಾನಿಕರವೂ ಆಗಬಲ್ಲವೆಂದು ತಿಳಿದುಬಂದಿದೆ. ಇದರಿಂದ ಉಂಟಾಗುವ ಹಾನಿಗಳಲ್ಲಿ ಕ್ಯಾನ್ಸರ್ ಮತ್ತು ವಂಶವಾಹಿನಿಗಳಲ್ಲಿನ ಬದಲಾವಣೆಗಳು ಒಂದೇ ಬೇರೆ ವರ್ಗಕ್ಕೆ ಸೇರಿವೆ. ಏಕೆಂದರೆ, ನಮ್ಮ ನಿತ್ಯ ಅನುಭವದ ಇತರ ಹಾನಿಗಳು ರಾಸಾಯನಿಕ ವಸ್ತುವಿನ ಮಟ್ಟ ಒಂದು ಪ್ರಮಾಣವನ್ನು ಮೀರಿದಾಗ ಮಾತ್ರ ವ್ಯಕ್ತವಾಗುತ್ತವೆ. ಪ್ರಮಾಣ ಕಡಿಮೆಯಾದಲ್ಲಿ ಹಾನಿ ಕೂಡ ಕಡಿಮೆಯಾಗುತ್ತದೆ ಮತ್ತು ಗುಣವೂ ಆಗಬಹುದು. ಆದರೆ ಎರಡನೇ ವರ್ಗದ ಹಾನಿಗಳಿಗೆ ಈ ರೀತಿಯ ಸಂರಕ್ಷಣಾಮಿತಿ ಎಂಬುದು ಇಲ್ಲ. ಯಾವುದೇ ಪ್ರಮಾಣದಲ್ಲಿ ಕೂಡ ಕೆಲವು ರಸಾಯನಿಕ ವಸ್ತುಗಳು ಆ ಪ್ರಮಾಣಕ್ಕೆ ಅನುಗುಣವಾಗಿ ಕ್ಯಾನ್ಸರ್ ಮತ್ತು ವಂಶವಾಹಿಗಳಲ್ಲಿ ಬದಲಾವಣೆಗಳು ಪ್ರಚೋದಿಸುವ ಸಂಭವ ಉಂಟು. ಒಮ್ಮೆ ಪ್ರಚೋದಿತವಾದ ಮೇಲೆ ಗುಣವಾಗುವ ಸಂಭವ ಇಲ್ಲವೆಂದೇ ಹೇಳಬೇಕು. ಅಲ್ಲದೇ ಪ್ರಚೋದಿತವಾದ ಕ್ಯಾನ್ಸರ್ ವ್ಯಕ್ತವಾಗಬೇಕಾದರೆ ಅನೇಕ ವರ್ಷಗಳೇ ಹಿಡಿಯಬಹುದು. ಇದರಿಂದಾಗಿ ಕಾರ್ಯಕಾರಣ ಸಂಬಂಧ ಅನಿಶ್ಚಿತವಾಗುತ್ತದೆ. ಕ್ಯಾನ್ಸರ್ ದೇಹದ ಯಾವ ಅಂಗದಲ್ಲಿ ಬೇಕಾದರೂ ವ್ಯಕ್ತವಾಗಬಹುದು: ಉದಾಹರಣೆಗೆ ಯಕೃತ್ತು, ಶ್ವಾಸಕೋಶ, ಮೂತ್ರಕೋಶ, ಚರ್ಮ ಇತ್ಯಾದಿ. ಆದರೆ ಇದು ವ್ಯಕ್ತಿಗತವಾದಷ್ಟು. ಆನುವಂಶಿಕ ಬದಲಾವಣೆಗಳು ಮಾತ್ರ ಸ್ತ್ರೀಯ ಅಂಡಕೋಶದಲ್ಲಿ ಮತ್ತು ಪುರುಷನ ವೃಷಣದಲ್ಲಿ ಇರುವ ಬೀಜಕಣಗಳಲ್ಲಿ ಆಗುವ ಬದಲಾವಣೆ. ಇದರಿಂದ ಮುಂದೆ ಹುಟ್ಟುವ ಪೀಳಿಗೆಯ ಆರೋಗ್ಯಕ್ಕೆ ಧಕ್ಕೆಯಾಗಬಹುದು. ಈ ಕಾರಣಗಳಿಂದ ಈ ಎರಡನೇ ವರ್ಗದ ಹಾನಿಗಳು ಅತಿ ಹೀನವಾದುವೆಂದು ಪರಿಗಣಿಸಲಾಗಿದೆ.

ದೇಹದ ಎಲ್ಲ ಜೀವ ಕಣಗಳಲ್ಲಿಯೂ ಇರುವ ಅತಿ ಮುಖ್ಯ ವಸ್ತುವೆಂದರೆ ಡಿ ಆಕ್ಸಿರೈಬೊ ನ್ಯೂಕ್ಲಿಯಿಕ್ ಆಸಿಡ್(DNA). ಇದೂ ಒಂದು ರಸಾಯನಿಕವಸ್ತುವೇ. ದೇಹವನ್ನು ಪ್ರವೇಶಿಸುವ ಇತರ ಹಾನಿಕರ ರಾಸಾಯನಿಕ ವಸ್ತುಗಳಲ್ಲಿ ಕೆಲವು, DNA ಒಡನೆ ಪ್ರತಿಕ್ರಿಯೆ ನಡೆಸಿ ಅದನ್ನು ಪರಿವರ್ತನೆಗೊಳಿಸಬಲ್ಲವು. ಹೀಗೆ ಪರಿವರ್ತನೆಯಾದ DNA ದೇಹ ಕಣದಲ್ಲಿದ್ದರೆ (Somatic cells) ಆದರಿಂದ ಕ್ಯಾನ್ಸರ್ ಪ್ರಚೋದಿತವಾಗಬಹುದು; ಅದೇ ಬೀಜ ಕಣ (Germ-cell)ದಲ್ಲಿದ್ದರೆ ಆನುವಂಶಿಕ ಬದಲಾವಣೆಗಳುಂಟಾಗಬಹುದು.

ಇಂದಿನ ಔದ್ಯೋಗಿಕೃತ ಸಮಾಜದಲ್ಲಿ ಕ್ಯಾನ್ಸರ್ ತಗಲುವ ಸಂಭವ ಹೆಚ್ಚಾಗುತ್ತಿದೆ. ಸುಮಾರು ಶೇಖಡ ೫೦–೯೦ ರಷ್ಟು ಸಂದರ್ಭಗಳಲ್ಲಿ ಕ್ಯಾನ್ಸರ್ ಉಂಟಾಗಲು ಪರಿಸರದ ಮೂಲಗಳಿಂದ ಉಂಟಾಗಬಹುದೆಂದು ಇಂದಿನ ನಂಬಿಕೆ. ಇವಾವುವೆಂದರೆ ಸೂರ್ಯನಿಂದ ಬರುವ ಅತಿನೇರಳೆ ಕಿರಣಗಳು, ಎಲ್ಲ ಕಡೆಯೂ ಇರುವ, ವಿದ್ಯುತ್ವಾಹಿನಿ ವಿಕಿರಣ, (ionising radiation) ಮತ್ತು ನಿತ್ಯ ಬಳಕೆಯ ರಸಾಯನಿಕ ವಸ್ತುಗಳು (ಸಿಗರೇಟ್ ಸೇದುವುದು ಸೇರಿ) ಇದೇ ರೀತಿ, ಇಂದು ಹುಟ್ಟುವ ಮಕ್ಕಳಲ್ಲಿ ಸುಮಾರು ಶೇಕಡಾ ೬ರಿಂದ ೯ ಭಾಗದಲ್ಲಿ ಯಾವುದಾದರೂ ಒಂದು ರೀತಿಯ ಆನುವಂಶಿಕ ಅವ್ಯವಸ್ಥೆ (Genetic disorder) ತ್ತದೆಂದು ತಿಳಿದು ಬಂದಿದೆ. ಈ ನ್ಯೂನತೆ ನಮ್ಮ ಪರಿಗಣನೆಗೆ ಸುಲಭವಾಗಿ ಬರದಷ್ಟು ಕ್ಷುಲ್ಲಕವಾಗಿರಬಹುದು ಅಥವಾ ಎದ್ದು ತೋರುವಷ್ಟು ಮಹತ್ವದ್ದಾಗಿರಬಹುದು. ರಾಸಾಯನಿಕ ವಸ್ತುಗಳ ಸಂಪರ್ಕ ಕಡಿಮೆ ಮಾಡುವುದರಿಂದ ಈ ಮಟ್ಟದ

ಅಘಾತಗಳನ್ನೂ ಕಡಿಮೆಮಾಡಬಹುದೆಂದು ಸಂರಕ್ಷಣಾ ವಿಜ್ಞಾನಿಗಳ ಸಿದ್ಧಾಂತ. ಈ ದೃಷ್ಟಿಯಿಂದ ಸಂರಕ್ಷಣಾ ವಿಜ್ಞಾನಿಗಳು, ನಿತ್ಯ ಬಳಕೆಯ ಅನೇಕ ರಾಸಾಯನಿಕ ವಸ್ತುಗಳನ್ನು ಪುನರ್ ವಿಮರ್ಶಿಸುತ್ತಿದ್ದಾರೆ ಅಂತಹ ರಾಸಾಯನಿಕ ವಸ್ತುಗಳಲ್ಲಿ ಕೂದಲ ಬಣ್ಣವೂ ಒಂದು.

ಕಾಳಜಿ ಏಕೆ ?

ಕೂದಲು ಬಣ್ಣದ ಬಗ್ಗೆ ಕಾಳಜಿ ಏಕೆಂದು ಇನ್ನೂ ಸ್ವಲ್ಪ ವಿಶದವಾಗಿ ಪರಿಶೀಲಿಸಬಹುದು. ಮಾನವನ ಕೂದಲು, ಅನೇಕ ವಿಧದಲ್ಲಿ ದಾರವನ್ನು ಹೋಲುತ್ತದೆ. ದಾರದಂತೆ ಅದನ್ನು ತೊಳೆಯಬಹುದು, ಗುಂಗುರುಮಾಡಬಹುದು. ಬಣ್ಣ ಕಟ್ಟಬಹುದು. ಬಣ್ಣಕಟ್ಟಿಸುವ ಸಾಧನಗಳಲ್ಲಿ ಎರಡು ವಿಧ; ಒಂದು rinses, ಎರಡನೆಯದು permanent hairdye. Rinses ನಲ್ಲಿ ಆಹಾರ ಪದಾರ್ಥಗಳಲ್ಲಿ ಉಪಯೋಗಿಸುವ ಬಣ್ಣ, ಅರಿವೆಗಳಲ್ಲಿ ಉಪಯೋಗಿಸುವ ಬಣ್ಣ ಮತ್ತು ಕೆಲವು ವಿಧವಾದ ಲವಣಗಳು, ಆಮ್ಲಗಳು ಹಾಗೂ ಮಾರ್ಜಕ ವಸ್ತು (Detergent) ಸೇರುತ್ತವೆ. ಕೆಲವು rinses ಗಳಲ್ಲಿ ಒಂದು ವಿಧವಾದ optical brightners ಕೂಡ ಇರುತ್ತವೆ. ಇವುಗಳು ಸೂರ್ಯನ ಬೆಳಕಿನಲ್ಲಿರುವ ಅತಿನೇರಳೆ ಕಿರಣಗಳನ್ನು ಹೀರಿ ಒಂದು ವಿಧವಾದ ನೀಲಿ ಪ್ರಕಾಶವನ್ನು ಉತ್ಪತ್ತಿ ಮಾಡುತ್ತವೆ. Permanent hairdyes ಗಳ ಉಪಯೋಗದಿಂದ ಕೂದಲಿನಲ್ಲಿಯೇ ಬಣ್ಣ ಉತ್ಪತ್ತಿಯಾಗುತ್ತದೆ, ಇದಕ್ಕಾಗಿ ಮೊದಲು ಕೂದಲನ್ನು ಕೆಲವು ರಸಾಯನಿಕಗಳಿಂದ ತುಂಬಿ (impregnate) ಅನಂತರ ಅದನ್ನು ಹೈಡ್ರೋಜನ್ ಪೆರಾಕ್ಸೈಡ್‌ನಿಂದ ತೊಳೆಯಬೇಕಾಗುತ್ತದೆ.

ಈ ಎರಡು ಬಗೆಯ ಕೂದಲು ಬಣ್ಣಗಳಲ್ಲಿಯೂ ಅನೇಕ ವಿಧವಾದ ಪ್ರವರ್ತಕ (active) ರಸಾಯನಿಕ ವಸ್ತುಗಳಿರುತ್ತವೆ. ಇವುಗಳಲ್ಲಿ ಕೆಲವನ್ನು ಕೋಷ್ಟಕದಲ್ಲಿ ತೋರಿಸಿದೆ. ಈ ರಾಸಾಯನಿಕ ವಸ್ತುಗಳನ್ನು ಆರೋಮೆಟಿಕ್ ಅಮೈನ್ಸ್, ಆರೊಮೆಟಿಕ್ ನೈಟ್ರೂಡೆರಿವೇಟಿವ್ಸ್, ಫೀನಾಲ್ಸ್ ಎಂದು ಮುಂತಾಗಿ ವಿಂಗಡಿಸಬಹುದು.

ಕೆಲವು ಕೂದಲು ಬಣ್ಣಗಳಲ್ಲಿ ಈ ಪ್ರಚಲಿತ ರಾಸಾಯನಿಕದ ಅಂಶ ಶೇಕಡಾ ೪ ಭಾಗಕ್ಕಿಂತ ಹೆಚ್ಚು ಇರಬಲ್ಲುದು. ಇವು ತಲೆಯ ಕೂದಲು ಚರ್ಮದಿಂದ ಹೀರಲ್ಪಟ್ಟು ರಕ್ತವನ್ನು ಸೇರಬಹುದು. ಜಪಾನಿನಲ್ಲಿ ನಡೆಸಿದ ಪರಿಶೀಲನೆಯಿಂದ, ಒಂದು ಬಾರಿ ಕೂದಲಿಗೆ ಬಣ್ಣ ಹಾಕಿಕೊಂಡರೆ ಸುಮಾರು ೪.೬ ಮಿಲಿಗ್ರಾಮಿನಷ್ಟು ೨-೪ ಡೈಅಮಿನೋ ಟಾಲ್ಯೂನ್ ಎಂಬ ಪ್ರವರ್ತಕ ರಸಾಯನಿಕ ವಸ್ತು ಚರ್ಮದ ಮೂಲಕ ದೇಹವನ್ನು ಸೇರಬಹುದೆಂದು ಗೊತ್ತಾಗಿದೆ. ಈ ರಾಸಾಯನಿಕ ವಸ್ತುಗಳ metabolic products ಕೂಡ, ಮೂತ್ರದಲ್ಲಿ ಸೇರಿ ಹೊರಬರಬಹುದು. ಕೆಲವೊಮ್ಮೆ, ಕೂದಲು ಬಣ್ಣ ಹಾಕಿಕೊಂಡ ಮೇಲೆ ಮೂತ್ರ ಕಪ್ಪಾಗಿ ತೋರುವ ಸಂದರ್ಭಗಳೂ ಇವೆ. ಈ ರಾಸಾಯನಿಕಗಳು, ನಮ್ಮ ದೇಹದಲ್ಲಿ ಸದಾಕಾಲ ಇರುವ ನೈಟ್ರೈಟ್ ಎಂಬ ಇನ್ನೊಂದು ಗುಂಪಿನ ರಾಸಾಯನಿಕ ವಸ್ತುಗಳೊಡನೆ ಪ್ರತಿಕ್ರಿಯೆ ನಡೆಸಿ, ನೈಟ್ರೊಸಮೀನ್ಸ್ ಎಂಬ ಹೊಸ ಗುಂಪಿನ ರಾಸಾಯನಿಕ ವಸ್ತುಗಳನ್ನು ಉತ್ಪತ್ತಿ ಮಾಡಬಹುದು. ನೈಟ್ರೊಸಮೀನ್‌ಗಳು ಅತಿ ಪ್ರಖರವಾಗಿ ಕ್ಯಾನ್ಸರ್ ಮತ್ತು ವಂಶವಾಹಿಗಳಲ್ಲಿ ಬದಲಾವಣೆಯನ್ನು ಪ್ರಚೋದಿಸ ಬಲ್ಲವೆಂದು ತಿಳಿದಿದೆ. ಅಮೆರಿಕಾದ ಬರ್ಕ್ಲಿ ನಗರದಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಬ್ರೂಸ್ ಏಮ್ಸ್‌ರು ಅಲ್ಲಿನ ೧೬೯ ವಿಧವಾದ ಕೂದಲು ಬಣ್ಣಗಳನ್ನು ಪರೀಕ್ಷಿಸಿದ್ದಾರೆ. ಅದರಲ್ಲಿ ಸುಮಾರು ೧೫೦ ವಿಧವಾದ ಕೂದಲು ಬಣ್ಣಗಳು ಬ್ಯಾಕ್ಟೀರಿಯಾದ ವಂಶವಾಹಿಗಳಲ್ಲಿ ಬದಲಾವಣೆಗಳನ್ನು ಉಂಟುಮಾಡುವುದೆಂದು ಇವರು ತೋರಿಸಿದ್ದಾರೆ. ಭಾರತದಲ್ಲಿ ತಯಾರಾಗುವ ಕೆಲವು ಕೂದಲು ಬಣ್ಣಗಳನ್ನು ಪರೀಕ್ಷಿಸಿದಾಗ ಅವುಗಳಲ್ಲಿ ೩ ವಿಧದ ಬಣ್ಣಗಳು ಬ್ಯಾಕ್ಟೀರಿಯದಲ್ಲಿ ಪರಿವರ್ತನೆಗಳನ್ನು ಪ್ರಚೋದಿಸಬಲ್ಲವೆಂದು ತಿಳಿದುಬಂದಿದೆ. ಹಾಗೂ ಅಮೇರಿಕ, ಬ್ರಿಟನ್, ಜಪಾನ್ ಮುಂತಾದ ದೇಶಗಳಲ್ಲಿ ನಡೆಯುತ್ತಿರುವ ಅನುಸಂಧಾನದಿಂದ ಈ ರಸಾಯನಿಕಗಳು fungi, drosophila ಮುಂತಾದ ಇತರ ಜೀವಿಗಳಲ್ಲಿ ಕೂಡ ಅನುವಂಶಿಕ ಬದಲಾವಣೆ ಉಂಟುಮಾಡ

ಬಹುದೆಂದು ವರದಿ ಬಂದಿದೆ. ಇದಲ್ಲದೇ ಸ್ತನಿಗಳ ಜೀವಕಣಗಳಲ್ಲಿ ಮತ್ತು ಮನುಷ್ಯನ ದುಗ್ಧರಸ ಕಣಗಳಲ್ಲಿ ಇರುವ ವರ್ಣರೇಖೆ (Chromosome) ಗಳನ್ನೂ ಛಿದ್ರಿಸಬಲ್ಲವೆಂದೂ ತಿಳಿದು ಬಂದಿದೆ. ಇಷ್ಟೆಲ್ಲ ಸಾದೃಸ್ಯಗಳಿರುವುದರಿಂದ, ಈ ರಸಾಯನಿಕವಸ್ತುಗಳು ಮನುಷ್ಯನಲ್ಲೂ ಪ್ರಾಜನಿಕ ಹಾನಿಯನ್ನು (Genetic damage) ಉಂಟುಮಾಡಬಲ್ಲವೆಂದು ತೀರ್ಮಾನಮಾಡಿದರೆ ಅದು ಅತಿಶಯೋಕ್ತಿಯಾಗಲಾರದು.

ಕ್ಯಾನ್ಸರಿನ ಸಾಧ್ಯತೆ

ಪ್ರಪಂಚದಾದ್ಯಂತ ಅನೇಕ ಪ್ರಯೋಗಶಾಲೆಗಳಲ್ಲಿ ಪರಿಶೀಲನೆಗಳು ನಡೆಯುತ್ತಿದ್ದರೂ, ಈ ರಸಾಯನಿಕ ವಸ್ತುಗಳು ಪ್ರಾಣಿಗಳಲ್ಲಾಗಲೀ ಮನುಷ್ಯನಲ್ಲಾಗಲಿ ಕ್ಯಾನ್ಸರನ್ನು ಪ್ರಚೋದಿಸುತ್ತವೆಯೆ ಎಂಬ ಪ್ರಶ್ನೆಗೆ ನಿರ್ದಿಷ್ಟ ಉತ್ತರ ದೊರೆತಿಲ್ಲ. ಯಾವುದಾದರೂ ರಾಸಾಯನಿಕವಸ್ತುವು ಸ್ತನಿಗಳಲ್ಲಿ ಕ್ಯಾನ್ಸರನ್ನು ಪ್ರಚೋದಿಸಿದರೆ ಅದರ ಸಾಧ್ಯತೆ ಮನುಷ್ಯನಲ್ಲೂ ಉಂಟೆಂದು ಪರಿಗಣಿಸಬಹುದು. ಕೂದಲು ಬಣ್ಣದಲ್ಲಿನ ಪ್ರಚಲಿತ ರಾಸಾಯನಿಕ ವಸ್ತುಗಳನ್ನು ಪ್ರಾಣಿಗಳ ಚರ್ಮದ ಮೇಲೆ ಬಳಿಯುವುದರಿಂದ ಯಾವ ವಿಧವಾದ ಕ್ಯಾನ್ಸರನ್ನೂ ಪ್ರಚೋದಿಸಲು ಸಾಧ್ಯವಾಗಲಿಲ್ಲ. ಆದರೆ ಅದೇ ಜಾತಿಯ ಪ್ರಾಣಿಗಳ ಆಹಾರದಲ್ಲಿ ಕೆಲವೇ ಅಂಶಗಳಷ್ಟು ಈ ರಾಸಾಯನಿಕಗಳನ್ನು ಬೆರಸಿದಾಗ ದುಗ್ಧರಸನಾಳ, ಗರ್ಭಾಶಯ ಮತ್ತು ಅಂಡಾಶಯಗಳಲ್ಲಿ ಕ್ಯಾನ್ಸರ್ ಪ್ರಚೋದಿತವಾಗಿದೆ. ಈ ರೀತಿಯ ಪ್ರಯೋಗಗಳನ್ನು ಅಮೇರಿಕದ National Institute of Cancerನವರು ಇಲಿ ಮತ್ತು ಹೆಗ್ಗಣಗಳ ಮೇಲೆ ಮಾಡಿತೋರಿಸಿದ್ದಾರೆ. ಆದರೆ ಕೂದಲು ಬಣ್ಣ ತಯಾರಿಸುವ ಕಂಪನಿಗಳವರು ಮಾತ್ರ ಈ ರೀತಿಯ ಪ್ರಯೋಗಗಳನ್ನು ತಿರಸ್ಕರಿಸುತ್ತಾರೆ. ಮನುಷ್ಯರಲ್ಲಿ ಯಾರೂ ಕೂದಲು ಬಣ್ಣವನ್ನು ತಿನ್ನಬೇಕಾಗಿಲ್ಲವಲ್ಲ ಎಂದು ಇವರ ವಾದ.

ಈ ಪ್ರಶ್ನೆಗೆ ನಿರ್ದಿಷ್ಟವಾದ ಉತ್ತರ ಸಿಗದಿ

ಕೋಷ್ಟಕ

ಕೂದಲು ಬಣ್ಣಗಳಲ್ಲಿರುವ ಕೆಲವು ಪ್ರಚಲಿತ ರಾಸಾಯನಿಕ ವಸ್ತುಗಳು.

2-4- ಡೈ ಅಮೈನೊ ಅನಿಸೋಲ್ (2-4 diaminoanisole)
4- ನೈಟ್ರೊ -ಓ- ಫಿನೈಯಲ್ ಎನ್ ಡೈ ಅಮೈನ್
(4- nitro -o- phenylenediamine)
2- ನೈಟ್ರೊ -ಪಿ- ಫಿನೈಲ್ ಎನ್ ಡೈ ಅಮೈನ್
(2- nitro -p- phenylenediamine)
2,5- ಡೈ ಅಮೈನೊ ಅನಿಸೋಲ್ (2-5- diaminoanisole)
2- ಅಮಿನೊ -5- ನೈಟ್ರೊ ಫಿನಾಲ್ (2- amino -5- nitrophenol)
ಎಮ್ - ಫಿನೈಯಲ್ ಎನ್ ಡೈ ಅಮೈನ್ (m- phenylenediamine)
ಓ - ಫಿನೈಯಲ್ ಎನ್ ಡೈ ಅಮೈನ್ (o- phenylenediamine)
2- ಅಮಿನೊ -4- ನೈಟ್ರೊಫಿನಾಲ್ (2- amino -4- nitrophenol)
2,5- ಡೈ ಅಮೈನೊ ಟಾಲ್ಯೂನ್ (2,5- diaminotoluene)
ಎಮ್- ಟಾಲ್ಯೂನ್ ಡೈ ಅಮೈನ್ (m- toluenediamine)
ಪಿ- ಫಿನೈಯಲ್ ಎನ್ ಡೈ ಅಮೈನ್ (p- phenylendiamine)

ದ್ದರೂ, ಅನೇಕ ಪರೋಕ್ಷ ಪುರಾವೆ (indirect evidence)ಗಳ ಆಧಾರದ ಮೇಲೆ ಈ ರಾಸಾಯನಿಕ ವಸ್ತುಗಳು ಕ್ಯಾನ್ಸರನ್ನು ಪ್ರಚೋದಿಸಬಲ್ಲವು ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಉದಾಹರಣೆಗೆ: ೧) ಕ್ಯಾನ್ಸರನ್ನು ಪ್ರಚೋದಿಸುವ ರಾಸಾಯನಿಕ ವಸ್ತುಗಳಲ್ಲಿ ಶೇಕಡಾ ೮೫–೯೦ ಭಾಗ, ಬ್ಯಾಕ್ಟೀರಿಯಗಳಲ್ಲಿ ಪರಿವರ್ತನೆಗಳನ್ನು ಉಂಟುಮಾಡಬಲ್ಲವು. ಕೂದಲು ಬಣ್ಣದಲ್ಲಿರುವ ಪ್ರಚಲಿತ ರಸಾಯನಿಕ ಪದಾರ್ಥ ಕೂಡ ಬ್ಯಾಕ್ಟೀರಿಯಗಳಲ್ಲಿ ಪರಿವರ್ತನೆ ಉಂಟುಮಾಡುವುದರಿಂದ, ಇವುಗಳು ಕ್ಯಾನ್ಸರನ್ನು ಪ್ರಚೋದಿಸುವ ಸಾಧ್ಯತೆ ಇದೆ ಎಂದೂ ನಂಬಬಹುದು. ೨) ಅನೇಕ ಪ್ರಯೋಗಗಳಿಂದ ತಿಳಿದುಬಂದಿರುವ ಇನ್ನೊಂದು ವಿಷಯವೆಂದರೆ, ಈ ರಾಸಾಯನಿಕಗಳು ಆರೋಗ್ಯಕರವಾದ ಜೀವಕಣಗಳನ್ನು ಕ್ಯಾನ್ಸರಿನ ಜೀವಕಣಗಳಾಗಿ ಪರಿವರ್ತಿಸಬಲ್ಲವು. ಕ್ಯಾನ್ಸರಿನ ಸಾಧ್ಯತೆಗೆ ಇದೊಂದು ಮುಖ್ಯ ನಿದರ್ಶನ. ೩) ಇದೇ ರೀತಿಯ ಮತ್ತೆ ಕೆಲವು ರಾಸಾಯನಿಕ ಪದಾರ್ಥಗಳು ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ಕ್ಯಾನ್ಸರನ್ನು ಪ್ರಚೋದಿಸಬಲ್ಲವೆಂದು ನಿರ್ದಿಷ್ಟವಾಗಿ ತಿಳಿದಿದೆ. ೪) ಇದಲ್ಲದೇ ಅಮೇರಿಕ ಮತ್ತು ಬ್ರಿಟನ್‌ಗಳಲ್ಲಿ ನಡೆಸಿರುವ epidemiological investigation ಗಳಿಂದ ತಿಳಿದುಬಂದಿರುವ ವಿಷಯವೆಂದರೆ ಕೇಶವಿನ್ಯಾಸಕಾರರು ಮತ್ತು ಸೌಂದರ್ಯ ಪ್ರಸಾಧನಕಾರರು ಮುಂತಾದ ವೃತ್ತಿಗಳಲ್ಲಿರುವವರಿಗೆ ಕ್ಯಾನ್ಸರಿನಿಂದ ಅಪಾಯ, ಇತರ ವೃತ್ತಿಗಳಲ್ಲಿರುವವರಿಗಿಂತ ಹೆಚ್ಚಾಗಿದೆ ಎಂದು. ಇದಕ್ಕೆ ಕಾರಣ ಈ ಗುಂಪಿನ ಜನಗಳು ತಮ್ಮ ಉದ್ಯೋಗದಲ್ಲಿ ವಿಶೇಷವಾಗಿ ಕೂದಲು ಬಣ್ಣವನ್ನು ಉಪಯೋಗಿಸುವುದು. ಕೂದಲು ಬಣ್ಣದಲ್ಲಿರುವ ರಾಸಾಯನಿಕಗಳು ಕ್ಯಾನ್ಸರ್ ಪ್ರಚೋದಿಸುವ ಸಾಧ್ಯತೆಯ ಬಗ್ಗೆ ನಮಗೆ ಎಚ್ಚರ ಕೊಡಲು ಈ ಪುರಾವೆಗಳು ಸಾಕು.

ಕೂದಲು ಬಣ್ಣವನ್ನು ಉಪಯೋಗಿಸುವವರಲ್ಲಿ ಸ್ತ್ರೀಯರ ಸಂಖ್ಯೆ ಜಾಸ್ತಿ. ಗರ್ಭಿಣಿಯರು ಕೂಡ ಇದನ್ನು ಉಪಯೋಗಿಸಬಹುದು. ಆದುದರಿಂದ, ಈ ರಸಾಯನಿಕ ವಸ್ತುಗಳು ಗರ್ಭದಲ್ಲಿರುವ ಶಿಶುವಿನ ಮೇಲೆ ಯಾವ ಪರಿಣಾಮ ಉಂಟುಮಾಡಬಹುದೆಂಬ ಪ್ರಶ್ನೆ ಏಳುತ್ತದೆ. ತಾಯ ದೇಹದ ಮೂಲಕ ಗರ್ಭದಲ್ಲಿರುವ ಶಿಶುವಿಗೆ ತಗಲಬಹುದಾದ ಹಾನಿಗಳಿಗೆ teratogenic effects ಎಂದು ಹೇಳುತ್ತಾರೆ. ಇಂದು ಎಲ್ಲರಿಗೂ ತಿಳಿದಿರುವ ಅತಿ ಮುಖ್ಯವಾದ teratogenic ರಾಸಾಯನಿಕ ವಸ್ತುವೆಂದರೆ ಥ್ಯಾಲಿಡೊಮೈಡ್. ತಾಯಿಗಿಂತ ಗರ್ಭದಲ್ಲಿರುವ ಶಿಶು ಮಾರಕ ಪದಾರ್ಥಗಳಿಗೆ ಸುಮಾರು ೫೦ ಪಟ್ಟು ಹೆಚ್ಚು ಸಂವೇದನಾಶೀಲವಾಗಿರುತ್ತದೆ. ಈ ರೀತಿ ಹಾನಿಗಳಿಂದ ಶಿಶುವನ್ನು ರಕ್ಷಿಸಲು ಪ್ರಕೃತಿ ತನ್ನದೇ ಆದ ಒಂದು ಉಪಾಯವನ್ನು ಬಳಸುತ್ತದೆ. ಅಂತೆಯೇ ಗರ್ಭವೇಷ್ಟಕ ಪರದೆ (placental barrier) ಯೊಂದು ಶಿಶುವನ್ನು ತಾಯಿಯ ರಕ್ತಸಂಚಾರದಿಂದ ಬೇರ್ಪಡಿಸುತ್ತದೆ. ಇದು ತಾಯಿಯ ರಕ್ತಸಂಚಾರದಲ್ಲಿ ಇರಬಹುದಾದ ಅನೇಕ ಮಾರಕ ಪದಾರ್ಥಗಳು ಶಿಶುವನ್ನು ತಲಪದಂತೆ ತಡೆಗಟ್ಟುತ್ತದೆ. ಆದರೆ ಈ ಪರದೆ ಎಲ್ಲ ಕಾಲದಲ್ಲಿಯೂ, ಎಲ್ಲ ಮಾರಕ ಪದಾರ್ಥಗಳನ್ನೂ ತಡೆಗಟ್ಟುವಷ್ಟು ಪರಿಪೂರ್ಣವಾಗಿಲ್ಲ. ಈಚೆಗೆ ಜಪಾನಿನಲ್ಲಿ ಇದರ ಬಗ್ಗೆ ಅನೇಕ ಪ್ರಯೋಗಗಳು ನಡೆದಿವೆ. ಗರ್ಭ ಧರಿಸಿದ ಇಲಿಗಳಿಗೆ ಆಹಾರದಲ್ಲಿ ಕೂದಲು ಬಣ್ಣದ ರಸಾಯನಿಕ ವಸ್ತುಗಳನ್ನು ಬೆರೆಸಿ ಕೊಡಲಾಯಿತು (ಸುಮಾರು ೫೦ mg ಪ್ರತಿ kg ದೇಹದ ತೂಕದಷ್ಟು). ಇಂತಹ ಇಲಿಗಳಿಗೆ ಹುಟ್ಟಿದ ಮರಿಗಳಲ್ಲಿ ಅನೇಕ ವಿಧವಾದ ನ್ಯೂನತೆಗಳು ಕಂಡುಬಂದುವು. ಸಮಾನ ಪ್ರಮಾಣದ ಆಧಾರದ ಮೇಲೆ, ಇಲಿಗಳಿಗೆ ತಿನ್ನಿಸಿದ ಪ್ರಮಾಣ (Dose), ಸ್ತ್ರೀ ದೇಹದಲ್ಲಿರಬಹುದಾದುದಕ್ಕಿಂತ ಸುಮಾರು ೫೦೦ ಪಟ್ಟು ಜಾಸ್ತಿ. ಇದರಿಂದಾಗಿ ಇಂತಹ ಪ್ರಯೋಗಗಳು ಅಸಂಬದ್ಧವೆಂದು ತಿರಸ್ಕರಿಸುವಂತಿಲ್ಲ. ಅನೇಕ ರಾಸಾಯನಿಕ ವಸ್ತುಗಳಿಗೆ ಮನುಷ್ಯ ಇತರ ಪ್ರಾಣಿಗಳಿಗಿಂತಲೂ ಹೆಚ್ಚು ಸಂವೇದನಾಶೀಲನಾಗಿರುತ್ತಾನೆ. ಥಾಲಿಡೋಮೈಡ್ ಪರಿಣಾಮಗಳಿಗೆ ಮನುಷ್ಯ ಇಲಿಗಳಿಗಿಂತ ೬೦ ಪಟ್ಟು ಮತ್ತು ಹ್ಯಾಮ್‌ಸ್ಟರು ಗಳಿಗಿಂತ ೭೦೦ ಪಟ್ಟು ಜಾಸ್ತಿ ಸಂವೇದನಾಶೀಲನಾಗಿದ್ದಾನೆ.

ಕೂದಲು ಬಣ್ಣದ ಜೊತೆಗೆ ಇತರ ಸೌಂದರ್ಯ ಸಾಧನಗಳ ಬಗ್ಗೆ ಏನು ತಿಳಿದಿದೆ? ಈಗ ತಾನೇ

ಇವುಗಳ ಪರಿಣಾಮದ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಮೆಸಾಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯವರು ನಡೆಸುತ್ತಿರುವ ಸಂಶೋಧನೆಯ ಪ್ರಕಾರ shampoos, body lotion, hand lotion ಇತ್ಯಾದಿ ಸೌಂದರ್ಯ ಪ್ರಸಾಧನ (Cosmetics)ಗಳಲ್ಲಿ N–ನೈಟ್ರಿಸೊಡೈ ಎಥಾನೊಲಮೀನ್ ಎಂಬ ಪ್ರಚಲಿತ ವಸ್ತು ಇರುತ್ತದೆಂದು ತಿಳಿದುಬಂದಿದೆ. ಈ ರಸಾಯನಿಕ ವಸ್ತುವು ಇದುವರೆಗೆ ಪ್ರಯೋಗ ನಡೆಸಿರುವ ಎಲ್ಲ ಪ್ರಾಣಿಗಳಲ್ಲೂ ಕ್ಯಾನ್ಸರನ್ನು ಪ್ರಚೋದಿಸಿದೆ. ಇದು ಚರ್ಮದ ಮೂಲಕ ರಕ್ತವನ್ನು ಸೇರಬಹುದೆಂದು ಈ ಸಂಶೋಧಕರು ಅನುಮಾನ ಪಟ್ಟಿದ್ದಾರೆ.

ಅಮೇರಿಕವೊಂದರಲ್ಲೇ ಸುಮಾರು ೨॥ ಕೋಟಿ ಮಂದಿ ಕೂದಲು ಬಣ್ಣವನ್ನು ಉಪಯೋಗಿಸುತ್ತಾರೆ. ಆದ್ದರಿಂದ ಸ್ವಾಭಾವಿಕವಾಗಿಯೇ ಅಲ್ಲಿನ ಸರಕಾರ ಇದರಿಂದ ಉಂಟಾಗ-ಬಹುದಾದ ಹಾನಿಗಳ ಬಗ್ಗೆ ಚಿಂತನೆ ಮಾಡುತ್ತಿದೆ. ಅಲ್ಲಿ ನಡೆಸಿರುವ ಕೆಲವು ಪ್ರಯೋಗಗಳ ಆಧಾರದ ಮೇಲೆ ಅಮೆರಿಕ ಸರಕಾರವು ಆಗಲೇ ಕೆಲವು ಕೂದಲು ಬಣ್ಣಗಳ ಉಪಯೋಗವನು ನಿಷೇಧಿಸಿದೆ. ಉಳಿದವುಗಳನ್ನು ಪರಿಶೀಲಿಸುತ್ತಿದೆ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಇವರ ಬಗ್ಗೆ ಪರಿಶೀಲನೆ ನಡೆಯುತ್ತಿದ್ದರೂ ಅಮೇರಿಕವ ಹೊರತು ಇನ್ನಾವ ದೇಶವೂ ಕಾನೂನುಬದ್ಧ ಕಾರ್ಯಕ್ರಮ ಕೈಕೊಂಡಿಲ್ಲ. ಈ ಮಧ್ಯೆ, ಕೂದಲು ಬಣ್ಣವನ್ನು ಉಪಯೋಗಿಸುವ ಲಕ್ಷಾಂತರ ಜನರು ಅದರಿಂದ ಒದಗಬಹುದಾದ ಹಾನಿ ಮತ್ತು ಅನುಕೂಲಗಳನ್ನು ಸಮದೂಗಿಸಿ ನೋಡಿ, ಮುಂದಿನ ಉಪಯೋಗಗಳನ್ನು ತಮಗೆ ತಾವೇ ನಿರ್ಧರಿಸಿಕೊಳ್ಳಬೇಕು. ✿

(ವಿ.ಸೂ. ಇದೇ ಸಂಚಿಕೆಯ ೯೬ನೇ ಪುಟದಲ್ಲಿರುವ 'ಮಾನವ ದೇಹದ ಹುಲುಸಾದ ಬೆಳೆ' ಲೇಖನವನ್ನೂ ನೋಡಿ.)

ಮಾದರಿ ಪತ್ರಿಕೆ

ನಮ್ಮ ಪತ್ರಿಕೆಗಳನ್ನು ನಿತ್ಯ ನೋಡುವವರಿಗೆ ದಪ್ಪಕ್ಷರಗಳಲ್ಲಿ ನಮ್ಮ ಪ್ರಧಾನ ಮಂತ್ರಿಗಳ, ಮುಖ್ಯ ಮಂತ್ರಿಗಳ ಭಾಷಣಗಳನ್ನು ವರದಿ ಮಾಡುವುದು ತೀರ ಸಾಮಾನ್ಯ ಸಂಗತಿಯೆನಿಸಿಬಿಟ್ಟಿದೆ. ಕೆಲವು ವರ್ಷಗಳ ಹಿಂದೆ ಚಾರ್ಲ್‌ಸ್ ಡಿಗಾಲ್ ಫ್ರಾನ್ಸಿನ ಅಧ್ಯಕ್ಷರಾಗಿದ್ದಾಗ ಅಲ್ಲಿಯ ಪತ್ರಿಕೆಗಳ ಹಣೆಬರಹವೂ ಇದೇ ಆಗಿತ್ತು ಆಗೊಮ್ಮೆ 'ಲೆ ಕನಾರ್ಡ್ ಎನ್‌ಚೇನ್' ಎಂಬ ಫ್ರೆಂಚ್ ಪತ್ರಿಕೆ ಮುಖಪುಟದಲ್ಲಿ ದೊಡ್ಡ ಅಕ್ಷರಗಳಲ್ಲಿ ಹೀಗೆ ಪ್ರಕಟಿಸಿತು: 'ಇದೋ ನಿಮ್ಮ ಸುವರ್ಣಾವಕಾಶ! ಇಂದು ಡಿಗಾಲರ ಭಾಷಣ ಪ್ರಸಿದ್ಧಿಸದಿರುವ ಪತ್ರಿಕೆ "ಲೆ ಕನಾರ್ಡ್" ಒಂದೇ.'

*

ದ್ರೌಪತಿ ಕಂಡ ಭೀಮ

ನುಡಿವುದರಿದೇ ನುಡಿದ ಭಾಷೆಯ
ಕಡೆತನಕ ಪೂರೈಸಿ ಮಾಡುವ
ಕಡುಗಲಿಗಳಾರುಂಟು ಜಗದೊಳು ನಿನ್ನ ಹೋಲುವರು ।
ಮೃಡ ಪರಾಕ್ರಮಿ ನನ್ನ ಹೋಲುವ
ಮಡದಿಯರು ನಿನ್ನಂದದೊಡೆಯರ
ಪಡೆವುದೆ ಪರಮೆ ಕ ಸೌಖ್ಯವಿದೆಂದಳಿಂದುಮುಖಿ ॥

- ಕುಮಾರವ್ಯಾಸ

ಕೊತ್ತುಂಬರಿ

❀ ಅಗಸಿಬಾಗಿಲವರ ಮ. ಜಗದೀಶ

ಕೊತ್ತುಂಬರಿ ಪಾಕಶಾಲೆಯನ್ನು ಪ್ರವೇಶಿಸಿದ ಘಟನೆ ಇಂದು ನಿನ್ನೆಯದಲ್ಲ. ಕ್ರಿ. ಪೂ. ೫೦೦೦ ವರ್ಷಗಳ ಹಿಂದೆಯೇ ನಿರ್ಮಿಸಲಾದ ಈಜಿಪ್ತನ್ನರ ಸಮಾಧಿಯಲ್ಲಿ ಕೊತ್ತುಂಬರಿಯ ಬೀಜಗಳು ದೊರಕಿದ್ದವು. ಮಧ್ಯಯುಗದ ಯುರೋಪಿಯನ್ನರು ಮಾಂಸವನ್ನು ಕೆಡದಂತೆ ಇಡಲು ಮತ್ತು ರುಚಿಯನ್ನು ಹೆಚ್ಚಿಸಲು ಅದನ್ನು ತುರ್ಕಸ್ತಾನ ಹಾಗೂ ಈಜಿಪ್ಟಿನಿಂದ ಆಮದು ಮಾಡಿಕೊಳ್ಳುತ್ತಿದ್ದರು.

"ಕೊರಿಯಾನ್ ಡ್ರಂ ಸಟೈವಂ" ಎಂಬುದು ಕೊತ್ತುಂಬರಿಯ ಸಸ್ಯಶಾಸ್ತ್ರೀಯ ಹೆಸರು. ಕೊತ್ತುಂಬರಿ ಭೂಮಧ್ಯಸಾಗರದ ಪ್ರದೇಶದ ಮೂಲ ನಿವಾಸಿ. ಈ ಗಿಡವು ಒಂದರಿಂದ ಮೂರಡಿಯ ವರೆಗೂ ಬೆಳೆಯುತ್ತದೆ. ಸಣ್ಣ ಸಣ್ಣ ಬಿಳಿ ಬಣ್ಣದ ಮತ್ತು ಗುಲಾಬಿ ಬಣ್ಣದ ಅಥವಾ ನೇರಳೆ ಬಣ್ಣದ ಹೂವುಗಳನ್ನು ಬಿಡುತ್ತದೆ. ಹಣ್ಣುಗಳು ಸಣ್ಣವೂ ರಸವತ್ತಾಗಿಯೂ ಇರುತ್ತವೆ. ಪ್ರತಿ ಹಣ್ಣಿನಲ್ಲಿ ಎರಡು ಬೀಜಗಳಿರುತ್ತವೆ. ಈ ಗಿಡವು ಚೆನ್ನಾಗಿ ಬಲಿಯಲು ೯೦ ರಿಂದ ೧೦೦ ದಿನಗಳುಬೇಕು.

ಭಾರತದಲ್ಲಿ ಕೊತ್ತುಂಬರಿಯ ಬೀಜಗಳನ್ನು ಸಾಮಾನ್ಯವಾಗಿ ಧನಿಯಾ ಎಂದು ಕರೆಯುತ್ತಾರೆ. ಸಂಸ್ಕೃತದಲ್ಲಿ ಇದನ್ನು ಕಿಸ್ತುಂಬರಿ ಎಂದು ಕರೆಯಲಾಗಿದ್ದು ಭಾರತೀಯ ವೈದ್ಯಕೀಯ ಪುಸ್ತಕದಲ್ಲಿ ಇದರ ಉಲ್ಲೇಖವಿದೆ. ಕನ್ನಡದಲ್ಲಿ ಹವೀಜ ಎಂತಲೂ ಕರೆಯುವುದಿದೆ.

ಈ ಮೃದು ಕಾಂಡವಿರುವ ಗಿಡವನ್ನು ಒಂದು ಮುಖ್ಯ ವಾಣಿಜ್ಯ ಬೆಳೆಯಾಗಿ ರಶಿಯಾ, ಮೊರಾಕ್ಕೋ ಮತ್ತು ಇರಾಣ್ ದೇಶಗಳಲ್ಲಿ ಬೆಳೆಯಲಾಗುತ್ತದೆ. ರಶಿಯದಷ್ಟು ಅಧಿಕ ಪ್ರಮಾಣದಲ್ಲಿ ಕೊತ್ತುಂ-ಬರಿಯನ್ನು ಮತ್ತಾವ ದೇಶವೂ ರಫ್ತು ಮಾಡುವುದಿಲ್ಲ. ಈ ಬೆಳೆಯನ್ನು ಮಧ್ಯ ಯುರೋಪ್ ಹಾಗೂ ಸ್ಕ್ಯಾಂಡಿನೇವಿಯದಲ್ಲಿ ಕೂಡ ಬೆಳೆ-ಯಲಾಗುತ್ತದೆ.

ಭಾರತದಲ್ಲಿ ಕೊತ್ತುಂಬರಿಯನ್ನು ಮಳೆಯನ್ನು ಅವಲಂಬಿಸಿದ ಅಥವಾ ನೀರಾವರಿ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ದಕ್ಷಿಣ ಭಾರತದ ಕಪ್ಪು ಮಣ್ಣು ಮತ್ತು ಉತ್ತರ ಭಾರತದ ಫಲವತ್ತಾದ ಮಣ್ಣಿನಲ್ಲಿ ಇದು ಒಂದು ಗೌಣ ಬೆಳೆಯಾಗಿದೆ. ೨೯೦,೨೦೦ ಹೆಕ್ಟೇರುಗಳಷ್ಟು ಭೂಮಿಯಲ್ಲಿ ಇದನ್ನು ಇಂದು ಭಾರತದಲ್ಲಿ ಬೆಳೆಯಲಾಗುತ್ತದೆ. ಆಂಧ್ರಪ್ರದೇಶ, ಪಂಜಾಬ, ಹರಿಯಾಣ ಮತ್ತು ತಮಿಳುನಾಡು ಇವುಗಳೇ ಮುಖ್ಯವಾಗಿ ಕೊತ್ತುಂಬರಿಯನ್ನು ಬೆಳೆಯುವ ರಾಜ್ಯಗಳು. ಪ್ರತಿ ವರ್ಷವೂ ಭಾರತದಲ್ಲಿ ಸುಮಾರು ೧೦೫,೦೦೦ ಮೆಟ್ರಿಕ್ ಟನ್‌ಗಳಷ್ಟು ಕೊತ್ತುಂಬರಿಯನ್ನು ಬೆಳೆಯಲಾಗುತ್ತದೆ. ಇದರಲ್ಲಿ ೬೭೧ ಮೆಟ್ರಿಕ್ ಟನ್‌ಗಳಷ್ಟು ಹೊರ ದೇಶಗಳಿಗೆ ರಫ್ತಾಗುತ್ತದೆ. ನಮ್ಮ ಕೊತ್ತುಂಬರಿಯ ಗುಣಮಟ್ಟವು ಹೆಚ್ಚಿದರೆ ನಮ್ಮ ರಫ್ತನ್ನು ಇನ್ನೂ ಹೆಚ್ಚಿಸಿಕೊಳ್ಳಬಹುದು.

ಸಾಧಾರಣವಾಗಿ ಬೇರನ್ನು ಬಿಟ್ಟು ಉಳಿದ ಭಾಗಗಳಾದ ಎಲೆ, ಕಾಂಡ, ಹಣ್ಣು ಅಥವಾ ಬೀಜಗಳು ಒಂದಿಲ್ಲೊಂದು ರೀತಿಯಲ್ಲಿ ಉಪಯೋಗಿಸಲ್ಪಡುತ್ತವೆ. ಹಸಿ ಎಲೆಗಳನ್ನು ತಿನ್ನುವುದಕ್ಕೆ ಪ್ರೋತ್ಸಾಹಿಸುವುದು ಒಳ್ಳೆಯದು. ಏಕೆಂದರೆ

"ಎ" ಮತ್ತು "ಸಿ" ಜೀವಸತ್ವಗಳ ಭಂಡಾರವೇ ಆಗಿದೆಯಲ್ಲದೆ ಪ್ರೋಟೀನು, ಕೊಬ್ಬು, ಕ್ಯಾಲ್ಸಿಯಂ ಹಾಗೂ ಕಬ್ಬಿಣದ ಅಂಶಗಳೂ ಸಾಕಷ್ಟಿವೆ.

ಒಂದು ಸಾಧಾರಣ ಕೊತ್ತುಂಬರಿಯ ಕಟ್ಟು ೮–೧೦ ಗ್ರಾಂಗಳ ವರೆಗೆ ತೂಗುತ್ತದೆ. ಬಲಿತ ಕೊತ್ತುಂಬರಿಯ ಗಿಡಗಳನ್ನು ಕಿತ್ತು ಅದನ್ನು ಬಡಿಯುತ್ತಾರೆ. ಇದು ಹಣ್ಣುಗಳನ್ನು ಎರಡು ಭಾಗವನ್ನಾಗಿ ಮಾಡುತ್ತದೆ. ಇದರಿಂದ ಬೀಜಗಳು ಹೊರಬರುತ್ತವೆ. ಸಾಮಾನ್ಯವಾಗಿ ಈ ಬೀಜಗಳನ್ನು ಚೆನ್ನಾಗಿ ಹುರಿದ ನಂತರವೇ ಅಡುಗೆಗೆ ಉಪಯೋಗಿಸುತ್ತಾರೆ.

ಕೊತ್ತುಂಬರಿಯ ಬೀಜದ ಸುವಾಸಿತ ವಾಸನೆಗೆ ಅದರಲ್ಲಿರುವ ಚಂಚಲ ಎಣ್ಣೆಯು ಕಾರಣವಾಗಿದೆ. ಭಾರತೀಯ ಕೊತ್ತುಂಬರಿಯ ಬೀಜದಲ್ಲಿರುವ ಎಣ್ಣೆಯ ಪ್ರಮಾಣವು ಬಹಳ ಕಡಿಮೆ; ಶೇ. ೦.೪ ರಿಂದ ಶೇ. ೦.೮ರಷ್ಟು ಮಾತ್ರ. ಆದರೆ ರಶಿಯದಲ್ಲಿ ಬೆಳೆಯುವ ಕೊತ್ತುಂಬರಿಯ ಬೀಜದಲ್ಲಿ ಶೇ. ೨ರಷ್ಟು ಎಣ್ಣೆ ಇರುತ್ತದೆ. ಯುರೋಪಿನಲ್ಲಿ ಬೆಳೆಯಲಾಗುವ ಕೊತ್ತುಂಬರಿಯ ಬೀಜದಲ್ಲಿಯೂ ಎಣ್ಣೆಯ ಪ್ರಮಾಣ ಹೆಚ್ಚಿದೆ. ಕೊತ್ತುಂಬರಿಯ ಬೀಜದ ಎಣ್ಣೆಯು ತಿಳಿಯಾದ ಹಳದಿಯ ಬಣ್ಣದ್ದಿದ್ದು ವಿಶಿಷ್ಟವಾದ ರುಚಿ ಸುವಾಸನೆಯೂ ಇದಕ್ಕಿದೆ.

ಕೊತ್ತುಂಬರಿಯ ಬೀಜದ ಎಣ್ಣೆಯನ್ನು ಹಲವಾರು ಉದ್ಯಮಗಳಲ್ಲಿ ಉಪಯೋಗಿಸುಲಾಗುತ್ತದೆ. ಈ ಎಣ್ಣೆಯನ್ನು ಕೋಕೋ, ಚಾಕಲೇಟ್ ಮತ್ತು ಮಾದಕ ಪಾನೀಯಗಳನ್ನು ಸುವಾಸಿತಗೊಳಿಸುವ ಸಲುವಾಗಿ ಉಪಯೋಗಿಸಲಾಗುತ್ತದೆ. ಅಹಿತಕರ ವಾಸನೆಯನ್ನು ಮುಚ್ಚುವ ಸಲುವಾಗಿಯೂ ಇದನ್ನು ಬಳಸಲಾಗುತ್ತಿದೆ. ಕೊತ್ತುಂಬರಿಯ ಎಣ್ಣೆಗೆ ಇತರ ಎಣ್ಣೆಗಳಿಗಿಂತಲೂ ಹೆಚ್ಚು ಕಾಲ ಕೆಡದೆ ಇರುವ ಹಾಗೂ ಸುವಾಸನೆಯನ್ನು ಕಳೆದುಕೊಳ್ಳದೆ ಇರುವ ಗುಣವಿದೆ.

ಕೊತ್ತುಂಬರಿಯ ರಸ ಮತ್ತು ನಿಂಬೆಹಣ್ಣಿನ ರಸ ಒಟ್ಟಿಗೆ ಕ್ರಮವಾಗಿ ಉಪಯೋಗಿಸಿದರೆ ಮೊಡವೆ ಹಾಗೂ ಇತರ ಚರ್ಮದ ಕಲೆಗಳನ್ನು ಹೋಗಲಾಡಿಸುತ್ತಿದೆಯೆಂದು ಭಾವಿಸಲಾಗಿದೆ.

ರೆಫ್ರಿಜರೇಟರ್ ಗೊತ್ತಿಲ್ಲದ ದಿನಗಳಲ್ಲಿ ಯುರೋಪಿನವರು ಮಾಂಸವನ್ನು ಕೆಡದಂತೆ ಇಡಲು ಕೊತ್ತುಂಬರಿಯನ್ನು ಉಪಯೋಗಿಸುತ್ತಿದ್ದರು. ಈಗಲೂ ಕೆಲವು ತರಹದ ಮಾಂಸಗಳನ್ನು ಕೆಡದಂತೆ ಇಡಲು ಈ ಸಾಂಬಾರ ಪದಾರ್ಥವನ್ನು ಉಪಯೋಗಿಸಲಾಗುತ್ತದೆ.

ಕಾಫಿ ಅಥವಾ ಚಹವನ್ನು ಕುಡಿಯಲು ಇಷ್ಟಪಡದ ಜನರು ಇದರಿಂದ ಮಾಡಿದ ಕಷಾಯ ಕುಡಿಯುತ್ತಾರೆ. ಹೀಗೆ ಮಾಡಿದ ಕಷಾಯವು ಜೀರ್ಣಕ್ಕೆ ಸಹಾಯಕಾರಿಯಾಗಿರುತ್ತದೆ.

ಕೊತ್ತುಂಬರಿಯ ಎಣ್ಣೆಯಿಂದ ಪಡೆಯುವ ಬೆಸಲ್ ಆಲ್ಡಿಹೈಡವನ್ನು ಪರಿಮಳ ದ್ರವ್ಯಗಳ ಉದ್ಯಮದಲ್ಲಿ ಉಪಯೋಗಿಸಲಾಗುತ್ತದೆ. ಪೇಟೆಯಲ್ಲಿ ದೊರೆಯುವ ಕೊತ್ತುಂಬರಿ ಬೀಜದ ಎಣ್ಣೆಯು ಶುದ್ಧವಾಗಿರುವುದಕ್ಕಿಂತ ಸಿಹಿ ಕಿತ್ತಳೆ ಎಣ್ಣೆ, ಸೀಡರ್ ಮರದ ಎಣ್ಣೆ, ಟರ್ಪಂಟೈನ್ ಇತ್ಯಾದಿಗಳ ಕಲಬೆರಕೆಯಾಗಿ ದೊರೆಯುವದೇ ಹೆಚ್ಚು.

ಕೊತ್ತುಂಬರಿಯ ಬೀಜದಿಂದ ಎಣ್ಣೆಯನ್ನು ತೆಗೆದ ನಂತರ ಉಳಿಯುವ ಹಿಂಡಿಯನ್ನು ಸಾಕು ಪ್ರಾಣಿಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ.

ಈ ಕೊತ್ತುಂಬರಿಯನ್ನು ದಿನಾಲು ಉಪಯೋಗಿಸಿದರೆ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ. ✡

ನಿನ್ನೆ ನಡೆದುಹೋದುದರ ಬಗೆಗಿನ ನಮ್ಮ ಪಶ್ಚಾತ್ತಾಪ ಹಾಗೂ ನಾಳೆ-ಏನಾಗುವುದೋ ಎಂಬ ಬಗೆಗಿನ ಭಯ, ಇವೆರಡೂ ನಮ್ಮನ್ನು ಹೆಡಮುರಿಗೆ ಕಟ್ಟಿ ಒದ್ದಾಡಿಸುವ ಅಸುರರು.

ಫುಲ್ಟನ್ ಓಸ್ಲರ್

ಆತ ಬಿಟ್ಟುಹೋದದ್ದು....

ಇಂಗ್ಲಿಷ್ ಮೂಲ : ಶಶಿ ದೇಶಪಾಂಡೆ
ಕನ್ನಡಕ್ಕೆ : ಎಚ್. ಎನ್. ಪ್ಯಾಟಿ

ಅರ್ಧಾಂಗವಾಯುವಿನಿಂದ ನೆಲ ಹಿಡಿಯುವ ಮುನ್ನ ಅವನು ಗಡಸು ಧ್ವನಿಯ ಸದೃಢ ವ್ಯಕ್ತಿ. ನೋಡಿದೊಡನೆ ಕಣ್ಣು ತುಂಬುವಂತಿದ್ದ. ಈಗ ಹಾಸಿಗೆಯಲ್ಲಿ ಒರಗಿದ ಅವನನ್ನು ನೋಡಿದರೆ ಒಂದು ಕಾಲಕ್ಕೆ ಅವನದಾಗಿದ್ದ ವ್ಯಕ್ತಿತ್ವದ ಜೀರ್ಣ ಅವಶೇಷ ಮಾತ್ರನಾಗಿ ತೋರುತ್ತಿದ್ದ. ಬೆಳೆದಿದ್ದ ಬಿಳಿ ಕುರುಚಲು ಗಡ್ಡ ಅವನ ಮುಖಕ್ಕೆ ಈಗಲೋ ಇನ್ನೊಂದು ಕ್ಷಣಕ್ಕೋ ಒಡೆದು ಹೋಗಬಹುದುದಾದಷ್ಟು ದುರ್ಬಲವೂ ಪ್ರೇತಸದೃಶವೂ ಆದ ಕಳೆ ತಂದಿತ್ತು.

ನಾನು ಆಸ್ಪತ್ರೆಯ ಕೋಣೆಯಲ್ಲಿ ಕಾಲಿಡುತ್ತಿದ್ದಂತೆಯೇ "ಡಾಕ್ಟರೊಬ್ಬ ರೋಗಿಯಾಗಿ ಮಲಗಿರುವ ದೃಶ್ಯವೇ ಹಾಸ್ಯಾಸ್ಪದವೆನಿಸುವುದಲ್ಲವೇ!" ಎಂದು ಕೇಳಿದ. ಒಂದು ಕಾಲಕ್ಕೆ ತಾನಿದ್ದ ಜಾಗವನ್ನೆಲ್ಲ ವ್ಯಾಪಿಸಿದಂತಿರುತ್ತಿದ್ದ ಅವನ ವ್ಯಕ್ತಿತ್ವ ಈಗ ಆ ಶೀತಲ, ಶ್ವೇತವರ್ಣದ ಕೋಣೆಯಲ್ಲಿ ಎಲ್ಲಿಯೋ ಹುದುಗಿದಂತೆ ಭಾಸವಾಗುತ್ತಿತ್ತು.

"ಡಾಕ್ಟರಾಗಿ ನೀನು ಎಷ್ಟೋ ರೋಗಿಗಳನ್ನು ಹೆದರಿಸಿ ಹಾಸಿಗೆ ಬಿಟ್ಟೋಡಿಸುತ್ತಿದ್ದಿಯಲ್ಲ? ಈಗ ನಮ್ಮ ಸರತಿ ಅಷ್ಟೆ!" ನಾನು ಚೇಷ್ಟೆ ಮಾಡಿದೆ.

ಅವನು ಮಲಗಿದಲ್ಲೇ ತನ್ನ ಬೃಹತ್ ಕಾಯವನ್ನು ಹೊರಳಿಸಿ ಮಗ್ಗುಲಾದ. "ಇನ್ನು ನನ್ನನ್ನು ಯಾರೂ ಉಳಿಸಲಾರರು. ನಾನೇ ಡಾಕ್ಟರಾಗಿ ನನ್ನ ಶುಶ್ರೂಷೆಯನ್ನೇ ಮಾಡುತ್ತಿದ್ದೆನಾದರೆ ಈಗ ನನ್ನ ಯೋಚನೆ ಏನಿರಬಹುದಿತ್ತು ಗೊತ್ತೇ?... ಈಗ ಇವನ ಸರದಿ...ಹಾಂ! ಹೋಗಿಬಿಟ್ಟ..."

ಅವನ ಮಾತಿನಲ್ಲೇನೋ ಧೈರ್ಯ ಸೂಸುತ್ತಿತ್ತು. ತುಟಿಗಳಲ್ಲಿ ನಗೆಯೂ ಮಿಂಚಿತ್ತು. ಆದರೆ ಕಣ್ಣುಗಳಲ್ಲಿ ಭೀತಿ ತುಂಬಿತ್ತು. ಪರಲೋಕದ ಕರಾಳ ಛಾಯೆ ಆ ಕಣ್ಣುಗಳಲ್ಲಿ ಹಣಿಕಿಕ್ಕಿದಂತೆ ಕಂಡಿತು.

ಅವನಿನ್ನೂ ಜೀವದ ಗಂಡಾಂತರದಿಂದ ಪಾರಾಗಿಲ್ಲದ್ದರಿಂದ ಹತ್ತು ನಿಮಿಷಕ್ಕಿಂತ ಹೆಚ್ಚು ನಿಲ್ಲಬಾರದೆಂದು ಡಾಕ್ಟರು ನನಗೆ ಹೇಳಿದ್ದರು. ಹೇಗೆ ಮಲಗಿದರೂ ಅವನಿಗೆ ಸಮಾಧಾನವಾಗದೆ ಸಂಕಟಪಡುತ್ತಿದ್ದ. ನಾನು ಹೊರಡಲೆದ್ದಾಗ ಆತ ಮತ್ತೊಂದು ಪ್ರಶ್ನೆ ಹಾಕಿದ: "ನಮ್ಮಿಬ್ಬರ ಸ್ನೇಹ ಎಷ್ಟು ವರ್ಷದ್ದು?"

"ಇಪ್ಪತ್ತು ವರ್ಷವಾಯಿತೆಂದು ತೋರುತ್ತದೆ. ಹೌದ್ಹೌದು, ಅಷ್ಟಾಗಿದೆ!"

"ಇಪ್ಪತ್ತು ವರ್ಷ! ರೋಗರುಜಿನ, ಸಾವು

ನೋವು, ದುಃಖ, ಅಜ್ಞಾನ, ಬಡತನಗಳ ವಿರುದ್ಧ ನನ್ನ ಗತಜೀವನದ ಹೋರಾಟವನ್ನು ಕಳೆದ ಕೆಲ ದಿನಗಳಿಂದ ಮೆಲುಕು ಹಾಕುತ್ತಿದ್ದೇನೆ. ಒಮ್ಮೊಮ್ಮೆ ಇದೆಲ್ಲ ಏನು ? ಯಾತಕ್ಕಾಗಿ? ಎಂದೆನಿಸುತ್ತದೆ" ಎಂದು ನುಡಿದ.

ಅವನ ಬಗ್ಗೆ ನನಗೆ ಕೆಡುಕೆನಿಸಿತು. ಹಾಗೆ ನೋಡಿದರೆ ತನ್ನ ಜೀವನ ಸಾರ್ಥಕ, ಉಪಯುಕ್ತ ಎಂದವನು ಭಾವಿಸಬೇಕಾಗಿತ್ತು. "ನೀನು ಸಂಸಾರಿಗನಾಗಬೇಕಿತ್ತು. ಹೆಂಡತಿ, ಅರ್ಧ ಡಜನ್ ಮಕ್ಕಳಿದ್ದರೆ ನಿನಗೆ ಈ ವ್ಯರ್ಥ ಚಿಂತೆ ಮಾಡಲು ಸಮಯ ಸಿಕ್ಕುತ್ತಿರಲಿಲ್ಲ" ನಾನೆಂದೆ.

ಅವನು ಮುಸಿ ಮುಸಿ ನಕ್ಕ. ದಿಂಬಿನ ಕೆಳಗೆ ಕೈ ಹಾಕಿ ತಡಕಾಡಿದ. "ಈಗ ನಿನ್ನೊಡನೆ ಮಾತಾಡಬೇಕೆಂದಿರುವುದು ಅದೇ ವಿಷಯವನ್ನೇ" ಎಂದೊಂದು ಚಿಕ್ಕ ಕಾಗದದ ತುಂಡೊಂದನ್ನು ಹುಡುಕಿ ತೆಗೆದು ನನ್ನ ಕೈಗಿತ್ತ. ಒಂದು ಹೆಸರು, ವಿಳಾಸವಲ್ಲದೆ ಅದರಲ್ಲಿ ಮತ್ತೇನೂ ಇರಲಿಲ್ಲ.

ಇದೇನು ಎಂದು ಕೇಳಿದಾಗ "ನನ್ನ ಮಗ" ಎಂದುತ್ತರಿಸಿದ. ನನ್ನ ಅಸಹಾಯಕತೆಯಲ್ಲೇ ಅವನಿಗೆ ಮೋಜೆನಿಸುತ್ತಿತ್ತೇನೋ.

"ನನಗೆ ಗೊತ್ತೇ ಇರಲಿಲ್ಲವಲ್ಲ?" ನಾನೆಂದೆ.

"ನನಗೇ ಬಹುಶಃ ಅದು ಮರೆತುಹೋಗಿತ್ತು ಕಳೆದ ವರ್ಷದವರೆಗೆ." ಅವನ ಕಣ್ಣುಗಳಲ್ಲಿಯ ನಗೆ ಮಿಂಚು ಚಿತ್ತಸ್ಥೈರ್ಯವನ್ನೇ ಕಂಗೆಡಿಸುವಂತಿತ್ತು. ಅನಂತರ ಏನೇನೋ ಮಾಡಿ ಈ ವಿಳಾಸ ದೊರಕಿಸಿದೆ. "

"ಈ ಹುಡುಗನನ್ನು ಕರೆಕಳುಹಿಸಲೇ?"

ಈಗಾತ ನಕ್ಕ—ಧ್ವನಿ ಅವನ ಗಂಟಲೊಳಗಿಂದಲೇ ಮೇಲೆದ್ದು ಬಂದಂತೆನಿಸುತ್ತಿತ್ತು. "ಏನು! ಹೆಸರು ನೋಡಿದೆಯಾ?"

ನಾನು ಮತ್ತೊಮ್ಮೆ ಆ ಕಾಗದ ನೋಡಿದೆ. ಅವನ ಹೆಸರಿರಲಿಲ್ಲ. ದಿಗ್ಭ್ರಾಂತನಾದೆ. ಈತ ಯಾವಾಗಲೂ ಯಾವುದೇ ಮಾನವೀಯ ದೌರ್ಬಲ್ಯಗಳನ್ನೂ ಮೀರಿದಂಥವನೇ ಎಂದು ಪ್ರಥಮ ನನಗೆ ಮನವರಿಕೆಯಾದಂತೆನಿಸಿತು.

"ಹೌದು, ಅದು ನನ್ನ ಹೆಸರಲ್ಲ. ಆದರೆ ಆ ಹುಡುಗ ಜಾರಜಾತನಲ್ಲ, ಖಾಸಾ ನನ್ನ ಮಗನೇ." ಇಷ್ಟು ಹೇಳಿ ಅವನು ಆಯಾಸದಿಂದ ಕಣ್ಣು ಮುಚ್ಚಿದ. ಆದರೆ ಅವನ ತುಟಿಗಳಲ್ಲಿ ಮಾತ್ರ ರಹಸ್ಯವನ್ನೇನನ್ನೋ ಹುದುಗಿಸಿಕೊಂಡಂಥ ಮಂದಸ್ಮಿತ ಅರಳಿತ್ತು.

ನಾನೆದ್ದು ಮೆಲ್ಲನೆ ಹೊರಕ್ಕೆ ಹೆಜ್ಜೆಯಿಡುತ್ತಿದ್ದಂತೆ ಆತ ಒಮ್ಮೆಲೆ ಕಣ್ತೆರೆದ.

"ಈ ಅರೆಬರೆ ಜೀವವನ್ನು ನಾ ತಾಳಲಾರೆ" ಎಂದಾತ ಗಂಭೀರ ಧ್ವನಿಯಲ್ಲಿ ನುಡಿದ. ಮುಖದಲ್ಲಿ ಪ್ರಶಾಂತ ಕಳೆ ರಾಜಿಸುತ್ತಿತ್ತು. "ನಾನಿನ್ನು ಬೇಗ ಕಣ್ಣು ಮುಚ್ಚಬೇಕು."

ಅವನೆಂದಂತೆಯೇ ಆಯಿತು. ಸತ್ತ ಮೂರು ದಿನ ನನಗೆ ಅವನ ಹಸ್ತಾಕ್ಷರದಲ್ಲಿದ್ದ ಒಂದು ಪತ್ರ ಬಂತು. ಅವನ ಸಾವಿನಿಂದ ಆಘಾತಗೊಂಡಿದ್ದ ನನಗೆ ಆ ಪತ್ರ ನೋಡುವುದಕ್ಕೇ ಭಯ. ಅವನು ನನ್ನ ಕುಟುಂಬದ ಡಾಕ್ಟರ್ ಮಾತ್ರವಲ್ಲ, ಒಳ್ಳೆಯ ಸ್ನೇಹಿತನೂ ಹಿತಚಿಂತಕನೂ ಆಗಿದ್ದ. ಅವನ ನಿಧನದಿಂದ ನಾನು ಏನನ್ನೋ ಕಳೆದುಕೊಂಡು ಕಂಗೆಟ್ಟಂತಾಗಿದ್ದೆ.

ಪತ್ರವನ್ನು ನಡುಗುವ ಕೈಗಳಿಂದಲೇ ಒಡೆದೆ. 'ಅಂದು ಆಸ್ಪತ್ರೆಯಲ್ಲಿ ನಾನು ನಿನ್ನೊಡನೆ ಮಾತನಾಡಿದ್ದು ನೆನಪಿದೆಯೇ ? ಇದೋ ಇಲ್ಲಿದೆ ನನ್ನ ಕಥೆ. ಕೆಲ ದಿನಗಳಿಂದ ನಾನಿದನ್ನು ಈ ಅಧಿಕಪ್ರಸಂಗೀ ದಾಯಿಗಳ ಕಣ್ಣು ತಪ್ಪಿಸಿ ಬರೆಯುತ್ತಿದ್ದೇನೆ. ಕಳೆದ ಕೆಲ ವರ್ಷಗಳಲ್ಲಿ ನಾನು ಸಾಕಷ್ಟು ಸಂಪಾದಿಸಿದ್ದೇನೆಂದು ನನಗನ್ನಿಸಿದೆ. ನನ್ನದೆಲ್ಲವನ್ನೂ ಆ ಹುಡುಗನಿಗೆ ಕೊಟ್ಟು ಬಿಡಬೇಕೆಂದಿದ್ದೇನೆ. ನೀನು ನನ್ನ ಎಲ್ಲ ಹಣವನ್ನು ಅವನಿಗೆ ತಲುಪಿಸುವಿಯಾ? ಯಾರಿಗೂ ಗೊತ್ತಾಗದಂತೆ ಈ ಕೆಲಸವಾಗಬೇಕು. ನೀನಿದನ್ನು ಮಾಡಬಲ್ಲೆಯೆಂದು ನಂಬಬಹುದೆ? ನಿಜಕ್ಕೂ ನನಗೆ ವಕೀಲರಲ್ಲಿ ವಿಶ್ವಾಸವಿಲ್ಲವಾದರೂ ನಿನ್ನ ಬಗ್ಗೆ ಮಾತ್ರ ಪೂರ್ತಿ ವಿಶ್ವಾಸವಿದೆ.'

ಇದನ್ನೋದಿ ನನಗೆ ಆ ಕ್ಷಣದಲ್ಲಿ ನಗು ಬಂತು.

'ಆ ಹುಡುಗ ಮತ್ತು ಅವನ ತಾಯಿಯ (ಮನಸ್ಸಿಗೆ ಹೊಳೆದಂತೆಲ್ಲ ನಾನು ಬರೆದಿರುವುದನ್ನು ಓದಿದರೆ ನಿನಗೇ ತಿಳಿಯುತ್ತದೆ) ಆರ್ಥಿಕ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲವೆಂದು ಕೇಳಿದ್ದೇನೆ. ಹುಡುಗ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾನೆ. ಅವನಿಗೆ ಈ ಹಣದ ಪ್ರಯೋಜನ

ವಾಗುವುದೆಂದು ನನ್ನ ನಂಬಿಕೆ. ನನ್ನ ಎಲ್ಲ ಸಂಪಾ–ದನೆಯನ್ನೂ ಯಾವುದಾದರೊಂದು ಧರ್ಮಾರ್ಥ ಸಂಸ್ಥೆಗೆ ದಾನವಾಗಿ ಕೊಟ್ಟುಬಿಡಬೇಕೆಂದು ಮಾಡಿದ್ದೆ. ಆದರೆ ಸಾವು ಸಮೀಪಿಸಿದಾಗ ಎಲ್ಲ ಸಂಪ್ರದಾಯಸ್ಥ ಹಿಂದುಗಳಂತೆ ನನ್ನ ರಕ್ತದ ಮೋಹ ನನಗಂಟಿತು. ಆದ್ದರಿಂದ ನೀನು ಈ ಕಾರ್ಯ ಮಾಡುವಿಯಾ?' ಎಂದು ಪ್ರಶ್ನಿಸಿದ್ದ.

ನಾನು ಉಳಿದುದೆಲ್ಲವನ್ನೂ ಓದಿ ನೋಡಿದೆ. ಒತ್ತೊತ್ತಾಗಿ ಚಿಕ್ಕ ಅಕ್ಷರಗಳಲ್ಲಿ ಬರೆದಿದ್ದ ಆ ಎರಡು ಪುಟಗಳನ್ನು ಓದುವಾಗ ಆ ಅಜಾನು ಬಾಹು ಮನುಷ್ಯನಿಗೂ ಈ ಚಿಕ್ಕ ಅಕ್ಷರಗಳಿಗೂ ವೈಪರೀತ್ಯವೇ ಒಡೆದು ಕಾಣಿಸಿತು. ಆತ ಕೆಲವೊಂದು ವಿವರಗಳನ್ನು ಎಷ್ಟು ಸ್ಪಷ್ಟವಾಗಿ ನೆನಪಿಟ್ಟು ಕೊಂಡಿದ್ದಾನಲ್ಲ ಎಂದು ನನಗೆ ಆಶ್ಚರ್ಯ: ತಾನು ಮರುದಿನದ ಬೆಳಗನ್ನೇ ಕಾಣಲಾರೆನೆಂಬ ಕಟು ವಾಸ್ತವವನ್ನು ಎದುರಿಸುತ್ತಲೇ ಬರಗಿದಲ್ಲಿಯೇ ಅವನಿಗೆ ಈ ಒಂದು ಪ್ರಸಂಗವೇ ಹೆಚ್ಚು ವಾಸ್ತವಿಕವಾಗಿ ನೈಜವಾಗಿ ಕಂಡಿರಬೇಕು.

ಆಗಿನ್ನೂ ಅವನು ಇಪ್ಪತ್ತೈದರ ಯುವಕ. ವೈದ್ಯಕೀಯ ವೃತ್ತಿಯನ್ನು ಹೊಸಬ ಎಷ್ಟು ಚೆನ್ನಾಗಿ ಪ್ರಾರಂಭಿಸಬಹುದಿತ್ತೋ ಅಷ್ಟು ಚೆನ್ನಾಗಿ ಅವನೂ ಅದೇ ಆರಂಭಿಸಿದ್ದ – ಆಸೆ ನಿರಾಸೆಗಳ ಮಧ್ಯೆ ಹೊಯ್ದಾಡುತ್ತ. ಪ್ರಾಕ್ಟೀಸು ಆರಂಭಿಸಿದ ಊರು ಚಿಕ್ಕದು. ಜಿಲ್ಲಾಸ್ಥಳವೆಂದ ಮೇಲೆ ಕೆಲವರು ಸರಕಾರಿ ಅಧಿಕಾರಿಗಳು, ಶಿಕ್ಷಕರು ಅಲ್ಲಿಯ ಸಮಾಜಜೀವನದ ತಿರುಳಾಗಿದ್ದರು. ಉಳಿದ ಜನ ಮಧ್ಯಮವರ್ಗದವರು. ಕೆಲ ಸಂಪ್ರದಾಯಸ್ಥರು, ಡಾಕ್ಟರನಿಗೆ ಹಣ ತೆರುವುದು ಬಲು ದೊಡ್ಡ ವ್ಯಸನವೆಂದು ತಿಳಿದವರು. ಆದರೂ ಒಂದಿಲ್ಲೊಂದು ದಿನ ದೈವ ಒಲಿಯುವುದೆಂಬ ಆಸೆ ಅವನಿಗಿತ್ತು. ಅಂದು ಆ ಚೀಟಿ ಬಂದಾಗ ದೈವ ತೆರೆಯಿತೆಂದೇ ಆತ ಭಾವಿಸಿದ. ಚೀಟಿಯಲ್ಲಿ ಆ ಊರಿನ ಶ್ರೀಮಂತ, ಗಣ್ಯ ವ್ಯಕ್ತಿಯ ಹೆಸರಿತ್ತು. ನಿಜವಾಗಿಯೂ ದೊಡ್ಡ ಶ್ರೀಮಂತ ಕುಟುಂಬ. ಹಳೆಯದಾದರೂ ವಿಶಾಲವಾದ ಶ್ರೀಮದ್ ಗಾಂಭೀರ್ಯದ ಆ ಮನೆಯನ್ನು ಅವನು ಹೊರಗಿನಿಂದ ಎಷ್ಟೋ ಸಲ ನೋಡಿದ್ದ. ಅದರ ಮುಂಭಾಗದಲ್ಲಿಯ ಕೈದೋಟವನ್ನು ತುಂಬ ಎಚ್ಚರಿಕೆಯಿಂದ ಬೆಳೆಸಿ ಕಾಪಾಡಿಕೊಂಡು ಬರ



ಲಾಗಿತ್ತು. ಆ ಶ್ರೀಮಂತನನ್ನು ನೋಡಿದಾಗ ಒಂದೇನೋ ವಿಚಿತ್ರ ಅನುಭವ ಡಾಕ್ಟರನಿಗಾಯಿತು. ...ಈ ಮನೆ ಮತ್ತು ಈ ವ್ಯಕ್ತಿಯಲ್ಲಿ—ದೇನೋ ಸಾದೃಶ್ಯ ಅವನಿಗೆ ಕಂಡಿತು. ಈ ವ್ಯಕ್ತಿಯು ವಿಚಿತ್ರವೆನಿಸಿದರೂ ಗಂಭೀರ ನಡೆನುಡಿ, ಕೆತ್ತಿ ಮಾಡಿದಂತಿದ್ದ ಸಣಕಲು ಮೈಮಾಟ, ತನ್ನದಾಗಿದ್ದನ್ನು ಬಿಟ್ಟರೆ ಮಿಕ್ಕೆಲ್ಲ ಜಗತ್ತಿನ ಬಗೆಗೂ ಒಂದು ಬಗೆಯ ಶೀತಲವೂ ಪೂರ್ಣವೂ ಆದ ನಿರಾಸಕ್ತಿ ನಮ್ಮ ಡಾಕ್ಟರನ್ನು ಪ್ರಭಾವಿತಗೊಳಿಸಿದವು.

ಈ ಮನೆಗೆ ಬರಲು ತನಗೆ ಬಂದ ಆಮಂತ್ರಣಕ್ಕೆ ವೈದ್ಯಕೀಯ ಕಾರಣವೇನೂ ಇರಲಿಲ್ಲವೆಂದು ತಿಳಿದು ಅವನಿಗೆ ನಿರಾಸೆಯೇ ಆಯಿತು. ಇದು ಸೌಜನ್ಯದ ಭೆಟ್ಟಿ ಮಾತ್ರ.

"ಇಲ್ಲಿ ಇದರ ಅವಶ್ಯಕತೆಯೇನೂ ತೋರುತ್ತಿಲ್ಲ" ಆ ಶ್ರೀಮಂತ ಕಂಡರೂ ಕಾಣದಷ್ಟು ಅಸ್ಪಷ್ಟ ಮುಗುಳ್ನಗುವಿನೊಂದಿಗೆ ಇವನ ಔಷಧ ಪೆಟ್ಟಿಗೆಯೆಡೆಗೆ ಬೆರಳು ತೋರುತ್ತ ಹೇಳಿದಾಗ ಈ ಯುವಕನಿಗೆ ತಾನು ಇನ್ನಷ್ಟು— ಇದು ಕುಚೋದ್ಯವೋ ಎನಿಸುವಷ್ಟು—ತರುಣನೋ ಎನಿಸಿಬಿಟ್ಟಿತು. ಮೊದಲ ಬಾರಿ ಇಂಥ ಶ್ರೀಮಂತನ ಮನೆಗೆ ಹೋಗುವುದೆಂದು ತಾನು ತನ್ನ ಈ ಪೆಟ್ಟಿಗೆಯನ್ನು ಅದೆಂತು ತುಂಬಿದ್ದೆನೆಂದು ನೆನೆದು ಅವನಿಗೆ ಮೋಜೆನಿಸಿತು. ಈ ಮನೆಗೆ ಬಂದು ಹೋಗುವಂತೆ ಮತ್ತೆಯೂ ಆಮಂತ್ರಣ ಬಂತು. ಈ ಮನುಷ್ಯ ತನ್ನಂಥ ಇನ್ನೂ ಮುಂಬರಲು ಹೆಣಗುತ್ತಿರುವ ಡಾಕ್ಟರೊಂದಿಗೆ ಹೀಗೇಕೆ ಚೆನ್ನಾಟವಾಡಬೇಕೆಂದು ಅವನಿಗೆ ಅರ್ಥವಾಗಲಿಲ್ಲ. ಆದರೆ ಈ ಎಲ್ಲ ಸಾಮಾಜಿಕ ಹುಚ್ಚು ಔಪಚಾರಿಕತೆಯ ಹಿಂದೆಯೂ ಒಂದು ಬಗೆಯ ತೆಳುವಾಗಿ ಬಿಡಿ ಬಿಡಿಸಿ ನೋಡುವಂತಹ ಪರೀಕ್ಷಕ ಕಣ್ಣುಗಳಿವೆಯೇನೋ ಎಂದೂ ಅವನಿಗನಿಸದಿರಲಿಲ್ಲ.

ಮೂರನೆಯ ಬಾರಿ ಅವರ ಮನೆಗೆ ರಾತ್ರಿಯೂಟಕ್ಕೆ ಆಮಂತ್ರಣ ಬಂತು. ಅದೇ ಪ್ರಪ್ರಥಮವಾಗಿ ಅವನು ಆ ಮನೆಯೊಡತಿಯನ್ನು ಕಂಡದ್ದು. ಕಣ್ತುಂಬುವಂತೆ ದುಂಡಗಿದ್ದ ಅವಳು ನಾಚಿಕೆಯಿಂದ ಅವನನ್ನು ಕಣ್ಣೆತ್ತಿಯೂ ನೋಡಲಿಲ್ಲ. ಆ ಶ್ರೀಮಂತ ತನ್ನೊಡನೆ ಮಾತನಾಡಲಾರಂಭಿಸಿದ ಬಳಿಕ ಆಕೆ ತನ್ನನ್ನು ಏಕೆ ನೋಡುತ್ತಿದ್ದಿಲ್ಲವೆಂಬುದು ಅವನಿಗೆ ಅರ್ಥವಾಯಿತು. ಆ ಮನೆಯ ಗೋಡೆಗಳ ಮೇಲೆ ಆ ವಂಶದ ಹಿಂದಿನ ಹಿರಿಯರ ಭಾವಚಿತ್ರಗಳು ಕಂಗೊಳಿಸುತ್ತಿದ್ದುವು. ಆಕೆಯ ಗಂಡನ ಮಾತಿನ ಇಂಗಿತವನ್ನು ಅವರೆಲ್ಲ ಆಶೀರ್ವದಿಸುತ್ತಿದ್ದಾರೇನೋ ಎಂದವನಿಗೆ ಶಂಕೆ. ಅದೊಂದು ವಿಚಿತ್ರ ಕೋರಿಕೆ. ಅವನಿಗೆ ತನ್ನ ಕಿವಿಗಳನ್ನು ನಂಬಲಾಗಲಿಲ್ಲ. ಚಿತ್ರಗಳಲ್ಲಿದ್ದ ಶ್ರೀಮಂತನ ಅಪ್ಪ, ತಾತಂದಿರಾದರೂ ಆ ಕೋರಿಕೆ ಕೇಳಿ ನಾಚಿಕೆಯಿಂದ ಮುಖ ಹೊರಳಿಸಬಾರದೇ ಎಂದೆನಿಸಿತು ಅವನಿಗೆ.

"ಇಲ್ಲ, ಸಾಧ್ಯವಿಲ್ಲ," ಅವನು ನುಡಿದ. ಅವನ ಈ ಆವೇಶಪೂರ್ಣ ಉತ್ತರ ಕೇಳಿ ಗಂಡ–ಹೆಂಡತಿ ಇಬ್ಬರೂ ಮೂಕ ದೈನ್ಯದಿಂದ ಅವನನ್ನೇ ನೋಡತೊಡಗಿದರು. ಅವರಿಬ್ಬರ ಮೈಮಾಟದಲ್ಲಿ ಅಜಗಜಾಂತರವಿತ್ತಾದರೂ ಅವರ ದೃಷ್ಟಿಯಲ್ಲಿ ಮಾತ್ರ ವಿಚಿತ್ರ ಸಾಮ್ಯವನ್ನವನು ಕಂಡನು. ಅಲ್ಲಿ ಮುಗ್ಧ ಅಚ್ಚರಿ ವ್ಯಕ್ತವಾಗಿತ್ತು. ಇದು ಮುಗ್ಧತೆಯೆ? ಅಥವಾ ಅವರಿಬ್ಬರಿಗೂ ತಮ್ಮ ಜಗತ್ತಿನ ಹೊರಗೆ ಏನೂ ಕಾಣುತ್ತಲೇ ಇಲ್ಲವೆ? ಆದರೆ ನಿಜವಾಗಿ ಅವನ ಹೃದಯವನ್ನು ಕಲಕಿದ್ದು ಅವಳ ದೃಷ್ಟಿ.

ಭಾವನೆಗಳ ತಾಕಲಾಟದಿಂದ ಕೊನೆಗೊಮ್ಮೆ ಹೊರಬಂದು, "ಒಂದು ವೇಳೆ ನಾನು ನಿರಾಕರಿಸಿದರೆ ?" ಎಂದ.

"ಅಂಥ ಪ್ರಸಂಗದಲ್ಲಿ ನಾನು ಬೇರೊಬ್ಬನನ್ನು ಹುಡುಕಬೇಕಾದೀತು" ಅವಳ ಗಂಡನ ಉತ್ತರ.

ಯುವಕ ಹಿಂಜರಿದ. ಯಾವುದೋ ಯುಗಕ್ಕೆ ಸೇರಿದವರಂತೆ ತೋರುವ ಈ ಗಂಡ–ಹೆಂಡಿರ ಕೋರಿಕೆಯೊಂದು ವಿಪರೀತ ಅಸಂಬದ್ಧವೆಂದು ಅವನಿಗನಿಸಿತು. ಈಗ ಮತ್ತೆ ಆಕೆಯತ್ತ ನೋಡಿದಾಗ ಅವನಿಗೆ ತಟ್ಟನೆ ಆ 'ಬೇರೊಬ್ಬನ' ವಿಚಾರ ಬಂತು. ತನ್ನ ಆಳದಲ್ಲೇನೋ ಕೆದಕಿದಂಥ ಅನುಭವ ಅವನಿಗಾಯಿತು. ಹಿಂದಿನ ಕಾಲದಲ್ಲಿ ಅಬಲೆಯರ ನೆರವಿಗೆ ಹೋಗುವ ಇಂಥ ಮನೋವೃತ್ತಿಗೇ ಶೌರ್ಯ, ವೀರಪುರುಷರ ಲಕ್ಷಣ ಎಂದೆಲ್ಲ ಹೇಳಲಾಗುತ್ತಿತ್ತಂತೆ. ಅಲ್ಲದೆ ಅವನಿಗೂ ಆಗ ತಾರುಣ್ಯ ಉತ್ಸಾಹದಿಂದ ಉಕ್ಕು

ತ್ತಿರುವ ವಯಸ್ಸು. ಇದೇನೋ ವಿಲಕ್ಷಣವೆಂಬಂಥ ಭಾವನೆ ಅವನನ್ನಾವರಿಸಿತು. ನಿಜಕ್ಕೂ ಇದು ಸಾಮಾನ್ಯವೇನಲ್ಲ. ಇದೊಂದು ಸಾಹಸ.

ಈಗ ಅವನ ಮಾತಿನಲ್ಲೇ ಕೇಳಿ: 'ಆದರೆ ಅದು ಸಾಹಸವಾಗಿರಲಿಲ್ಲ. ಅದೊಂದು ಗೀತವಾಗಿತ್ತು, ಸೌಂದರ್ಯವೇ ಮೈವೆತ್ತ ದೃಶ್ಯವಾಗಿತ್ತು, ಕಾವ್ಯಮಯ ಪ್ರಸಂಗವಾಗಿತ್ತು; ಅದೆಲ್ಲವೂ ಒಂದರಲ್ಲೇ ಮೈಗೂಡಿ ನಿಂತಂತಿತ್ತು. ಇದೀಗ ೫೦ರ ಅಂಚಿನ ಈ ಬದಿಯಲ್ಲಿ ನನ್ನನ್ನು ಮುಗಿಸಿಬಿಡುವಂಥ ಆಘಾತವನ್ನೆದುರುನೋಡುತ್ತ ಮಲಗಿದ್ದೇನೆ. ಆದರೂ ಇಂದು ಅಂದಿನ ಆ ದಿನಗಳನ್ನು ನೆನೆದರೆ ಇನ್ನೂ ಯುವಕನೇ ಆಗಿದ್ದೇನೆಂದೇ ಅನಿಸುತ್ತದೆ. ಹೆಣ್ಣಿನ ಮಾಧುರ್ಯವನ್ನು ಮೊಟ್ಟ ಮೊದಲ ಬಾರಿ ಸವಿಯಲೆಳಸುವ ೨೬ರ ಯುವಕ ನಾನು. ಅದು ಹಸಿರು, ಹುಳಿ ಮಾವಿನಷ್ಟೇ ತೀಕ್ಷ್ಣವಾಗಿತ್ತು, ನಿಶಿತವಾಗಿತ್ತು. ಅಲ್ಲಿ ನಿನ್ನೆಯೂ ಇರಲಿಲ್ಲ; ನಾಳೆಯೂ ಇರಲಿಲ್ಲ. ನಮ್ಮಿಬ್ಬರನ್ನುಳಿದು ಈ ಜಗದಲ್ಲಾರೂ ಇರಲಿಲ್ಲ. ಆಕೆ ಪ್ರಕೃತಿ, ನಾನು ಪುರುಷ. ಅಲ್ಲಿ ಪ್ರೇಮದ ಬಗ್ಗೆ ಮಾತಿಲ್ಲ, ವ್ಯರ್ಥ ಭರವಸೆಯ ಶಬ್ದವೂ ಇಲ್ಲ. ನಾವು ಜೊತೆಯಾಗಿ ಕಳೆದ ಆ ಕೆಲವೇ ದಿನಗಳು ಪರಿಪೂರ್ಣತೆಯೇ ಮೈದಳೆದಂತಿದ್ದವು. ನನ್ನ ಜೀವನದ ಈ ಮಂಕು ಹಲಗೆಯ ಮೇಲೆ ಬಣ್ಣ ಬಣ್ಣಗಳನ್ನು ಚಿಮ್ಮಿದಂತೆ ಅದೊಂದು ಪ್ರಸಂಗ ಸ್ಪಷ್ಟವಾಗಿ ಗೋಚರಿಸುತ್ತದೆ ನನಗೆ. ಆಕೆಯಷ್ಟು ಸಲೀಸಾಗಿ ನಗಬಲ್ಲವಳನ್ನು ನಾನು ನನ್ನ ಜೀವಮಾನದಲ್ಲೇ ಕಂಡಿಲ್ಲ. ಸಂತಸವೇ ರೂಪದಳೆದ ದಿನಗಳವು!'

ಓದುತ್ತ ಹೋದಂತೆ ನನಗೆ ನಗು ಬಂತು. ಇಂಥ ಪ್ರಸಂಗಗಳೂ ಜೀವನದಲ್ಲಿ ಉಂಟೇ ? ಇಂಥ ಸಂಗತಿ ಜೀವನದಲ್ಲಿ ಘಟಿಸುವುದೆಂದಿಗಾದರೂ ಸಾಧ್ಯವೇ ? ಎಂದೆನಿಸಿತು. ಯಾಕಂದರೆ ಆ ಶ್ರೀಮಂತ ಅವನಿಂದ ಪುತ್ರಭಿಕ್ಷೆ ಬೇಡಿದ್ದ. ಅವರಿಗೆ ಮಕ್ಕಳಾಗಿರಲಿಲ್ಲ. ದುಃಖತಪ್ತ ಭಾವದಿಂದ ಆ ಶ್ರೀಮಂತ ಮಕ್ಕಳಾಗದಿದ್ದುದರ ತಪ್ಪು ತನ್ನದೆಂದು ಹೇಳುವಾಗ ಅವನ ಮುಖದಲ್ಲಿ ಅಸಂತುಷ್ಟಿಯ ಸೆಳಕು ಹಾದುಹೋಗಿತ್ತು. ಗಣ್ಯ ಕುಟುಂಬ, ಮನೆತನದ ಹೆಸರು, ಮನೆ-ಸಂಪತ್ತು, ಸಂಪ್ರದಾಯಗಳನ್ನು ಉಳಿಸಿಕೊಂಡು ಹೋಗುವುದು ಅವನಿಗೆ ಭಯಂಕರ ಮಹತ್ವದ ವಿಷಯವಾಗಿತ್ತು. ಡಾಕ್ಟರನ ತುಂಬಿದ ಆರೋಗ್ಯ, ರೂಪ, ಬುದ್ಧಿಮತ್ತೆಗಳು ಅವರು ಅವನನ್ನೇ ಆಯ್ಕೆ ಮಾಡುವಂತೆ ಮಾಡಿದ್ದವು. ಡಾಕ್ಟರನ ಮನೆತನದ ಹಿನ್ನೆಲೆಯನ್ನು ಅವರು ಕೇಳಿ ತಿಳಿದುಕೊಂಡಿದ್ದರು. ಆದರೆ ಆ ಶ್ರೀಮಂತನ ಒಂದು ಕರಾರನ್ನು ಅವನು ಪಾಲಿಸಲೇಬೇಕಿತ್ತು. ಅವಳೊಡನೆ ಕೆಲವು ದಿನ ಇದ್ದು ಅನಂತರ ಆ ಊರಿನಿಂದ, ಆ ದಂಪತಿಗಳ ಜೀವನದಿಂದ ಶಾಶ್ವತವಾಗಿ ಆತ ದೂರವಾಗಬೇಕು. ಈ ಸಹವಾಸದ ಫಲವಾಗಿ ಅವಳಿಗೆ ಮಗು ಹುಟ್ಟಿದರೆ ಆ



"ನನ್ಹೆಂಡ್ತಿ ತೀರಿಕೊಂಡ ತಕ್ಷಣ ಅವಳ ಇನ್‌ಸೂರನ್ಸ್ ಹಣ ಬರ್ತೈತೆ, ತಕ್ಷಣ ನಿಮ್ಮ ಸಾಲ ಬಾಕಿ ಮಾಡೋವ ಅಂತಿದ್ದೆ, ಆದ್ರೆ…"

ಮಗುವಿನ ಬಗೆಗೂ ಡಾಕ್ಟರು ಎಂದೂ ವಿಚಾರಿಸುವ ಗೋಜಿಗೆ ಹೋಗಬಾರದು.

"ಇದಕ್ಕೆ ಪ್ರತಿಯಾಗಿ ನನಗೇನು ಸಿಕ್ಕಬಹುದು?" ನಕ್ಕುಬಿಡುವ ಹುಚ್ಚು ತವಕವನ್ನು ತಡೆಯಲೇನೋ ಎಂಬಂತೆ ಡಾಕ್ಟರ್ ಪ್ರಶ್ನಿಸಿದ್ದ. ಅವನ ಪ್ರಶ್ನೆಯಿಂದ ಶ್ರೀಮಂತನಿಗೆ ಆಶ್ಚರ್ಯವಾಗಿತ್ತು. ಅವನು ಆ ದೃಷ್ಟಿಯಿಂದ ಅದುವರೆಗೆ ಯೋಚಿಸಿರಲೇ ಇಲ್ಲ. ಅವನೇನೂ ಉತ್ತರಿಸಲಿಲ್ಲ. ಡಾಕ್ಟರ್ ಆಕೆಯತ್ತ ನೋಡಿದ ಮೊಟ್ಟ ಮೊದಲ ಬಾರಿಗೆ. ಆಕೆ ತೀರ ನಾಚಿಕೊಂಡಳಾದರೂ ಆಕೆಯ ದೃಷ್ಟಿ ಮೊದಲ ಬಾರಿ ಅವನದನ್ನು ಸಂಧಿಸಿತು. ಆ ಕ್ಷಣಕ್ಕೇ ತನ್ನ ಅಂಗಾಂಗಗಳಲ್ಲಿ ನೆತ್ತರು ಹರಿದಂತೆ ಡಾಕ್ಟರನಿಗನಿಸಿತು. ಆಕೆಯ ಗಂಡನು ಮಾತ್ರ ತನ್ನ ಭಾವನೆಗಳನ್ನು ತೋರ್ಪಡಿಸದೆ ಅವರಿಬ್ಬರನ್ನೂ ನೋಡುತ್ತ ಕುಳಿತಿದ್ದ. ಅಲುಗುತ್ತಿದ್ದ ಅವನ ತುಟಿಗಳು ಮಾತ್ರ ಅವನ ಭಾವನೆಗೆ ಹಿಡಿದ ಕನ್ನಡಿಯಂತಿದ್ದವು.

'ಆ ಪ್ರಸಂಗದ ಕಾವು ಕೊನೆಗೊಮ್ಮೆ ಕಡಿಮೆಯಾದಾಗ ನನಗೆ ಅದೆಲ್ಲವನ್ನೂ ಶಾಂತ ಚಿತ್ತದಿಂದ ಸ್ವೀಕರಿಸಲು ಶಕ್ಯವಾಯಿತು. ನೀತಿ ಮತ್ತೆ, ಸಂಪ್ರದಾಯಗಳನ್ನು ನಾನಂತೂ ಕಡೆಗಣಿಸಿಬಿಟ್ಟೆ. ಅವುಗಳನ್ನು ಬದಿಗಿರಿಸಲು ಆ ದಂಪತಿಗಳೂ ನಿರ್ಧರಿಸಿದ್ದರೇನೋ, ಅಥವಾ ಅವಳ ಆಕರ್ಷಣೆಯೂ ಅದಕ್ಕೆಲ್ಲ ಕಾರಣವಾಗಿರಬೇಕು. ಈ ಇಡೀ ಪ್ರಕರಣವು ತೀರ ಸ್ವಾಭಾವಿಕವೂ ಸುಂದರವೂ ಆಗಿ ಪರಿಣಮಿಸಿರುವುದಕ್ಕೆ ಬಹುಶಃ ಇನ್ನೊಂದು ಕಾರಣ – ಅವಳ ಕಣ ಕಣದಲ್ಲೂ ವ್ಯಕ್ತವಾಗುತ್ತಿದ್ದ ಆ ಮುಗ್ಧತೆ.'

ಇಬ್ಬರೂ ಅಗಲಬೇಕಾಗಿ ಬಂದಾಗ ಅವರಿಗೆಷ್ಟೂ ವಿಷಾದವಾಗಲಿಲ್ಲ.

ಬೀಳ್ಕೊಡುವಾಗ ಮಾತ್ರ ಅವಳು ಕಾತರಳಾಗಿ, "ನೀವು ವಚನ ಪಾಲಿಸುತ್ತೀರಲ್ಲವೇ ?" ಎಂದು ಕೇಳಿದ್ದಳು. ಆ ದಂಪತಿಗಳ ಜೀವನದಿಂದ ಶಾಶ್ವತವಾಗಿ ತಾನಿನ್ನು ದೂರವಾಗುವೆನೆಂದೂ ತಾನಿತ್ತಿದ್ದ ಮಾತಿಗೆ ತಪ್ಪಲಾರೆನೆಂದೂ ಅವನು ಹೇಳಿದ.

"ಇಂದಿನ ವರೆಗೂ ನಾನು ಆ ವಚನ ಪಾಲಿಸಿಕೊಂಡುಬಂದಿದ್ದೇನೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಅವಳೇ ವಚನಭಂಗ ಮಾಡಿದ್ದಾಳೆ. ಅವಳಿಗೆ ಮಗು ಹುಟ್ಟಿದ ಸಂಗತಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಪತ್ರಿಕೆಯ ಆ ಭಾಗವನ್ನು ಹರಿದು ಒಂದು ಪತ್ರದೊಂದಿಗೆ ಅದನ್ನು ನನಗೆ ಕಳುಹಿಸಿದ್ದಳು. ಅದಾದ ನಂತರ ಅವಳೊಡನೆ ಮತ್ತೆಂದೂ ಸಂಪರ್ಕ ಬಂದಿಲ್ಲ."

ಅದು ಹೇಗೋ ಗೊತ್ತಿಲ್ಲ. ಆ ಪ್ರಸಂಗ ನನ್ನ ಮಿತ್ರನ ಮನಃಪಟಲದಿಂದ ದೂರವಾಗಿತ್ತು. ಕಳೆದ ವರ್ಷ ಆ ಶ್ರೀಮಂತನ ಸಾವಿನ ಸುದ್ದಿ ಪತ್ರಿಕೆಯಲ್ಲಿ ಬಂದಿತ್ತು. ಅದು ಅವನ ಕುತೂಹಲ ಕೆರಳಿಸಿತು. ಅವನು ಆ ಕುಟುಂಬದ ಬಗೆಗೆ ಅವರಿಗೆ ಗೊತ್ತಾಗದಂತೆ ಕೇಳಿ ತಿಳಿದುಕೊಂಡ. ಶ್ರೀಮಂತನ ಸಾವಿನ ನಂತರ ಅವಳ ಆರ್ಥಿಕ ಸ್ಥಿತಿ ಕೆಟ್ಟಿತ್ತೆಂದೂ ಅವಳಿಗೆ ಆ ಮನೆಯನ್ನು ಮಾರಬೇಕಾದ ಪ್ರಸಂಗ ಬಂದಿತೆಂದೂ ತಿಳಿಯಿತು. ಮನೆ ಉಳಿಸಿಕೊಳ್ಳುವದಕ್ಕಾಗಿಯೇ ಅಲ್ಲವೆ ಅವಳ ಗಂಡ ಇಷ್ಟೆಲ್ಲ ಮಾಡಿದ್ದು! ಅವನು ನಕ್ಕುಬಿಟ್ಟಿದ್ದ.

ಏನೇ ಇರಲಿ, ನನ್ನ ಮಿತ್ರನ ಇಚ್ಛೆಯನ್ನು ನೆರವೇರಿಸಬೇಕಾದುದು ನನ್ನ ಕರ್ತವ್ಯ. ಅವರಿಗೆ ಅವರ ಕಲ್ಪನೆಯೂ ಬಾರದ ರೀತಿಯಲ್ಲಿ ನನ್ನ ಮಿತ್ರನ ಕೊನೆಯ ಇಚ್ಛೆಯನ್ನು ಈಡೇರಿಸಿದೆ. ದೂರದ ಸಂಬಂಧಿಯೊಬ್ಬರು ಮೃತ್ಯುಪತ್ರದ ಮೂಲಕ ಅವರಿಗೆ ಆಸ್ತಿ ಬಿಟ್ಟು ಹೋಗಿದ್ದಾರೆಂದೂ ಆ ವ್ಯಕ್ತಿ ಅನಾಮಧೇಯವಾಗಿ ಉಳಿಯ ಬಯಸಿರುವುದಾಗಿಯೂ ಅವರಿಗೆ ತಿಳಿಸಿದೆ. ಅದೆಲ್ಲ ಕೃತಜ್ಞತೆಯಿಂದ ಸ್ವೀಕರಿಸಲ್ಪಟ್ಟಾಗ ನನ್ನ ಕರ್ತವ್ಯವನ್ನು ನಾನು ನೆರವೇರಿಸಿದೆನೆಂಬ ಕೃತಕೃತ್ಯ ಭಾವನೆ ನನ್ನಲ್ಲಿ ಮೂಡಿತು.

ಏಕೋ ಏನೋ ಕಳೆದ ಬಾರಿ ಮುಂಬಯಿಗೆ ಹೋದಾಗ ಅವಳನ್ನೂ ಅವಳ ಮಗನನ್ನೂ ಕಾಣಬೇಕೆಂಬ ಹುಚ್ಚು ಆಸೆ ಉಂಟಾಯಿತು. ಇತ್ತೀಚೆಗೆ ಅವರಿಗೆ ಆಸ್ತಿ ದಕ್ಕುವಂತೆ ನೆರವಾದ ವಕೀಲ ನಾನೇ ಎಂದು ಪ್ರಸ್ತಾಪಿಸಿ, ಅವಳನ್ನು ಭೆಟ್ಟಿಯಾಗಬಹುದೇ ಎಂದು ಕೇಳಿದ್ದಕ್ಕೆ ಅವಶ್ಯವಾಗಿ ಭೆಟ್ಟಿಯಾಗಬಹುದೆಂದು ಕೂಡಲೆ ಮಾರುತ್ತರ ಬಂತು.

ಆಕೆಯನ್ನು ಕಂಡಾಗ ನನಗೆ ಭಾರಿ ನಿರಾಸೆ. ಅದು ಅನಿವಾರ್ಯವೂ ಆಗಿತ್ತು. ನನ್ನ ಮಿತ್ರ ತನ್ನ

ಕೊನೆ ಕೊನೆಯ ಗಳಿಗೆಯಲ್ಲಿ ಆಕೆಯನ್ನು ನೆನಪಿನ –ಹರಕು ಮುರುಕು ನೆನಪಿನ – ಆಧಾರದಿಂದ, ಮನಸ್ವೀ ವರ್ಣಿಸಿದ್ದ. ಅವಳ ಬಗ್ಗೆ ನನಗೆ ಅದುವರೆಗೆ ತಿಳಿದದ್ದು ಅಷ್ಟು ಮಾತ್ರ. ಆದರೆ ಈಗ ಅವಳಿಗೆ ವಯಸ್ಸಾಗಿದೆ.

ಅವಳ ಮಾತಿನ ನಡು ನಡುವೆ 'ನನ್ನ ಮಗ' ಬಂದೇ ಬರುತ್ತಿದ್ದ. ಆ ಹುಡುಗ ಈಗ ಮನೆಯಲ್ಲಿರಲಿಲ್ಲ. ಆದರೆ ಟೇಬಲ್ ಮೇಲೆ ಬಾಲಕನೊಬ್ಬನ ಫೋಟೋ ಕಂಡಿತು. ಅದರಲ್ಲಿ ನನ್ನ ಮಿತ್ರನ ಹೋಲಿಕೆಯನ್ನೂ ಅವನು ಆ ದಿನಗಳಲ್ಲಿ ಹೇಗೆ ಕಾಣುತ್ತಿರಬಹುದೆಂಬುದನ್ನೂ ನೋಡಬಹುದೆಂದು ನನ್ನೆಣಿಕೆ. ಅದು ಬರೀ ಭಾವನೆಯಷ್ಟೇ. ಅವಳ ಮನೆ ಈ ನಗರದಲ್ಲಿಯ ಅನೇಕ ಮಧ್ಯಮ ವರ್ಗೀಯರ ಮನೆಯಂತೆಯೇ ಇತ್ತು. ಅವಳೂ ಸಾಮಾನ್ಯ ಮಧ್ಯಮ ಮನುಷ್ಯನ ಮಹಿಳೆಯರಂತೇ ಕಂಡಳು. ನನ್ನ ಮಿತ್ರ ಹೇಳಿದ ಸುಂದರ ಪ್ರಣಯ ಪ್ರಸಂಗದ ನಾಯಿಕೆ ಇವಳೇ ಇರಬಹುದೇ ಎಂದು ಅಚ್ಚರಿಯಾಯಿತು ನನಗೆ. ಅವಳಿಗೀಗ ತನ್ನ ಮಗನನ್ನು ಕಂಡಾಗೆಲ್ಲ ಅವನನ್ನು ಹೆತ್ತವನ ನೆನಪಾಗುತ್ತದೆಯೇ? ಅವನ ಬಗ್ಗೆ ಅವಳಲ್ಲಿ ಪ್ರೀತಿಯ ಕುರುಹೇನಾದರೂ ಉಳಿದಿರಬಹುದೆ?... ಅಲ್ಲಿ ಬಂದ ಸ್ವಲ್ಪ ಸಮಯದಲ್ಲೇ ನನ್ನನ್ನೇಕೋ ಒಂದು ಬಗೆಯ ನಿರಾಸೆಯೇ ಆವರಿಸತೊಡಗಿತು. ಆದ್ದರಿಂದಲೇ ಆ ಆಸ್ತಿ ಅವಳಿಗೆ ಯಾರಿಂದ ಬಂದಿತೆಂಬುದನ್ನು ತಿಳಿಸಬೇಕೆಂದು ಮನಸ್ಸಾಯಿತು. "ಆ ಆಸ್ತಿ ನಿಮಗೆ ಯಾರಿಂದ ಬಂದಿತೆಂಬುದು ಗೊತ್ತೇ?" ಎಂದು ಕೇಳಿಯೇಬಿಟ್ಟೆ, ಏಳುತ್ತಿರುವಂತೆಯೇ.

"ಇಲ್ಲ. ನನಗೆ ಗೊತ್ತಿಲ್ಲ. ಯಾರಿಂದಲೇ ಬಂದಿರಲಿ, ಅದು ಸಿಕ್ಕಿದ್ದು ದೇವರ ದಯೆಯೆಂದೇ ಭಾವಿಸಿದ್ದೇನೆ," ಆಕೆ ಉತ್ತರಿಸಿದಳು.

ಆಗ ನಾನು ನಿಜ ಸಂಗತಿಯನ್ನುಸುರಿದೆ. ಅವಳಿಗೆ ತಟ್ಟನೇ ನನ್ನ ಮಿತ್ರನ ನೆನಪಾಗದಿದ್ದುದು ನನಗೆ ಆಘಾತವುಂಟುಮಾಡಿತು. ಆದರೆ ನೆನಪಾದಾಗ ಅವಳು ನಾಚಿ ಕೆಂಪೇರಿದಳು – ಬಹುಶಃ ಆ ಹಿಂದಿನ ದಿನಗಳಲ್ಲಿಯಂತೆ, "ಓಹ್ ಅವನೇ!" ಎಂದುದ್ಗರಿಸಿದಾಗ ಅವಳ ತುಟಿಗಳಲ್ಲಿ ಮಧುರ ಲಾಸ್ಯ ನಲಿಯಿತು. "ಹಾಗಿದ್ದರೆ ನಿಮಗೆ ಅದೆಲ್ಲ ಗೊತ್ತಿರಬೇಕಲ್ಲ?"

ನಾನು ಹೌದೆಂದು ಗೋಣು ಹಾಕಿದೆ. "ಸಾಯುವ ಮುನ್ನ ಅವನು ನನಗೆಲ್ಲವನ್ನೂ ಹೇಳಿ ಹೋದ."

ಆಗ ಅವಳು ಮುಗುಳ್ನಕ್ಕು, "ಇಲ್ಲ, ನಿಮಗೆ ಎಲ್ಲವೂ ಗೊತ್ತಿರಲಿಕ್ಕೆ ಶಕ್ಯವಿಲ್ಲ. ... ಈ ಹುಡುಗ ಆ ಮಗುವಲ್ಲ. ಆ ಮಗು ಚಿಕ್ಕಂದಿನಲ್ಲೇ ತೀರಿಕೊಂಡಿತು. ಇದು ನನ್ನ ಎರಡನೆಯ ಮಗು," ಎಂದಳು.

ಅವಳಾಡಿದ್ದನ್ನು ಕೇಳಿ ನಾನೇನು ಮಾಡಿದೆನೊ ನನಗೆ ತಿಳಿಯದು. ಆ ಮನೆಯಿಂದ ಕೂಡಲೇ ಹೊರಬೀಳುವುದೊಂದೇ ಮರ್ಯಾದೆ ಉಳಿಸಿಕೊಳ್ಳುವ ದಾರಿಯಾಗಿತ್ತು ನನಗೆ ಎಂಬುದಷ್ಟು ಮಾತ್ರ ಗೊತ್ತು. ಅಲ್ಲಿಂದ ಹೊರಬೀಳುತ್ತಿರುವಂತೆ ಯಾವುದೋ ಒಂದು ಭೂತ ನನ್ನನ್ನು ಅಣಕಿಸುತ್ತ ನನ್ನ ಬೆನ್ನಟ್ಟಿದೆಂದು ನನಗೆ ಭಾಸವಾಗಿತ್ತು. ಈಗೊಂದು ವೇಳೆ ನನ್ನ ಮಿತ್ರ ಜೀವದಿಂದಿದ್ದು ತನ್ನ ಮೇಲೇ ಹೊರಳಿದ ಈ ಪ್ರಸಂಗವನ್ನು ಆತ ಹೇಗೆ ಎದುರಿಸಬಹುದಿತ್ತೋ?!

✡



ಅಹಿಂಸೆಯೇ ಪರಮಧರ್ಮ ಎಂದು ನಂಬಿರುವ ಸಿಲೋನಿನ ಬೌದ್ಧಮತೀಯ ಮೀನುಗಾರರು ಕ್ರಿಮಿಯನ್ನೂ ಕೊಲ್ಲದಷ್ಟು ದಯಾಳುಗಳು. ಅವರು ಮೀನು ಹಿಡಿಯುವ ವೃತ್ತಿಯವರಾದರೂ ಮೀನನ್ನು ಕೊಲ್ಲುವುದಿಲ್ಲ; ಬರಿ ನೀರಿನಿಂದ ಹೊರಗೆ ತೆಗೆಯುತ್ತಾರೆ, ಅಷ್ಟೇ.

ಅವನು ಗತಿಸಿ ೮೩ ವರ್ಷಗಳು ಸಂದವು.
ಇತಿಹಾಸದ ಮೇಲೆ ಅಚ್ಚಳಿಯದ ಮುದ್ರೆಯೊತ್ತಿದ
ಅವನ ಹೆಸರು ಚಿರಸ್ಥಾಯಿ.

ಫ್ರೆಡರಿಕ್ ಎಂಗೆಲ್ಸ್

ಆರ್. ಪೂರ್ಣಿಮಾ

ಕಮ್ಯೂನಿಸ್ಟ್ ಕ್ರಾಂತಿಯ ಭೀತಿಯಿಂದ ಆಳುವ ವರ್ಗಗಳು ಗಡ ಗಡನೆ ನಡುಗಲಿ! ಕಾರ್ಮಿಕರಿಗೆ ತಮ್ಮ ಸಂಕೋಲೆಗಳನ್ನಲ್ಲದೆ ಕಳೆದುಕೊಳ್ಳಲು ಬೇರೇನೂ ಇಲ್ಲ! ಗೆಲ್ಲಲು ಇಡೀ ಜಗತ್ತೇ ಇದೆ," ಎಂದು ಹೇಳಿ, ಆ ಸಂಕೋಲೆಯ ನಾಶಕ್ಕೆ ಹೋರಾಡಲು ಬೇಕಾದ ಸಿದ್ಧಾಂತವನ್ನು ಕೈಗಿತ್ತವರು ಮಾರ್ಕ್ಸ್ ಮತ್ತು ಎಂಗೆಲ್ಸ್. ಆ ಸಿದ್ಧಾಂತವು ಮಾರ್ಕ್ಸ್‌ವಾದವೆಂದು ಹೆಸರುಗೊಂಡಿದ್ದರೂ ಅದರ ನಿರೂಪಣೆಯಲ್ಲಿ ಎಂಗೆಲ್ಸ್ ಸಮಭಾಗಿ. ಜಗತ್ತಿನ ಚರಿತ್ರೆಯಲ್ಲಿ ಅವರಿಬ್ಬರ ತಾತ್ವಿಕ ಹೊಂದಾಣಿಕೆ, ಅದರ ಮೂಲಕ ಗಟ್ಟಿಗೊಂಡ ಸ್ನೇಹ, ಇವು ಅದ್ವಿತೀಯವಾಗಿ ನಿಲ್ಲುತ್ತವೆ. ಮಾನವಕುಲದ ನಿಜವಾದ ಬಿಡುಗಡೆಯೇ ಅವರಿಬ್ಬರ ಧ್ಯೇಯವಾದುದರಿಂದ ಸುಮಾರು ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ಯಾವ ತಾತ್ವಿಕ ವಿರೋಧ ಇಲ್ಲದೆ ಎರಡು ದೇಹ ಒಂದೇ ಚೇತನದಂತೆ ದುಡಿಯಲು ಅವರಿಗೆ ಸಾಧ್ಯವಾಯಿತು. ಸಮತಾವಾದದ ಹುಟ್ಟು ಬೆಳವಣಿಗೆಯಲ್ಲಿ ಈ ಇಬ್ಬರಲ್ಲಿ ಯಾರ ಪಾತ್ರ ಹೆಚ್ಚು ಎಂದು ಲೆಕ್ಕ ಹಾಕಲು ಸಾಧ್ಯವಿಲ್ಲ. ಬೌದ್ಧಿಕವಾಗಿ ಒಂದೇ ದಿಕ್ಕಿನಲ್ಲಿ ಬೆಳೆಯುತ್ತಿದ್ದ ಅವರಿಬ್ಬರೂ ಸಂಧಿಸಿ, ಸಿದ್ಧಾಂತವನ್ನು ರೂಪಿಸಿದ್ದು ಇತಿಹಾಸದ ಲಾಭದಾಯಕ ಆಕಸ್ಮಿಕಗಳಲ್ಲಿ ಒಂದು. ಚರಿತ್ರೆಯ ಪಯಣದ ಕೊನೆಯ ಘಟ್ಟ ಸಮತಾವಾದಿ ಸಮಾಜವೆಂದು ಇವರು ಗುರುತಿಸಿದರು. ಅದರ ಸಾಧನೆಗೆ ಕಾರ್ಮಿಕ ವರ್ಗವನ್ನು ನೆಚ್ಚಿ, ಪ್ರೇರೇಪಿಸಿ, ಕಲಿಸಿ, ಆ ಮೂಲಕ ಚರಿತ್ರೆಗೆ ತಿರುವು ಕೊಟ್ಟರು. ಉತ್ಪಾದನಾ ಕ್ರಮದಲ್ಲಿ ಆಗುವ ಬದಲಾವಣೆಗಳು ಇತಿಹಾಸವನ್ನು ಬದಲಾಯಿಸುತ್ತವೆ ಎಂದು ಇವರಿಬ್ಬರೂ ಮಂಡಿಸಿದ ಸಿದ್ಧಾಂತ,

264-6



ಜೀವವಿಜ್ಞಾನಕ್ಕೆ ವಿಕಾಸವಾದ ಏನು ಮಾಡಿತೋ ಅದನ್ನೇ ಇತಿಹಾಸಕ್ಕೆ ಮಾಡಿದೆ ಎಂದು ಎಂಗೆಲ್ಸನೇ ಹೇಳುತ್ತಾನೆ.

ಫ್ರೆಡರಿಕ್ ಎಂಗೆಲ್ಸ್ ಹುಟ್ಟಿದ್ದು, ೧೮೨೦ರ ನವೆಂಬರ್ ೨೮ರಂದು. ಅವನ ತಂದೆ ಪ್ರಶಿಯದ ಬಾರ್ಮೆನ್ನಿನಲ್ಲಿ ಶ್ರೀಮಂತ ಗಿರಣಿ ಮಾಲೀಕನಾಗಿದ್ದ. ತಂದೆಯ ರಾಜಸೇವಾನಿಷ್ಠೆ ಮತ್ತು ಧಾರ್ಮಿಕ ಮಡಿವಂತಿಕೆಯಲ್ಲಿ ಕಿರಿಕಿರಿಗೊಂಡೇ ಸೂಕ್ಷ್ಮ ಮನಸ್ಸಿನ ಎಂಗೆಲ್ಸ್ ಬೆಳೆದದ್ದು. ತನ್ನಂತೆ ಮನೆಯ ಹಿರಿ ಮಗನೂ ವ್ಯಾಪಾರದಲ್ಲಿ ತೊಡಗ–ಬೇಕೆಂಬ ತಂದೆಯ ಇಚ್ಛೆಯನ್ನು ಮೀರಲಾರದೆ ಫ್ರೆಡರಿಕ್ ಹುಟ್ಟೂರನ್ನು ಬಿಟ್ಟು ಬ್ರೆಮೆನ್ನಿಗೆ ಹೋಗಬೇಕಾಯಿತು. ತಂದೆಯ ಪರಿಸರದಿಂದ ದೂರವಾದದ್ದು ಬೆಳೆಯುತ್ತಿದ್ದ ಮನಸ್ಸಿಗೆ ವರವಾಯಿತು. ಎಳೆ ವಯಸ್ಸಿನ ಹುಡುಗ ಜರ್ಮನ್ ಸಾಹಿತ್ಯ, ಕಲೆ, ವಿಜ್ಞಾನ, ರಾಜಕೀಯ, ತತ್ವಶಾಸ್ತ್ರ, ಸಂಗೀತವೇ ಅಲ್ಲದೆ ಹಲವಾರು ಭಾಷೆಗಳ ಕಲಿಕೆಯಲ್ಲಿ ತೊಡಗಿದ. ಓದುತ್ತ ಓದುತ್ತ ಚಿಕ್ಕಂದಿನ ಧಾರ್ಮಿಕ ಪ್ರಜ್ಞೆ ಕರಗಿ ನಿರೀಶ್ವರವಾದ ಬೆಳೆಯಿತು. ಡೇವಿಡ್ ಸ್ಟ್ರಾಸ್, ಹೆಗೆಲ್, ಫೇರ್‌ಬ್ಯಾಕರು ಅವನ ಮೇಲೆ ತುಂಬ ಪ್ರಭಾವ ಬೀರಿದರು. ಹದಿನೆಂಟರಿಂದ ಇಪ್ಪತ್ತೈದನೇ ವಯಸ್ಸಿನೊಳಗೆ ಬರೆದ ಪತ್ರಗಳು ಅವನ ಮಾನಸಿಕ, ಬೌದ್ಧಿಕ ಬೆಳವಣಿಗೆಯ ಹಂತಗಳನ್ನು ತೋರಿಸುತ್ತವೆ. ಒಟ್ಟಿನಲ್ಲಿ ಹತ್ತೊಂಭತ್ತನೇ ವಯಸ್ಸಿಗೆ ಫ್ರೆಡರಿಕ್ ಎಂಗೆಲ್ಸ್ ಕ್ರಾಂತಿಕಾರಿಯಾಗಿದ್ದ. ಆ ಕಾಲದಲ್ಲಿ ಪ್ರಗತಿಪರವಾಗಿದ್ದ 'ಯಂಗ್ ಜರ್ಮನಿ' ಚಳುವಳಿಗೆ ಸೇರಿದ. ನಂತರ ಬೇಸತ್ತು ಅದರ ರಾಜಕೀಯವನ್ನು ಟೀಕಿಸಿದ. ಮಗನ ರಾಜಕೀಯ ಚಟುವಟಿಕೆಗಳನ್ನು ಸಹಿಸದ ತಂದೆ, ಜರ್ಮನಿಯ ಬಿಸಿ ವಾತಾವರಣದಿಂದ ಅವನನ್ನು ದೂರವಿಡಲು ತಾನು ಪಾಲುದಾರನಾಗಿದ್ದ ಸಂಸ್ಥೆಯಲ್ಲಿ ತರಬೇತಿ ಪಡೆಯಲೆಂದು ಇಂಗ್ಲಂಡಿಗೆ ಕಳುಹಿಸಲು ನಿರ್ಧರಿಸಿದ. ಎಂಗೆಲ್ಸ್ ೧೮೪೨ರಲ್ಲಿ ಇಂಗ್ಲಂಡಿಗೆ ಬರುವ ಮೊದಲು ಒಂದು ವರ್ಷ ಬರ್ಲಿನ್ನಿನಲ್ಲಿ ಮಿಲಿಟರಿ ಸೇವೆ ಸಲ್ಲಿಸಿ ಹೊರಟ. ಬರುವ ಹಾದಿಯಲ್ಲಿ ಕೊಲೋನಿನಲ್ಲಿ ಪತ್ರಿಕಾ ಸಂಪಾದಕ ಕಾರ್ಲ್ ಮಾರ್ಕ್ಸ್‌ನ ಭೇಟಿಯಾಯಿತು. ಅದೇ ಅವರ ಮೊದಲನೆಯ ಸಮಾಗಮ.

ಗತಿತರ್ಕ

ಇಂಗ್ಲಂಡಿಗೆ ಬಂದು ನೆಲಸುವ ವೇಳೆಗೆ ಎಂಗೆಲ್ಸನ ರಾಜಕೀಯ ಪ್ರಜ್ಞೆ ಒಂದು ಘಟ್ಟವನ್ನು ಮುಟ್ಟಿತ್ತು. ಆ ಬಂಡವಾಳಶಾಹಿ ವ್ಯವಸ್ಥೆಯ ಕೆಲಸಗಾರರ ಸ್ಥಿತಿಗತಿಗಳು ಅವನ ಗಮನ ಸೆಳೆದವು. ಅವನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ. ಈ ಅನುಭವದ ಬೆಳಕಿನಲ್ಲಿ ಹಿಂದೆ ಓದಿದ್ದ ಸಿದ್ಧಾಂತಗಳ ದೋಷಗಳು ನಿಚ್ಚಳವಾಗಿ ಕಂಡವು. ಮಾರ್ಕ್ಸ್ ಸಂಪಾದಕನಾಗಿದ್ದ ಪತ್ರಿಕೆಗೆ ಲೇಖನಗಳನ್ನು ಬರೆದ. ಬೂರ್ಜ್ವಾ ವ್ಯವಸ್ಥೆಯ ಆರ್ಥಿಕ ಸಂಬಂಧಗಳನ್ನು ವಿಶ್ಲೇಷಿಸಲು ಎಂಗೆಲ್ಸ್ ಮೊದಲ ಬಾರಿಗೆ ಗತಿತಾರ್ಕಿಕ ವಿಧಾನವನ್ನು ಬಳಸಿದ. ಫೆಬ್ರವರಿ ೧೮೪೪ರಲ್ಲಿ ಅವನು ಬರೆದ ಲೇಖನವೊಂದು ಮಾರ್ಕ್ಸ್‌ನ ಮೆಚ್ಚುಗೆ ಗಳಿಸಿತು. ಇದರಿಂದ ಅವರಿಬ್ಬರ ಪತ್ರವ್ಯವಹಾರ ಆರಂಭವಾಯಿತು. ಇಂಗ್ಲಂಡಿನ ವಾಸ ಎಂಗೆಲ್ಸನನ್ನು ಸಂಪೂರ್ಣವಾಗಿ ಸಮತಾವಾದಿಯನ್ನಾಗಿ ರೂಪಿಸಿತು. ತನ್ನ

ಮೇಲೆ ಹೆಗೆಲ್ ಮೊದಲಾದವರಿಂದ ಆದ ಪ್ರಭಾವಗಳು, ಈಗಿನ ತನ್ನ ಅನುಭವಗಳು ಎಲ್ಲದರ ಸಹಾಯದಿಂದ ಎಂಗೆಲ್ಸ್ ತನ್ನ ಗತಿತಾರ್ಕಿಕ ದೃಷ್ಟಿಕೋನವನ್ನು ರೂಪಿಸಿಕೊಂಡ. ೧೮೪೪ರ ಆಗಸ್ಟ್‌ನಲ್ಲಿ ಜರ್ಮನಿಗೆ ಹಿಂದಿರುಗುವಾಗ ಪ್ಯಾರಿಸ್‌ನಲ್ಲಿ ಕಾರ್ಲ್ ಮಾರ್ಕ್ಸ್‌ನನ್ನು ಮತ್ತೆ ಸಂಧಿಸಿದ. ಆಗ ಅವರಿಬ್ಬರೂ ಒಟ್ಟಿಗೆ ಹತ್ತು ದಿನಗಳನ್ನು ಕಳೆದರು. ಸೈದ್ಧಾಂತಿಕವಾಗಿ ಇಬ್ಬರೂ ಒಂದೇ ಪಥದಲ್ಲಿರುವುದನ್ನು ಕಂಡುಕೊಂಡರು. ಅಂದಿನಿಂದ ಎಲ್ಲ ಚಟುವಟಿಕೆಗಳನ್ನೂ ಒಟ್ಟಿಗೆ ಮಾಡಬೇಕೆಂಬ ನಿರ್ಧಾರ ಕೈಗೊಂಡರು. ಇಲ್ಲಿಂದ ಮುಂದೆ ಎಂಗೆಲ್ಸ್‌ನ ಜೀವನ, ಮಾರ್ಕ್ಸ್‌ನ ಜೀವನ ಮತ್ತು ಸಮತಾವಾದಿ ಸಿದ್ಧಾಂತದ ಬೆಳವಣಿಗೆಯ ಚರಿತ್ರೆ ಇವು ಮುಪ್ಪುರಿಗೊಂಡೇ ಬೆಳೆದಿವೆ.

ಜರ್ಮನಿಯ ತತ್ವಶಾಸ್ತ್ರಜ್ಞರಲ್ಲಿ ಯಂಗ್ ಹೆಗೆಲಿಯನ್ನರು ತುಂಬ ಪ್ರಭಾವಶಾಲಿಗಳಾಗಿದ್ದರು. ತಾವು ಕಂಡುಕೊಂಡ ದೃಷ್ಟಿಕೋನವನ್ನು ಜನತೆಯಲ್ಲಿ ಪ್ರಚಾರ ಮಾಡಬೇಕಾದರೆ ಹೆಗೆಲಿಯನ್ನರ ವಿರುದ್ಧ ಹೋರಾಡುವುದು ಅಗತ್ಯವೆಂದು ನಿರ್ಧರಿಸಿಕೊಂಡರು. ಅದರಂತೆ ೧೮೪೫ರಲ್ಲಿ ಮಾರ್ಕ್ಸ್, ಎಂಗೆಲ್ಸ್‌ರ ಮೊದಲ ಗ್ರಂಥ 'ಹೋಲಿ ಫ್ಯಾಮಿಲಿ' ಪ್ರಕಟವಾಯಿತು. ವೈಜ್ಞಾನಿಕ ಸಮತಾವಾದದ ಬೆಳವಣಿಗೆಯಲ್ಲಿ ಈ ಗ್ರಂಥ ಮೊದಲ ಘಟ್ಟವೆನಿಸುತ್ತದೆ. ಇದರಲ್ಲಿ ಯಂಗ್ ಹೆಗೆಲಿಯನ್ನರಲ್ಲದೆ ಅವರ ಮೂಲವಾದ ಹೆಗೆಲನ ಸಿದ್ಧಾಂತವನ್ನೂ ವಿಮರ್ಶೆ ಮಾಡಿ ಮಾರ್ಕ್ಸ್, ಎಂಗೆಲ್ಸರು ಗತಿತಾರ್ಕಿಕ ಸಿದ್ಧಾಂತದ ಬೆಳವಣಿಗೆಗೆ ಹೊಸ ತಿರುವನ್ನು ಕೊಟ್ಟರು. ಇತಿಹಾಸದ ಭೌತವಾದಿ ಚಿಂತನೆ ಇಲ್ಲಿಂದ ಆರಂಭವಾಯಿತು. ಚರಿತ್ರೆಯನ್ನು ನಿರ್ಮಿಸುವುದು ಜನತೆಯೇ, ಚರಿತ್ರೆ ಮುಂದುವರಿದಂತೆ ಸಾಮಾಜಿಕ ಪ್ರಗತಿಯಲ್ಲಿ ಜನತೆಯ ಪಾತ್ರವೂ ಹೆಚ್ಚುತ್ತದೆ ಎಂಬುದನ್ನು ಮೊದಲ ಬಾರಿಗೆ ತೋರಿಸಿಕೊಟ್ಟರು. ಎಲ್ಲ ಘಟನೆಗಳೂ ಸಂಗತಿಗಳೂ ಅವುಗಳ ಒಳಗಿನ ಸಂಬಂಧ ಮತ್ತು ಪರಸ್ಪರ ಅವಲಂಬನೆಯಿಂದ ಬದ್ಧವಾಗಿವೆ, ಎಲ್ಲಕ್ಕೂ ಬೆಳವಣಿಗೆ, ಪರಿವರ್ತನೆ, ಮತ್ತು ಕ್ಷೀಣತೆ ಇದ್ದೇ ಇದೆ, ಪರಸ್ಪರ ವಿರುದ್ಧ ಶಕ್ತಿಗಳ ಘರ್ಷಣೆಯೇ ವಿಕಾಸದ ಮೂಲ ಎಂದೆಲ್ಲ ಹೆಗೆಲ್ ಹೇಳಿದರೂ ಅವನು ಅಧ್ಯಾತ್ಮವಾದಿಯಾಗಿದ್ದ. ಫೇರ್‌ಬ್ಯಾಕ್ ನಿಸರ್ಗದ ಲಕ್ಷಣಗಳನ್ನು ವಿವರಿಸುವಾಗ ಮಾತ್ರ ಭೌತವಾದಿಯಾಗಿದ್ದ. ಹೆಗೆಲ್ಲನ ಗತಿತರ್ಕವನ್ನು ಒಪ್ಪಿಕೊಂಡರೂ ಅವನ ಆಲೋಚನೆಯಲ್ಲಿದ್ದ ಆಧ್ಯಾತ್ಮದ ಆದರ್ಶಗಳನ್ನು ಮಾರ್ಕ್ಸ್, ಎಂಗೆಲ್ಸ್ ತಿರಸ್ಕರಿಸಿದರು. ಚರಿತ್ರೆ, ಸಾಮಾಜಿಕ ಸಂಬಂಧಗಳು, ರಾಜಕೀಯ ವಿಚಾರಗಳು ಎಲ್ಲಕ್ಕೂ ಗತಿತರ್ಕವನ್ನು ಅನ್ವಯಿಸಬೇಕೆಂದು ಇತಿಹಾಸದಲ್ಲಿ ಮೊದಲ ಬಾರಿಗೆ ಹೇಳಿದರು.

ಕೈಗಾರಿಕಾ ಕ್ರಾಂತಿಯ ಕ್ಷೇತ್ರವಾಗಿದ್ದ ಇಂಗ್ಲಂಡಿನಲ್ಲಿದ್ದಷ್ಟು ಕಾಲವೂ ಎಂಗೆಲ್ಸ್ ಕಾರ್ಮಿಕರ ಜೊತೆ ಓಡಾಡುತ್ತಿದ್ದ. ಅವರ ಕಷ್ಟಸುಖಗಳನ್ನು ತುಂಬ ಹತ್ತಿರದ ಬಂಧುವಿನಂತೆ ವಿಚಾರಿಸಿಕೊಳ್ಳುತ್ತಿದ್ದ. ಚಾರ್ಟಿಸ್ಟ್ ಪಂಥದ ಅನೇಕರ ಪರಿಚಯ ಅವನಿಗಿತ್ತು. ಕಾರ್ಮಿಕರ ಕಾಲೋನಿಗಳಿಗೆ ಭೇಟಿ ಕೊಡುವಾಗ, ಅವರೊಡನೆ ಚರ್ಚಿಸುವಾಗ, ಇನ್ನಿತರ ಕೆಲಸಗಳಿಗೆ ಅವನು ಹೋಗುವಾಗ ಮೇರಿ ಬರ್ನ್ಸ್ ಎಂಬ ಪ್ರಗತಿಶೀಲ ಮನೋಭಾವದ ಐರಿಷ್ ಹುಡುಗಿ ಅವನ ಜೊತೆಗಿರುತ್ತಿದ್ದಳು. ಮುಂದೆ ಇವಳೇ ಎಂಗೆಲ್ಸನ ಪತ್ನಿಯಾದಳು.

ಬಾರ್ಮೆನ್ನಿಗೆ ಹಿಂದಿರುಗಿದ ಮೇಲೆ ೧೮೪೫ರಲ್ಲಿ ಎಂಗೆಲ್ಸನ 'ದಿ ಕಂಡೀಷನ್ಸ್ ಆಫ್ ದಿ ವರ್ಕಿಂಗ್ ಕ್ಲಾಸ್ ಇನ್ ಇಂಗ್ಲಂಡ್' ಪ್ರಕಟವಾಯಿತು. ಇದರಲ್ಲಿ ಬಂಡವಾಳಶಾಹಿಯ ಆರ್ಥಿಕ ಬಿಕ್ಕಟ್ಟುಗಳು, ನಿರುದ್ಯೋಗ, ಶೋಷಣೆಗಳು ಮೊದಲ ಬಾರಿಗೆ ವಿಶ್ಲೇಷಿತವಾದವು. ಕಾರ್ಮಿಕರ ಸ್ಥಿತಿಗತಿಗಳನ್ನು ವರ್ಣಿಸಿದ್ದು ಮಾತ್ರವಲ್ಲ, ಪ್ರಥಮವಾಗಿ ಅವರನ್ನು ಮನುಷ್ಯರನ್ನಾಗಿ ಪರಿಗಣಿಸಿ, ಬಂಡವಾಳಶಾಹಿ ದಾಸ್ಯವನ್ನು ಮುರಿಯುವ ಶಕ್ತಿ ಯಾರಿಗಾದರೂ ಇದ್ದರೆ ಅವರಿಗೆ ಮಾತ್ರ ಎಂದು ಎಂಗೆಲ್ಸ್ ಘೋಷಿಸಿದ. ಕೆಲಸಗಾರರು ಎಚ್ಚೆತ್ತುಕೊಳ್ಳುವಂತೆ ಅವರ ಸ್ಥಿತಿಯನ್ನು ಅವರಿಗೆ ಮನದಟ್ಟು ಮಾಡಿಕೊಟ್ಟದ್ದು ಈ ಪುಸ್ತಕದ ಹೆಚ್ಚಳ. ಕಾರ್ಮಿಕರು ಎಲ್ಲರಂತೆ ಅಲ್ಲ, ಪ್ರತ್ಯೇಕ ಆಶಯಗಳನ್ನುಳ್ಳ ಒಂದು

ವರ್ಗ. ದೇಶದ ಬೆಳವಣಿಗೆ ಈ ವರ್ಗವನ್ನು ಅವಲಂಬಿಸಿದೆ ಎಂದು ಸಾರಿದ. ಕೈಗಾರಿಕಾ ಕ್ರಾಂತಿಯ ಆರ್ಥಿಕ ಪರಿಣಾಮಗಳನ್ನು ಗುರುತಿಸಿದವರಲ್ಲಿ ಎಂಗೆಲ್ಸ್ ಮೊದಲಿಗ. ಕಾರ್ಮಿಕ ಸಂಘಗಳು ಮತ್ತು ಮುಷ್ಕರಗಳ ಅಗತ್ಯವನ್ನು ಗುರುತಿಸಿ, ಈ ಆರ್ಥಿಕ ಹೋರಾಟಗಳು ರಾಜಕೀಯ ಚಳುವಳಿಗಳಾಗಿ ಬೆಳೆದು ಸಮತಾವಾದದಲ್ಲಿ ಕೊನೆಗೊಳ್ಳುತ್ತವೆ ಎಂದು ಮೊದಲ ಬಾರಿಗೆ ಹೇಳಿದ್ದು ಇಪ್ಪತ್ತೈದರ ಹರೆಯದ ಎಂಗೆಲ್ಸ್‌ನ ರಾಜಕೀಯ ಪ್ರಜ್ಞೆಯ ಪ್ರಬುದ್ಧತೆಯನ್ನು ಸೂಚಿಸುತ್ತದೆ. ಸಮತಾವಾದವು ವೈಜ್ಞಾನಿಕವಾಗಿ ನಿಖರಗೊಂಡಿರದ ಕಾಲದಲ್ಲಿ ಬಂದ ಈ ಪುಸ್ತಕ ಆ ಸಿದ್ಧಾಂತದ ಶೈಶವದ ದಾಖಲೆಯಷ್ಟೇ ಆಗಿ ನಿಲ್ಲುವುದಿಲ್ಲ, ಕಾರ್ಮಿಕ ವರ್ಗದ ಸ್ಥಿತಿಗತಿಯ ಬಗ್ಗೆ ಅತ್ಯುತ್ತಮ ವಿವರಣೆಯಾಗಿ ಇಂದಿಗೂ ಮಾನ್ಯತೆ ಪಡೆಯುತ್ತದೆ.

ತಂದೆಯಿಂದ ವಿರೋಧ

ಎಂಗೆಲ್ಸ್ ಬಾರ್ಮೆನ್ನಿನ ಸುತ್ತ ಮುತ್ತಲಿನ ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದ. ತಂದೆಯ ಕಿರಿಕಿರಿ ಸದಾ ಅವನ ಮನಸ್ಸನ್ನು ನೋಯಿಸುತ್ತಿತ್ತು. ಮನಸಿನ ನೆಮ್ಮದಿ ಮತ್ತು ತನ್ನ ಉದ್ದೇಶಗಳ ಸಾಧನೆಗಾಗಿ ಅವನು ಬಾರ್ಮೆನ್ ಬಿಟ್ಟು ಮಾರ್ಕ್ಸ್‌ನ ಜತೆ ಇರಲು ಬ್ರೂಸೆಲ್ಸಿಗೆ ಹೊರಟ. ಮಾರ್ಕ್ಸ್‌ನ ಮನೆಯ ಪಕ್ಕದ ಮನೆಯಲ್ಲಿ ವಾಸ ಮಾಡತೊಡಗಿದ. ಅಂದಿನಿಂದ ಅವನ ಕುಟುಂಬದ ಜೊತೆ ನಿಕಟ ಬಾಂಧವ್ಯ ಬೆಳೆಯಿತು. ಎಂಗೆಲ್ಸ್ ಇಲ್ಲಿಗೆ ಬರುವ ಹೊತ್ತಿಗೆ ಮಾರ್ಕ್ಸ್ ತನ್ನ ಚರಿತ್ರೆಯ ವಸ್ತುವಾದಿ ಚಿಂತನೆಯನ್ನು ಸಂಪೂರ್ಣವಾಗಿ ರೂಪಿಸಿಕೊಂಡಿದ್ದ. ಇಬ್ಬರೂ ಸ್ವಲ್ಪ ದಿನಗಳ ಮಟ್ಟಿಗೆ ಮ್ಯಾಂಚೆಸ್ಟರಿಗೆ ಬಂದರು. ಎಲ್ಲ ದೇಶಗಳ ಕ್ರಾಂತಿಕಾರಿಗಳ ಒಂದು ಸಂಘ ಕಟ್ಟುವುದು ಇವರ ಆಶಯವಾಗಿತ್ತು. ಬ್ರೂಸೆಲ್ಸಿಗೆ ಹಿಂತಿರುಗಿದ ಮೇಲೆ ಎಂಗೆಲ್ಸ್ ಸೋಗಿನ ಸಮಾಜವಾದಿಗಳ ಬಣ್ಣವನ್ನು ಬಯಲಿಗೆಳೆಯುವುದರಲ್ಲಿ ನಿರತನಾದ.

ಜರ್ಮನಿಯಲ್ಲಿ ಹೆಗೆಲ್ಲನ ನಂತರದ ತತ್ವಶಾಸ್ತ್ರದ ಬೆಳವಣಿಗೆಯನ್ನು ಮಾರ್ಕ್ಸ್, ಎಂಗೆಲ್ಸ್ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಹೆಗೆಲ್ ನಂತರದವರಾದ ಫೇರ್‌ಬ್ಯಾಕ್, ಬ್ರೂನೋಬಾಯರ್, ಮಾಕ್ಸ್ ಸ್ಟಿರ್‌ನರ್ ಇವರನ್ನು ಉದ್ದೇಶವಾಗಿಟ್ಟುಕೊಂಡು ಇಬ್ಬರೂ ಸೇರಿ 'ದಿ ಜರ್ಮನ್ ಐಡಿಯಾಲಜಿ' ಗ್ರಂಥವನ್ನು ಸಿದ್ಧಪಡಿಸಿದರು. ಮಾರ್ಕ್ಸ್‌ನ ಚರಿತ್ರೆಯ ವಸ್ತುವಾದಿ ಚಿಂತನೆಯನ್ನು ಇಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿತ್ತು.

ಉತ್ಪಾದನಾ ವಿಧಾನವು ಜೀವನದ ಗತಿಯನ್ನು ನಿರ್ಧರಿಸುತ್ತದೆ; ಜನರ ನಡುವಿನ ಸಾಮಾಜಿಕ ಮತ್ತು ರಾಜಕೀಯ ಸಂಬಂಧಗಳನ್ನು ಉತ್ಪಾದನೆಯ ಭೌತಿಕ ಸ್ಥಿತಿಗತಿಗಳು ನಿರ್ಧರಿಸುತ್ತವೆ. ಚಾರಿತ್ರಿಕ ಬೆಳವಣಿಗೆಯ ಘಟ್ಟಗಳಿಗೂ ಉತ್ಪಾದನಾ ಶಕ್ತಿಗಳು ಮತ್ತು ಸಂಬಂಧಗಳು ಇವುಗಳ ನಡುವಿನ ಗತಿತರ್ಕಕ್ಕೂ ಸಂಬಂಧವಿದೆ – ಇವು ಅವರ ಸಿದ್ಧಾಂತದ ಮೂಲಾಂಶಗಳಾದವು. ಬೂರ್ಜ್ವಾ ಸಮಾಜ ಮತ್ತು ಬಂಡವಾಳಶಾಹಿ ಖಾಸಗಿ ಆಸ್ತಿಯ ಬಗ್ಗೆ ಇಲ್ಲಿ ಚಿಂತನೆ ನಡೆಯಿತು. ಕಾರ್ಮಿಕ ಸಮತಾವಾದಿ ಕ್ರಾಂತಿಯು ಚಾರಿತ್ರಿಕವಾಗಿ ಅಗತ್ಯ ಮತ್ತು ಅನಿವಾರ್ಯ ಎಂದು ಮಾರ್ಕ್ಸ್, ಎಂಗೆಲ್ಸ್ ಒತ್ತಿ ಹೇಳಿದರು. ಜಗತ್ತನ್ನು ಸರಿಯಾಗಿ ವಿಶ್ಲೇಷಿಸಬೇಕು. ಆದರೆ ಅಷ್ಟೇ ಮುಖ್ಯವಲ್ಲ, ಜಗತ್ತನ್ನು ಬದಲಾಯಿಸಬೇಕು ಎಂದೂ ಹೇಳಿದರು. ಸಮಾಜವಾದವನ್ನು ಕಾಲ್ಪನಿಕತೆಯಿಂದ ಬಿಡಿಸಿ, ಅದನ್ನೊಂದು ವಿಜ್ಞಾನವನ್ನಾಗಿ ಮಾಡಲು ಭದ್ರವಾದ ಅಸ್ತಿವಾರ ಹಾಕಲು ಇಬ್ಬರೂ ಶ್ರಮಿಸಿದರು.

ಇಷ್ಟೆಲ್ಲ ಶ್ರಮ ವಹಿಸಿ ಈ ಗ್ರಂಥವನ್ನು ಬರೆದರೂ ಇದನ್ನು ಪ್ರಕಟಿಸಲು ಯಾವೊಬ್ಬ ಪ್ರಕಾಶಕನೂ ಮುಂದೆ ಬರಲಿಲ್ಲ. ಇದರ ಒಂದೇ ಒಂದು ಅಧ್ಯಾಯ ಮಾತ್ರ ಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. "ಮನಃಪೂರ್ವಕವಾಗಿ ಇದರ ಹಸ್ತಪ್ರತಿಯನ್ನು ಇಲಿಗಳ ಕಡಿತದ ವಿಮರ್ಶೆಗೆ ಬಿಟ್ಟುಬಿಟ್ಟೆವು. ಏಕೆಂದರೆ ತತ್ವಶಾಸ್ತ್ರದ ಬಗ್ಗೆ ನಮಗೆ ನಾವೇ ಸ್ಪಷ್ಟ ಮಾಡಿಕೊಳ್ಳಬೇಕು ಎಂಬ ನಮ್ಮ ಮುಖ್ಯ ಉದ್ದೇಶ ಈಡೇರಿತ್ತು" ಎಂದು ಮಾರ್ಕ್ಸ್ ಇದರ ಬಗ್ಗೆ ೧೮೫೯ರಲ್ಲಿ ಬರೆದ. ಆದರೆ ಲೇಖಕರ ನಿಧನಾನಂತರ ೧೯೩೨ರಲ್ಲಿ ರಶಿಯದಲ್ಲಿ ಈ ಗ್ರಂಥ ಪ್ರಕಟವಾಯಿತು.

ಕೆಲಸಗಾರರನ್ನು ಹೋರಾಟಕ್ಕೆ ಒಗ್ಗೂಡಿಸುವುದು ಸಿದ್ಧಾಂತವನ್ನು ಬೆಳೆಸುವುದರಷ್ಟೇ ಮುಖ್ಯ ಎಂದು ಮಾರ್ಕ್ಸ್, ಎಂಗೆಲ್ಸ್ ನಂಬಿದ್ದರು. ಕಾರ್ಮಿಕರು ರಾಜಕೀಯ ಪಕ್ಷವನ್ನು ಕಟ್ಟಿಕೊಳ್ಳಬೇಕು ಎಂಬುದು ಅವರ ಆಶಯವಾಗಿತ್ತು. ಆಗ ಕಾರ್ಮಿಕರು ಹೋರಾಡಲು ಆರಂಭಿಸಿದ್ದರೂ ಹೋರಾಟಕ್ಕೆ ನಿಶ್ಚಿತ ಗುರಿಗಳಿರಲಿಲ್ಲ, ತಾತ್ವಿಕ ತಳಹದಿಯಿರಲಿಲ್ಲ. ಇದನ್ನು ನಿವಾರಿಸಲು ಅವರು ಮೊದಲು ಬ್ರೂಸೆಲ್ಸಿನಿಂದಲೇ ಕಾರ್ಯಾರಂಭ ಮಾಡಿದರು. ವಿವಿಧ ಪ್ರಾಂತಗಳ ಪ್ರಗತಿಪರ ಕಾರ್ಮಿಕರೊಂದಿಗೆ ಸಂಪರ್ಕ ಬೆಳೆಸಿದರು. ಇದರ ಮೂಲಕ ಒಂದು ಅಂತಾರಾಷ್ಟ್ರೀಯ ಸಮತಾವಾದಿ ಸಂಘವನ್ನು ಕಟ್ಟುವುದು ಅವರ ಗುರಿಯಾಗಿತ್ತು. ಕೆಲಸಗಾರರನ್ನು ಸಂಘಟಿಸುವುದರ ಜೊತೆಗೆ ಕಾಲ್ಪನಿಕ ಸಮಾಜವಾದಿಗಳ ವಿರುದ್ಧ ಹೋರಾಡುವುದು ಅನಿವಾರ್ಯವಾಗಿತ್ತು. ಬ್ರೂಸೆಲ್ಸ್ ಸಮಿತಿಯ ಆದೇಶದಂತೆ ಎಂಗೆಲ್ಸ್ ೧೮೪೬ರಲ್ಲಿ ಪ್ಯಾರಿಸಿಗೆ ಬಂದು ಅಲ್ಲಿನ ಸೋಗಿನ ಸಮಾಜವಾದಿಗಳ ಬಣ್ಣವನ್ನು ಬಯಲಿಗೆಳೆದು ಅವರ ಹಿಡಿತದಿಂದ ಕಾರ್ಮಿಕರನ್ನು ಬಿಡಿಸಿ, ಸಂಘಟನೆ ಮಾಡಿದನು. ೧೮೪೮ರಲ್ಲಿ ಫ್ರೆಂಚ್ ಸರಕಾರವು ಅವನನ್ನು ಗಡೀಪಾರು ಮಾಡಿದ್ದರಿಂದ ಬ್ರೂಸೆಲ್ಸಿಗೆ ಹಿಂತಿರುಗಬೇಕಾಯಿತು. ಕಾರ್ಮಿಕರ ಪಕ್ಷವನ್ನು ಕಟ್ಟುವ ಉದ್ದೇಶದಿಂದ ಮಾರ್ಕ್ಸ್, ಎಂಗೆಲ್ಸ್‌ರು ಲಂಡನ್ನಿನ 'ಲೀಗ್ ಆಫ್ ದಿ ಜಸ್ಟ್' ಸಂಘಕ್ಕೆ ಸೇರಿದ್ದರು. ೧೮೪೭ ರ ಜೂನಿನಲ್ಲಿ ಲಂಡನ್ನಿನಲ್ಲಿ ನಡೆದ ಇದರ ಮೊದಲ ಅಧಿವೇಶನದಿಂದ 'ಕಮ್ಯೂನಿಸ್ಟ್ ಲೀಗ್' ಆರಂಭವಾಯಿತು. ಇಬ್ಬರೂ ಸೇರಿ ಲೀಗಿನ ಘೋಷಣೆಯನ್ನು "ಎಲ್ಲ ದೇಶಗಳ ಕಾರ್ಮಿಕರೇ, ಒಗ್ಗೂಡಿರಿ" ಎಂದು ಬದಲಾಯಿಸಿದರು. ಲೀಗಿನ ನಿಬಂಧನೆಗಳನ್ನು ಸಿದ್ಧಪಡಿಸುವ ಕೆಲಸವನ್ನು ಎಂಗೆಲ್ಸನಿಗೆ ವಹಿಸಲಾಯಿತು. ಕಮ್ಯೂನಿಸ್ಟ್ ಲೀಗಿನ ಸ್ಥಾಪನೆಯಿಂದ ಕಾರ್ಮಿಕ ಪಕ್ಷ ಕಟ್ಟಬೇಕೆಂಬ ಉದ್ದೇಶದ ಮೊದಲ ಭಾಗ ಈಡೇರಿದಂತಾಯಿತು. ಇದಲ್ಲದೆ ತಮ್ಮ ಸಿದ್ಧಾಂತವನ್ನು ಪ್ರಸಾರ ಮಾಡುವುದಕ್ಕಾಗಿ ಜರ್ಮನ್ ಪತ್ರಿಕೆಯೊಂದಕ್ಕೆ ಇಬ್ಬರೂ ಸಹಸಂಪಾದಕರಾದರು.

ಮ್ಯಾನಿಫೆಸ್ಟೋ

ಪ್ಯಾರಿಸಿನ ಜಿಲ್ಲಾ ಸಮಿತಿಯ ಆದೇಶದಂತೆ ಎಂಗೆಲ್ಸ್ 'ಪ್ರಿನ್ಸಿಪಲ್ಸ್ ಆಫ್ ಕಮ್ಯುನಿಸಂ' ಸಿದ್ಧಪಡಿಸಿದನು. ಮುಂದೆ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ'ಗೆ ಇದೇ ಆಧಾರವಾಯಿತು. ಇದನ್ನು ಲೀಗಿನ ಎರಡನೇ ಅಧಿವೇಶನದಲ್ಲಿ ಒಪ್ಪಿಕೊಳ್ಳಲಾಯಿತು. ಈ ಅಧಿವೇಶನದಲ್ಲೇ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ'ವನ್ನು ಸಿದ್ಧಪಡಿಸಲು ಮಾರ್ಕ್ಸ್ ಎಂಗೆಲ್ಸರಿಗೆ ಒಪ್ಪಿಸಲಾಯಿತು. ಅಧಿವೇಶನದ ನಂತರ ಇಬ್ಬರೂ ಬ್ರೂಸೆಲ್ಸಿಗೆ ಬಂದು ಮ್ಯಾನಿಫೆಸ್ಟೋ ಬರೆಯಲು ಉದ್ಯುಕ್ತರಾದರು. ಆದರೆ ಶೀಘ್ರದಲ್ಲೇ ಎಂಗೆಲ್ಸ್ ಪ್ಯಾರಿಸಿಗೆ ಹೋಗಬೇಕಾಯಿತು. ೧೮೪೮ರ ಹೊತ್ತಿಗೆ ಮಾರ್ಕ್ಸ್ ಇದನ್ನು ಸಿದ್ಧಪಡಿಸಿ, ಲಂಡನ್ನಿಗೆ ಕಳುಹಿಸಿದಾಗ ಲೀಗ್ ಇದಕ್ಕೆ ಏಕಕಂಠದಿಂದ ಒಪ್ಪಿಗೆಯಿತ್ತು, ಅಚ್ಚು ಮಾಡಿಸಿತು.

ಮ್ಯಾನಿಫೆಸ್ಟೋ ಕಾರ್ಮಿಕರ ಹೋರಾಟಕ್ಕೆ ಒಂದು ತಾತ್ವಿಕ ತಳಹದಿಯನ್ನು ಕೊಟ್ಟಿತು, ಅದರ ಗುರಿಗಳನ್ನು ವಿವರಿಸಿತು. ವರ್ಗ ಹೋರಾಟ, ಚರಿತ್ರೆಯ ಬೆಳವಣಿಗೆ, ಉತ್ಪಾದನೆ, ಸಮಾಜದ ತಳಹದಿ ಮತ್ತು ಮೇಲುರಚನೆ ಈ ಎಲ್ಲಾ ವಿಷಯಗಳನ್ನು ಅದು ವಿಶದಪಡಿಸಿತು. ಹೊಸ ಜಗತ್ತಿನ ಕಲ್ಪನೆಯನ್ನು ತೆರೆದು ತೋರಿಸಿತು. ಬಂಡವಾಳಶಾಹಿ ವೈಷಮ್ಯಗಳು ಮತ್ತು ಸಮತಾವಾದದ ಲಕ್ಷಣಗಳನ್ನು ಇಲ್ಲಿ ವಿವರಿಸಲಾಯಿತು. ಒಟ್ಟಾರೆ ಸಮತಾವಾದದ ಮುಖ್ಯ ವಿಷಯಗಳ ಬಗ್ಗೆ ಒಂದು ಕೈಪಿಡಿಯಾಗಿ ಮ್ಯಾನಿಫೆಸ್ಟೋ ಹೊರಬಂದಿತು.

'ಮ್ಯಾನಿಫೆಸ್ಟೋ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ'ಯ ಪ್ರಕಟಣೆಯಿಂದ ಸಮತಾವಾದಿ ಚಳುವಳಿಗೆ ಹೊಸ ಆಯಾಮ ದೊರಕಿತು. ತಾತ್ವಿಕ ಜಗತ್ತಿನಲ್ಲಿ ಸಮತಾವಾದವು ಭದ್ರವಾಗಿ ತಳವೂರಿತು. ಅನೇಕ ಭಾಷೆಗಳಿಗೆ ಇದು ಅನುವಾದಗೊಂಡಿತು. ಮುಂದಿನ ಆವೃತ್ತಿಯೊಂದರಲ್ಲಿ ಎಂಗೆಲ್ಸ್ ಹೇಳುವಂತೆ ಮ್ಯಾನಿಫೆಸ್ಟೋದ ಚರಿತ್ರೆ ಕಾರ್ಮಿಕ ಚಳುವಳಿಯ ಚರಿತ್ರೆಯೂ ಹೌದು. ಇಂದಿಗೂ ಅದು ಕಾರ್ಮಿಕರಿಗೆ ಉದ್ದೀಪಕ ಶಕ್ತಿಯಾಗಿ ನಿಲ್ಲುತ್ತದೆ.

ಮ್ಯಾನಿಫೆಸ್ಟೋ ಬಂದಾಗ ಫ್ರೆಂಚ್ ಕ್ರಾಂತಿಯಾಗುತ್ತಿತ್ತು. ಮಾರ್ಕ್ಸನು ಬ್ರೂಸೆಲ್ಸಿನಿಂದ ಉಚ್ಚಾಟನೆಗೊಂಡು ಪ್ಯಾರಿಸಿಗೆ ಬಂದು ನೆಲಸಿದ. ಸ್ವಲ್ಪ ಕಾಲದ ನಂತರ ಎಂಗೆಲ್ಸ್ ಅಲ್ಲಿಗೆ ಭೇಟಿ ನೀಡಿದ. ಇಬ್ಬರೂ ಸೇರಿ 'ಡಿಮಾಂಡ್ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ ಇನ್ ಜರ್ಮನಿ' ರಚಿಸಿದರು. ಮ್ಯಾನಿಫೆಸ್ಟೋದಲ್ಲಿದ್ದ ವಿಷಯಗಳನ್ನೇ ಜರ್ಮನಿಯ ಸ್ಥಿತಿಗತಿಗೆ ಅಳವಡಿಸಿ ಇದನ್ನು ರೂಪಿಸಲಾಗಿತ್ತು. ಸಣ್ಣ ಪುಸ್ತಿಕೆಯಾಗಿ ಇದನ್ನು ಪ್ಯಾರಿಸಿನಲ್ಲಿ ಪ್ರಕಟಿಸಲಾಯಿತು. ಜರ್ಮನಿಗೆ ಹಿಂತಿರುಗಿದ ಮೇಲೆ ಇಬ್ಬರೂ ಪುನಃ ಪತ್ರಿಕೆಯೊಂದನ್ನು ಸ್ಥಾಪಿಸಿದರು. ಅದರ ಪ್ರಕಟಣೆಯಲ್ಲಿ ಎಂಗೆಲ್ಸ್ ಪ್ರಮುಖ ಪಾತ್ರ ವಹಿಸಿದನು. ಅವನ ಸಂಪಾದಕೀಯಗಳು ಮತ್ತು ಇತರ ಚಟುವಟಿಕೆಗಳಿಂದ ಸಿಟ್ಟಾದ ಸರ್ಕಾರವು ಅವನ ಬಂಧನಕ್ಕೆ ಹವಣಿಸಿತು. ಇದನ್ನರಿತ ಎಂಗೆಲ್ಸ್ ತನ್ನ ತಾತನ ಹಳೆ ಮನೆಯಲ್ಲಿ ತಲೆಮರೆಸಿಕೊಂಡ. ಮಗನ ಕಾರ್ಯಗಳಿಂದ ತಂದೆಗೆ ಭಯಂಕರ ಕೋಪ ಬಂದಿತ್ತು. ತಾಯಿ ಇದನ್ನು ನಿವಾರಿಸಲು ಯತ್ನಿಸುತ್ತಿದ್ದಳು. ಬಂಧನ ಹತ್ತಿರವಾದಾಗ ಎಂಗೆಲ್ಸ್ ಬಾರ್ಮೆನ್ ಬಿಟ್ಟು ಬೆಲ್ಜಿಯಂಗೆ ಹೊರಟು ಹೋದ. ಬೆಲ್ಜಿಯಂನಿಂದ ಪುನಃ ಬಾರ್ಮೆನ್ನಿಗೆ ಬಂದಾಗ ಅಲ್ಲಿ ವಾಸ ಮಾಡಲು ಅನುಮತಿಯನ್ನು ನಿರಾಕರಿಸಲಾಯಿತು. ಇದರಿಂದ ಎಂಗೆಲ್ಸ್ ಪ್ಯಾರಿಸಿಗೇ ಹೋಗಬೇಕಾಯಿತು. ಫ್ರಾನ್ಸ್ ದೇಶವನ್ನು ಸುತ್ತಿ ಸ್ವಿಜರ್ಲಂಡಿಗೆ ಬಂದು ನೆಲೆಸಿದ. ಜರ್ಮನಿಗೆ ಬರಲು ಅವನ ಮನಸ್ಸು ತವಕಿಸುತ್ತಿತ್ತು. ಸ್ವಲ್ಪ ಕಾಲದ ನಂತರ ಇದು ಕೈಗೂಡಿತು.

೧೮೪೯ರ ಹೊತ್ತಿಗೆ ಮಾರ್ಕ್ಸ್, ಎಂಗೆಲ್ಸ್ ಇಬ್ಬರೂ ಲಂಡನ್ನಿಗೆ ಬಂದು ನೆಲೆಸಿದರು. ಅಲ್ಲಿನ ಲೀಗ್ ಚಟುವಟಿಕೆಗಳನ್ನು ಚುರುಕುಗೊಳಿಸುವುದು ಅವರ ಮುಖ್ಯ ಕೆಲಸವಾಯಿತು. ನಿಂತು ಹೋಗಿದ್ದ ಪತ್ರಿಕೆಯನ್ನು ಮತ್ತೆ ಪ್ರಾರಂಭಿಸಿದರು. ಈ ವೇಳೆಗೆ ಎಂಗೆಲ್ಸ್ ತನ್ನ 'ದಿ ಪೆಸೆಂಟ್ ವಾರ್ ಇನ್ ಜರ್ಮನಿ' ಗ್ರಂಥವನ್ನು ರಚಿಸಿದ. ಹಿಂದಿನ ಎಲ್ಲ ರೈತ ದಂಗೆಗಳ ವಿಮರ್ಶೆ ನೀಡಿದ. ಜರ್ಮನಿಯ ಚರಿತ್ರೆಗೆ ಚಾರಿತ್ರಿಕ ಭೌತವಾದವನ್ನು ಹೇಗೆ ಅಳವಡಿಸುವುದೆಂಬುದನ್ನು ಇದರಲ್ಲಿ ತೋರಿಸಿಕೊಟ್ಟ.

ಕಮ್ಯೂನಿಸ್ಟ್ ಲೀಗನ್ನು ಬಲಪಡಿಸಲು ಮಾರ್ಕ್ಸ್, ಎಂಗೆಲ್ಸ್ ಎಷ್ಟೇ ಶ್ರಮಿಸಿದರೂ ವಿರೋಧಿ ಶಕ್ತಿಗಳ ಪ್ರಾಬಲ್ಯ ಹೆಚ್ಚಾಯಿತು. ೧೮೫೨ರಲ್ಲಿ ಅದರ ವಿಸರ್ಜನೆಯಾಯಿತು. ಅಲ್ಲದೆ ಆರ್ಥಿಕ ಮುಗ್ಗಟ್ಟು ಅವರ ಜೀವನವನ್ನು ದುರ್ಭರವನ್ನಾಗಿ ಮಾಡಿತ್ತು. ಇದಕ್ಕೆ ಪರಿಹಾರವಾಗಿ ಎಂಗೆಲ್ಸ್ ಮತ್ತೆ ಮ್ಯಾಂಚೆಸ್ಟರಿನ ತನ್ನ ತಂದೆಯ ಒಡೆತನವಿದ್ದ ಕಚೇರಿಗೆ ತಾತ್ಕಾಲಿಕವಾಗಿ ಕೆಲಸ ಮಾಡಲು ಹಿಂತಿರುಗಿದ. ಇದರಿಂದ ಮಾರ್ಕ್ಸನ ಕುಟುಂಬವನ್ನು ಸಾಕುವುದೂ ಸುಲಭವಾಯಿತು.

೧೮೫೨ರಲ್ಲಿ ಮಾರ್ಕ್ಸನ ಕೋರಿಕೆಯ ಮೇರೆಗೆ ಎಂಗೆಲ್ಸ್ 'ರೆವಲ್ಯೂಷನ್ ಆ್ಯಂಡ್ ಕೌಂಟರ್ ರೆವಲ್ಯೂಷನ್ ಇನ್ ಜರ್ಮನಿ' ಮಾಲೆಯ ಲೇಖನಗಳನ್ನು ಬರೆದ. ಇದು ಜರ್ಮನ್ ಕ್ರಾಂತಿಯ ಮೊದಲ ಮಾರ್ಕ್ಸ್‌ವಾದಿ ಅಧ್ಯಯನ. ಮಾರ್ಕ್ಸನ 'ಕ್ಲಾಸ್ ಸ್ಟ್ರಗಲ್ಸ್ ಇನ್ ಫ್ರಾನ್ಸ್' ಮತ್ತು 'ದಿ ಏಟೀನ್ತ್ ಬ್ರುಮ್ಯೆರ್ ಆಫ್ ಲೂಯಿ ಬೋನಾಪಾರ್ಟ್' ಇವೆರಡು ಮತ್ತು ಎಂಗೆಲ್ಸನ ಈ ಅಧ್ಯಯನ ಮೂರೂ ಸೇರಿ ಯೂರೋಪಿನ ೧೮೪೮–೪೯ರ ಕ್ರಾಂತಿಗಳ ಒಂದು ಸಂಪೂರ್ಣ ವಿಶ್ಲೇಷಣೆ ನಡೆಸಿದಂತಾಯಿತು. ೧೮೫೭–೫೯ರ ಭಾರತದ ರಾಷ್ಟ್ರೀಯ ದಂಗೆಯ ಬಗ್ಗೆ ಎಂಗೆಲ್ಸ್ ತುಂಬಾ ಸಹಾನುಭೂತಿಯಿಂದ ಅನೇಕ ಲೇಖನಗಳನ್ನು ಬರೆದ. ಆಫ್ಘಾನಿಸ್ತಾನ, ಪರ್ಷಿಯಗಳ ವಿದ್ಯಮಾನಗಳ ಬಗ್ಗೆಯೂ ಬರೆದ. ೧೮೫೯ರಲ್ಲಿ ಎಂಗೆಲ್ಸ್ ಇಟಲಿಯ ಬಿಕ್ಕಟ್ಟಿನ ಬಗ್ಗೆ ಒಂದು ಸಣ್ಣ ಪುಸ್ತಿಕೆಯನ್ನು ಬರೆದ. ಅಲ್ಲಿನ ಪತ್ರಿಕೆಗೆ ಬರೆದ ಲೇಖನಗಳಲ್ಲಿ ಇಟಲಿಯ ಏಕೀಕರಣದ ಪ್ರಸ್ತಾಪ ಇದ್ದೇ ಇರುತ್ತಿತ್ತು. ಮಾರ್ಕ್ಸ್, ಎಂಗೆಲ್ಸ್ ಇಬ್ಬರೂ ಬ್ರಿಟನ್ ಮತ್ತಿತರ ದೇಶಗಳ ವಸಾಹತುಶಾಹಿ ನೀತಿಯನು ದ್ವೇಷಿಸಿ ಖಂಡಿಸುತ್ತಿದ್ದರು.

ಮ್ಯಾಂಚೆಸ್ಟರಿನಲ್ಲಿ ಕಳೆದ ದಿನಗಳು ಎಂಗೆಲ್ಸನ ಜೀವನದಲ್ಲಿ ತುಂಬ ಗಮನಾರ್ಹವಾದವು

ಗಣಿತದಲ್ಲಿ ಮಾರ್ಕ್ಸ್ ಪ್ರವೀಣನಾಗಿದ್ದ. ಎಂಗೆಲ್ಸ್ ಅದರಲ್ಲಿ ಪಾಂಡಿತ್ಯ ಪಡೆಯಲು ಅನೇಕ ವರ್ಷಗಳನ್ನು ಸವೆಸಿದ. ಅನೇಕ ಭಾಷೆಗಳನ್ನು ಆಳವಾಗಿ ಅಭ್ಯಾಸ ಮಾಡಿದ. ಇತಿಹಾಸ ಅವನ ಗಮನವನ್ನು ಸೆಳೆಯಿತು. ಇದಲ್ಲದೆ ಭೌತಶಾಸ್ತ್ರ, ಶರೀರರಚನಾ ಶಾಸ್ತ್ರಗಳನ್ನೂ ತುಂಬ ಶ್ರದ್ಧೆಯಿಂದ ಓದಿದ. ಸಮಕಾಲೀನ ವೈಜ್ಞಾನಿಕ ಶೋಧನೆಗಳನ್ನು ಎಂಗೆಲ್ಸ್ ಬೆರಗಿನಿಂದ ಸ್ವಾಗತಿಸುತ್ತಿದ್ದ, ಅದರ ಬಗ್ಗೆ ತಿಳಿಯುತ್ತಿದ್ದ. ಸೈನ್ಯಶಾಸ್ತ್ರವು ಅವನ ಅಧ್ಯಯನದಿಂದ ಹೊರತಾಗಿರಲಿಲ್ಲ. ಯುದ್ಧದ ತಂತ್ರಗಳ ಬಗ್ಗೆ ಎಂಗೆಲ್ಸ್ ಅಧಿಕೃತವಾಗಿ ಬರೆಯಬಲ್ಲವನೆಂಬುಪುದಕ್ಕೆ ಸಾಕ್ಷಿಯಾಗಿ ನ್ಯೂ ಅಮೇರಿಕನ್ ವಿಶ್ವಕೋಶದ ಲೇಖನಗಳನ್ನು ಗಮನಿಸಬಹುದು.

೧೮೬೦ರಲ್ಲಿ ಎಂಗೆಲ್ಸನ ತಂದೆ ನಿಧನ ಹೊಂದಿದ. ೧೮೬೩ರಲ್ಲಿ ಅವನ ಪತ್ನಿ ಮೇರಿ ಬರ್ನ್ಸ್ ಆಕಸ್ಮಾತ್ತಾಗಿ ಸತ್ತಳು. ೧೮೬೪ರಲ್ಲಿ ಅವನ ಜೀವದ ಗೆಳೆಯ ವಿಲ್ಹೆಮ್ ವುಲ್ಫ್ ಸತ್ತ. (ಮಾರ್ಕ್ಸ್‌ನ 'ಕ್ಯಾಪಿಟಲ್'ನ ಮೊದಲ ಸಂಪುಟ ಇವನ ನೆನಪಿಗೆ ಅರ್ಪಿತವಾಗಿದೆ) ಈ ಎಲ್ಲ ನೋವುಗಳ ನಡುವೆಯೂ ಕಾರ್ಮಿಕ ಚಳುವಳಿಗಳು ಮತ್ತು ಗ್ರಂಥ ರಚನೆ ಅವನನ್ನು ಕೈ ಬೀಸಿ ಕರೆಯುತ್ತಿದ್ದವು. ಮುಂದೆ ಮೇರಿಯ ತಂಗಿ ಲಿಡಿಯಾ ಅವನ ಪತ್ನಿಯಾದಳು (೧೮೭೮ರಲ್ಲಿ ಇವಳೂ ನಿಧನಳಾದಳು). ೧೮೬೯ರಲ್ಲಿ ಲಂಡನ್ನಿನ ಸಂಸ್ಥೆಯ ಒಪ್ಪಂದ ಮುಗಿದು ಎಂಗೆಲ್ಸನ ಪಾಲಿನ ಆಸ್ತಿ ಅವನ ಕೈ ಸೇರಿತು. ನಂತರ ಅವನ ಇಡೀ ಜೀವನ ಚಳುವಳಿಗೆ ಮೀಸಲಾಯಿತು.

ಕಮ್ಯೂನಿಸ್ಟ್ ಲೀಗಿನ ವಿಸರ್ಜನೆಯಾದ ನಂತರ ಮತ್ತೊಂದು ಅಂತಾರಾಷ್ಟ್ರೀಯ ಕಾರ್ಮಿಕ ಪಕ್ಷವನ್ನು ಕಟ್ಟಲು ಮಾರ್ಕ್ಸ್, ಎಂಗೆಲ್ಸ್ ಯೋಚಿಸಿದರು. ಅವರ ಸಿದ್ಧಾಂತಗಳ ಪ್ರಯೋಗಕ್ಕೆ ಇದು ಅಗತ್ಯವಾಗಿತ್ತು. ಈ ಅಂತಾರಾಷ್ಟ್ರೀಯ ಸಂಘದಲ್ಲಿ ಅನೇಕ ಕಾರ್ಮಿಕ ಸಂಘಗಳು ಸೇರಿಕೊಂಡವು. ಮಾರ್ಕ್ಸ್ ಇದರ ಉದ್ಘಾಟನಾ ಭಾಷಣದಲ್ಲಿ ಎಲ್ಲ ದೇಶಗಳ ಕಾರ್ಮಿಕರ ಐಕ್ಯವನ್ನು ಒತ್ತಿ ಹೇಳಿದ. ಆದರೆ ಇದೂ ಕೂಡ ೧೮೭೬ರಲ್ಲಿ ವಿಸರ್ಜಿತವಾಯಿತು.

ಕ್ಯಾಪಿಟಲ್ ಮತ್ತು ಎಂಗೆಲ್ಸ್

ಚಾರಿತ್ರಿಕ ಭೌತವಾದದ ಸಿದ್ಧಾಂತವನ್ನು ಪ್ರತಿಪಾದಿಸಿದ ಮಾರ್ಕ್ಸ್ ತನ್ನ ಜೀವನದ ಇನ್ನೊಂದು ಮಹತ್ತರ ಸಾಧನೆಯಾದ ಹೆಚ್ಚುವರಿ ಮೌಲ್ಯದ ಸಿದ್ಧಾಂತವನ್ನು ಪೂರ್ತಿಯಾಗಿ ರೂಪಿಸಿಕೊಂಡು ತನ್ನ ಮೇರುಕೃತಿ 'ಕ್ಯಾಪಿಟಲ್' ಅನ್ನು ಬರೆಯಲಾರಂಭಿಸಿದ್ದ. ಎಂಗೆಲ್ಸ್ ಅದಕ್ಕೆ ಎಷ್ಟು ಸಾಧ್ಯವೋ ಅಷ್ಟು ವಿಧದಲ್ಲಿ ಸಹಾಯ ಮಾಡಿದ. ಆದ್ದರಿಂದಲೇ ಭೌತವಾದದ ಬಗ್ಗೆ ಹೇಳುವಾಗ ಇಬ್ಬರ ಹೆಸರೂ ಜೊತೆ ಜೊತೆಯಾಗಿಯೇ ಬರುತ್ತದೆ. ಗ್ರಂಥದ ಪ್ರತಿ ಮುಖ್ಯ ವಿಷಯದ ಬಗ್ಗೆಯೂ ಮಾರ್ಕ್ಸ್ ಇವನ ಸಲಹೆ ಪಡೆಯುತ್ತಿದ್ದ. ಗ್ರಂಥದ ಹಸ್ತಪ್ರತಿಯನ್ನು ಅಚ್ಚಿಗೆ ಕಳುಹಿಸಿದಾಗ ಎಂಗೆಲ್ಸ್ ತನ್ನ ಹೆಗಲ ಮೇಲಿನ ಭಾರ ಇಳಿಯಿತು ಎಂದ. ಅಚ್ಚಾದ ಕರಡುಗಳನ್ನು ಇಬ್ಬರೂ ನೋಡುತ್ತಿದ್ದರು. ಪ್ರಥಮ ಸಂಪುಟದ ಕರಡಿನ ಕಡೆಯ ಪ್ರತಿಯನ್ನು ಮ್ಯಾಂಚೆಸ್ಟರಿನಲ್ಲಿದ್ದ ಎಂಗೆಲ್ಸನಿಗೆ ಕಳುಹಿಸುತ್ತಾ ಮಾರ್ಕ್ಸ್ ಹೀಗೆ ಕಾಗದ ಬರೆದ: "ಈ ಸಂಪುಟ ಮುಗಿಯಿತು. ಇದು ಸಾಧ್ಯವಾದುದು ನಿನ್ನಿಂದಲೇ. ನಿನ್ನ ತ್ಯಾಗವಿಲ್ಲದಿದ್ದರೆ ನಾನು ಇಷ್ಟು ಕೆಲಸವನ್ನು ಮಾಡಲು ಸಾಧ್ಯವಾಗುತ್ತಲೇ ಇರಲಿಲ್ಲ".

'ಕ್ಯಾಪಿಟಲ್'ನ ಮೊದಲ ಸಂಪುಟ ೧೮೬೭ರಲ್ಲಿ ಹೊರಬಿದ್ದಾಗ ಬೂರ್ಜ್ವಾ ವಿದ್ವಾಂಸರು ಅದರ ಬಗ್ಗೆ ಉದ್ದೇಶಪೂರ್ವಕ ಮೌನ ತಳೆದರು. ಎಂಗೆಲ್ಸ್ ಈ ಪಿತೂರಿಯ ವಿರುದ್ಧ ಸಮರ ಹೂಡಿದ. ತನಗೆ ಸಾಧ್ಯವಾದಷ್ಟು ರೀತಿಯಲ್ಲಿ 'ಕ್ಯಾಪಿಟಲ್' ಕುರಿತು ಪ್ರಚಾರ ನಡೆಸಿದ. ಈ ಗ್ರಂಥದ ಅತ್ಯುತ್ತಮ ವಿಮರ್ಶೆಗಳು ಅವನ ಲೇಖನಿಯಿಂದ ಹೊರಬಿದ್ದವು. ಇದರ ಸಣ್ಣ ಸಂಗ್ರಹ ತರಲು ಕೂಡ ಯೋಚಿಸಿದ್ದ. ಇದು ಸಾಧ್ಯವಾಗಲೇ ಇಲ್ಲ. ಆದರೆ 'ಕ್ಯಾಪಿಟಲ್'ನ ಸಿದ್ಧಾಂತ ದಿಕ್ಕು ದಿಕ್ಕುಗಳಿಗೆ ಹರಡಲು ಆರಂಭವಾಯಿತು, ಇದರ ಸೂತ್ರವನ್ನು ಎಂಗೆಲ್ಸನೇ ವಹಿಸಿದ್ದ. 'ಕ್ಯಾಪಿಟಲ್' ಬಗ್ಗೆ ಬಂದ ವಿಮರ್ಶೆಗಳನ್ನೆಲ್ಲ ಎಂಗೆಲ್ಸ್ ಪರಿಶೀಲಿಸಿ ಪ್ರತಿ

ಕ್ರಿಯಾತ್ಮಕ ಲೇಖನಗಳನ್ನು ಬರೆಯುತ್ತಿದ್ದ. ಎಲ್ಲಾ ವಾದಗಳನ್ನು ಖಂಡಿಸಿ, ಆರ್ಥಿಕ ಲೋಕದಲ್ಲಿ ಈ ಗ್ರಂಥಕ್ಕೆ ಸಿಗಬೇಕಾದ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ಎಂಗೆಲ್ಸನಿಗೆ ಸೇರುತ್ತದೆ. ಈ ಭೂಮಿಯ ಮೇಲೆ ಬಂಡವಾಳಗಾರರು ಮತ್ತು ಕೆಲಸಗಾರರು ಇರುವ ತನಕ, ಕೆಲಸಗಾರರಿಗೆ ಇದರಷ್ಟು ಮುಖ್ಯವಾದ ಗ್ರಂಥ ಇನ್ನೊಂದಿಲ್ಲ ಎಂದು ಸಾರಿ ಅದರ ಹೆಗ್ಗಳಿಕೆಯನ್ನು ಕಾರ್ಮಿಕ ಜಗತ್ತಿನಲ್ಲಿ ಎತ್ತಿ ಹಿಡಿದ. 'ಕ್ಯಾಪಿಟಲ್'ನ ಎರಡು ಮತ್ತು ಮೂರನೇ ಸಂಪುಟದ ಟಿಪ್ಪಣಿಗಳನ್ನು ಮಾರ್ಕ್ಸ್ ಸಿದ್ಧಪಡಿಸಿದ. ಅವನ ಮರಣಾನಂತರ ಎಂಗೆಲ್ಸ ಇವುಗಳನ್ನು ಅಚ್ಚಿಗೆ ಸಿದ್ಧಪಡಿಸುವ ಭಾರ ಹೊತ್ತುಕೊಂಡ. ಮೊದಲ ಸಂಪುಟದ ಮೂರನೇ ಮತ್ತು ನಾಲ್ಕನೇ ಮುದ್ರಣವನ್ನೂ ಅವನೇ ನಿರ್ವಹಿಸಿದ. ನಾಲ್ಕನೇ ಸಂಪುಟ ಎಂಗೆಲ್ಸನ ಮರಣಾನಂತರ ೧೯೦೫ರಲ್ಲಿ ಪ್ರಕಟವಾಯಿತು. ಎರಡು ಮತ್ತು ಮೂರನೇ ಸಂಪುಟಗಳು ಮಾರ್ಕ್ಸ್, ಎಂಗೆಲ್ಸ್ ಇಬ್ಬರದೂ ಕೃತಿಗಳು ಎಂದು ಲೆನಿನ್ ಹೇಳಿ 'ಕ್ಯಾಪಿಟಲ್' ನಿರ್ಮಾಣದಲ್ಲಿ ಎಂಗೆಲ್ಸನ ಪಾತ್ರವನ್ನು ಸರಿಯಾಗಿ ಗುರುತಿಸಿದ್ದಾನೆ.

ಮಾರ್ಕ್ಸನು ತನ್ನ ಗ್ರಂಥಕ್ಕೆ ಸಂಬಂಧಿಸಿದ ಅಧ್ಯಯನದಲ್ಲಿ ಮುಳುಗಿದ್ದಾಗ ಎಂಗೆಲ್ಸ್ ಸುತ್ತಮುತ್ತಲಿನ ಆಗು ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ. ಸಮಕಾಲೀನ ವೈಜ್ಞಾನಿಕ ಶೋಧನೆಗಳ ಬಗೆ ಅವನಿಗೆ ಕುತೂಹಲವಿತ್ತು. ಅವನೇ ಹೇಳುವಂತೆ, ಪ್ರಕೃತಿಯು ಭೌತಿಕ ಮತ್ತು ಗತಿತಾರ್ಕಿಕ ಎರಡೂ ಆಗಿರುವುದರಿಂದ ಗಣಿತ ಮತ್ತು ವಿಜ್ಞಾನಗಳ ತಿಳುವಳಿಕೆ ಅವಶ್ಯಕ, ಭೌತವಾದಕ್ಕೆ ಗತಿತಾರ್ಕಿಕ ರೂಪ ಬರಬೇಕಾದರೆ ಸಮಕಾಲೀನ ವಿಜ್ಞಾನದ ತಿಳುವಳಿಕೆ ಬೇಕೇ ಬೇಕು; ಪ್ರಕೃತಿ ವಿಜ್ಞಾನದ ಬೆಳವಣಿಗೆಯನ್ನು ನಿರ್ಧರಿಸುವುದು ಉತ್ಪಾದನೆ. ಇತಿಹಾಸದಲ್ಲೇ ಮೊದಲ ಬಾರಿಗೆ ಎಂಗೆಲ್ಸ್ ತತ್ವಶಾಸ್ತ್ರಕ್ಕೂ ವಿಜ್ಞಾನಕ್ಕೂ ಇರುವ ಸಂಬಂಧ ಗುರುತಿಸಿದ. ವಿಜ್ಞಾನ ತನಗೆ ತಾನೇ ಗತಿತರ್ಕದ ಕಡೆಗೆ ತಿರುಗುತ್ತದೆ, ಆದ್ದರಿಂದ ವಿಜ್ಞಾನಿಗಳು ಪ್ರಜ್ಞಾಪೂರ್ವಕವಾಗಿ ಗತಿತಾರ್ಕಿಕ ವಿಧಾನವನ್ನು ಅನುಸರಿಸಬೇಕು ಎಂಬ ಎಂಗೆಲ್ಸನ ಕರೆ ಅವನು ತತ್ವಶಾಸ್ತ್ರಜ್ಞ, ಆರ್ಥಿಕತಜ್ಞನಷ್ಟೇ ಅಲ್ಲ, ಮೂಲಭೂತವಾಗಿ ವಿಜ್ಞಾನಿಯೂ ಆಗಿದ್ದನೆಂಬುದನ್ನು ತೋರಿಸುತ್ತದೆ.

೧೮೭೨–೭೩ರಲ್ಲಿ ಎಂಗೆಲ್ಸನ 'ದಿ ಹೌಸಿಂಗ್ ಕ್ವೆಶ್ಚನ್' ಪ್ರಕಟವಾಯಿತು. ಪ್ರೌಧಾನ್ ಮತ್ತಿತರರ ತತ್ವಗಳ ವಿಮರ್ಶೆ ಇದು. ಕಾರ್ಮಿಕ ಚಳುವಳಿಯನ್ನು ಸಂಘಟಿಸುವಷ್ಟೇ ಪ್ರತಿಗಾಮಿ ತತ್ವಗಳ ವಿಮರ್ಶೆಯೂ ಮುಖ್ಯ ಎಂಬುದನ್ನು ಎಂಗೆಲ್ಸ್ ಎಂಥ ಬಿಗಿ ಚಟುವಟಿಕೆಗಳ ಮಧ್ಯದಲ್ಲೂ ಮರೆಯುತ್ತಿರಲಿಲ್ಲ. ಯಾವುದೇ ಪೊಳ್ಳು ವಾದವನ್ನು ಸುಮ್ಮನೆ ಬಿಡುವುದು ಕಾರ್ಮಿಕ ಚಳುವಳಿಗೆ ಅಪಾಯಕಾರಿ ಎಂದು ಮಾರ್ಕ್ಸ್, ಎಂಗೆಲ್ಸ್ ಇಬ್ಬರೂ ನಂಬಿದ್ದರು.

ಆದರ್ಶವಾದದಿಂದ ಬಿಡುಗಡೆ

ಎಂಗೆಲ್ಸ್ ತನ್ನ ಮುಖ್ಯ ಗ್ರಂಥಗಳಲ್ಲಿ ಒಂದಾದ 'ಡಯಲೆಕ್ಟಿಕ್ಸ್ ಆಫ್ ನೇಚರ್' ಅನ್ನು ೧೮೭೩ರ ಸುಮಾರಿಗೆ ಆರಂಭಿಸಿದ. ಆದರೆ ಇದನ್ನು ಆಗಲೇ ಬರೆಯಲಾಗಲಿಲ್ಲ. ೧೮೭೫-೭೬ ರಲ್ಲಿ ಮತ್ತೆ ಆರಂಭಿಸಿದ; ಆಗಲೂ ಪೂರ್ತಿ ಮಾಡಲಾಗಲಿಲ್ಲ. ಇದಕ್ಕಿಂತ ಬಲವಾದ ಸಮಸ್ಯೆಯೊಂದು ಅವನ ಗಮನ ಸೆಳೆಯಿತು. ಕಾರ್ಮಿಕರಲ್ಲಿ ಡಹ್ರಿಂಗನ ಪ್ರಭಾವ ಬೆಳೆಯುತ್ತಿತ್ತು. ಇದಕ್ಕೆ ಎಂಗೆಲ್ಸ್ ಚಿಕಿತ್ಸೆ ನಡೆಸಬೇಕೆಂದು ಯೋಚಿಸಿದ. ಲೇಖನಗಳಲ್ಲಿ ಅವನ ವಿಚಾರಗಳನ್ನು ಟೀಕಿಸಿದ ನಂತರ ಒಂದು ಗಟ್ಟಿ ಮುಟ್ಟಾದ ವಿಮರ್ಶಾ ಗ್ರಂಥ ಅವಶ್ಯವೆಂದು ಮಾರ್ಕ್ಸ್, ಎಂಗೆಲ್ಸ್ ತೀರ್ಮಾನಿಸಿದರು. ಎಂಗೆಲ್ಸ್ ಪತ್ರಿಕೆಯಲ್ಲಿ ಅವನ ನೇರ ಟೀಕೆಯನ್ನು ಆರಂಭಿಸಿದ ನಂತರ ೧೮೭೮ರಲ್ಲಿ 'ಆ್ಯಂಟಿ-ಡಹ್ರಿಂಗ್' ಪ್ರಕಟವಾಯಿತು. ವಾಡಿಕೆಯಂತೆ ಗ್ರಂಥದ ಇಡೀ ಪ್ರತಿಯನ್ನು ಅಚ್ಚಿಗೆ ಕೊಡುವ ಮೊದಲು ಮಾರ್ಕ್ಸನಿಗೆ ಓದಿ ತೋರಿಸಿದ. ಅರ್ಥಶಾಸ್ತ್ರದ ಅಧ್ಯಾಯವನ್ನು ಮಾತ್ರ ಮಾರ್ಕ್ಸ್ ಈ ಗ್ರಂಥಕ್ಕೆ ಬರೆದುಕೊಟ್ಟ.

'ಕ್ಯಾಪಿಟಲ್' ನಂತರ ಬಂದ ಮುಖ್ಯ ವೈಜ್ಞಾನಿಕ ಗ್ರಂಥ 'ಆ್ಯಂಟಿ–ಡಹ್ರಿಂಗ್'. ಇದರಲ್ಲಿ

ಮಾರ್ಕ್ಸ್‌ವಾದದ ಬೆಳವಣಿಗೆಯನ್ನು ಎಂಗೆಲ್ಸ್ ನಿರೂಪಿಸಿದ. ವಿಜ್ಞಾನದ ಹೊಸ ಶೋಧನೆಗಳ, ಹೊಸ ಸೈದ್ಧಾಂತಿಕ ಅಂಶಗಳ ವಿಶ್ಲೇಷಣೆ ಇಲ್ಲಿ ನಡೆಯಿತು. ಡಹ್ರಿಂಗನ ನೆವದಲ್ಲಿ ಇತರ ಎಲ್ಲ ಸೈದ್ಧಾಂತಿಕ ಪಂಥಗಳನ್ನೂ ಅಲ್ಲಗಳೆದು ಮಾರ್ಕ್ಸ್‌ವಾದವನ್ನು ಎತ್ತಿ ಹಿಡಿದ. ವರ್ಗಗಳ ಹುಟ್ಟು, ರಾಜ್ಯ, ಕುಟುಂಬ, ಧರ್ಮ ಮುಂತಾದ ಅನೇಕ ವಿಷಯಗಳನ್ನು 'ಆ್ಯಂಟಿ–ಡಹ್ರಿಂಗ್' ಚರ್ಚಿಸುತ್ತದೆ. ಅದು ಮಾರ್ಕ್ಸ್‌ವಾದದ ಒಂದು ಪಠ್ಯಪುಸ್ತಕ ಇದ್ದ ಹಾಗೆ. ವಿಜ್ಞಾನದ ಬೆಳವಣಿಗೆಯಾಗುತ್ತಿರುವಾಗ ಅದರಿಂದ ದೂರ ನಿಲ್ಲುವ ತತ್ವಶಾಸ್ತ್ರ ವ್ಯರ್ಥ. ಎಂದು ಎಂಗೆಲ್ಸ್ ಬರೆದ. ಜಗತ್ತು ವಸ್ತುರೂಪವಾದದ್ದು. ನಿಖರವಾದ ಬೆಳವಣಿಗೆಯ ಉನ್ನತ ಹಂತದಲ್ಲಿ ಪ್ರಜ್ಞೆ ಕೂಡ ವಸ್ತುವಿನ ಒಂದು ಲಕ್ಷಣ ಎಂದು ಎಂಗೆಲ್ಸ್ ಹೇಳುತ್ತಾನೆ.

"ಗತಿತರ್ಕವನ್ನು ಜರ್ಮನ್ ಆದರ್ಶವಾದಿ ತತ್ವಶಾಸ್ತ್ರದ ಹಿಡಿತದಿಂದ ರಕ್ಷಿಸಿ ಅದನ್ನು ಪ್ರಕೃತಿಯ ಮತ್ತು ಚರಿತ್ರೆಯ ವಸ್ತುವಾದಿ ಕಲ್ಪನೆಗೆ ಬಳಸಿಕೊಂಡವರು ನಾನು ಮತ್ತು ಮಾರ್ಕ್ಸ್ ಇಬ್ಬರೇ" ಎಂದು ಎಂಗೆಲ್ಸ್ 'ಆ್ಯಂಟಿ ಡಹ್ರಿಂಗ್'ನ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾನೆ. ಇದು ಅಕ್ಷರಶಃ ನಿಜ. ಹೆಗೆಲ್, ಫೇರ್‌ಬ್ಯಾಕರ ಚಿಂತನೆಯಲ್ಲೂ ಗತಿತರ್ಕ ಇತ್ತು. ಆದರೆ ಅದು ಆದರ್ಶವಾದದಲ್ಲಿ ಮುಳುಗಿಹೋಗಿತ್ತು. ಹೆಗೆಲ್ಲನಿಗೂ ಮಾರ್ಕ್ಸನಿಗೂ ಇರುವ ಭೇದವನ್ನು 'ಕ್ಯಾಪಿಟಲ್'ನ ಮೊದಲ ಸಂಪುಟದಲ್ಲಿ ಹೇಳಿಕೊಂಡಿದ್ದಾನೆ. "ನನ್ನ ಗತಿತರ್ಕ ವಿಧಾನವು ಹೆಗೆಲ್ಲನದಕ್ಕಿಂತ ಭಿನ್ನವಷ್ಟೇ ಅಲ್ಲ, ಅದರ ತದ್ವಿರುದ್ಧವೂ ಹೌದು. ಹೆಗೆಲ್ ಆಲೋಚನಾ ಪ್ರಕ್ರಿಯೆಯನ್ನೇ ವಿಚಾರ ಎಂದು ಕರೆದು ಅದಕ್ಕೆ ಸ್ವತಂತ್ರ ಅಸ್ತಿತ್ವವಿದೆ ಎನ್ನುತ್ತಾನೆ. ಈ ವಿಚಾರವೇ ಕಣ್ಣಿಗೆ ಕಾಣುವ ಜಗತ್ತನ್ನು ನಿರ್ಮಿಸಿದ್ದು. ನಿಜವಾದ ಜಗತ್ತು ವಿಚಾರದ ಬಹಿರಂಗ ಮತ್ತು ಇಂದ್ರಿಯಗೋಚರ ರೂಪ ಮಾತ್ರ ಎಂದು ಹೇಳುತ್ತಾನೆ. ಆದರೆ ಇದಕ್ಕೆ ವಿರುದ್ಧವಾಗಿ, ನನ್ನ ಪ್ರಕಾರ, ವಿಚಾರ ಎನ್ನುವುದು, ಮಾನವನ ಮಿದುಳಿನ ಮೇಲೆ ಮೂಡಿದ ಭೌತಿಕ ಜಗತ್ತಿನ ಪ್ರತಿಬಿಂಬ ಮಾತ್ರ. ಇದು ಆಲೋಚನಾ ಸ್ವರೂಪವನ್ನು ಪಡೆಯುತ್ತದೆ. ಈ ಗತಿತರ್ಕ ಸಿದ್ಧಾಂತವು ತತ್ವಶಾಸ್ತ್ರದ ಅತ್ಯದ್ಭುತ ಸಾಧನೆಗಳಲ್ಲಿ ಒಂದು."

'ಆ್ಯಂಟಿ–ಡಹ್ರಿಂಗ್' ನಂತರ ಎಂಗೆಲ್ಸ್ ಹಿಂದೆ ನಿಲ್ಲಿಸಿದ್ದ 'ಡಯಲೆಕ್ಟಿಕ್ಸ್ ಆಫ್ ನೇಚರ್' ಆರಂಭಿಸಿದ. ಆದರೆ ಕಡೆಗಾಲದ ತನಕ ಅದನ್ನು ಮುಗಿಸಲಾಗಲಿಲ್ಲ. ಇದ್ದಷ್ಟನ್ನೇ ಎಂಗೆಲ್ಸನ ಮರಣಾನಂತರ ೧೯೨೫ರಲ್ಲಿ ರಶಿಯದಲ್ಲಿ ಪ್ರಕಟಿಸಲಾಯಿತು. ಇಡೀ ಪ್ರಕೃತಿಯನ್ನು ಮತ್ತು ಅದರ ವಿಜ್ಞಾನವನ್ನು ಕುರಿತದ್ದು ಈ ಪುಸ್ತಕ. ಅವನ ವಿಜ್ಞಾನದ ಜ್ಞಾನ ಬೆರಗುಗೊಳಿಸುವಂಥದು. ತತ್ವಶಾಸ್ತ್ರಕ್ಕೂ ಜೀವವಿಜ್ಞಾನಕ್ಕೂ ಇರುವ ಸಂಬಂಧವನ್ನು ಚರ್ಚಿಸುವುದು ಈ ಗ್ರಂಥದ ಮುಖ್ಯ ಉದ್ದೇಶ. ಎಂಗೆಲ್ಸ್ ಇದನ್ನು



"ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಬೀಳೊ ಮಳೇನ ತಪ್ಪಿಸಿ, ಎಲ್ಲಾ ಕಡೇನೂ ಒಂದೇ ಸ್ಟ್ಯಾಂಡರ್ಡ್ ಆಗಿ ಬೀಳೋಹಾಗೆ ಮಾಡಿದರ ಹ್ಯಾಗೆ...?"

ಬರೆದ ಮೇಲೆ ವಿಜ್ಞಾನ ಎಷ್ಟೋ ಬೆಳೆದಿರಬಹುದು. ಆದರೆ ಅವನ ದೃಷ್ಟಿಕೋನ ಸದಾ ಮಾನ್ಯತೆ ಪಡೆಯುವಂಥದು.

೧೮೮೩ ರಲ್ಲಿ ಮಾರ್ಕ್ಸ್ ನಿಧನನಾದ ಮೇಲೆ ಅವನು ಸಿದ್ಧಪಡಿಸಿದ್ದ ಅನೇಕ ಟಿಪ್ಪಣಿಗಳ ಸಹಾಯದಿಂದ 'ದಿ ಒರಿಜನ್ ಆಫ್ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್'' ಗ್ರಂಥವನ್ನು ಎಂಗೆಲ್ಸ್ ಬರೆದು ೧೮೮೪ ರಲ್ಲಿ ಪ್ರಕಟಿಸಿದ. ಮಾರ್ಗನ್ನನ ಮಾನವಶಾಸ್ತ್ರದ ಗ್ರಂಥ ಮಾರ್ಕ್ಸನ ಗಮನ ಸೆಳೆದಿತ್ತು. ಅದನ್ನು ಆಧರಿಸಿ, ಬರೆಯುವ ಅವನ ಯೋಜನೆ ಕೈಗೂಡಲಿಲ್ಲ. ಎಂಗೆಲ್ಸ್ ಅದನ್ನು ಪೂರೈಸಿದ. ಇಡೀ ಮಾನವ ಇತಿಹಾಸದ ಬೆಳವಣಿಗೆಯ ಘಟಗಳನ್ನು ವಸ್ತುವಾದಿ ದೃಷ್ಟಿಕೋನದಿಂದ ನಿರೂಪಿಸಲು ಇಲ್ಲಿ ಯತ್ನಿಸಿದ್ದಾನೆ.ಕೌಟುಂಬಿಕ ಸಂಬಂಧಗಳ ಆರ್ಥಿಕ ನೆಲೆಗೆ ಅನುಗುಣವಾಗಿ ಹೇಗೆ ಬದಲಾದವು ಎಂಬುದನ್ನು ಎಂಗೆಲ್ಸ್ ವಿವರಿಸಿದ. ಉತ್ಪಾದನೆ ಉಪಕರಣಗಳಿಂದ ಖಾಸಗಿ ಆಸ್ತಿ, ಖಾಸಗಿ ಆಸ್ತಿಯಿಂದ ಪ್ರಭುತ್ವಶಕ್ತಿ ಮತ್ತು ವರ್ಗಗಳು ಬಂದವು ಎಂದು ಸಾಧಾರವಾಗಿ ವಿಶ್ಲೇಷಿಸಿದ. ಈ ಗ್ರಂಥ ಮಾನವಶಾಸ್ತ್ರಕ್ಕೆ ಮಾರ್ಕ್ಸ್‌ವಾದ ನೀಡಿದ ಕೊಡುಗೆ.

ವಸ್ತುವಾದಿ ಗತಿತರ್ಕವನ್ನು ರೂಪಿಸಿ ಬೆಳೆಸಿದರೂ ಮಾರ್ಕ್ಸ್, ಎಂಗೆಲ್ಸರು ಹಿಂದಿನ ದಾರ್ಶನಿಕರಿಗೆ ಸಾಕಷ್ಟು ಋಣಿಯಾಗಿದ್ದರು. ಅವರಿಂದ ತೆಗೆದುಕೊಂಡದ್ದೆಷ್ಟು ಮತ್ತು ತಮಗೂ ಅವರಿಗೂ ಇರುವ ವ್ಯತ್ಯಾಸಗಳೇನು ಎಂಬುದನು ಸ್ಫುಟವಾಗಿ ಹೇಳಬೇಕಿತ್ತು. ಮಾರ್ಕ್ಸ್‌ವಾದದ ಬೆಳವಣಿಗೆ ಮತ್ತು ಗತಿತಾರ್ಕಿಕ ಹಾಗೂ ಚಾರಿತ್ರಿಕ ಭೌತವಾದದ ಮುಖ್ಯ ನಿಯಮಗಳನ್ನು ಚರ್ಚಿಸುವ ಸಲುವಾಗಿ ಎಂಗೆಲ್ಸ್ 'ಲುಡ್ವಿಂಗ್ ಫೇರ್‌ಬ್ಯಾಕ್ ಅಂಡ್ ದಿ ಎಂಡ್ ಆಫ್ ಕ್ಲಾಸಿಕಲ್ ಜರ್ಮನ್ ಫಿಲಾಸಫಿ' ಬರೆದ. ಪತ್ರಿಕೆಯೊಂದರಲ್ಲಿ ಪ್ರಕಟವಾದ ಮೇಲೆ ೧೮೮೮ ರಲ್ಲಿ ಇದು ಗ್ರಂಥವಾಗಿ ಹೊರಬಿತ್ತು. ಚರಿತ್ರೆಯಲ್ಲಿ ಹೆಗೆಲ್, ಫೇರ್‌ಬ್ಯಾಕರ ಸ್ಥಾನವನ್ನು ಎಂಗೆಲ್ಸ್ ನಿರ್ದೇಶಿಸಿದ. ಆಲೋಚನೆ ಮತ್ತು ಅಸ್ತಿತ್ವ, ಅಸ್ತಿತ್ವ ಮತ್ತು ಮಾನವಪ್ರಜ್ಞೆಯಲ್ಲಿ ಅದರ ಪ್ರತಿಬಿಂಬ ಈ ಮುಖ್ಯ ಪ್ರಶ್ನೆಗಳನ್ನು ಇಲ್ಲಿ ಬಿಡಿಸಿದ. ತತ್ವಶಾಸ್ತ್ರವನ್ನು ಒಂದು ವಿಜ್ಞಾನವನ್ನಾಗಿ ಮಾಡುವಲ್ಲಿ ಎಂಗೆಲ್ಸನ ಈ ಗ್ರಂಥಗಳ ಪಾತ್ರ ತುಂಬ ಮಹತ್ವದ್ದು.

ಮಾರ್ಕ್ಸ್ ತನ್ನ ಹೊಸ ಚಿಂತನೆಯನ್ನು ಜಗತ್ತಿಗೆ ನೀಡಿ 'ಕ್ಯಾಪಿಟಲ್' ಗ್ರಂಥನಿರ್ಮಾಣದಲ್ಲಿ ತನ್ನ ಜೀವನ ಸವೆಸಿದ. ಎಂಗೆಲ್ಸ್ ಆ ಚಿಂತನೆಯನ್ನು ಪ್ರಚಾರ ಮಾಡಿ ಬೆಳೆಸಿ, ಮಾರ್ಕ್ಸನ ಗ್ರಂಥಗಳ ಬೆಲೆಯನ್ನು ಲೋಕಕ್ಕೆ ತಿಳಿಸಿಕೊಟ್ಟ. ಮಾರ್ಕ್ಸ್‌ವಾದವನ್ನು ಬೆಳೆಸಿದ ಶ್ರೇಯಸ್ಸು ಖಂಡಿತ ಎಂಗೆಲ್ಸನಿಗೆ ಸೇರಬೇಕು. ಅದರ ಅನೇಕ ವಿಭಾಗಗಳ ಬೆಳವಣಿಗೆಗೆ, ಅದರ ಪ್ರಯೋಗಕ್ಕೆ ದುಡಿದು ಜೀವನ ಸಾರ್ಥಕಪಡಿಸಿಕೊಂಡ. ಎಂಗೆಲ್ಸನ ಪ್ರತಿಭೆ ಬಹುಮುಖವಾದದ್ದು. ಮಾರ್ಕ್ಸ್‌ವಾದದ ಬೆಳವಣಿಗೆಗೆ ಅಗತ್ಯವಾದ ಗ್ರಂಥ ನಿರ್ಮಾಣ, ಅದರ ವಿರೋಧಿಗಳ ವಿರುದ್ಧ ಸಮರ, ಅನೇಕ ದೇಶಗಳ ಕಾರ್ಮಿಕ ಸಂಘಟನೆಯಲ್ಲಿ ಆ ಸಿದ್ಧಾಂತದ ಕಾರ್ಯಾಚರಣೆಯ ಪ್ರಯತ್ನ ಈ ಎಲ್ಲ ಕೆಲಸಗಳನ್ನೂ ಅವನು ಏಕಕಾಲದಲ್ಲಿ ಮಾಡುತ್ತಿದ್ದ. ಮಾರ್ಕ್ಸ್‌ವಾದಿ ಸಿದ್ಧಾಂತದ ಚರಿತ್ರೆಯಲ್ಲಿ ಎಂಗೆಲ್ಸನ ಹೆಸರು ಚಿರಸ್ಥಾಯಿಯಾದದ್ದು.

ಸಿದ್ಧಾಂತಿ, ಅರ್ಥಶಾಸ್ತ್ರಜ್ಞ, ಕಾರ್ಮಿಕ ನಾಯಕ, ವಿಜ್ಞಾನಿಯಾದ ಎಂಗೆಲ್ಸನು ಇತಿಹಾಸದಲ್ಲಿ ಉದಯಿಸುವ ಒಂದು ಅಪರೂಪದ ಚೇತನ. ಅವನು ಕವಿಯೂ ಹೌದು, ವ್ಯಂಗ್ಯಚಿತ್ರಕಾರ ಕೂಡ. ಹಾಸ್ಯಪ್ರವೃತ್ತಿ, ಬೆಚ್ಚನೆಯ ಹೃದಯ ಕಡೆ ತನಕ ಅವನ ಸಂಗಾತಿಗಳಾಗಿದ್ದವು. "ಎಂಗೆಲ್ಸ್ ಚಿಕ್ಕ ವಯಸ್ಸಿನವನ ಹಾಗೆ ಕಂಡರೂ ಅವನು ಹಾಗೆ ಕಾಣುವುದಕ್ಕಿಂತ ಚಿಕ್ಕವನು. ನಾನು ನೋಡಿದ ಅತ್ಯಂತ ಚಿಕ್ಕ ಯುವಕ ಇವನೇ" ಎಂದು ಮಾರ್ಕ್ಸನ ಮಗಳು ಎಲಿನಾರ್ ತನ್ನ ಎಪ್ಪತ್ತರ 'ಚಿಕ್ಕಪ್ಪ'ನ ಬಗಗೆ ಹೇಳುತ್ತಿದ್ದಳು.

ಎರಡು ತಲೆ, ಒಂದೇ ಮಿದುಳು

ಎಂಗೆಲ್ಸನ ವ್ಯಕ್ತಿತ್ವದ ಮತ್ತೊಂದು ಸ್ಮರಣೀಯ ಅಂಶವೆಂದರೆ ಮಾರ್ಕ್ಸನ ಬಗ್ಗೆ ಅವನಿಗಿದ್ದ ಪ್ರೀತಿ, ಸ್ನೇಹ. ನಾಲ್ಕು ದಶಕಗಳ ಕಾಲ ಇಬ್ಬರೂ ಒಂದೇ ಮಿದುಳಿನಂತೆ ಚಿಂತಿಸುತ್ತಿದ್ದರು.

ಎಂಗೆಲ್ಸ್ ಮಾರ್ಕ್ಸನಿಗೆ ಎಲ್ಲ ವಿಧದಲ್ಲೂ ಆಧಾರ ವಾಗಿದ್ದ. ಕೌಟುಂಬಿಕ ಕಷ್ಟದಿಂದ ಮಾರ್ಕ್ಸನನ್ನು ಪಾರು ಮಾಡಿ ಘನೋದ್ದೇಶಕ್ಕಾಗಿ ದುಡಿಯಲು ಅವನಿಗೆ ಅನುವು ಮಾಡಿ ಕೊಡುವುದು ಎಂಗೆಲ್ಸನ ಅಭಿಲಾಷೆಯಾಗಿತ್ತು. ಅವನ ಕಡು ಬಡತನದ ಕುಟುಂಬವನ್ನು ಸಂತೋಷದಿಂದ ಸಾಕುತ್ತಿದ್ದ. ಎಂಗೆಲ್ಸನ ಹಣ ಸಹಾಯವಿಲ್ಲದಿದ್ದರೆ ಮಾರ್ಕ್ಸ್ ಬಡತನದಲ್ಲಿ ಸೀದುಹೋಗಿರುತ್ತಿದ್ದ. ತಾತ್ವಿಕ ವಾಗಿ ಇಬ್ಬರೂ ಒಂದೇ ದೃಷ್ಟಿಕೋನದಲ್ಲಿ ಯೋಚಿಸುತ್ತಿದ್ದುದರಿಂದ ಎಂದೂ ಇಬ್ಬರಲ್ಲಿ ಸ್ಪರ್ಧೆ ಬರಲಿಲ್ಲ. ಮೇಲು ಕೀಳುಗಳ ಪ್ರಶ್ನೆಯೇ ಹುಟ್ಟಲಿಲ್ಲ. ಎಲ್ಲ ಗ್ರಂಥಗಳ ನಿರ್ಮಾಣದಲ್ಲೂ ಇಬ್ಬರ ಸಮಾನ ಪ್ರಯತ್ನವಿತ್ತು. ಆದರೂ ಮಾರ್ಕ್ಸನದು ಶೋಧನೆ, ತನ್ನದು ಪ್ರಸಾರ ಮಾತ್ರ ಎಂದು ಎಂಗೆಲ್ಸ್ ನಂಬಿದ್ದ. ಮಾರ್ಕ್ಸ್ ತೀರಿಕೊಂಡ ಮೇಲೆ ಅವನ ಗ್ರಂಥಗಳನ್ನು ಅಚ್ಚಿಗೆ ಸಿದ್ಧಪಡಿಸಿಕೊಟ್ಟ. ಆದರೆ ಅದರಲ್ಲಿ ಬದಲಾವಣೆ ಮಾಡಲು ಅವನ ಮನಸ್ಸು ಒಪ್ಪಲಿಲ್ಲ. ಮಾರ್ಕ್ಸ್‌ವಾದದ ಎಲ್ಲ ಮುಖ್ಯ ಅಂಶಗಳೂ ಮಾರ್ಕ್ಸನದೇ ಎಂದು ಅನೇಕ ಬಾರಿ ಒತ್ತಿ ಹೇಳಿ ಬರೆದ. ೧೮೮೩ರ ಮಾರ್ಚ್ ೧೪ರಂದು ಮಾರ್ಕ್ಸ್ ಕೊನೆಯುಸಿರೆಳೆದಾಗ ಜಗತ್ತಿನ ಅತಿಶ್ರೇಷ್ಠ ಆಲೋಚನಾಕಾರ ಆಲೋಚಿಸುವುದನ್ನು ನಿಲ್ಲಿಸಿದ ಎಂದು ಹಲುಬಿದ. ಅವನಿಲ್ಲದಿದ್ದರೆ ನಾವೆಲ್ಲ ತಪ್ಪು ತಿಳುವಳಿಕೆಯ ಕತ್ತಲಲ್ಲಿ ಮುಳುಗಿರುತ್ತಿದ್ದೆವು, ಎಂದು ಗೆಳೆಯನಿಗೆ ಕಾಗದ ಬರೆದ. ಈ ಸಿದ್ಧಾಂತದ ಹಿರಿಮೆಯೆಲ್ಲ ಮಾರ್ಕ್ಸನದೇ ಎಂದು ಯಾವಾಗಲೂ ಅವನ ನಂತರದ ಸ್ಥಾನವನ್ನೇ ಬಯಸುತ್ತಿದ್ದ. "ಮಾರ್ಕ್ಸ್ ಅಪ್ರತಿಮ ಪ್ರತಿಭಾನ್ವಿತ. ನಾವು, ಇತರರು ಹೆಚ್ಚೆಂದರೆ ಮೇಧಾವಿಗಳೆಂದು ಹೇಳಿಕೊಳ್ಳಬಹುದಷ್ಟೆ. ಮಾರ್ಕ್ಸ್ ಇಲ್ಲದಿದ್ದರೆ ಈ ಸಿದ್ಧಾಂತವೂ ಬಹಳ ಮಟ್ಟಿಗೆ ಇಂದು ಇರುವ ಹಾಗೆ ಇರುತ್ತಿರಲಿಲ್ಲ. ಆದ್ದರಿಂದ ಅದು ಅವನ ಹೆಸರಿನಿಂದ ಪ್ರಖ್ಯಾತವಾಗಿರುವುದು ಉಚಿತವೇ ಸರಿ" ಎಂದು ಸಿದ್ಧಾಂತಕ್ಕೆ ಮಾರ್ಕ್ಸ್‌ವಾದವೆಂದು ಕರೆಯುವುದನ್ನು ಸಮರ್ಥಿಸಿದ. "ನನಗಿಂತ ಮಾರ್ಕ್ಸನ ಕಾಣಿಕೆ ಮುಖ್ಯ. I played second fiddle" ಎಂಬ ಮಾತು ಎಂಗೆಲ್ಸನ ಸ್ನೇಹ, ವಿನಯಗಳ ಪ್ರತೀಕ.

ಎಪ್ಪತ್ತೈದು ವರ್ಷಗಳ ತುಂಬು ಬಾಳಿನಲ್ಲಿ ಐವತ್ತೈದು ವರ್ಷಗಳ ಕಾಲ ಶೋಷಿತರ ಪರ ಹೋರಾಡಿ ಎಂಗೆಲ್ಸ್ ೧೮೯೫ರ ಆಗಸ್ಟ್ ೫ ರಂದು ಕೊನೆಯುಸಿರೆಳೆದ. ತನ್ನ ಎಸ್ಟೇಟು, ಆಸ್ತಿಯೆಲ್ಲ ಮಾರ್ಕ್ಸನ ಇಬ್ಬರು ಹೆಣ್ಣುಮಕ್ಕಳಿಗೆ, ಅವರಲ್ಲಿ ಸತ್ತ ಹಿರಿ ಮಗಳ ಮಕ್ಕಳಿಗೆ, ಇತರರಿಗೆ ಸೇರಲೆಂದು ಮೃತ್ಯುಪತ್ರ ಬರೆದಿದ್ದ. ತನ್ನ ಪುಸ್ತಕಗಳು, ಕಾಪಿರೈಟ್‌ಗಳು, ರಾಯಲ್ಟಿಗಳು ಮತ್ತು ಸಾವಿರ ಪೌಂಡುಗಳನ್ನು ಜರ್ಮನ್ ಸಮಾಜವಾದಿ ಪ್ರಜಾಪ್ರಭುತ್ವವಾದಿ ಪಕ್ಷಕ್ಕೆ ಬಿಟ್ಟು ಹೋದ. ಇದೆಲ್ಲಕ್ಕಿಂತ ಹೆಚ್ಚಾಗಿ ಅವನ ಮುಖ್ಯ ಆಸ್ತಿಯಾದ ಪ್ರತಿಭೆ, ವೈಜ್ಞಾನಿಕ ಸಿದ್ಧಾಂತಗಳನ್ನು ಇಡೀ ಜಗತ್ತಿನ ಕಾರ್ಮಿಕರಿಗೆ ಬಳುವಳಿಯಾಗಿ ಕೊಟ್ಟ. ✡

ತಾಯ್ನಾಡಿಗೆ ಬೇಡವಾದವರು ಇಡಿ ಮಾನವ ಕುಲಕ್ಕೇ ಬೇಡಾದವರಾಗುತ್ತಾರೆ.

–ಎಸಾ ರಿಯಾನ್ ಬೆಲಿನ್ಸ್ಕಿ

ತಾಯ್ನಾಡಿನ ಬಗ್ಗೆ ಉತ್ತಮವೂ ಸುಂದರವೂ ಆದ ಭಾವನೆಗಳನ್ನು ಅನುಭವಿಸದಿರುವವರು ಪೊಳ್ಳು ಜನವೇ ಸೈ.

–ಐವಾನ್ ಪಾವ್ಲೋವ್

ಕಾಡುತನವನ್ನು ಶಿಕ್ಷಣದಿಂದ ಬಿಡಿಸಿ ಸ್ಪಷ್ಟವಾಗಿ ಎತ್ತಿ ತೋರಿಸುವುದು, ಹಿಂದಾದುದರ ಬಗ್ಗೆ ಗೌರವ ತೋರುವುದೇ ಆಗಿದೆ.

–ಅಲೆಗ್ಝಾಂಡರ್ ಪುಷ್ಕಿನ್

ದೊಡ್ಡಸ್ತಿಕೆ

ಕೆ. ಚಂದ್ರಮೌಳಿ

ಧರ್ಮರಾಯನ ಹಿರಿಮೆ ಏನಪ್ಪ ಅಂದರೆ ಧರ್ಮ ಬಿಟ್ಟು ನಡೆಯದೆ ಇರುವುದು. ಕರ್ಣನ ಹಿರಿಮೆ ಕೇಳಿದ್ದನ್ನು ಇಲ್ಲ ಅನ್ನದೇ ಇರುವುದು ಅಂತ ಯಾರಾದರೂ ಹೇಳೇ ಹೇಳ್ತಾರೆ. ಆದರೆ ಅದೇ ರೀತಿ ತೊಘಲಕನ ಹಿರಿಮೆ ಹುಚ್ಚು ದರ್ಬಾರು ವಿಚಿತ್ರ ವರ್ತನೆ ಅನ್ನುವ ಹಾಗಿಲ್ಲ. ಅದು ಅವನ ಹಿರಿಮೆಯಲ್ಲ, ಅದು ಅವನ ದೊಡ್ಡಸ್ತಿಕೆ ಆಗಿತ್ತು ಅನ್ನಬಹುದು. ಯಾಕೆಂದರೆ, ನಿದ್ದೆಯಿಂದ ಎಬ್ಬಿಸಿ ಧರ್ಮರಾಯನನ್ನು ಕೇಳಿದರೂ ಅವನ ಬಾಯಿಂದ ನಿಜ ಸ್ವಾಭಾವಿಕವಾಗೇ ಹೊರಡುತ್ತಿತ್ತು. ರಣರಂಗದಲ್ಲಿ ಹೂತುಹೋಗಿದ್ದ .ರಥದ ಗಾಲಿಯನ್ನೇ ದಾನವಾಗಿ ಕೊಟ್ಟುಬಿಡು ಅಂದಿದ್ದರೂ ಕರ್ಣ ಸ್ವಾಭಾವಿಕವಾಗೇ ಅದನ್ನು ದಾನಕೊಟ್ಟಿರುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ ತೊಘಲಕನ ಹುಚ್ಚು ದರ್ಬಾರು, ವಿಚಿತ್ರ ವರ್ತನೆ ಅಷ್ಟು ಸ್ವಾಭಾವಿಕವಾಗಿ ಬೆಳೆದು ಬಂದದ್ದಲ್ಲ. ತಾನೇ ತುಂಬಾ ಜಾಣ ದೊರೆ, ತಾನು ಮಾಡಿದ್ದು ಎಲ್ಲರಿಗೂ ಹಿತವಾಗಲೇಬೇಕು ಅನ್ನೋ ಸ್ವಾಭಿಮಾನವನ್ನು ತೊಘಲಕ ಬೆಳೆಸಿಕೊಂಡು ಬಂದ, ತನ್ನ ಜಾಣ ಬುದ್ಧಿಯ ಇಂಗಿತ ಯಾರಿಗೂ ಅರ್ಥವಾಗದ್ದರಿಂದ ಜನರಿಗೆ ಅದು ವಿಚಿತ್ರ ವರ್ತನೆಯಾಗಿ ಕಾಣುತ್ತಿದೆ ಅಂದುಕೊಂಡ. ಅಂದಿನಿಂದ ತನ್ನಲ್ಲಿ ಇಲ್ಲದಿರುವ ಜಾಣತನದ ಮೇಲೆ ತನಗೇ ಮೆಚ್ಚುಗೆ ಹೆಚ್ಚಾಗಿ ಅದೇ ಅವನ ದೊಡ್ಡಸ್ತಿಕೆ ಆಯಿತು. ಅಂದರೆ ಯಾವುದು ಸ್ವಾಭಾವಿಕವಾಗಿ, ಸಹಜವಾಗಿ ಬಂದಿರುವುದಿಲ್ಲವೋ, ಯಾವ ಗುಣ ನಮ್ಮಲ್ಲಿದೆ ಎಂದು ತಮು ತಿಳಿದುಕೊಂಡು ಹೆಮ್ಮೆಪಡುತ್ತೇವೊ ಅದಕೇ ದೊಡಸ್ತಿಕೆ ಅಂದಹಾಗಾಯಿತು. ಇಂಥ



ದೊಡ್ಡಸ್ತಿಕೆಯಿಂದ ಮುಗ್ಗರಿಸಬಹುದು. ನಗೆಪಾಟಲಿಗೀಡಾಗಬಹುದು. 'ಕನ್ನಡ ನಂಗೆ ಅರ್ಥಾನೇ ಆಗುಲ್ಲ' ಅಂತ ದೊಡ್ಡಸ್ತಿಕೆ ತೋರಿಸುವ ಅನೇಕ ಕನ್ನಡಿಗರಿಗೆ ಸರಿಯಾಗಿ ತಿಳಿಯುವ ಹಾಗೆ ಹೇಳಬೇಕಾದರೆ ದೊಡ್ಡಸ್ತಿಕೆ ಒಂದು ತರಹದ High L. Crowism, ಅಷ್ಟೆ.




ಹೊಸತನ, ಫ್ಯಾಷನ್, ನವೀನತೆಯ ದೊಡ್ಡಸ್ತಿಕೆಯನ್ನು ನೋಡುವುದು ಸರ್ವೇಸಾಮಾನ್ಯ. ಅದರಲ್ಲೂ ಹೆಂಗಸರಿಗೇ ಇಂತಹ ದೊಡ್ಡಸ್ತಿಕೆ ಹೆಚ್ಚಾಗಿ ಅಂಟುಕೊಂಡಿರುತ್ತದೆ. ದೊಡ್ಡ ಮನೆ ವಿಮಲಾಬಾಯಿ ತನ್ನ ಕೂದಲಿನ ಗಂಟು ತೋರಿಸುತ್ತಾ, 'ಮೊನ್ನೆಯಿನ್ನೂ ಅಮೇರಿಕಾದಿಂದ ತರಿಸಿದೆ. ಅಲ್ಲೆಲ್ಲಾ ಹೀಗೆ ಕಿವಿಯವರೆಗೆ ಕೂದಲು ಕತ್ತರಿಸಿಕೊಳ್ಳುವುದೇ ಫ್ಯಾಷನ್' ಅಂದಾಗ 'ಅಯ್ಯೋ, ನಿಂಗೇನೇ ಬಂತು. ಅಂಥಾ ಚೆನ್ನಾಗಿರೋ ನೀಳವಾಗಿರೋ ಕೂದಲು ಕತ್ತರಿಸಿಕೊಂಡೆಯಲ್ಲೇ' ಎಂದು ನೀವು ಮನಸ್ಸಿನಲ್ಲೇ ಬೈದರೂ, ಹೊರಗೆ ಅವರ ಕೂದಲಿನ ಫ್ಯಾಷನ್ ಹೊಗಳೇ ಹೊಗಳುತ್ತೀರಿ—ಇಲ್ಲದಿದ್ದರೆ ನೀವೇ ಔಟಾಫ್ಯಾಷನ್ ಆಗಿಬಿಟ್ಟರೆ! ಟೈಟ್‌ಪ್ಯಾಂಟಿನ ಫ್ಯಾಷನ್ ಶುರುವಾಗಿದ್ದ ಕಾಲ. ದರ್ಜಿಯ ಹತ್ತಿರವೇ ನಿಂತು ಅಲ್ಲೇ ಕಾಲಿನ ಸುತ್ತ ಬಟ್ಟೆ ಹೊಲಿಸಿಕೊಂಡ ಪ್ಯಾಂಟನ್ನು ಹಾಕಿಕೊಂಡು ಮಣೆಯಮೇಲೆ ಊಟಕ್ಕೆ ಕೂತಾಗ 'ಪರ್' ಅಂತ ಮಧ್ಯದಲ್ಲೇ ಹೊಲಿಗೆ ಬಿಟ್ಟಿತೂನ್ನಿ, ಆದರೂ ಅವನ ಅವತಾರ ನೋಡಿ ಗೊಳ್ಳೆಂದು ನಗುವಹಾಗಿಲ್ಲ; ಏನಿದ್ದರೂ ಮುಸಿನಗಬೇಕು. ನೀವು ನಗುವುದಿರಲಿ, ಆ ಟೈಟ್‌ಪ್ಯಾಂಟಿನ ವ್ಯಕ್ತಿ, 'ನನಗೆ ಹೀಗೆ ಮಣೆ ಮೇಲೆ ಕೂತು ಅಭ್ಯಾಸವೇ ಇಲ್ಲ, ಟೇಬಲ್ ಮೇಲ್ನೇ ನನಗೆ ಸರಿ,' ಅಂದರೆ ಇದಕ್ಕೆ ದೊಡ್ಡಸ್ತಿಕೆ ಅನ್ನದೆ ಇನ್ನೇನು? ಫ್ಯಾಷನ್ನಿನ ದೊಡ್ಡಸ್ತಿಕೆ ಒಬ್ಬೊಬ್ಬರಿಗೆ ಒಂದು ತರಹ ಇರುತ್ತೆ. ದಿನ ಬೆಳಗಾದರೆ ಬೀಡಿ ಕಚ್ಚುತ್ತಿದ್ದ ಹಳ್ಳೀ ರೈತ ಇದ್ದಕ್ಕಿದ್ದ ಹಾಗೇ 'ನಂಗೆ ಸಿಗ್ರೇಟೇ ಸರಿ, ಈ ಬೀಡಿ ಕಚ್ಚಾಕ್ಕಿಲ್ಲ' ಅಂದಾಗ ಅವನ ಜೊತೆಯವರೆಲ್ಲಾ ಇವನ ದೊಡ್ಡಸ್ತಿಕೆಗೆ ಮೂಗು ಮುರಿಯದೇ ಇನ್ನೇನು, ದಿನವೂ ಜನರ ನೂಕು ನುಗ್ಗಲಲ್ಲಿ ಹೇಗೋ ಬಸ್ಸು ಹಿಡಿದು ಜೋತಾಡುತ್ತಾ ನಿಂತುಕೊಂಡು ಬರುತ್ತಿದ್ದ ವೆಂಕಣ್ಣ, ಇದ್ದಕ್ಕಿದ್ದ ಹಾಗೇ ಕಾರು ಕೊಂಡ ಮೇಲೆ, 'ಅಬ್ಬ, ಒಂದು ದಿನ ಕಾರಿಲ್ಲದಿದ್ದರೂ ನಾನು ಹೊರಗೇ ಹೋಗಲಾರೆ' ಅಂದಾಗ ಅವನ ಅದೃಷ್ಟಕ್ಕೆ ಹೊಟ್ಟೆಕಿಚ್ಚು ಪಡುವುದೇ ಅಲ್ಲದೆ ಅವನ ದೊಡ್ಡಸ್ತಿಕೆಗೆ ಬಯ್ಯುತ್ತೀರಿ.

ಫ್ಯಾಷನ್ನಿನ ತರಹ ಸುಸಂಸ್ಕೃತರೆಂದು ತೋರಿಸಿಕೊಳ್ಳಲು ನಡೆಸುವ ದೊಡ್ಡಸ್ತಿಕೆಯನ್ನು ಈಗಿನ



ಮಧ್ಯಮ ಮತ್ತು ಶ್ರೀಮಂತವರ್ಗಗಳಲ್ಲಿ ಕಾಣಬಹುದು. ವರ್ಣಚಿತ್ರಗಳಲ್ಲಿನ ಬಣ್ಣವೂ ಗೊತ್ತಿಲ್ಲ, ಚಿತ್ರ ವೊದಲೇ ಅರ್ಥವಾಗುಲ್ಲ; ಆದರೂ ಮನೆಯ ಡ್ರಾಯಿಂಗ್‌ರೂಮಿನ ತುಂಬಾ ಪೇಂಟಿಂಗ್ಸ್. ಮನೆಗೆ ಹೋದರೆ 'ಕುಳಿತುಕೊಳ್ಳಿ' ಎಂದು ಹೇಳುವ ಸಭ್ಯತೆಯಿಲ್ಲ. ಆದರೆ ನೀವೇ ಭಂಡರ ಹಾಗೆ ಕೂತು, ಸುತ್ತಲಿನ ವೈಭವ ನೋಡುತ್ತಾ 'ಇದೇನು ರೆಕಾರ್ಡ್ ಪ್ಲೇಯರ್ರೇ?' ಅನ್ನಿ. ಆಗ ನಿಮ್ಮನ್ನು ಗುರುಸಿ 'ಹೌದು, ಹೌದು, ಅಮೇರಿಕಾದಿಂದ ತರಿಸಿದ್ದು. ಯಾವ ರಿಕಾರ್ಡ್ ಹಾಕಲಿ? ವಾನ್ ಪೀಟರ್‌ದೋ? ಪಾಲ್ ಬ್ರಿಂಕ್ಲೀದೋ, ಎಮ್ಮಾದೋ?' ಎಂದು ಕೇಳುತ್ತಾರೆ. ಅಂದರೆ ಅವರಿಗೆ ಪಾಶ್ಚಾತ್ಯ ಸಂಗೀತ ಅರ್ಥವಾಗುತ್ತದೆಂದಲ್ಲ, ಅದು ಅರ್ಥವಾಗುತ್ತದೆಂದು ತೋರಿಸಿಕೊಳ್ಳುವ ಇಚ್ಛೆ, ದೊಡ್ಡಸ್ತಿಕೆ ಅಷ್ಟೆ. 'ನಂಗೆ ಅದೆಲ್ಲಾ ಅರ್ಥ ಆಗುಲ್ಲಾರೀ, ಅಲೀ ಅಕ್ಬರಖಾನನ ಸರೋದನ್ನೋ, ಸುಬ್ಬುಲಕ್ಷ್ಮಿಯವರ ಸಂಗೀತಾನೋ ಹಾಕಿದರೆ ಆಗುತ್ತೆ' ಎಂದು ಮಾತ್ರ ಹಲ್ಲು ಗಿಂಜಿ ನಿಮ್ಮ ಅಸಂಸ್ಕೃತಿ(??)ಯನ್ನು ತೋರಿಸಿಕೊಳ್ಳಬೇಡಿ. ಇಷ್ಟವೋ, ಇಲ್ಲವೋ, ಅರ್ಥವಾಗುತ್ತದೋ, ಇಲ್ಲವೋ, ಕಿವಿ ಮುಚ್ಚಿಕೊಂಡು ಸಂಗೀತ ಕೇಳದಿದ್ದರೂ ರೆಕಾರ್ಡ್ ನೋಡಿ ತಲೆನೋವು ಬರಿಸಿಕೊಳ್ಳಿ. ಆಧುನಿಕ ಸಂಸ್ಕೃತಿಯ ದೊಡ್ಡಸ್ತಿಕೆ ಇಲ್ಲಿಗೇ ಮುಗಿಯಲಿಲ್ಲ. 'ನೀವು ವಿಲ್ಲೇ ಮೂರನ best seller ...ಪುಸ್ತಕ ಓದಿದ್ದೀರಾ?' ಅನ್ನುತ್ತಾರೆ ದೊಡ್ಡಸ್ತಿಕೆಯ ಮನುಷ್ಯರು. ಆ ಪುಸ್ತಕದ ಹೆಸರೇ ಕೇಳಿಲ್ಲದಿದ್ದರಿಂದ ನಿಮಗೆ ಅವರು ಹೇಳಿದ್ದು ಅರ್ಥವೇ ಆಗುಲ್ಲ. ನಿಮ್ಮ ಪೆಕರು ಮುಖ ನೋಡಿದ್ದೇ ಅವರು ಆ ಪುಸ್ತಕದ ವಿವರಣೆ ಕೊಡಲು ಶುರುಮಾಡುತ್ತಾರೆ. ಅದರಲ್ಲೂ ಇಬ್ಬರು ದೊಡ್ಡಸ್ತಿಕೆಯವರು ಸೇರಿಬಿಟ್ಟರಂತೂ ನಿಮ್ಮ ಪಾಡು ಕೇಳಬೇಡಿ. ಅವರಿಬ್ಬರ ಮಾತು ಚರ್ಚೆಯಿಂದ ನೀವು ಅವರ ಮಧ್ಯೆ ಸಿಕ್ಕಿದ ಬಾಲವಿಲ್ಲದ ಕಮಂಗಿ ಅನ್ನುವ ಹಾಗೆ ಮಾಡಿಬಿಡುತ್ತಾರೆ. ಆದರೆ ಅಂತಹ ದೊಡ್ಡಸ್ತಿಕೆ ನೋಡಿ ನೀವೇನೂ ಎದೆಗುಂದಬೇಡಿ, ನೀವು ಆ ಪುಸ್ತಕ ಓದದೆ ಮಾಡಿದ ಮಹಾಪರಾಧ ಏನೇನೂ ಇಲ್ಲ—ಹೆಲ್ಲಾ ಅನ್ನೋ ಹೆಂಗಸು ತನ್ನ ಎಂಟು ಜನ ಗಂಡಂದಿರ ಕಣ್ಮರೆಸಿ ಹೇಗೆ ಬೇರೆ ಗಂಡುಗಳೊಡನೆ ಚಕ್ಕಂದ ಆಡ್ತಿದ್ದಳು ಅನ್ನುವುದನ್ನೇ ಆ ಪುಸ್ತಕ ವಿವರಿಸಿರುತ್ತದೆ. ಇದು ನನಗೆ ಗೊತ್ತಿರಬೇಕಾದರೆ, ನಾನೂ ದೊಡ್ಡಸ್ತಿಕೆಯವನು ಅಂತೀರೇನು?... ಛೆ, ಹಾಗೇನಿಲ್ಲ... ಇವರ ದೊಡ್ಡಸ್ತಿಕೆ ಪರೀಕ್ಷೆ ಮಾಡಲು ನಾನು ಓದಿದ ಕೆಲವು ಪುಸ್ತಕಗಳ ಸಾರಾಂಶ ಸುಮಾರು ಇದೇ ರೀತಿ–ಅದರಿಂದ ನನಗೆ ಗೊತ್ತು.



ಆಧುನಿಕ ಸಂಸ್ಕೃತಿಯ ದೊಡ್ಡಸ್ತಿಕೆಯ ಬಗ್ಗೆ ಮಾತಾಡುವಾಗ ಕುಡಿತ–ಕುಣಿತವನ್ನು ಮರೆತರೆ ಉಪ್ಪೇ ಇಲ್ಲದ ಊಟದಂತಾಗುತ್ತದೆ. 'ಏನಂದ್ರೀ? ಕುಡಿಯುವುದಿಲ್ಲವೇ? ಛ್ಛ, ಬರೀ ನಿಂಬೇ ಶರಬತ್ತೇ? ಛೆ, ನೀವು ಇಲ್ಲಿ ಜನಗಳ ಜೊತೆ ಬೆರೆಯೋಕ್ಕೆ ಯೋಗ್ಯವಲ್ಲ' ಎಂದು ತೀರ್ಪು ಕೊಟ್ಟೇ ಬಿಡುತ್ತಾರೆ. 'ಅಹ ನಾನು ಜಿನ್ ಕುಡಿಯುವುದು' ಅಂತ ಒಬ್ಬರ ಹೆಗ್ಗಳಿಕೆಯಾದರೆ, 'ಇಲ್ಲಪ್ಪ, ನಾನು ಸ್ಕಾಚ್ ಇಲ್ಲದಿದ್ರೆ ಮೂಸಿನೋಡುವುದೇ ಇಲ್ಲ' ಅನ್ನುವುದು ಇನ್ನೊಬ್ಬರ ಹೆಗ್ಗಳಿಕೆ. 'ನಂಗೇನೂ ಆಗುಲ್ಲ, ಐದಾರು ಪೆಗ್ ಕುಡಿದರೂ ಸೆಟ್ಟಿಗೆ ಸಹೀ ಬರ್ತೆ' ಎಂದು ಜಂಭಕೊಚ್ಚುತ್ತಾ ಅಲ್ಲೇ ನಿಂತಿರುವ ಹೆಣ್ಣಿನ ಮೇಲೇ ವಾಲಿದಾಗ. ಇದೇನು ಅಮಲಿನ ಪರಿಣಾಮವೋ ಅಥವಾ

ದೊಡ್ಡಸ್ತಿಕೆಯ ಹೊಸ ರೀತಿಯೋ ಅರ್ಥವಾಗುಲ್ಲ. ಹಾಗೇ ಆ ಹೆಣ್ಣಿನ ಸೊಂಟ ಬಳಸಿಯೋ, ಜ್ವರ ಬಂದವರಂತೆಯೋ ಅಥವಾ 'ದೇವರು' ಬಂದಾಗ ನಡುಗುವಂತೆಯೋ ಮೈ ಕುಣಿಸುತ್ತಾ ಕುಣಿಯುವುದೇ ಒಂದು ದೊಡ್ಡಸ್ತಿಕೆ. ಈ ದೊಡ್ಡಸ್ತಿಕೆಯಲ್ಲಿ ಪಾಲುಗೊಳ್ಳದಿದ್ದರೆ ನಗೆಪಾಟಲು; ಪಾಲುಗೊಳ್ಳದೆ ಅದನ್ನು ದೂರದಿಂದಲೇ ಮೆಚ್ಚಿ ಚಪ್ಪಾಳೆಯೂ ತಟ್ಟದಿದ್ದರೆ ನಿಮಗೆ ದೊಡ್ಡಸ್ತಿಕೆಯ ಕಂಪನಿಯಿಂದಲೆ ಬಹಿಷ್ಕಾರ, ಇದೇ ರೀತಿ ಶ್ಲೀಲ–ಅಶ್ಲೀಲ, ಹಾಸ್ಯ ಚಟಾಕಿ ಹಾರಿಸುವುದು, ಹೆಣ್ಣಿನೊಡನೆ ಚಕ್ಕಂದ, ಹೆಣ್ಣಿನ ಭುಜಕ್ಕೆ ಭುಜ ಸವರುವುದು (ನೆಕಿಂಗ್), ಇವೆಲ್ಲಾ ಇಂದಿನ ದೊಡ್ಡಸ್ತಿಕೆಯ ಮುಖ್ಯ ಲಕ್ಷಣಗಳು. ಇವೆಲ್ಲವನ್ನೂ ನೀವು ಮೆಚ್ಚದಿರಬಹುದು. ಅಥವಾ ಈ ರೀತಿ ಕುಡಿತ ಕುಣಿತ, ಹಾಸ್ಯ,ಫ್ಲರ್ಟಿಂಗ್, ನೆಕಿಂಗ್, ಪಾಶ್ಚಾತ್ಯ ಸಂಗೀತ ಎಲ್ಲಾ ನಿಮಗೆ ಸ್ವಾಭಾವಿಕವಾಗಿರದೇ ಇರಬಹುದು. ಆದರೂ ಇವೆಲ್ಲವೂ ನಿಮಗೆ ಇಷ್ಟವಾದದ್ದು, ಹಿಡಿಸುವಂತಾದ್ದು ಅನ್ನುವ ತೋರಿಕೆಯಿಂದಲೇ ನಿಮ್ಮ ದೊಡ್ಡಸ್ತಿಕೆ ಹೆಚ್ಚುವುದು ತೋರಿಕೆ ಹೆಚ್ಚಿದಷ್ಟೂ ದೊಡ್ಡಸ್ತಿಕೆ ಹೆಚ್ಚು.

ಬಲಭೀಮ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿದರೂ ಒಂದು ಮುದಿ ಕೋತಿಯ ಬಾಲವನ್ನೂ ಒಂದೆಳೆ ಅಲುಗಾಡಿಸಲಾಗಲಿಲ್ಲ. ಅಂದರೆ ಭುಜಬಲವೇ ಸರ್ವಶಕ್ತಿ ಅಂತ ಜಂಭದಿಂದ ಮೆರೆಯುತ್ತಿದ್ದ ಭೀಮನಿಗೆ ಭುಜ ಬಲಕ್ಕಿಂತಲೂ ಅಂತಃಶಕ್ತಿ ಇನ್ನೂ ಬಲವಾದದ್ದು ಎಂದು ತೋರಿಸಿ ಕೊಟ್ಟಂತಾಯಿತು. ಆಧುನಿಕ ಮಾನವ ಹಕ್ಕಿಯಾಗಿ ಗಾಳಿಯಲ್ಲಿ ಹಾರಬಲ್ಲ, ಮೀನಿನಂತೆ ನೀರಿನಲ್ಲಿ ಈಜಬಲ್ಲ ಎಂದು ದೊಡ್ಡಸ್ತಿಕೆ ತೋರಿಸಿದಾಗ, ಡಾ। ರಾಧಾಕೃಷ್ಣನ್‌ರು 'ಆದರೆ ಅವನು ಇನ್ನು ಮಾನವನಂತೆ ನೆಲದಮೇಲೆ ನಡೆಯಲಾರ' ಅಂದರಂತೆ. ಇದೇ ರೀತಿ ಯಾವುದೋ ಲಾಟರಿಯಲ್ಲೋ ಅಥವಾ ಅರಬ್ಬೀ ಶೇಖರ ಮರಳುಗಾಡಿನಲ್ಲಿ ದುಡಿದ ಫಲದಿಂದಲೋ ಬೆಳಕು ಹರಿಯುವುದರೊಳಗೆ ಶ್ರೀಮಂತರಾಗಿರುವವರ ಸೊಕ್ಕು, ದೊಡ್ಡಸ್ತಿಕೆಯಲ್ಲಿ ಸಹಜ ಮಾನಸೀಯತೆ,ತಿಳುವಳಿಕೆಯ ಕೊರತೆ ಎದ್ದು ಕಾಣುವುದು ಸಾಮಾನ್ಯ. ಹೀಗೆ ತೋರಿಕೆಯ ಗುಣವೇ ಒಂದು ಹೆಮ್ಮೆಯಾಗಿ ದೊಡ್ಡಸ್ತಿಕೆ ಅನಿಸಿಕೊಂಡಂತೆ, ಇರುವ ಯಾವುದೋ ಕಿಂಚಿತ್ತು ಗುಣವೋ, ಶ್ರೀಮಂತಿಕೆಯೋ ಬೇರೆಲ್ಲ ದುರ್ಗುಣವನ್ನೂ ಮುಚ್ಚಿ ಹೆಮ್ಮೆಪಡುವುದೂ ಇನ್ನೊಂದು ರೀತಿಯ ದೊಡ್ಡಸ್ತಿಕೆ.

'ನಾವು ಹುಡುಗರಾಗಿದ್ದಾಗ ಕಲ್ಲು ತಿಂದು ಕಲ್ಲು ಅರಗಿಸಿಕೊಳ್ಳುತ್ತಾ ಇದ್ದೆವು. ಅಚ್ಚೇರು ಅಕ್ಕಿಯ ಅನ್ನ ಒಬ್ಬರಿಗೇ ಸಾಕಾಗುತ್ತಿರಲಿಲ್ಲ' ಅಂತ ದೊಡ್ಡವರು ಬೈಯುವುದನ್ನು ಕೇಳಿದ್ದೀವಿ. ಆಗ ಈಗಿನಂತೆ ರೇಷನ್ ಇರಲಿಲ್ಲ. ಜೇಬು ತುಂಬಾ ದುಡ್ಡಿದ್ದರೆ ಚೀಲದ ತುಂಬಾ ಸಾಮಾನು ಬರ್ತಿತ್ತು. ಈಗ ಚೀಲದ ತುಂಬಾ ಹಣ ಇದ್ದರೆ ಜೇಬು ತುಂಬಾ ಸಾಮಾನು ಬರಬಹುದು. ಆದರೆ ಈಗಿನವರು ಊಟತಿಂಡಿಯಲ್ಲಿ ಬಲು ಸೂಕ್ಷ್ಮವಾಗಿರಲು ಅದಲ್ಲ ಕಾರಣ; ಮುಖ್ಯವಾಗಿ ದೊಡ್ಡಸ್ತಿಕೆ ಕಾರಣ. ಎಲ್ಲಾದರೂ ಊಟಕ್ಕೆ ಹೋದರೆ, ಊಟಕ್ಕಿಂತ ಮೇಜು ಮರ್ಯಾದೆ ಅರ್ಥಾತ್ ಟೇಬಲ್ ಮ್ಯಾನರ್ಸ್ ಮುಖ್ಯ. ಸೀಳು ಚಮಚ, ಕತ್ತೀಲಿ ನಾಲಿಗೆ ಕುಯ್ದುಕೊಳ್ಳದೆ ಊಟ ಮಾಡುವುದು ನಿಮ್ಮ ಸುರಕ್ಷತೆಗೆ ಅಗತ್ಯವೊಂದೇ ಅಲ್ಲ, ಅದು ದೊಡ್ಡಸ್ತಿಕೆಗೂ ಅತ್ಯವಶ್ಯ. ಕೈಯಲ್ಲೇ ಊಟ ಮಾಡುವುದಾದರೆ, ಕನಿಷ್ಠ ಬೆರಳು ಮತ್ತು ಹೆಬ್ಬೆರಳು ಎರಡರ ತುದಿಯಲ್ಲೇ ಎಲ್ಲವನ್ನೂ ಮುಟ್ಟಬೇಕು – ಬಲಗಡೆಯ ಸಿಹಿಯನ್ನು ಎಡಗಡೆಯ ಉಪ್ಪಿನ ಮೇಲಿಟ್ಟು, ಇಟ್ಟಿದ್ದ ಅನ್ನವನ್ನು ಅಲ್ಲಿ ಪಲ್ಯದ ಮೇಲಿಟ್ಟು, ಎಲ್ಲದರ ಸ್ಥಳ ಬದಲಾಯಿಸಿ ಊಟ ಮುಗಿಯಿತೆಂದು ತಟ್ಟೆಯ ಭರ್ತಿ ಎಲ್ಲಾ ಹಾಗೇ ಉಳಿಸುವುದೇ ದೊಡ್ಡಸ್ತಿಕೆ. ಇದೇ ರೀತಿ ಊಟ–ತಿಂಡಿಯ ವಿಚಾರಗಳಲ್ಲಿ ನೀವು ತೋರಬಹುದಾದ ದೊಡ್ಡಸ್ತಿಕೆಗೆ ಕೆಲವು ಸಲಹೆ ಸೂಚನೆಗಳು–'ನಮ್ಮೆಜಮಾನ್ರು ಬೆಳಿಗ್ಗೆ ಮಾಡಿದ್ದನ್ನು ರಾತ್ರಿ ಮುಟ್ಟೊಲ್ಲಪ್ಪ' (ಬೆಳಿಗ್ಗೆ ಮಾಡಿದ್ದನ್ನು ಬೆಳಿಗ್ಗೆಯೇ ಮುಟ್ಟರುಲ್ಲ, ನಾಲ್ಕು ದಿನ ರೆಫ್ರಿಜರೇಟರಲಿಟ್ಟು ತಿನ್ನುವುದೇ ಅಭ್ಯಾಸ). 'ಅಯ್ಯೋ,ನಿಮ್ಮನೇಲಿ ಬದನೆಕಾಯಿ ಮಾಡಿಬಿಟ್ರೆರಾ ನಮ್ಮನೇಲಿ ಯಾರೂ ಬದನೇ ಕಾಯಿ ತಿನ್ನೋದೇ ಇಲ್ಲ' (ನಾವು ಬದನೆ ತಿನ್ನೂದೂ ಇಲ್ಲ, ಆಚಾರ ಮಾಡೋದೂ ಇಲ್ಲ ಅಂತರ್ಥ). 'ನಾವು ಯಾರೂ ಕಾಫಿ/ಚಹಾ ಕುಡಿಯುವುದಿಲ್ಲ. ಆದ್ದರಿಂದ ನಾಲ್ಕು ಲೋಟ ಹಾಲು ಕೊಟ್ಬು ಬಿಡಿ' (ಮನೇಲಿ ಕಾಫಿಗೇ ಒಂದು ಲೋಟ ಹಾಲಿಲ್ಲದಿರುವಾಗ ಇವರ ದೊಡ

ಸ್ತಿಕೆ ನೋಡಿದಿರಾ!) 'ಇವರಿಗೆ ತರಕಾರಿ ಅಂದರೆ ಆಗುಲ್ಲ' (ಬರೀ ಮೀನು, ಮಾಂಸವೇ ಬೇಕೆಂದು ಅರ್ಥ). ನಮ್ಮನೇಲಿ ಸೋಮವಾರ, ಗುರುವಾರ, ಶನಿವಾರ ಒಪ್ಪೊತ್ತು ಊಟ (ಉಳಿದ ದಿನ ಉಪವಾಸ!) ಆದರೆ ಇವೆಲ್ಲದರ ತಲೆಯ ಮೇಲೆ ಹೊಡೆಯುವಂತಹ ದೊಡ್ಡಸ್ತಿಕೆ ನಿಮಗೆ ಬೇಕು ಅಂದರೆ, ನೀವೂ ಡಯಟಿಂಗ್‌ಮಾಡಬೇಕು–ಉಪ್ಪು ಅನ್ನ, ಟೊಮೇಟೋ…ಎಲ್ಲದರ ಕ್ಯಾಲರಿ ಎಣಿಸಿ, ಗುಣಾಕಾರ ಭಾಗಾಕಾರ ಮಾಡಿಕೊಂಡೇ ಊಟ ಮಾಡಿದರೆ ಅದು ದೊಡ್ಡಸ್ತಿಕೆಯ ಪರಮಾವಧಿ!

ಡಯಟಿಂಗ್ ಅಂದ ತಕ್ಷಣ ಆರೋಗ್ಯದ ನೆನಪಾಗುತ್ತದೆ. ಹಾಳು ಡಯಟಿಂಗ್‌ನಿಂದಲೇ ಅನಾರೋಗ್ಯ ಅಂತ ಒಂದು ಗುಂಪು; ಡಯಟಿಂಗ್ ಮಾಡಿದರೇ ಆರೋಗ್ಯವೆಂದು ಇನ್ನೊಂದು. ನೀವು ಯಾವ ಗುಂಪು ಸೇರುತ್ತೀರೋ ಅದರ ಮೇಲವಲಂಬಿಸಿದೆ ನಿಮ್ಮ ದೊಡ್ಡಸ್ತಿಕೆ. ಮೊದಮೊದಲು ಬ್ಲಡ್‌ಪ್ರೆಷರ್ ಜಾಸ್ತಿ ಅನ್ನೋದೇ ದೊಡ್ಡಸ್ತಿಕೆಯಾಗಿತ್ತು. ಯಾರನ್ನು ನೋಡಿದರೂ ಈ ಪ್ರೆಷರ್ ಅಥವಾ ಡಯಾಬಿಟಿಸ್ ಬಗ್ಗೆ ಮಾತಾಡುವುದೇ ಕೇಳಿ ಕೆಲವರಿಗೆ ತಮ್ಮ ದೊಡ್ಡಸ್ತಿಕೆ ಕಡಿಮೆಯಾಯಿತೆಂದು ಅನಿಸಿರಬೇಕು. ಅದರಿಂದಲೇ ಹಾರ್ಟ್‌ವೀಕ್ ಅನ್ನುವ ದೊಡ್ಡಸ್ತಿಕೆ ಶುರುವಾಗಿದೆ. ನಿಜವಾಗಲೂ ಅನಾರೋಗ್ಯದಿಂದ ಒದ್ದಾಡುವವರ ಮನನೋಯಿಸುವಾರವೆಂದು ಇಂತಹ ದೊಡ್ಡಸ್ತಿಕೆಯ ವಿಚಾರ ಹೆಚ್ಚು ಬೆಳೆಸುವುದು ಸೂಕ್ತವಲ್ಲ.

ತಮ್ಮಲ್ಲಿ ಯಾವುದು ಇಲ್ಲವೋ, ಯಾವುದಕ್ಕೆ ಕೊರತೆಯಿದೆಯೋ ಅದೇ ತಮ್ಮಲ್ಲಿದೆಯೆಂದು ಹೆಮ್ಮೆಯಿಂದ ಜಂಭ ಕೊಚ್ಚಿಕೊಳ್ಳುವುದು ಇನ್ನೊಂದು ತರಹದ ದೊಡ್ಡಸ್ತಿಕೆ. 'ಅಯ್ಯೋ, ಇವರು ತುಂಬಾ ಧಾರಾಳ, ದುಡ್ಡನ್ನಂತೂ ನೀರಿನ ಹಾಗೆ ಖರ್ಚು ಮಾಡಿಬಿಡುತ್ತಾರೆ'–ದುಡ್ಡೂ ಇಲ್ಲ, ಖರ್ಚು ಮಾಡುವ ಮನಸ್ಸೂ ಇಲ್ಲ ಅಂದುಕೊಳ್ಳಿ. 'ನಮ್ಮನೇಲಿ ಅದಿನ್ನೆಷ್ಟು ಜನ ಊಟ ಮಾಡಿಕೊಂಡು ಹೋಗ್ತಾರೋ. ಲೆಕ್ಕವೇ ಇಲ್ಲ: ನೀವು ಬರುವ ಮೊದಲು ಒಂದು ಸಲ ಫೋನ್ ಮಾಡಿ ಬಂದು ಬಿಡಿ'–ಹು ಅನ್ನಿ. ಈ ದೊಡ್ಡಸ್ತಿಕೆಯ ಮಾತುಗಳಿಗೆ ಉದಾಹರಣೆಗಳು ಬೇಕಾಗಿಲ್ಲ… ನಿಮ್ಮ ಅಕ್ಕಪಕ್ಕದವರನ್ನು ನೋಡಿ, ಅವರ ಮಾತನ್ನು ಯೋಚಿಸಿ ಕೇಳಿ–ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ.

ಮೇಲಿನವೆಲ್ಲಾ ಸಾಮಾನ್ಯವಾಗಿ ಆಸೇತು–ಹಿಮಾಚಲದವರೆಗೆ ಎಲ್ಲಾ ಕಡೆಯೂ ಕಂಡು ಬರುವ ದೊಡ್ಡಸ್ತಿಕೆಗಳು ಆದರೆ ನಮ್ಮವರು– ಅಂದರೆ ನಮ್ಮ ಕನ್ನಡ ಮಂದಿ– ನಾವು ಬೇರೆಯವರಿಗಿಂತ ಭಿನ್ನ ಎಂದು ತೋರಿಸಿಕೊಳ್ಳುವ ಕಾತರದಲ್ಲಿ ಇನ್ನೊಂದು ವಿಚಿತ್ರ ರೀತಿಯ ದೊಡ್ಡಸ್ತಿಕೆಯನ್ನು ಬೆಳೆಸಿಕೊಂಡು ಮೆರೆಯುತ್ತಿದ್ದಾರೆ. ನಾನು ಇಡೀ ದೇಶ ಸುತ್ತಿದ್ದೀನಿ–ಇಂತಹ ಕನ್ನಡಿಗರ ವಿಚಿತ್ರ ದೊಡ್ಡಸ್ತಿಕೆ ದೇಶದ ಇನ್ನೆಲ್ಲೂ ಕಾಣಸುವುದಿಲ್ಲ. ಏನ್ರೀ? ಕನ್ನಡದ ಕೋಲೇ ಬಸವ ಇನ್ನೂ ಗೊತ್ತಾಗಲಿಲ್ವೇ, ನಮ್ಮ ಈ ದೊಡ್ಡಸ್ತಿಕೆ ಯಾವು ಅಂತ? ಪಾಪ, ನಾನು ನಿಮಗೆ ಕನ್ನಡದಲ್ಲೇ ಹೇಳಿದರೆ ನಿಮಗೆ ಹೇಗೆ ಅರ್ಥ ಆಗಬೇಕು, ಅಲ್ಲವೆ? ಅಲ್ಲರೀ, ನಮ್ಮ ಕನ್ನಡದವರ (High browisom) ಯಾವ್ದು ಗೊತ್ತೇನ್ರೀ…? ಆ…ಹ್ಞಾ… ಈಗ ನೋಡಿದಿರಾ ನಿಮ್ಗೆ ಅರ್ಥ ಆಗ್ತಾ ಇದೆ. ನಾನೂ ಅದೇ ಹೇಳಿದ್ದು: 'ಕನ್ನಡ ಅರ್ಥ ಆಗುಲ್ಲ, ಸರಿಯಾಗಿ ಬರುಲ್ಲ ಎಂದು ಹೇಳಿಕೊಳ್ಳುವುದೇ ನಾನು ಹೇಳುತ್ತಿದ್ದ ದೊಡ್ಡಸ್ತಿಕೆ!'

ಹೌದು, ಈಚೆಗೆ ಕನ್ನಡ ಬರುಲ್ಲ ಅನ್ನುವ ದೊಡ್ಡಸ್ತಿಕೆ ಬಲು ಜಾಸ್ತಿಯಾಗುತ್ತಿದೆ. ಈ ಭಾಷಾಂಧತೆಯ (ಕನ್ನಡ ಬರುಲ್ಲ ಅನ್ನುವ), ಪರಭಾಷಾ ಪ್ರೇಮದ ದೊಡ್ಡಸ್ತಿಕೆಯನ್ನು ಕಂಡುಹಿಡಿದು, ಬೆಳೆಸಿ, ಬಳಸಿಕೊಂಡು ಮೆರೆಯುತ್ತಿರುವ ಹೆಮ್ಮೆ ಇಡೀ ದೇಶದಲ್ಲಿ ಕನ್ನಡಿಗರನ್ನು ಬಿಟ್ಟರೆ ಬೇರಾರಿಗೂ ಇಲ್ಲ ಎಂದು ಧೈರ್ಯವಾಗಿ ಎದೆ ತಟ್ಟಿ ಹೇಳಿಕೊಳ್ಳಬಹುದು–ಭೇಷ್! ಧೀರ ಕನ್ನಡಿಗ!! ಈ ದೊಡ್ಡಸ್ತಿಕೆಯ ಕೆಲವು ಉದಾಹರಣೆಗಳನ್ನು ನೋಡಿ– 'How stupid I am ! ಕನ್ನಡ ಅಕ್ಷರಗಳೇ ಮರೆತು ಹೋಗಿದೇರಿ. ಅಮ್ಮನಿಗೆ ಕಾಗದ ಬರೆಯುವುದಿರಲಿ, ಓದೋದೆ ಕಷ್ಟ' ಅಂತಾರೆ ಒಬ್ಬರು. 'ಲೇಖನ ಬರೀತೀರಾ ? I see ! ಎಲ್ಲಿ ಪ್ರತಿ ತಿಂಗಳೂ ನಾನು ಡೈಜೆಸ್ಟ್ ನೋಡ್ತೀನಿ. ಕಾಣಲಿಲ್ಲವಲ್ಲಾ' ಅಂದರು ಒಬ್ಬರು ಪ್ರಭೃತಿ. ಅವರು ನೋಡುವುದು ಇಂಗ್ಲೀಷಿನ ರೀಡರ್ಸ್ ಡೈಜೆಸ್ಟ್, ಅವರಲ್ಲಿ ನನ್ನ ಕನ್ನಡ ಲೇಖನ ಎಲ್ಲಿ

ಬರಬೇಕು? ಅವರ ಮಾತಿನ ಸಾರಾಂಶ, ಅವರು ಕನ್ನಡ ಪತ್ರಿಕೆಗಳನ್ನು ನೋಡುಲ್ಲ ಅನ್ನುವ ದೊಡ್ಡಸ್ತಿಕೆಯ ತೋರಿಕೆ ಅಷ್ಟೆ.

ಕನ್ನಡಿಗರಿಗೆ ಪಕ್ಕದವ ಯಾವ ರೀತಿ ಮಾತಾಡ್ತಾನೋ ಹಾಗೇ, ಅದೇ ಭಾಷೇಲಿ ಮಾತಾಡಬೇಕು ಅನ್ನೋ ಪರಭಾಷಾಪ್ರೇಮ ಬಲು ಜಾಸ್ತಿ. ಹೀಗಾಗಿ, ಹಿಂದೆ ತತ್ಸಮ–ತದ್ಭವ ಇದ್ದಂತೆ, ಈಗ ದತ್ಸಮ–ದದ್ಭವ, ವತ್ಸಮ–ವದ್ಭವ. ಇತ್ಯಾದಿಗಳು ಐಚ್ಛಿಕವಾಗಿ ಹುಟ್ಟಿಕೊಂಡು ನಮ್ಮ ವ್ಯಾಕರಣ ಬಹಳಷ್ಟು ದೀರ್ಘವೂ ಕಠಿಣವೂ ಆಗಿ ಬೆಳೆದಿದೆ. ಸ್ನೇಹಿತರೊಬ್ಬರು ಸಿಕ್ಕಿ ಬಂದಾಗ ಹದಿನೈದು ನಿಮಿಷ ಎಡೆಬಿಡದೆ ತುಳು–ಕನ್ನಡ–ಇಂಗ್ಲಿಷ್ ಹಿಂದಿ ಬೆರಕೆಯಲ್ಲಿ ಮಾತಾಡುವ ವಿದ್ವಾಂಸರಾಗಿದ್ದರು. ಆದರೆ ಅದನ್ನು ಅರ್ಥಮಾಡಿಕೊಳ್ಳುವ ಪಾಂಡಿತ್ಯ ನಮ್ಮಲ್ಲಿ ಯಾರಿಗೂ ಇರಲಿಲ್ಲ. ದೇಶದ ಹತ್ತು ಕಡೆಯಿಂದ ಬಂದವರನ್ನು ಒಂದು ಕಡೆ ಕಲೆ ಹಾಕಿ ನೋಡಿ. ಐದು ನಿಮಿಷದಲ್ಲಿ ಕೆಲಕೆಲವರು ಎನ್ನಡಾ. ಕ್ಯೋಂ ಭಾಯಿ, ಕೇಮ್ಛೋ, ಕೆಮುನಾಚ್ಚೇನ್ ಅಂದುಕೊಂಡು ತಾವು ತಾವೇ ಗುರುತು ಹಿಡಿದು ಗುಂಪು ಗುಂಪಾಗುತ್ತಾರೆ. ಯಾವ ಗುಂಪೂ ಸೇರದೆ ಎಡೆಬಿಡಂಗಿಗಳಾಗಿ ಓಡಾಡುವವರೆಂದರೆ ಕನ್ನಡಿಗರೊಬ್ಬರೇ, ಅವರಲ್ಲಿ ಒಬ್ಬೊಬ್ಬರೂ ಒಂದೊಂದು ಗುಂಪು ಸೇರಿ ತಮ್ಮ ಹರಕು ಮುರುಕು ಭಾಷೆಯಲ್ಲಿ ತಮ್ಮ ಪರಭಾಷಾ ಪ್ರಾವೀಣ್ಯ ತೋರಿಸುತ್ತಾರೆ. ಒಂದು ವೇಳೆ ಇಬ್ಬರು ಕನ್ನಡಿಗರು ಒಟ್ಟಿಗೆ ಬಂದರೆ, Hello how are you ? ಅಂದುಕೊಂಡು ಬೇಗನೇ ದೂರ ದೂರ ಹೋಗ್ತಾರೆ. ಇದು ಕನ್ನಡದವರ ಹೆಗ್ಗಳಿಕೆ, ಇನ್ನಾರಿಗೂ ಬಾರದ ದೊಡ್ಡಸ್ತಿಕೆ. ಉತ್ತರ ದೇಶಕ್ಕೆ ಕೆಲಸಗಳಿಗಾಗಿ ವಲಸೆ ಹೋದವರ ಭಾಷಾಪ್ರೇಮ ದೊಡ್ಡಸ್ತಿಕೆಯ ಒಂದು ಪರಮಾವಧಿ! ಅಣ್ಣ–ತಮ್ಮಂದಿರು ಅಮ್ಮ–ಮಕ್ಕಳು ಮನೆಯಲ್ಲಿ ಮಾತಾಡುವುದು ಹಿಂದಿಯಲ್ಲೋ ಇಲ್ಲವೇ ಪ್ರಾದೇಶಿಕ ಭಾಷೆಯಲ್ಲೋ. 'ಅಯ್ಯೋ, ನಮ್ಮ ಮಕ್ಕಳಿಗೆ ಕನ್ನಡ ಬರೋದೇ ಇಲ್ಲ.' ಅಬ್ಬಾ! ಏನು ಹೆಮ್ಮೆಯ ವಿಷಯ!! ಈ ಮಾತ್ರ ಭಾಷಾಪ್ರೇಮ ಮಾತೆಗೆ ಕೊಡಬೇಕು ಕನ್ನಡಾಂಬೆಯ ಕಿರೀಟವನ್ನು!!!



ಅಂತೂ ಹೀಗೆ ಒಬ್ಬೊಬ್ಬರದು ಒಂದೊಂದು ರೀತಿಯ ಹೆಗ್ಗಳಿಕೆ, ದೊಡ್ಡಸ್ತಿಕೆ. ಕುಮಾರವ್ಯಾಸನೇನಾದರೂ ಈಗ ಇದ್ದಿದ್ದರೆ ಪ್ಯಾಂಟು–ಫ್ಯಾಷನ್ನಿನ ಮೆರುಗಿನ ಹೆಗ್ಗಳಿಕೆ, ಕುಡಿದು ಬೀಳುವ ಹೆಗ್ಗಳಿಕೆ. ಕುಣಿದು ಮೇಲೆ ಬರುವ ಹೆಗ್ಗಳಿಕೆ. ಲಂಚ ನೀಡಿ ತೇಗುವ ಹೆಗ್ಗಳಿಕೆ. ಇಲ್ಲದಿರುವುದೇ ಹೆಗ್ಗಳಿಕೆ, ಇದ್ದುದನ್ನು ಇಮ್ಮಡಿಗೊಳಿಸುವ ಹೆಗ್ಗಳಿಕೆ, ಮನೆಗೆ ಮಾರಿ–ಪರರಿಗುಪಕಾರಿಯಾದುದ ಹೆಗ್ಗಳಿಕೆ, ಕನ್ನಡವನ್ನೇ ಮರೆತಿಹೆನೆಂಬ ಪಿರಿಯ ಹೆಗ್ಗಳಿಕೆ–ಎಂದು ಅದಿನ್ನೇನು ದೊಡ್ಡಸ್ತಿಕೆಯ ಬಗ್ಗೆ ಹಾಡುತ್ತಿದ್ದನೋ ಅವನಿಗೇ ಗೊತ್ತು. ✿

ತನ್ನ ನಿಜವಾದ ವಯಸ್ಸನ್ನು ಹೇಳಿಬಿಡುವ ಹೆಣ್ಣನ್ನು ಎಂದಿಗೂ ನಂಬಬೇಡಿ; ಯಾಕೆಂದರೆ ಆಕೆಗೆ ಯಾವುದನ್ನು ಹೇಳಬೇಕು, ಯಾವುದನ್ನು ಹೇಳಬಾರದು ಎಂಬ ಜ್ಞಾನ ಸಹ ಇರುವುದಿಲ್ಲ.

–ಆಸ್ಕರ್ ವೈಲ್ಡ್

ನಾಲಿಗೆಗೂ ಒಂದು
'ಆಚಾರ'ವಿದೆಯಲ್ಲ ....

ಜಿಹ್ವಾಮೀಮಾಂಸೆ

ಡಾ. ಎಂ. ದಯಾಕರ

ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ, ಸವಿಯು ಸಕ್ಕರೆಯೆರಡೂ ಜಿಹ್ವೆಯೊಳಗೊ" ಎಂದೆಲ್ಲ ದಾಸರು ಹಾಡಿದ್ದಾರೆ. ಈಗಿನ ವಿಜ್ಞಾನಯುಗದಲ್ಲೂ ನಮಗೆ ರುಚಿಯ ವಿಚಾರ ಹೆಚ್ಚು ಒಗಟಾಗಿಯೇ ಉಳಿದಿದೆ. 'ನಾನು' ಎನ್ನುವ ಪ್ರಜ್ಞೆಯಿಲ್ಲದಿದ್ದರೆ ಯಾವ ಅನುಭವವೂ ಆಗುವುದಿಲ್ಲ.

ರಸನೇಂದ್ರಿಯ ಪಂಚೇಂದ್ರಿಯಗಳಲ್ಲೊಂದು. ಲೋಕೋ ಭಿನ್ನರುಚಿಃ ಎಂಬ ಮಾತು ಮನುಷ್ಯರಿಗೆ ಮಾತ್ರ ಅನ್ವಯಿಸದೆ ಪ್ರಾಣಿಗಳಿಗೂ ಅನ್ವಯಿಸುತ್ತದೆ. ಮಾಂಸಾಹಾರಿಗಳಿಗೆ ಸಸ್ಯಾಹಾರ ರುಚಿಸದು, ಜೀರ್ಣವೂ ಆಗದು. ಮನುಷ್ಯರಲ್ಲೆ ಒಬ್ಬರಿಗೆ ಪ್ರಿಯವಾದುದು ಮತ್ತೊಬ್ಬರಿಗೆ ಹಿಡಿಸದಿರಬಹುದು. ರಸನೇಂದ್ರಿಯಕ್ಕೆ ರಾಸಾಯನಿಕ ವಸ್ತುಗಳು ನೇರ ಚೋದಕಗಳು. ಘ್ರಾಣೇಂದ್ರಿಯಕ್ಕೆ ರಾಸಾಯನಿಕಗಳು ಚೋದಕಗಳಾದರೂ ಆ ವಸ್ತುಗಳು ದೂರದಲ್ಲಿದ್ದು ಅವುಗಳ ಕಣಗಳು ಗಾಳಿಯಲ್ಲಿ ತೇಲುತ್ತ ಮೂಗಿಗೆ ಬಡಿದಾಗ ವಾಸನೆಯುಂಟಾಗುತ್ತದೆ. ಏಕಾಣುಜೀವಿಗಳಲ್ಲೂ ರಾಸಾಯನಿಕಗಳಿಗೆ ಪ್ರತಿಕ್ರಿಯೆಯಿದೆ. ಆದರೆ ರುಚಿಯ ಸೂಕ್ಷ್ಮಾಂಗಗಳು ಚತುಷ್ಪಾದಿಗಳಲ್ಲಿ, ಅವುಗಳಲ್ಲೂ ಸ್ತನಿಗಳಲ್ಲಿ ಮಾತ್ರ ಕಂಡುಬರುತ್ತವೆ. ಹಲವು ಸ್ತನಿಗಳಲ್ಲದ ಪ್ರಾಣಿಗಳಲ್ಲಿ ನಾಲಿಗೆಯಿರುವುದಿಲ್ಲ; ಇದ್ದರೂ ಆದಿ ರೂಪದಲ್ಲಿ ಇರುತ್ತದೆ.

ಪ್ರಾಣಿಗಳ ದೇಹದ ಹೆಬ್ಬಾಗಿಲು ಬಾಯಿ, ಸ್ತನ್ಯೇತರ ಪ್ರಾಣಿಗಳಲ್ಲಿ ಅಂಗುಳಿಲ್ಲದೆ ಮೂಗು ಬಾಯಿ ಒಂದೇ ಆಗಿರುವುದರಿಂದ ಘ್ರಾಣೇಂದ್ರಿಯವು ತಕ್ಕ ಆಹಾರವನ್ನು ಆಯ್ದುಕೊಳ್ಳುವುದಕ್ಕೆ ಬೇಕಾಗುತ್ತದೆ. ಜಲಚರಗಳಲ್ಲಿ ವಾಸನೆ ರುಚಿ ಎರಡೂ ಒಂದೇ ಎನ್ನಬಹುದು. ಸ್ತನಿಗಳಲ್ಲಿ ಅಂಗುಳಿದ್ದು ಮೂಗಿಂದ ಬಾಯಿ ಬೇರೆಯಾಗಿರುವುದರಿಂದ ಅಗಿಯುವುದು ಸಾಧ್ಯವಾಗಿ ಆಹಾರಗಳ ವಿಚಾರದಲ್ಲಿ ವಿವೇಚನೆಯುಂಟಾಗಿ ವಿಷಮಯ ಹಾಗು ದೇಹಕ್ಕೆ ಬೇಡಾದ ವಸ್ತುಗಳು ವರ್ಜಿತವಾಗುತ್ತವೆ. ಹಲವು ವೇಳೆ ರುಚಿಯೊಡನೆ ವಾಸನೆಯೂ ಸಹಕರಿಸಿ ಅವೆರಡೂ ಒಂದೇ ಇಂದ್ರಿಯದಂತೆ ಕೆಲಸ ಮಾಡುತ್ತವೆ. ಸ್ತನಿಗಳ ಮೂಗಿನ ಮಧ್ಯ ತಡಕೆಯಲ್ಲಿರುವ ಜಾಕೊಬ್ಸನ್ ಅಂಗವೆಂಬುದು ಮನುಷ್ಯನಲ್ಲಿ ಕ್ಷೀಣವಾಗಿದೆ. ಆದರೂ ನೆಗಡಿಯಾದಾಗ (ಅಥವ ಬೆರಳಿಂದ ಮೂಗು ಮುಚ್ಚಿಕೊಂಡಾಗ) ಕಾಫಿಯು ಅದರ ವಾಸನೆಯಿಲ್ಲದೆ ಅಷ್ಟು ರುಚಿಸದು. ಇಷ್ಟ ಪದಾರ್ಥಗಳ ವಾಸನೆ ಮೂಗಿಗೆ ಬಡಿದರೆ ಬಾಯಲ್ಲಿ ನೀರೂರುವುದು, ಹೊಟ್ಟೆಯಲ್ಲೂ ಸ್ಥಳಾವಕಾಶವಾಗುವುದು.

ದೇಹದ ಆವಶ್ಯಕತೆಗೆ ತಕ್ಕಂತೆ ರುಚಿಯೂ ಮಾರ್ಪಡುವುದಿದೆ. ದೇಹದಲ್ಲಿ ಲವಣಾಂಶ ಕಡಿಮೆಯಾದರೆ ಉಪ್ಪಿನ ಮೇಲೆ (ಅಥವಾ ಉಪ್ಪು ಮಣ್ಣಿನ ಮೇಲೂ) ಆಸೆ ಹೆಚ್ಚುವುದು. ಪ್ರಾಣಿಗಳು ಕೂಡ ಬೇಕಾದಾಗ ಚೌಳು ಮಣ್ಣನ್ನು ಹುಡುಕಿಕೊಂಡು ಹೋಗಿ ಪ್ರೀತಿಯಿಂದ ನೆಕ್ಕುತ್ತವೆ.

ರುಚಿಯು ಚಿಕ್ಕಂದಿನ ಅಭ್ಯಾಸಗಳನ್ನು ಹೊಂದಿಕೊಂಡಿರಬಹುದು. ಮಾಂಸ ತಿನ್ನುವ ಅಭ್ಯಾಸವಿಲ್ಲದವರಿಗೆ ಅದರಿಂದ ಓಕರಿಕೆಯಾಗಬಹುದು, ಹಾಗೆಯೇ ಚಿಕ್ಕಂದಿನಿಂದ ಅಭ್ಯಾಸವಿರುವವರಿಗೆ ಅದನ್ನು ತಿನ್ನುವ ಚಟವಿರಬಹುದು. ಹೆಂಡ ಕುಡುಕರಿಗೆ ಹೆಂಡದ ಸಮಾನ ಬೇರೇನೂ ಇಲ್ಲ; ಅಭ್ಯಾಸವಿಲ್ಲದವರಿಗೆ ಅದು ಅಸಹ್ಯಕರ.

ಸಿಹಿ, ಕಹಿ, ಹುಳಿ, ಉಪ್ಪು, ಖಾರ, ಒಗರು ಎಂಬ ರುಚಿಗಳು ಷಡ್ರಸಗಳು. ಆದರೆ ವಿಜ್ಞಾನದಲ್ಲಿ ಸಿಹಿ, ಕಹಿ, ಹುಳಿ, ಉಪ್ಪು ಎಂಬ ನಾಲ್ಕು ಮೂಲ ರುಚಿಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಖಾರ ಎನ್ನುವುದು ಚರ್ಮಕೆ ತಗಲಿದಾಗ ಆಗುವಂಥ ಉರಿ. ಒಗರು ಎಂಬುದು ಒಗರು ಪದಾರ್ಥ ತಗಲಿದಾಗ ಆಗುವ ಸಸಾರಜನಕಗಳ ಪ್ರಕ್ಷೇಪ. ಅಡಿಕೆಯಿಂದ ಬಾಯ ಲೋಳ್ಪೊರೆಯ ಕಣಗಳಲ್ಲಿರುವ ಜೀವರಸದ ಪ್ರಕ್ಷೇಪದಿಂದ ಬಾಯಿ ಮದಡಾಗುತ್ತದೆ. ಆದರೆ ನಮಗೆ ತಿಳಿದಂತೆ ಕೇಸರಿಭಾತ್ ರುಚಿಯೇ ಬೇರೆ; ಪುಳಿಯೋಗರೆ ರುಚಿಯೇ ಬೇರೆ. ಈ ರೀತಿ ಐವತ್ತಕ್ಕೂ ಮೀರಿದ ಹಲವು ವಿಶೇಷ ರುಚಿಗಳಿರಬಹುದು. ಆದರೆ ಇವೆಲ್ಲ ವಿವಿಧ ಪ್ರಮಾಣಗಳಲ್ಲಾದ ನಾಲ್ಕು ಮೂಲ ರುಚಿಗಳ ಮಿಶ್ರಣವಿರಬಹುದು ಮತ್ತು ಇದರಲ್ಲಿ ವಾಸನೆಯ ಪಾತ್ರವೂ ಇರಬಹುದು.

ಉಪ್ಪು ರುಚಿಯು ಅಜೈವಿಕ ವಸ್ತು(ಲವಣ)ಗಳಿಂದಾಗುತ್ತದೆ. ಅಜೈವಿಕ ಹಾಗೂ ಜೈವಿಕ ಆಮ್ಲಗಳು ಹುಳಿಯ ಅನುಭವವುಂಟುಮಾಡುತ್ತವೆ. ಸಿಹಿ ಪದಾರ್ಥಗಳು ಇಂಗಾಲಾಣುಗಳ ತೆರೆದ ಸರಪಣಿಯ ಜೈವಿಕಗಳು, ಉದಾಹರಣೆಗೆ ಸಕ್ಕರೆಗಳು, ಪಿಷ್ಟ, ಗ್ಲಿಸರೀನ್, ಆಲ್ಡಿಹೈಡ್, ಕೀಟೋನ್, ಸೆಕರೀನ್, ಕ್ಲೋರೋಫಾರಂ. ಕೆಲವು ಸೀಸದ ಲವಣಗಳು (ವಿಷಮಯ ಸೀಸದ ಸಕ್ಕರೆಗಳು) ಮತ್ತು ದುರ್ಬಲ ಕ್ಷಾರಗಳು ಸಿಹಿಯಾದ ಕೆಲವು ಅಜೈವಿಕ ಅಪವಾದಗಳು. ಕಹಿ ಪದಾರ್ಥಗಳು ಹೆಚ್ಚಾಗಿ ಜೈವಿಕಗಳು; ಉದಾಹರಣೆಗೆ ಕ್ವಿನೀನ್ ಇತ್ಯಾದಿ ಕ್ಷಾರಕಗಳು, ಕೆಲವು ಗ್ಲೂಕೋಸೈಡ್‌ಗಳು, ಪಿತ್ತ ಲವಣಗಳು, ಮೆಗ್ನೀಷಿಯಂ, ಸೆಸಿಯಂ, ರೆಬಿಡಿನ್, ಅಮೋನಿಯಂ, ಕೆಲ ಕೆಲ್ಸಿಯಂ ಲವಣಗಳು ಅಜೈವಿಕ ಕಹಿ ಪದಾರ್ಥಗಳು. ಹೆಚ್ಚು ಜೈವಿಕ ಕಹಿ ಪದಾರ್ಥಗಳಲ್ಲಿ No_2 ಅಣು ಸಂಯೋಗಗಳಿರುತ್ತವೆ.

ಕಹಿ ಮತ್ತು ಸಿಹಿ ಪದಾರ್ಥಗಳಲ್ಲಿ ಹೆಚ್ಚು ರಾಸಾಯನಿಕ ನಿಕಟತ್ವವಿದೆ. ಸ್ಯಾಕರೀನ್ ಹೆಚ್ಚಾದರೆ ಕಹಿಯಾಗುತ್ತದೆ. ಡಲ್ಸಿನ್ ಎಂಬುದು ಸಕ್ಕರೆಗಿಂತ ೫೦೦ರಷ್ಟು ಹೆಚ್ಚು ಸಿಹಿ; ಅದರದೇ ರಾಸಾಯನಿಕ ರಚನೆಯುಳ್ಳ ಫಿನೈಲ್ ಡಯೊ ಕಾರ್ಬಮೈಡ್ ಎಂಬುದು ಕೆಲವರಿಗೆ ಸಪ್ಪೆ, ಆದರೆ ಬಹು ಜನರಿಗೆ ಕಹಿ.

ಈ ರೀತಿಯ ವೈವಿಧ್ಯದಿಂದ ರುಚಿಯ ಸಿದ್ಧಾಂತಗಳು ಅನೇಕವಿದ್ದರೂ ನಾಲ್ಕು ಮೂಲ ರುಚಿಗಳ ಸಿದ್ಧಾಂತಕ್ಕೆ ಹೆಚ್ಚು ಆಧಾರಗಳಿವೆ. ಆದರೆ ಇದೂ ಕೂಡ ಪೂರ್ಣ ತೃಪ್ತಿಕರವಾಗಿಲ್ಲ.

ನಾಲಿಗೆ ತುದಿಯಲ್ಲಿ ಸಿಹಿಯ ತಿಳಿವು ಹೆಚ್ಚು. ಹಿನ್ನಾಲಿಗೆಯಲ್ಲಿ ಕಹಿಯ ಅನುಭವ ಹೆಚ್ಚು. ಸೋಡಿಯಂ ಸೆಲಿಸಿಲೇಟ್ ಮುಂತಾದವು ನಾಲಿಗೆ ತುದಿಗೆ ಸಿಹಿ, ಬುಡಕ್ಕೆ ಕಹಿ. ಮೆಗ್ನೀಷಿಯಂ




ನಾಲಿಗೆ ಮೇಲ್ಮೈ

(ಅಥವ ಸೋಡಿಯಂ) ಸಲ್ಫೇಟ್ ಎಂಬುದು ನಾಲಿಗೆ ತುದಿಗೆ ಉಪ್ಪು, ಬುಡಕ್ಕೆ ಕಹಿ. ನಾಲಿಗೆ ಪಕ್ಕ ಅಂಚಿನ ಮುಂಭಾಗದಲ್ಲಿ ಉಪ್ಪು, ಹಿಂಭಾಗದಲ್ಲಿ ಹುಳಿಯು ರುಚಿಗಳಾಗುತ್ತವೆ. ನಾಲಿಗೆ ಕೆಳಗೆ ರುಚಿಯ ಅರಿವಿಲ್ಲ; ನಾಲಿಗೆಯ ಮೇಲೆ ಮಧ್ಯ ಭಾಗದಲ್ಲೂ ಇಲ್ಲ.


ರಸನೇಂದ್ರಿಯಾಂಗಗಳು

೧) ರುಚಿ ಮೊಗ್ಗುಗಳು, ೨) ೭, ೯ ಮತ್ತು ೧೦ನೆ ತಲೆನರಗಳಲ್ಲಿರುವ ಕೆಲವು ತಂತುಗಳು, ೩) ಮಿದುಳಿನ ಪಕ್ಕಗಳಲ್ಲಿ ಮಧ್ಯದಲ್ಲಿರುವ ಎಡ ಬಲ ರಸನೇಂದ್ರಿಯ ಕೇಂದ್ರಗಳು.



ರುಚಿ ಮೊಗ್ಗುಗಳು ರಸನೇಂದ್ರಿಯದ ಸೂಕ್ಷ್ಮ ಅಂತ್ಯಾಂಗಗಳು. ಇವು ಹೆಚ್ಚಾಗಿ ನಾಲಿಗೆಯಲ್ಲಿವೆ; ಕೆಲವು ಅಂಗುಳದಲ್ಲೂ ಕೆಲವು ಗಂಟಲಿನಲ್ಲೂ ಕೆಲವು ಗೋಮಾಳೆಯ ಮುಚ್ಚಳ(ಉಪಜಿಹ್ವೆ)ದಲ್ಲೂ ಇವೆ. ಕೆಲವರಲ್ಲಿ ಕೆನ್ನೆ ತುಟಿಗಳ ಒಳ ಭಾಗಗಳಲ್ಲೂ ಮೊಗ್ಗುಗಳಿವೆ. ಬಾಲ್ಯದಲ್ಲಿ ಮೊಗ್ಗುಗಳ ಸಂಖ್ಯೆ ಅದೂ ನಾಲಿಗೆ ತುದಿಯಲ್ಲಿ ಹೆಚ್ಚು. ವಯಸ್ಸಾದಂತೆ ಸಂಖ್ಯೆ ತಗ್ಗಿ ನಾಲಿಗೆ ಮಧ್ಯದಲ್ಲಿ ಮಾಯವಾಗುತ್ತವೆ. ಮುಪ್ಪಿನಲ್ಲಿ ರುಚಿ–ಜ್ಞಾನವೇ ಇಲ್ಲದಿರಬಹುದು.

ರುಚಿ ಮೊಗ್ಗುಗಳು ನಾಲಿಗೆ ಮೇಲೆ ಕಾಣುವ ಸಣ್ಣ ತೊಟ್ಟುಗಳಲ್ಲಿವೆ. ಹೆಚ್ಚು ಸಂಖ್ಯೆಯಲ್ಲಿರುವ ಚೂಪು ತೊಟ್ಟುಗಳಲ್ಲಿಲ್ಲ. ಕೆಂಪಗೆ ಗಸಗಸೆಯುಷ್ಟಿರುವ ಅಣಬೆ ತೊಟ್ಟುಗಳ ಮೇಲೆ ಒಂದೊಂದರಲ್ಲಿ ೮–೧೦ ರಂತಿವೆ. ಮುನ್ನಾಲಿಗೆ ಮತ್ತು ಹಿನ್ನಾಲಿಗೆಗಳ ಸಂಧಿಯಲ್ಲಿ ಮುಂದಕ್ಕೆ ಬಾಹುಗಳುಳ್ಳ ನ್ಯಾಸ



ಕಂದಕ ತೊಟ್ಟು


ದಲ್ಲಿ ಗುಳ್ಳೆಗಳಂತಿರುವ ೭–೧೨ ಕಂದಕ, ತೊಟ್ಟುಗಳ ಪಕ್ಕಗಳಲ್ಲಿ ಪ್ರತಿಯೊಂದರಲ್ಲಿ ೨೦೦ರಂತೆ ರುಚಿಮೊಗ್ಗುಗಳಿವೆ. ವಯಸ್ಸಾದಂತೆ ಸಂಖ್ಯೆ ಕ್ಷಯಿಸುತ್ತದೆ.

ಪ್ರತಿ ರುಚಿಮೊಗ್ಗು ಉದ್ದ ಈರುಳ್ಳಿಯಂತಿದೆ. ಉದ್ದ ೧/೧೬ ಮಿ. ಮೀ. ಮೊಗ್ಗಿನಲ್ಲಿ ದಪ್ಪ ೧/೫೦ ಮಿ. ಮೀ., ಮೊಗ್ಗಿನಲ್ಲಿ ೧/೧೬ ಮಿ. ಮೀ. ಉದ್ದ, ೧/೧೦೦ ಮಿ. ಮೀ. ದಪ್ಪವಿರುವ ಸುಮಾರು ೪೦ ಗ್ರಾಹಕ (ರುಚಿ) ಕಣಗಳಿವೆ; ಅವುಗಳ ಆಧಾರ ಕಣಗಳು ಸುಮಾರು ಅದೇ ಸಂಖ್ಯೆಯಲ್ಲಿವೆ. ರುಚಿ ಕಣಗಳ ಲೋಮಗಳು ೧/೫೦೦ ಮಿ. ಮೀ. ಉದ್ದವಿದ್ದು ಬಾಯೊಳಕ್ಕೆ ಚಾಚುತ್ತವೆ. ಪ್ರತಿ ರುಚಿ ಕಣದ ಸುತ್ತಲೂ ನರತಂತುಗಳ ಸೂಕ್ಷ್ಮ ಶಾಖೆಗಳು ಹರಡಿಕೊಂಡಿವೆ, ಪ್ರತಿ ರುಚಿಕಣದ ಆಯುಸು ಕೆಲವು ದಿನ ಮಾತ್ರ; ಮೊಲದಲ್ಲಿ ೧೦-೧೫ ದಿನ ಹಳೆ ರುಚಿಕಣಗಳು ನಶಿಸಿದಂತೆ ಹೊಸವು ಚಿಗುರಿ ಅವುಗಳ ಸ್ಥಾನಗಳನ್ನು ಆಕ್ರಮಿಸುತ್ತವೆ.

ಸಿಹಿ, ಕಹಿ ಇತ್ಯಾದಿ ೪ ವಿಧ ರುಚಿಮೊಗ್ಗುಗಳಿರುವುದಲ್ಲದೆ ಇನ್ನೂ ಹೆಚ್ಚು ವಿಧ ಮೊಗ್ಗುಗಳಿವೆಯೆಂಬುದು ಕೆಲವು ತಜ್ಞರ ಮತ.

ಮೊಗ್ಗುಗಳಿಂದ ಹೊರಡುವ ನರತಂತುಗಳು ೭, ೯, ೧೦ನೇ ತಲೆನರಗಳ ಮೂಲಕ ಮಿದುಳು ಕಾಂಡವನ್ನು ಸೇರಿ, ಜೀವಮಣಿಯಿಂದ ೨ನೇ

ಹಂತದ ತಂತುಗಳು ಥಾಲಮಸ್ಸನ್ನು ಸೇರಿ ಅಲ್ಲಿಂದ ೩ನೆಯ ತಂಡದ ತಂತುಗಳು ಮೇಲಕ್ಕೆ ಹೊರಟು ಮಹಾಮಸ್ತಿಷ್ಕದ ಪಕ್ಕದ ಮಧ್ಯದಲ್ಲಿರುವ ರುಚಿಕೇಂದ್ರವನ್ನು ಸೇರುತ್ತವೆ. ಈ ಕೇಂದ್ರಕ್ಕೆ ಏಟು ಬಿದ್ದರೆ ಇಲ್ಲವೆ ರೋಗ ತಗಲಿದರೆ ಆಚೆ ಪಕ್ಕದ ನಾಲಿಗೆಯಲ್ಲಿ ಸ್ಪರ್ಶೇಂದ್ರಿಯವಿದ್ದರೂ ರಸನೇಂದ್ರಿಯವಿರುವುದಿಲ್ಲ. ಏಟು ಅಥವಾ ರೋಗ ಹಗುರವಾಗಿದ್ದರೆ ರುಚಿಗಳ ಭ್ರಮೆಗಳು ಉಂಟಾಗಬಹುದು.



ರುಚಿಮೊಗ್ಗು

ಮುನ್ನಾಲಿಗೆಯಿಂದ ರುಚಿತಂತುಗಳು ೭ನೇ ತಲೆ ನರದ ಮೂಲಕ, ಹಿನ್ನಾಲಿಗೆಯಿಂದ ೯ನೇ ನರದ ಮೂಲಕ, ಉಪಜಿಹ್ವೆಯಿಂದ ೧೦ನೇ ನರದ ಮೂಲಕ ಮಿದುಳು ಕಾಂಡವನ್ನು ಸೇರುತ್ತದೆ. ನಾಲಿಗೆಯ ಸ್ಪರ್ಶ, ಶಾಖ, ಶೀತ, ನೋವಿನ ನರ ತಂತುಗಳು ೫ನೇ ತಲೆನರದ ಮೂಲಕ ಹೋಗುತ್ತವೆ.

ಜನರ ರುಚಿಗಳಲ್ಲಿ ವ್ಯತ್ಯಾಸವಿರುವುದರಿಂದ ಮನುಷ್ಯನ ರುಚಿಯ ಬಗೆಗಿನ ಸಂಶೋಧನೆ ತೊಡಕಿನದು. ಸಕ್ಕರೆ ಮುಂತಾದವನ್ನು ಬಾಯಿಗೆ ಹಾಕಿಕೊಂಡರೆ ಸಿಹಿ ರುಚಿ ಕಡಿಮೆಯಾಗುತ್ತದೆ. ಕಹಿಯಾದ ಔಷಧಿಯನ್ನು ಕುಡಿಯುವಾಗ ಮೊದಲ ಗುಟಕಿಗಾಗುವ ಕಹಿ ಅನುಭವ ಎರಡನೆ ಗುಟುಕಿಗೆ ಆಗುವುದಿಲ್ಲ.

ಸಿಹಿ ಖಾರದ ಖಾದ್ಯಗಳ ರುಚಿ ಅವುಗಳ ಮಸಾಲೆಯನ್ನು ಅನುಸರಿಸಿರುತ್ತದೆ. ನಾಲ್ಕು ಮೂಲ ರುಚಿಗಳ ವಿವಿಧ ಪ್ರಮಾಣಗಳಿಂದ ಹೀಗಾಗಬಹುದು.

ಲೋಹಗಳು ವಿವಿಧ ರುಚಿಯನ್ನು ಮಾರ್ಪಡಿಸಬಹುದು. ಕಬ್ಬಿಣದ ಅಂಶದಿಂದ ನೀರು ಹೆಚ್ಚು ಸಿಹಿಯಾಗಿರುತ್ತದೆ. ಸ್ಟೈಯಿನ್ಲೆಸ್ ಸ್ಟೀಲ್ ಪಾತ್ರೆಯಲ್ಲಿ ತುಂಬಿಟ್ಟ ನೀರು ಕಬ್ಬಿಣದ ಧನಾಣುಗಳಿಂದ ಹೆಚ್ಚು ಸಿಹಿಯಾಗುತ್ತದೆ. ಖನಿಜಾಮ್ಲಗಳು ಕನಿಷ್ಟ ಪಕ್ಷ ೦.೦೦೧೨೫ ರಿಂದ ೦.೦೦೧ ನೀರ್ಕಿನಲ್ಲಿದ್ದರೆ ಹುಳಿ ತಿಳಿಯುತ್ತದೆ; ವಿದ್ಯುತ್ತು ಹೊತ್ತ ಜಲಜನಕ ಅಯಾಣುಗಳಿಂದ ಹುಳಿಯ ಅರಿವಾಗುತ್ತದೆ. ಉಪ್ಪಿನ ರುಚಿಯು ಋಣಾಣುಗಳಿಂದಾಗುತ್ತದೆ. ವಿದ್ಯುತ್ಕೋಶದ ಋಣಧ್ರುವವನ್ನು ನಾಲಿಗೆ ಮೇಲಿಟ್ಟರೆ ಹುಳಿಯ ಅರಿವೂ ಧನಧ್ರುವವನ್ನಿಟ್ಟರೆ ಕಾರಾನುಭವವೂ ಆಗುತ್ತದೆ. ಪರ್ಯಾಯ ವಿದ್ಯುತ್ಪ್ರವಾಹದ ಸ್ಪಂದನ ಮಂದವಾಗಿದ್ದರೆ ಉಪ್ಪು ರುಚಿಯೂ ಮಧ್ಯವರ್ತಿಯಾಗಿದ್ದರೆ ಹುಳಿಯೂ ಕಹಿ ರುಚಿಯು ಹೆಚ್ಚಾಗಿದ್ದರೆ ಆಗುತ್ತದೆ. ಪರ್ಯಾಯ ವಿದ್ಯುತ್ಪ್ರವಾಹದ ಧನ ಧ್ರುವದಿಂದ ಮಾತ್ರ ರುಚಿ



“ಹೆದರಬೇಡಿ...ನೋಡಿ... ನಿಮ್ಮ ‘ಹೃದಯ ಕಾಯಿಲೆ’ ಸಂಪೂರ್ಣ ಗುಣಮಾಡಿದ್ದೇನೆ...!!”

ಯುಂಟಾಗುತ್ತದೆ.

ಹೈಡ್ರೊಕ್ಲೋರಿಕ್ ಆಮ್ಲ, ಅಡಿಗೆ ಉಪ್ಪು, ಕ್ವಿನೀನ್, ಸಕ್ಕರೆಗಳನ್ನು ನಾಲ್ಕು ಮೂಲರುಚಿಗಳನ್ನು ಪರೀಕ್ಷಿಸುವಲ್ಲಿ ಉಪಯೋಗಿಸುತ್ತಾರೆ. ನಾಲಿಗೆಯ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರುಚಿಗಳು ತಿಳಿಯುವುದರಿಂದ ನಾಲ್ಕು ಮೂಲ ರುಚಿಗಳ ಅಂತ್ಯಾಂಗಗಳು ಬೇರೆ ಬೇರೆ ವಿಶೇಷ ರೀತಿಯವು ಎಂದು ಊಹಿಸಬಹುದು.

ಜಿಮ್ನೀಮ ಆಮ್ಲವನ್ನು ನಾಲಿಗೆಗೆ ಬಳಿದರೆ ಕೆಲವು ಕಾಲ ಸಿಹಿ ಕಹಿ ರುಚಿಗಳಿರುವುದಿಲ್ಲ, ಉಪ್ಪು, ಹುಳಿ ರುಚಿಗಳಿರುತ್ತವೆ. ಸ್ಟೊವೆಯ್ನ್ ಎಂಬುದನ್ನು ಬಳಿದರೂ ಹೀಗಾಗುತ್ತದೆ. ಕೊಕೆಯ್ನ್ ದ್ರಾವಕ (೧%)ವನ್ನು ಬಳಿದರೆ ಮೊದಲು ನೋವಿನ ಅರಿವಳಿದು, ಆ ಮೇಲೆ ಕ್ರಮವಾಗಿ ಕಹಿ, ಸಿಹಿ, ಉಪ್ಪು, ಹುಳಿ ರುಚಿಗಳು ಇಲ್ಲವಾಗಿ ಕೊನೆಗೆ ಸ್ಪರ್ಶಜ್ಞಾನವೂ ಮಾಯವಾಗುತ್ತದೆ. ಒಂದೆರಡು ಗಂಟೆಗಳನಂತರ ಅವೆಲ್ಲ ಮರಳುತ್ತವೆ.

ಸಿಹಿ, ಕಹಿ, ಉಪ್ಪು, ಹುಳಿಗಳ ಪ್ರಮಾಣಗಳನ್ನು ಬದಲಾಯಿಸುವುದರಿಂದ ಟೀ, ಕಾಫಿ, ಕೋಕೋ, ದ್ರಾಕ್ಷಿ ಇತ್ಯಾದಿ ರುಚಿಗಳನ್ನುಂಟು ಮಾಡುವುದು ಸಾಧ್ಯವೆಂದು ರಶಿಯದ ಲಾಜರೆವ್ ಪ್ರಯೋಗಾಲಯದಲ್ಲಿ ಕಂಡು ಹಿಡಿಯಲಾಯಿತು.

ಕೆಲವು ರೋಗಗಳಲ್ಲಿ ರುಚಿಯೇ ಇಲ್ಲವಾಗುತ್ತದೆ ಅಥವಾ ಕಡಿಮೆಯಾಗುತ್ತದೆ. ಕೆಲವು ರೋಗಗಳಲ್ಲಿ ರುಚಿಯು ವಕ್ರವಾಗಿ ಸಾಮಾನ್ಯರಿಗೆ ಹೇಸಿಗೆಯಾಗುವ ವಸ್ತುವು ಆ ರೋಗಿಗಳಿಗೆ ಪ್ರಿಯವಾಗಬಹುದು. ಕೆಲವು ಮಿದುಳು ರೋಗಗಳಲ್ಲಿ ಬಾಯಲ್ಲೇನಿಲ್ಲದಿದ್ದರೂ ರುಚಿಗಳ ಭ್ರಮೆಯುಂಟಾಗುತ್ತದೆ. ಜ್ವರ ಬಂದ ಮೇಲೆ ಏನು ತಿಂದರೂ ಕಹಿಯಾಗಿರುತ್ತದೆ. ಇವೆಲ್ಲ ವಿಚಾರಗಳಿಂದ ರುಚಿಗೆ ಮನಸ್ಸು ಪ್ರಧಾನವೆಂಬುದು ಗೊತ್ತಾಗುತ್ತದೆ. ಮನಸಿನೊಳು ಜಿಹ್ವೆಯೆಂಬುದು ಸಾಮಾನ್ಯರ ಅನುಭವ. ✲

ಪಂಡಿತಪ್ರಕಾಂಡ ಹೀಬ್ರು ಪಾದ್ರಿ ಡಂಕನ್ ತೀರ ಮರೆಗುಳಿಯಾಗಿದ್ದ. ಆತನ ಈ ಎಡವಟ್ಟಾದ ದೌರ್ಬಲ್ಯದ ಬಗ್ಗೆ ಅನೇಕ ಕುತೂಹಲಕಾರಿ ಕಥೆಗಳಿವೆ.

ಒಮ್ಮೆ ಈತ ಅಬರ್ಡೀನಿಗೆ ಕೆಲವು ಮೈಲುಗಳ ದೂರದಲ್ಲಿರುವ ಚರ್ಚೊಂದರಲ್ಲಿ ಧರ್ಮೋಪದೇಶ ನೀಡಬೇಕಾಗಿತ್ತು. ಆತ ವೇಳೆಗೆ ಸರಿಯಾಗಿ ಒಂದು ಚಿಕ್ಕ ಕುದುರೆಯ ಮೇಲೆ ಕುಳಿತು ಪ್ರಯಾಣವನ್ನು ಪ್ರಾರಂಭಿಸಿದ. ಆದರೆ ಪ್ರಯಾಣದ ಕೊನೆಯಲ್ಲಿ ಚಿಟಿಕೆ ನಶ್ಯ ಹಾಕಬೇಕೆಂಬ ಅಪೇಕ್ಷೆಯಾಯಿತು. ಎದುರ ಗಾಳಿಯಿದ್ದುದರಿಂದ ನಶ್ಯದ ಸುಖಾನುಭವಕ್ಕಾಗಿ ಕುದುರೆಯನ್ನು ಹಿಂತಿರುಗಿಸಿ, ನಶ್ಯವೇರಿಸಿದ. ನಶ್ಯದ ಡಬ್ಬಿಯನ್ನು ಜೇಬಿನಲ್ಲಿಡುತ್ತ ಕುದುರೆಯನ್ನು ಸರಿಯಾದ ದಿಕ್ಕಿಗೆ ತಿರುಗಿಸದೆ ಪ್ರಯಾಣ ಮುಂದುವರಿಸಿದ. ಅಬರ್ಡೀನಿನ ಮುಖ್ಯರಸ್ತೆಗೆ ಬಂದಾಗಲೇ ಅವನಿಗೆ ತನ್ನ ತಪ್ಪಿನ ಅರಿವಾದದ್ದು. ಆದರೆ ಆಗಲೆ ಉಪನ್ಯಾಸದ ವೇಳೆಯಾಗಿದ್ದು ಆತ ೭ ಮೈಲು ದೂರದಲ್ಲಿದ್ದ.

ಮತ್ತೊಂದು ಸಂದರ್ಭದಲ್ಲಿ ಸ್ನೇಹಿತನೊಬ್ಬನ ಮನೆಗೆ ಊಟಕ್ಕೆ ಆಹ್ವಾನಿಸಲ್ಪಟ್ಟಿದ್ದ. ಈತನಿಗೆ ಮಲಗುವ ಕೋಣೆಯಲ್ಲಿ ಕೈತೊಳೆಯುವ ಸ್ಥಳವನ್ನು ತೋರಿಸಲಾಗಿತ್ತು. ಎಷ್ಟು ಹೊತ್ತಾದರೂ ಡಂಕನ್ ಹಿಂದಿರುಗದಿರಲು ಸ್ನೇಹಿತನು ಕೊಠಡಿಗೆ ಬಂದಾಗ ಕಂಡ ದೃಶ್ಯ– ಬೆಚ್ಚಗೆ ಮಲಗೆ ನಿದ್ರಿಸುತ್ತಿದ್ದ ಡಂಕನ್.

–ಹರಿಕೃಷ್ಣ

ಕನ್ನಡ ನಾಡಿನಲ್ಲಿ ನರವಿಕ್ರಯ

ದೊಡ್ಡೇರಿ ವೆಂಕಟಗಿರಿರಾವ್

ಮನುಕುಲದ ನಾಗರಿಕತೆ ಬಹಳ ಪುರಾತನ. ಅದನ್ನು ೧೦,೦೦೦ ವರ್ಷಗಳ ಹಿಂದಕ್ಕೂ ಗುರುತಿಸಬಹುದು. ಹಾಗೆಯೇ, ಮಾನವನ ಹುಟ್ಟಿನ ಜೊತೆಗೇ ಬಂದವು ಅವನ ಮೂಲ ಪ್ರವೃತ್ತಿಗಳು. ವೃತ್ತಿಗಳು ಹಲವು ಆದರೂ ಮೂಲ ಪ್ರವೃತ್ತಿಗಳು ಒಂದೇ.

ಕಾಲ ಸರಿಯಿತು. ಮನುಕುಲವು ತನ್ನ ಜೀವನ ಸೌಲಭ್ಯ ಮತ್ತು ಪರಸ್ಪರ ನಡವಳಿಕೆಗಳಲ್ಲಿ ಅಭಿವೃದ್ಧಿ ಹೊಂದಾಣಿಕೆಗಳ ವಿಕಾಸಮಾರ್ಗ ಹಿಡಿಯಿತು. ನಾಗರಿಕತೆಯ ಪ್ರಾರಂಭ ಆಯಿತು. ಅಂದಿನಿಂದಲೂ ಪಂಗಡ ಕುಲಗಳು ಒಂದೇ ಆಗಿದ್ದರೂ ಆಳು–ಅರಸ ಎಂಬ ಸಾಮಾಜಿಕ ತಾರತಮ್ಯ ಇದ್ದೇ ಇತ್ತು. ಆ ಭಾವನೆಗೆ ಜಾತೀಯತೆ ಕಾರಣ ಆಗಿರಲಿಲ್ಲ. ಕುಲದ ಆರ್ಥಿಕ ಸ್ಥಿತಿ ಗತಿ. ಸ್ಥಾನಮಾನಗಳಲ್ಲಿರುವ ಅಂತರ ಕಾರಣ ಆಗಿತ್ತು, ಇಂದೂ ಆಗಿದೆ.

ಜೀವನ ಸೌಲಭ್ಯದ ಸ್ಥಿರತೆಗಾಗಿ ಮನುಕುಲದಲ್ಲಿ ಸಂಗ್ರಹಾನುರಕ್ತಿ ಬೆಳೆಯಿತು. ಒಂದು ಗುಂಪು ಮತ್ತೊಂದು ಗುಂಪಿನ ಮೇಲೆ ದಾಳಿ ಮಾಡಿತು, ಹೋರಾಡಿತು, ಕೊಳ್ಳೆ ಹೊಡೆಯಿತು, ಕೈಗೆ ಸಿಕ್ಕಿದುದನ್ನುದೋಚಿಕೊಂಡು ಹೋಯಿತು. ವಸ್ತು, ಒಡವೆ, ಜನ, ದನ ಯಾವುದೇ ಆಗಲಿ ಅದು ಗೆದ್ದವರ ಸೊತ್ತು. ಅವುಗಳನ್ನು ಇಷ್ಟ ಬಂದಂತೆ ವಿನಿಯೋಗಿಸುವುದು ಅವರ ಹಕ್ಕು.

ಗುಲಾಮಗಿರಿಯ ಮೂಲ ಇದು. ಜೀತಪದ್ಧತಿಯ ಆರಂಭ ಇದು. ಹೋರಾಟದಲ್ಲಿ ಗೆದ್ದು ತಂದ ಹೆಣ್ಣುಗಳಲ್ಲಿ ಇಷ್ಟವಾದವರು ಮನೆಯ ದಾಸಿಯರಾದರು. ಉಳಿದವರನ್ನು ಮಾರಿದರು ಅಥವಾ ಅಧಿಕಾರಿಗಳಿಗೆ ಹಂಚಿದರು. ಗಂಡಸರು ಗುಲಾಮರಾದರು. ಜೀತಪದ್ಧತಿ ಬೆಳೆದುಬಂತು.

ಆಫ್ರಿಕ ಖಂಡದ ಹಲವು ಮುಸ್ಲಿಂ ರಾಷ್ಟ್ರಗಳಲ್ಲಿ ಗುಲಾಮರ ಮಾರಾಟ ಸಾಮಾನ್ಯ ವಿಚಾರ. ಕೆಲವು ಕಡೆ ಅದು ಪುರಾತನ ಕಸುಬು. ಇಂದು ಆ ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯರಾಗಿ ಮಾನವೀಯ ಹಕ್ಕು ಬಾಧ್ಯತೆಗಳನ್ನು ಮಾನ್ಯ ಮಾಡಿ, ಗುಲಾಮರ ಮಾರಾಟ, ಅವರ ಮೇಲೆ ಹಿಂಸಾಚಾರ ನಿಷೇಧಿತ ಎಂದು ಒಪ್ಪಿದರೂ ಆ ಹೀನ ಕಾರ್ಯಗಳು ಅಲ್ಲಿ ನಿಂತಿಲ್ಲ. ಆ ಭಾಗದ ಸರಕಾರಗಳಿಗೆ ತಿಳಿದೊ ತಿಳಿಯದೆಯೊ ನರವಿಕ್ರಯ ಇಂದೂ ನಡೆಯುತ್ತಿದೆ.

ಜೀತಪದ್ಧತಿಗೆ ನಮ್ಮ ನಾಡೂ ಹೊರತಾಗಿಲ್ಲ. ಶತಮಾನಗಳಿಂದಲೂ ಇತ್ತು. ಕನ್ನಡನಾಡಿನಲ್ಲಿ ನರವಿಕ್ರಯದ ಮೊಟ್ಟ ಮೊದಲಿನ ಲಿಖಿತ ಪುರಾವೆ ದೊರೆತುದು ಶಿವಮೊಗ್ಗ ಜಿಲ್ಲೆಯಲ್ಲಿ. ೧೭೦ ವರ್ಷಗಳ ಹಿಂದಿನ ದಾಖಲೆ. ಜೀತದಾಳುಗಳ ಮಾರಾಟ ಸಂಗತಿಗಳು ತೀರ ವಿರಳವೇನಲ್ಲ. ಆದರೆ ಅಂಥ ಒಂದು ವ್ಯವಹಾರದ ದಾಖಲೆ ಬೆಳಕಿಗೆ ಬಂದಾಗ ಅದು ಸೋಜಿಗ, ಮಹತ್ವದ ಇತಿಹಾಸ ಭಾಗ.

ಈ ಇತಿಹಾಸದ ಸೃಷ್ಟಿಗೆ ಪಾಲುದಾರರು ಪ್ರಸಿದ್ಧ 'ಕಾಳಿ' ಮನೆತನ. ಮತ್ತು ಒಂದು ಆಚಾರ್ಯ ಮನೆತನ. ಶಿವಮೊಗ್ಗ ಜಿಲ್ಲಾ ಸಾಗರ ತಾಲ್ಲೂಕು ಆವಿನಹಳ್ಳಿ ಹೋಬಳಿ ಇಕ್ಕೇರಿ ಮಾಗಣೆ ಹುಲಿಮನೆ ಗ್ರಾಮದ ಕಾಳಿ ಶೇಷಯ್ಯನವರು ಕೊಂಡವರು; ಇಕ್ಕೇರಿಯ ಭೀಮಾಚಾರ್ಯರು ಮಾರಿದವರು.

ಕಾಳಿಯವರ ಮನೆತನದವರು ೧೬ನೇ ಶತಮಾನದ ಇಕ್ಕೇರಿ ಅರಸರ ಉನ್ನತ ಅಧಿಕಾರಿಗಳ ಆಪ್ತರು. ಬಹುಶಃ ಈ ವ್ಯವಹಾರ ಅಂದು ಕಾನೂನು

ಬಾಹಿರ ಆಗಿರಲಿಕ್ಕಿಲ್ಲ. ಹುಲಿಮನೆ ಗ್ರಾಮದ ದಿವಂಗತ ಪಟೇಲ್ ಕಾಳಿ ಸುಬ್ಬರಾಯರ ತಂದೆ ಶೇಷಯ್ಯನವರು ಶ್ರೀಮಂತರು. ದರ್ಪದ ಸಮರ್ಪಕ ಆಡಳಿತಗಾರರು. ಅವರ ಕಾಲದ ವ್ಯಾವಹಾರಿಕ ದಿನಚರಿಯ ಬರಹವಾದ ಒಂದು 'ಕಡತ'ದಲ್ಲಿ ದೊರೆತ ೧೫ ಪಂಕ್ತಿಯ ತಾಮ್ರಶಾಸನದ ಪ್ರತಿ ಹೀಗಿದೆ:

"ನಿರ್ವಿಘ್ನಮಸ್ತು ಶುಭಮಸ್ತು ನಮುಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯನಗರಾರಂಭ । ಮೂಲ ಸ್ತಂಭಾಯ ಶಂಭವೇ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಖ । ವರುಷಂಗಳು ಸಾವಿರದ ೧೭೩೦ನೆ ಪರಿವರ್ತಮಾನಕ್ಕೆ ಸಂದು ಸಲುವ ವಿಭವ ನಾಮ ಸಂ । ವತ್ಸರದ ಆಶ್ವೀಜ ಶು ೧೩ ರವಿವಾರದಲ್ಲು ಶ್ರೀಮತು ಹುಲಿಮನೆ ಕಾಳಿ । ಸುಬ್ಬಣ್ಣನವರ ಮಗ ಶೇಷಯ್ಯನವರಿಗೆ ವೇದಮೂರ್ತಿಗಳಾದ ಯಿಕ್ಕೇರಿ ಶೇಷಾಚಾರ್ಯ್ಯ । ರ ಮಗ ಭೀಮಾಚಾರ್ಯನು ಬರೆಸಿಕೊಟ್ಟ ಹೊಲೆಯಾಳು ಹೆಂಣಾಳು ಕ್ರಯ ಚೀ। ಟ್ಯನಕ್ರಮವೆಂತೆಂದರೆ ನಾನು ನಂನ ಅವಸರ ನಿಮಿತ್ತವಾಗಿ ನಂನ ಹೊಲೆಯಾ। ಳು ಕಂನನ ಹೆಂಡತಿ ಚಉಡಿಯೆಂಬ ಹುಡುಗಿಯನ್ನು ನಿಮಗೆ ಕ್ರಯಕ್ಕೆ ಕೊಟ್ಟೆ । ನಾಗಿ ಈ ಹೆಂಣು ಆಳಿಗೆ ಬುದ್ಧಿವಂತರು ಕಂಡು ಕಟ್ಟಿದ ಕ್ರಯಗ ೩ । ಅಕ್ಷರದಲು ಮೂರು ವರಹಂನ ತೆಗೆದುಕೊಂಡು ಯಿಾ ಹೆಂಣಾಳು ಹುಡು । ಗಿಯಂನ್ನು ನಿಮಗೆ ಕ್ರಯ ಮೂಲಕ್ಕೆ ಕೊಟ್ಟೆನಾಗಿ ಯಿೂ ಹೆಣ್ಣಿಗೆ ಆದಿ ಅಡಮು । ಅಡ್ಡಿಸಡ್ಡಿಯೇನು ಉಂಟಾದಂನ್ನು ನಾನೇ ನೋಡಿಕೊಂಡೇಸುಯೆಂದು । ಬರೆಸಿಕೊಟ್ಟ ಕ್ರಯ ಚೀಟು ಹಣ ಸಂದ ನಿಶಿಧಿ ಯಾಗಿದೆ ಸಾಧನಯಿಂತ । ಪ್ಪುದಕ್ಕೆ ಸಾಕ್ಷಿಗಳು ಬೇದೂರು ಸುಬ್ಬಯ್ಯ ಬಾಳೆಹಳಿ ಕಂಡ್ರಿ ದೊಡ್ಡ । ಯ್ಯ ಶ್ರೀ ಶ್ರೀ"

(। ಈ ಗುರುತು ಮೂಲ ಪ್ರತಿಯಲ್ಲಿ ಪಂಕ್ತಿಯ ಅಂತ್ಯವನ್ನು ಸೂಚಿಸುತ್ತದೆ.)

ಗತಕಾಲದ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಬೆಳಕು ಬೀರುವ ಈ ಅಮೂಲ್ಯವಾದ ಶಾಸನದ ವಿವರವು ಮೈಸೂರು ಸರ್ಕಾರದ ಕ್ರಿ.ಶ. ೧೯೩೫ನೆ ಪ್ರಾಚೀನ ಶಿಲ್ಪೇತಿಹಾಸ ಸಮೀಕ್ಷಾ ವರದಿಯಲ್ಲಿ ಅಡಕವಾಗಿದೆ. ✡



ನಿಮ್ಮ ಸಹೋದ್ಯೋಗಿಗಳನ್ನು ಗೌರವಿಸಿ. ಇಲ್ಲದಿದ್ದರೆ ಅವರಲ್ಲೊಬ್ಬ 'ಬಾಸ್' ಹುಟ್ಟಬಹುದು.


* *

ನೀವು ಗಳಿಸಿರುವ ಹಣದಿಂದ ಎಷ್ಟು ಸಂತೋಷವಾಗುತ್ತದೆಂಬುದು ಮುಖ್ಯವಲ್ಲ; ನಿಮ್ಮ ಕೈಲಿ ಎಷ್ಟು ಉಳಿಯಬಹುದೆಂಬುದು ಮುಖ್ಯ.

* *

ತನ್ನ ತಪ್ಪುಗಳರಿವು ತನಗಾಗುವುದು ಕಡಿಮೆಯಾದಂತೆ ತನ್ನನ್ನು ತಾನೇ ಮೆಚ್ಚಿಕೊಳ್ಳುವುದು ಹೆಚ್ಚಾಗುತ್ತದೆ.

('ಸ್ಪುಟ್ನಿಕ್'ನಿಂದ)



ಹೀಗೊಂದು ಕಥೆ

ರಾ. ವಿಜಯರಾಘವ

ಸೈದ್ಯದ ವಾಸದಲ್ಲಿ ನಾನು. ಅಮ್ಮ ಇಬ್ಬರೆ. ಕಾರಣ ಮೊದಲ ಮಗನಾಗಿ ನಾನು ಹುಟ್ಟಿದ ವರ್ಷಕ್ಕೋ ಎರಡಕ್ಕೋ ಅಪ್ಪ ತೀರಿ ಹೋದರಂತೆ. ಅಮ್ಮನಿಗಾಗ ಹದಿನೆಂಟರ ಸರಿ ಪ್ರಾಯ. ಮುಂದೆ ಬದುಕಿದ್ದೊಂದು ಕಷ್ಟದ ಕತೆ. ಅಮ್ಮ ಸಾಕಿದಳು; ಪರರವರ ಬಚ್ಚಲು ಬಾಚಿ ಬೆಳೆಸಿದಳು; ಇದ್ದ ಚೂರು ಆಸ್ತಿ ಮಾರಿ ಓದಿಸಿದಳು.

ನೆರೆಯಲ್ಲೆ ಚಿಕ್ಕಪ್ಪ ದೊಡ್ಡಪ್ಪ ಎಲ್ಲರ ಸಂಸಾರಗಳು. ಅವರೆಲ್ಲ ಸಾಕಷ್ಟು ಸ್ಥಿತಿವಂತರೆ. ಏಷ್ಟಿದ್ದರೂ ನಮಗಾಗಿ ಕವಡೆ ದಾನ ಮಾಡಿದವರು ಯಾರೂ ಕಾಣೆ. ಹಾಗೇ ಸುಮ್ಮನಿರಲೂ ಅರಿಯದ ಜನ. ಓ–ಅವತ್ತಿನ ಘಟನೆ! ನಮ್ಮಮ್ಮನನ್ನು ಅವತ್ತು ದೊಡ್ಡಪ್ಪ, "ಏನಂತೀ ಸಾವಂತ್ರೀ, ನಿಂಗೂ ಗಂಡ ಇಲ್ಲ" ಅಂದಿದ್ದರಂತೆ. "ವಿಜೂ, ನಿಮ್ಮಪ್ಪ ಹೀಗೆ ಮಾಡಬಾರದಿತ್ತು" ಅಂತ ನನ್ನ ತಬ್ಬಿ ಅಮ್ಮ ಅತ್ತಿದ್ದಳು.

ಎಲ್ಲರ ಎದೆ ಮೆಟ್ಟಿ ನಿಲ್ಲಬೇಕೆಂಬ ಛಲ. ಕಷ್ಟಪಟ್ಟು ಓದಿದೆ. ದೇವರ ದಯವೂ ಪಾಲಿಗಿತ್ತು. ಸ್ಕಾಲರ್‌ಶಿಪ್‌ನಿಂದ ಓದಿನ ದಾರಿ ಸಲೀಸಾಗಿತ್ತು. ಫಸ್ಟ್ ಕ್ಲಾಸ್‌ನಲ್ಲಿ ಎಂ. ಎ. ಪಾಸೂ ಆಯಿತು. ಉದ್ಯೋಗಾನ್ವೇಷಣೆಯೂ ನಡೆದಿತ್ತು.

ಇನ್ನೊಂದು ಸಂಗತಿ. ಅಷ್ಟೆ ಮುಖ್ಯವಾದದ್ದು ಅಂತ ಅನ್ನಿಸುತ್ತೆ. ಎಂಟು ದಿನಗಳಿಂದ ಅಮ್ಮನಿಗೆ ಸೀಕು. "ತೀರಾ ಸುಸ್ತು ಕಾಹಿಲೆ. ತೀರಾ ರಕ್ತಾನೇ ಇಲ್ಲ, ಎರಡು ಬಾಟ್ಲಿಯಾದರೂ ಕೊಟ್ಟರೆ ಸರಿಯಾದೀತು. ಇಲ್ಲದಿದ್ದರೆ ಕಷ್ಟ." ಪರೀಕ್ಷೆ ಮಾಡಿದ ಡಾಕ್ಟರಂದದ್ದು. ತಿನ್ನುವ ಅನ್ನಕ್ಕೂ ಬರ. ಹಾಗಾಗಿ ಬೇರೆ ದಾರಿಯೇ ಕಾಣದೆ ತಲೆ ಮೇಲೆ ಕೈ ಹೊತ್ತು ಕೂತಿದ್ದೆ. ನನ್ನ ರಕ್ತ ಅಮ್ಮನಿಗೆ ಹೊಂದುವುದಿಲ್ಲ. ಅವಳ ಬದುಕು ನಂಗೆ ಬಹಳೇ ಅವಶ್ಯ.

ಯೋಚನೆ ಜಾಸ್ತಿಯಾಗಿ ತಲೆ ಭಾರವಾಗಿ ಎಲ್ಲಾದರೂ ಹೋಗಿ ನೇಣು ಬಿಗಿದುಕೊಳ್ಳಬೇಕು ಅನ್ನಿಸುವಷ್ಟರಲ್ಲಿ ಅಮ್ಮನ್ನ ನೋಡಲು ಬಂದ ಮಾವ ನಮಗಾಗಿ ಬೇರೇನನ್ನೂ ಮಾಡಲಾಗದೆ ನನ್ನತ್ತ ಆಶಾಕಿರಣವೊಂದನ್ನು ತೂರಿದ್ದರು. "ಹೊಸ ಎಕ್ಸ್‌ಟೆನ್‌ಷನ್‌ನಲ್ಲಿ ಒಂದು ಟ್ಯೂಶನ್ ಇದೆ. ಜತೆಗೆ ಇನ್ನು ಯಾರಾದರು ಸಿಕ್ಕಬಹುದು. ನನಗೂ ಹೇಳಿದ್ದರು ನೋಡು" ಅಂದು ವಿಳಾಸ ಕೊಟ್ಟಿದ್ದರು. ಸಂಜೆಗೇ ಅಲ್ಲಿಗೆ ಹೋದದ್ದು. ಕತ್ತಲಾಗುತ್ತಿತ್ತು. ಒಂದೂವರೆ ಮೈಲಿ ನಡೆದು ದಣಿವೂ ಆಗಿತ್ತು, ತಾವು ಸೇರುವಷ್ಟರಲ್ಲಿ.

ನಿಂತು ಬಾಗಿಲು ಬಡಿದೆ. ಪೋಲೀಸ ಕರೆ ಗಂಟೆಯ ಗುಂಡಿ ನಂತರ ಕಾಣಿಸಿತು. ಬಾಗಿಲು ತೆರೆದು, "ಏನು ಬೇಕು?" ಅನ್ನುತ್ತ ಅರೆ ಮುದುಕ ರೊಬ್ಬರು ಹೊರಬಂದರು. ಬೆಲ್ ಬಾರಿಸದೆ ಬಾಗಿಲು ಬಡಿದದ್ದಕ್ಕೆ ಇರಬೇಕು, ಅವರ ಮುಖದಲ್ಲಿ ಬೇಸರ ತುಂಬಿತ್ತು. ನಮಸ್ಕಾರ ಅನ್ನಲೂ ಮರೆತು ಹೋಯ್ತು. "ಸಾರ್, ಶಾಮ ರಾಯರಿಗೆ ಹೇಳಿದ್ದಿರಂತೆ. ಕಳುಹಿಸಿದರು," ಅಂದೆ ನೇರವಾಗಿ. "ಯಾವ ಶಾಮರಾಯರು? ಓ ಲಾಯರ್ ಗುಮಾಸ್ತರೋ ? ಬನ್ನಿ, ಒಳಕ್ಕೆ ಬಾಪ್ಪಾ," ಎಂದು ಕರೆದರು. ಮುಖದ ಗಂಟು ಸಡಿ ಲಾಗಿತ್ತು.

ದೊಡ್ಡ ಮನೆಯದು. ಹಳೆಯ ಮಾದರಿ ಯಾದರೂ ಸಿಂಗಾರಗಳಲ್ಲೆ ಆಧುನೀಕರಿಸಿದ್ದರು. ಸೋಫಾ ಸೆಟ್, ಫ್ಯಾನು, ಫ್ರಿಜ್, ಟೇಪ್ ರೆಕಾರ್ಡರ್, ರೆಕಾರ್ಡ್ ಪ್ಲೇಯರ್ ಎಲ್ಲ ಇದ್ದವು. ಅದೊಂದು ಬಗೆಯಲ್ಲಿ ವಿಶಿಷ್ಟವಾಗಿ ಅವನ್ನು ಜೋಡಿಸಲಾಗಿದ್ದು ಒಂದೇ ನೋಟಕ್ಕೆ ಎಲ್ಲ ಸ್ಪಷ್ಟವಾಗುತ್ತಿದ್ದವು.

ಎಲ್ಲವನ್ನೂ ಕಣ್ಣಲ್ಲೆ ಅಳೆಯುತ್ತ ನಿಂತೆ. "ಕೂತುಕೋಪ್ಪ," ಅವರು ನನ್ನ ಕೂರಿಸಿ ಒಳ ಹೋಗಿ ಬಂದರು. ಮತ್ತೆ ತಾವೂ ಕುಳಿತು ಕೊಳ್ಳುತ್ತ, "ನಿಮ್ಮದು ಎಂ. ಎ. ಆಯ್ತಂತ" ಶಾಮರಾಯರಂದರು, "ಅಂತೂ ಭಾಳ ಚಿಕ್ಕ ವಯಸ್ಸಿಗೆ ಪಾಸು ಮಾಡಿದೀರಪ್ಪ. ಯಾವ ಕ್ಲಾಸು ?" ಪ್ರಶ್ನಿಸಿದರು. "ಹೈ ಫಸ್ಟ್ ಕ್ಲಾಸ್ ಸಾರ್, ಏನು ಬಂದರೇನಂತೆ," ಬೇಜಾರಿನಲ್ಲಿ ನಾನು ಅಂದೆ.

ಅಷ್ಟರಲ್ಲಿ ತಿಂಡಿ ಬಂತು. ಬೇಡವೆನ್ನಲೂ ಮರೆ ತಂಥ ಸ್ಥಿತಿ ನನ್ನದು. ಕಾಫಿ ಕೂಡ ಬಂತು. ಶುದ್ಧ ದನ ಕಾಯುವವನಂತೆ ತಿಂದೆ. ಏಕೋ? ಈಗ್ಲೂ ಅರ್ಥವಾಗಿಲ್ಲ. ಮುಖ್ಯ ವಿಷಯಕ್ಕೆ ಮಾತು ಹರಿಯಿತು. ಅದೂ ಇದೂ ಕೇಳಿಯಾದ ನಂತರ, "ಸೋಮವಾರದಿಂದ ಟ್ಯೂಶನ್ ಶುರು ಮಾಡಿಬಿಡಿ. ಅಡ್ವಾನ್ಸ್ ಏನಾರ ಬೇಕಿತ್ತಾ?" ಅಂದರು.

ಅಮ್ಮನ ಕಾಯಿಲೆ ಬಗ್ಗೆ ನನ್ನ ಸಂದರ್ಭ ತಿಳಿಸಿ, "ಏನೋ ಸ್ವಲ್ಪ. ಬೇಜಾರು ಪಡಬೇಡಿ, ಮೊದಲೇ ಏನು? ಅಂತ." ಸಣ್ಣಗೆ ಹೇಳಿದೆ. ಭಿಕ್ಷೆ ಬೇಡಿದ ಅನುಭವ ಆಗಿ ಜಿಗುಪ್ಸೆ ಮೂಡುತ್ತಿತ್ತು. ರೂಮಿಗೆ ಹೋಗಿ ನೂರರ ನೋಟೊಂದನ್ನು ತಂದು ಕೈಲಿಟ್ಟರು. ಹೃದಯ ಕೃತಜ್ಞತೆಯಿಂದ ತುಂಬಿ ಕೊಂಡಿತ್ತು. "ನಿಮ್ಮುಪಕಾರ" ನನ್ನ ಮಾತನ್ನು ನಡುವೆ ತಡೆದು, "ಆ ಮಾತಾಡಬೇಡಪ್ಪ. ಎಲ್ಲ ಆ ಭಗವಂತನದು" ಅಂದರು.

ಹೊರಡುವ ಮುಂಚೆ ಹುಡುಗನ್ನ ನೋಡುವ ಆಶೆ ವ್ಯಕ್ತಪಡಿಸಿದಾಗ, "ಹುಡುಗನಲ್ಲಪ್ಪ, ಹುಡುಗಿ" ಅಂದರು ರೇಡಿಯೋ ಜಾಹೀರಾತಿ ನಂತೆ. ಪರಿಸ್ಥಿತಿ ಗೋಜಲಾದರೂ, "ಬರ್ತೀನಿ ಸಾರ್, ಸೋಮವಾರ" ಕೈ ಜೋಡಿಸಿದೆ. "ಹೋಗಿ ಬಾಪ್ಪ. ದೇವರು ಕಾಪಾಡಲಿ." ಬಾಗಿಲ ವರೆಗೆ ಬಂದು ಬೀಳ್ಕೊಟ್ಟರು.

ದಾರಿಯುದ್ದಕ್ಕೂ ಕಾಲು ನಡೆದ ಹಾಗೆ ಇಂಥ ದೊಂದು ಸಹಾನುಭೂತಿಯ ಅವಶ್ಯಕತೆ ಪ್ರತಿ ಹೃದಯಕ್ಕೂ ಇದೆ ಅನ್ನಿಸಿತು. ಚಿಕ್ಕಪ್ಪ ದೊಡ್ಡಪ್ಪಂದಿರ ನೆನಪಾಗಿ ಬೇಸರ, ದುಃಖ ನುಗ್ಗಿ ಬಂತು.

*

ಪಾಠ ಹೆಣ್ಣಿಗೆಂದಾಗ ಅಮ್ಮ ಸ್ವಲ್ಪ ಹೆದರಿ ದರೂ ಅವರ ನಡಾವಳಿಗಳನ್ನು ಸ್ಪಷ್ಟವಾಗಿ ಪರಿಚಯಿಸಿದಾಗ ಅನುಮಾನದಲ್ಲೆ ಹೂಂಗುಟ್ಟಿ ದಳು. ಹಾಳು ಯಾರದೋ ನೆತ್ತರಿಗೆ ದುಡ್ಡು ಕಕ್ಕಬೇಕಾಯ್ತಲ್ಲ ಅಂತ ಪೇಚಾಡಿದಳು. ಅಂತೂ ಪಾಠ ಶುರುವಾಗಿ ಸಾಗುತ್ತಿತ್ತು. ಅಮ್ಮನ ಆರೋಗ್ಯವೂ ಸುಧಾರಿಸಿತ್ತಾಗಿ ಅಡಿಗೆಯ ಹೊರೆ ನನ್ನ ಭುಜದಿಂದ ಇಳಿದಿತ್ತು.

ಮತ್ತೆ ಶೈಲಳ ತಂದೆಯನ್ನೆಂದೂ ನಾನು ಹಣ ಕೇಳಲಿಲ್ಲ. ಹಾಗೆಂದು ಅವರು ಕೇಳಿಸಿ ಕೊಳ್ಳಲೂ ಇಲ್ಲ. ಅಂದೊಂದು ಬಗೆಯ ಮುಕ್ತ ವ್ಯವಹಾರ. ಶೈಲಾ ಪ್ರಥಮ ಕಲಾ ಪದವಿ ವಿದ್ಯಾರ್ಥಿನಿ. ಹತ್ತೊಂಬತ್ತೂವರೆ ಪ್ರಾಯ. ಮೀಸೆ ಸಹ ಬಲಿಯದ ನಾನು ಹದವಾಗಿ ಬೆಳೆದಿದ್ದ ಅವಳ ಮುಂದೆ ಪೀಚಾಗಿ ಕಾಣು ತ್ತಿದ್ದುದು ಸ್ವಾಭಾವಿಕ. ಇದಕ್ಕೇ ಇರಬೇಕು, ನೀವು ತೀರಾ ಮಗು ಹಾಗೆ, ಅಂದಿದ್ದಳೊಮ್ಮೆ. ಟ್ಯೂಶನ್ನಿನ ಅವಶ್ಯಕತೆ ಬೀಳುವಷ್ಟು ದಡ್ಡ ಹುಡುಗಿಯೇನಲ್ಲ. ಆದರೂ ಎಂ. ಎ. ಮಾಡು

ವಾಶೆ. ರಿಸರ್ಚಿಗೆ ಕೈ ಹಾಕುವಾಶೆ.

ನನಗೆ ಉದ್ಯೋಗ ಸಿಕ್ಕ ಆರ್ಡರ್ ಕೈಗೆ ಬಂದಿತ್ತು. ಅಮ್ಮನಿಗಾದ ಸಂತೋಷ ಅಬ್ಬಾ! ಅಪ್ಪ ಸತ್ತಾಗಿನಿಂದ ಪಟ್ಟ ಬವಣೆಗಳೆಲ್ಲ ಮರೆತು ಹೋಗಿ ಆನಂದದ ತುದಿಗೇ? ಮನೆಯಲ್ಲಿ ತಿನ್ನಲೇನೋ ಹೆಚ್ಚಿಗಿರಲಿಲ್ಲ. ಕಾಫಿಗಿದ್ದ ಬೆಲ್ಲಕ್ಕೇ ಅಷ್ಟು ಅಕ್ಕಿ ಕುದಿಸಿ ಸಿಹಿ ತಿನ್ನಿಸಿದಳು. ದೇವರ ದಯ ನಮ್ಮ ಭಾಗಕ್ಕೆ ಬಂತು. ವಿಜೂ ಅಂತ ಸಂತೋಷದ ಅಳು ಅತ್ತಿದ್ದಳು.



ಪಾಠದ ಮನೆಯಲ್ಲಿ ಸಂಜೆ ವಿಷಯ ತಿಳಿಸಿದಾಗ ಎಲ್ಲರಿಗೂ ಸಂತೋಷವಾದರೂ ಪೆಚ್ಚಾದದ್ದು ಶೈಲಾ, ತೀರಾ ಗಾಳಿ ಇಳಿದ ಬಲೂನಿನಂತೆ. ಶೈಲಳ ತಂದೆ, “ಶೈಲಾ ನೋಡು ಹ್ಯಾಗಾಗಿದ್ದಾಳೆ. ಅವಳಿಗೆ ಇಷ್ಟವೇ ಇಲ್ಲಾಂತ ಕಾಣುತ್ತದೆ” ಎಂದು ತಮಾಷೆ ಮಾಡಿದರು. “ನನಗೇನಪ್ಪ” ಅಂದಳವಳು ಕೆನ್ನೆಗೆ ನಾಲಿಗೆ ಹಾಕಿ. ಕಣ್ಣು ತುಂಟತನದ ಬೆಳಕು ಮಾಸಿ ಸಪ್ಪೆ ಅನಿಸುತ್ತವೆ ಈಗ.

*

ಬಾಗಿಲು ದಾಟಿ ಒಳಕ್ಕೆ ಅಡಿಯಿಟ್ಟಾಗ ಹೊಸ-ಬರ ಆಗಮನಕ್ಕೆ ಸಾಕ್ಷಿಯಾಗಿ ಹೊಸ ಜೋಡುಗಳು ಕಂಡವು. ಎದ್ದು ಬಂದ ಬಂದ ಅಮ್ಮ ತಿಳಿಸಿದ್ದು ಶೈಲಳ ತಂದೆ ಬಂದಿರುವ ವಿಷಯ. ದೊಡ್ಡದಾಗಿ ಆಶ್ಚರ್ಯವಾಯ್ತು. ಮಲಗಿದ್ದಾರೆ, ಅಂದಳು ಅಮ್ಮ. ಪ್ರಯಾಣದಲ್ಲಿ ದಣಿ

ವಾಗಿರಬೇಕು. ಯಾಕೆ ಎಬ್ಬಿಸುವುದು ಎಂದು ಸುಮ್ಮನಾದೆ. ಬಟ್ಟೆ ಬದಲಿಸಿ ಕೈಕಾಲು ತೊಳೆಯುವಷ್ಟರಲ್ಲಿ ಪತ್ರ ಬರೆಯದೆ ಬಂದ ಕಾರಣ ತಿಳಿಯಲು ಕಾತರ ಹೆಚ್ಚಾಗಿ ಅಮ್ಮನ್ನ ವಿಚಾರಿಸಿದೆ. ಬಂದವರನ್ನು ಯಾಕೆ ಬಂದಿರಿ ಅಂತ ಕೇಳಲೇನೋ ? ಅಂದಳು.

ಅಷ್ಟರಲ್ಲಿ ಅವರು ಆಕಳಿಸಿಕೊಂಡು ಎದ್ದು ಬಂದರು. "ಏನಪ್ಪಾ ಬಿಡ್ತಾ ನಿನ್ನ ಕಾಲೇಜು? ನೀನಂತೂ ಕಾಗದ ಕೂಡ ಬರೆಯಲಿಲ್ಲ. ಅಷ್ಟು ಬೇಗ ಮರೆತು ಬಿಟ್ಟೇಂತ ಕಾಣುತ್ತೆ," ಅಂದವರಿಗೆ ಉತ್ತರಿಸಲು ಎಂಥದೋ ಮುಜುಗರ.

"ನೀನು ಮರೆತರೂ ನಾವು ಮರೆಯಲ್ಲಪ್ಪ. ಇಲ್ಲೆ ಸ್ವಲ್ಪ ಕೆಲಸಾನೂ ಇತ್ತು ಜೊತೆಗೆ. ಅಂದು, ನಂತರ "ತಿಂಡಿ ತಿನ್ನೇಳು. ಬಡಕೊಂಡು ಬಡಕೊಂಡು ಬಾಯಾರಿದ್ದಿ," ಅವರದೇ ಮನೆಯೆಂಬಂತೆ ಉಪಚಾರ. "ನಿಮ್ಮ ತಾಯಿ ಇವತ್ತು ಹಬ್ಬ ಮಾಡಿಬಿಟ್ಟರು. ಅದೇನವರ ಕೈ ಅಡಿಗೆ." ನಿಮಿಷಕ್ಕೊಂದರಂತೆ ತುಂಬಿದ ಮಾತುಗಳು.

ಶೈಲಳ ಬಗ್ಗೆ ಕೇಳುವ ಮನಸ್ಸು. ಆದರೂ ಸುಮ್ಮನಾದೆ. ಅವರೇ ಅಂದರು: "ನಿನ್ನ ಶಿಷ್ಯೆ ಕಾಲೇಜಿಗೆ ಸಾಮ್ರಾಣಿ ಹಾಕಿದಳಪ್ಪ. ಎಂ. ಎ. ನೂ ಬೇಡ. ರಿಸರ್ಚೂ ಬೇಡ, ಅಂತಾಳೆ. ಹ್ಯಾಗಿದ್ದೋಳು ಹ್ಯಾಗಾಗಿದಾಳೇಂತ ನೋಡೋಕೆ ಆಗಲ್ಲ. ಮನೇಲೇ ಕೂತು ಏನೋ ಅಷ್ಟು ಬಣ್ಣ ಬಳೀತಾ ಕೂತಿರ್ತಾಳೆ." ಅಂದರೆ ನನ್ನ ಹಚ್ಚಿಕೊಂಡಳೆ? ಬುದ್ಧಿವಂತ ಹುಡುಗಿ ಹೀಗಾದಳಲ್ಲ ? ವ್ಯಸನವಾಯ್ತು. ಜನ ಹಚ್ಚಿಕೊಳ್ಳುವುದೇಕೆ ? ಎಲ್ಲಿಯ ಸಂಬಂಧ ? ಅವಳನ್ನು ಸರಿಯಾಗಿ ದಿಟ್ಟಿಸಿ ಕೂಡ ನೋಡಿದ ನೆನಪಿಲ್ಲ. ನನ್ನ ಮನಸ್ಸಲ್ಲಿ ಬರೇ ಕಲಿಸುವಿಕೆಯಿತ್ತು. ನಡುವೆ ನಾನು ತಿಳಿದಂತೆ ಗುರು–ಶಿಷ್ಯ ಸಂಬಂಧವಿತ್ತು. ಆದರೆ ಅವಳೂ ಹಾಗೇ ಇರಬೇಕೆಂಬ ನಿಯಮವೇನೂ ಇಲ್ಲವೆಂದೆನಿಸುತ್ತಿದೆ. ಒಮ್ಮೊಮ್ಮೆ ಕಾಣುತ್ತಿದ್ದ ಅವಳ ಅಂತರ್ಮುಖತೆಗೆ ಇದೇ ಕಾರಣವೆ? ಶಂಕೆ. ವಯಸ್ಸಲ್ಲಿ ಮನಸು ಹತೋಟಿಯಲ್ಲಿರುವುದಿಲ್ಲ ಅನ್ನುತ್ತಾರೆ. ಸೃಷ್ಟಿ ನಿಯಮ. ಮಾನವೀಯ ದೌರ್ಬಲ್ಯದ ಪರಿಧಿಯಾಚೆ ಹರಿದು ಹೋಗುವುದು ಅಂಥ ಸಾಮಾನ್ಯವೇನಲ್ಲ. ಅಂದರೆ ಶೈಲ ನನ್ನ ಅಂತರ್ಯದಲ್ಲೆ ಪ್ರೀತಿಸುತ್ತಿದ್ದಳೆಂದೆ? ಅವಳ ಒಳ ಮನಸದ ಸೂಕ್ಷ್ಮ ಸ್ಪಂದನಗಳನ್ನು ನಾನು ಅರ್ಥೈಸಿಕೊಳ್ಳದೆ ಹೋದೆನೆ ? ಏನೂ ಅರ್ಥವಾಗದೆ ಹೋಗುತ್ತಿದೆ. ಜೀವನ, ಪ್ರಣಯ...ಓ...ಎಷ್ಟು ಅಸಂಗತ.

ರೇಡಿಯೋದಿಂದ ವೀಣೆಯ ರೆಕಾರ್ಡೆಡ್ ಮ್ಯೂಸಿಕ್ ಬರುತ್ತಿತ್ತು. ಒಂದೊಂದು ಮಿಡಿತವೂ ಶೈಲಳ ಬೆರಳಲ್ಲಿ ಆಡುವ ತಂತಿಯ ನೆನಪನ್ನು ಹತ್ತಿರಕ್ಕೆ ತಂದಿತು. ಶೈಲ ಕೂಡ ಇಂಪಾಗಿ ವೀಣೆ ನುಡಿಸುತ್ತಿದ್ದಳು. ನನ್ನೆದುರಿನಲ್ಲಲ್ಲ; ನಾನು ಬರೇ ಕದ್ದು ಕೇಳಿ ಅವಳನ್ನು ಕೆಂಪು ಮಾಡಿದ್ದು, ಇಷ್ಟು ದಿನವಿಲ್ಲದೆ ಶೈಲಾ ಈಗ ಮೃದುವಾಗಿ ಮಿಡಿಯುತ್ತಿದ್ದಳು.

"ಶೈಲಳಿಗೆ ಗಂಡುಗಳು ಅಂತ ನಾಲ್ಕಾರು ಬಂದಿದ್ದವು," ಮಾತು ನನ್ನ ತುಸುವೆ ಯೋಚನೆಯ ಆಳಕ್ಕೆ ತಳ್ಳಿದಂತೆ ಅವರು ಮುಂದುವರಿಸಿದರು, "ಶೈಲ ಯಾರನ್ನೂ ಒಪ್ಪಲಿಲ್ಲ. ಅಂಡರ್‌ಸ್ಟ್ಯಾಂಡಿಂಗ್ ಕೆಪ್ಯಾಸಿಟಿ ಇಲ್ಲದ ಜನ ಅಂತಾಳೆ. ಬರೇ ದುಡ್ಡಿಗೆ ಸಾಯೋರು ಅಂತಾಳೆ. ರೂಪಕ್ಕೆ ಬರೋರು ಅಂತಾಳೆ. ಒಬ್ಬೊಬ್ಬರನ್ನೂ ಒಂದೊಂದು ಕೆಟಗರಿಗೆ ಸೇರಿಸಿ ಬಿಡುತ್ತಾಳೆ" ಸಮಾಧಾನವಾದಂತೆ ಸ್ವಲ್ಪ ಹಗುರಾದಾಗ ಏನೋ ಚುಚ್ಚಿದಂತಾಯ್ತು. ಶೈಲಳನ್ನು ಹಚ್ಚಿಕೊಳ್ಳದಿದ್ದರೆ ಹೀಗೇಕೆ ಸುಪ್ತ ಮನಸ್ಸಿನಲ್ಲೇ ಅವ್ಯಕ್ತವಾಗಿ ಪ್ರೀತಿಸುತ್ತಿದ್ದೆ ? ಪ್ರಶ್ನೆಗಳು ಬಿಡಿಸಲಾಗದೆ ಹೋಗುತ್ತಿವೆಯಲ್ಲ?

ರಾತ್ರಿ ಮಲಗುವ ಮುಂಚೆ ಹಾಸಿಗೆಯ ಮೇಲೆ ಗೋಡೆಗೊರಗಿ ಕೂತು ಅವರು ತಗ್ಗಿದ ದನಿಯಲ್ಲಿ ಪ್ರಸ್ತಾಪ ಮಾಡಿದರು, "ಶೈಲಳ ಇಷ್ಟ ಹೀಗಿದೆ. ಅವಳಿಷ್ಟಾನೇ ನಮ್ಮದು. ಗಂಡು ದಿಕ್ಕಿಲ್ಲದ ಮನೆ. ಏನೋ ದೊಡ್ಡ ಮನಸ್ಸು ಮಾಡಪ್ಪ. ಮೇಲೆ ನಿನ್ನಿಷ್ಟ," ಮಾತು ಸರಾಗವಿರಲಿಲ್ಲ.

ಶೈಲಳನ್ನ ಆ ದೃಷ್ಟಿಯಲ್ಲಿ ಕಂಡಿರಲಿಲ್ಲ. ಸಂಗೀವಾಗ ಮದುವೆಯಾಗೋ ಯೋಚನೆ ಇಲ್ಲ. ಅಂತಹೂ ನಿಮ್ಮಂತಸ್ತಿಗೆ ತಕ್ಕವನಲ್ಲ ಎಂದೋ ಜಾರಿಕೊಳ್ಳಬಹುದಿತ್ತು. ನನಗರಿಯದೆ ಶೈಲ

ಕಟ್ಟಿದ್ದ ಗೊಂತಿಂದ ಕಣ್ಣಿ ಹರಿದುಕೊಂಡು ಓಡಿ ಹೋಗಲು ಅಸಮರ್ಥನಾದೆ. ಶೈಲ ಳಲ್ಲಿ ಗಂಡಾಗಿ ನಾನು ಬಯಸುವುದೆಲ್ಲ ಇತ್ತು. ಆದರೆ ಒಂದು ಕ್ಷಣ ಹೊರೆ ಹೆಚ್ಚಾದ ಎಳೆ ಗರುವಿನಂತೆ ತತ್ತರಿಸಿದೆ. ಮಾತುಗಳು ಹೊರ ಬರಲು ಚಡಪಡಿಸಿ ಗಂಟಲಲ್ಲೆ ನಿರ್ಜೀವವಾದಾಗ ಅವರಂದರು: "ಹೊಸಮನೆ ಕಟ್ಟಿಸುವ ಅಂತ ಇಪ್ಪತ್ತೈದರಂದು ಪಾಯ ಹಾಕಿಸುವ ಯೋಚನೆ ಯಿದೆ. ಸ್ವಲ್ಪ ಜಾತಕ ಇದ್ದರೆ ಕುಂಡಲಿ ಗುರುತು ಹಾಕಿ ಕೊಡು" ಸುಮ್ಮನೆ ಎದ್ದು ಹಳೆ ಕಡತಗಳನ್ನು ಬಿಚ್ಚಿ ಕುಂಡಲಿ ಗುರುತಿಸಿ ಕೊಟ್ಟೆ. ಮಡಚಿ ಜೇಬಿಗಿಟ್ಟುಕೊಂಡರು.

ಬೆಳಿಗ್ಗೆ ಅವರು ಹೋದ ನಂತರ ಅಮ್ಮ, ಏನಾದರೂ ಹೇಳಿದರಾ? ಎಂದು ಕೇಳಿದಳು. ಸಂಗತಿ ತಿಳಿಸಿದೆ. ಬರೇ ಹೂಂಗುಟ್ಟಿದಳು.

"ನಾಡದು ನಿಮ್ಮ ತಾಯೀನ ಕರೆದುಕೊಂಡು ಇಲ್ಲೆ ಬಂದು ಬಿಡಪ್ಪ. ನಮಗೂ ನೋಡಬೇಕು ಅಂತ ಇದೆ." ಆಮಂತ್ರಣ ಬಂತು. ಬಲವಂತದಿಂದ ಲೇ ಅಮ್ಮನ್ನ ಹೊರಡಿಸಿದೆ. ಹೋಳಿಗೆಯೂಟ ಮೈ ತೂಕ ಹೆಚ್ಚಿಸಿತ್ತು. ಶೈಲಳಿಗೆ ಅಂದೇ ಕಡೇ ಪಾಠ. "ನಿನಗಿಷ್ಟ ಇಲ್ಲಾಂದ್ರೆ ಬೇಡ, ಸಂತೋಷ ದಿಂದ ಕಳುಹಿಸು" ಕೇಳಿಕೆಗೆ ಶೈಲ ಕಣ್ಣೊರಸಿ ಕೊಳ್ಳುತ್ತಾ, "ತುಂಬಾ ಸಂತೋಷ ಆಗ್ತಿದೆ" ಅನ್ನುತ್ತಾಳೆ. ಒಂದು ತರಹ ಅವಳ ನಗು. ಅದ-ರೊಂದಿಗೆ ಅಳು. ಯಾಕೀ ಹುಡುಗಿ ಹೀಗೆ ಅನ್ನಿಸಿದರೂ ಅರ್ಥವಾಗದ್ದನ್ನು ಬೆದಕುವ ಗೋಜಿಗೆ ಕೈ ಹಚ್ಚದೆ ಸುಮ್ಮನಾಗುತ್ತೇನೆ.

ಮನೆಗೆ ಹೊರಡುವಾಗ, "ನಿಮ್ಮಿಂದ ಇದು ವರೆಗೂ ಜೀವ ಉಳೀತು. ನಿಮ್ಮುಪಕಾರ ಈ ಜನ್ಮದಲ್ಲಿ ಮರೆಯೋಕಾಗೋಲ್ಲ" ಅಮ್ಮನ ಕಣ್ಣು, ಕಂಠ ತುಂಬಿತ್ತು. "ಅ ಮಾತಾಡಬೇಡಿ, ಎಲ್ಲ ಭಗವಂತನ ದಯೆ," ಅವರು ಅವತ್ತಿನದೆ ಮಾತಾಡಿದರು. ಊರಿಂದ ಹೊರಡುವ ಮುಂಚೆ ಹೇಳಿ ಬಂದೆ. ಎಲ್ಲರೂ ಕಂಬನಿದುಂಬಿ ಬೀಳ್ಕೊ ಟ್ಟರು. ಹೃದಯ ಅವ್ಯಕ್ತ ಅನುಭವಗಳಿಂದ ಭಾರವಾಗಿತ್ತು.

*

ಕಾಲೇಜಿನ ರೂಮುಗಳ ಸ್ಟೇಜನ್ನು ಹತ್ತಿ ಪಾಠ ಹೇಳಲು ಶುರು ಮಾಡಿ ಎರಡು ತಿಂಗಳಾ ಗಿದೆ. ಕಲಿಸುವ ಉತ್ಸಾಹವಿದೆ. ಯೋಗ್ಯತೆ ಯಿದೆ ಅಂದುಕೊಂಡಿದ್ದೇನೆ. ಹುಡುಗರೂ ಆಗೊಮ್ಮೆ ಈಗೊಮ್ಮೆ ನಿಮ್ಮ 'To Be Or Not To Be' ಎಕ್ಸ್‌ಪ್ಲನೇಶನ್ ಬಹಳ ಚೆನ್ನಾ ಗಿತು. ಅಂತಲೋ ಒಫೀಲಿಯಾ ಪಾತ್ರ ಚೆನ್ನಾಗಿ ತಿಳೀತು ಸಾರ್, ಸಾವಿರ ಜನ ಬಂದು ಹೋದರು, ನಿಮ್ಮ ಹಾಗೆ ಡೀಪ್ ಆಗಿ ಸ್ಟಡಿ ಮಾಡಿ ಪಾಠ ಹೇಳಿದವರು ಯಾರೂ ಕಾಣೆ ಅಂತಲೋ ಅಂದದ್ದಿದೆ. ಆಗೆಲ್ಲ ಎದೆ ಉಬ್ಬಿ ಬರುತ್ತದೆ.

ಸಂಜೆಯಾಗಿದೆ. ಚಿಕ್ಕಂದಿನಿಂದ ಸುತ್ತಣ ಪರಿಸರ ಬಂಧುಮಿತ್ರರು ತಿಳಿದವರು ತಿಳಿಯ ದವರು ಎಲ್ಲರಿಂದಾದ ಅಪಮಾನ-ಅಸಮಾಧಾನ ಗಳನ್ನು ಕ್ಷಣ ಕ್ಷಣ ದೂರಾಗಿಸುತ್ತಿದ್ದ ಕಾಲೇಜಿಗೆ ರಾತ್ರಿ ಮಟ್ಟಿಗೆ ವಿದಾಯ ಹೇಳಿ ಹೊರಬಿದ್ದೆ. ನಾನಾಡುವ ಪ್ರತಿ ಉಪನ್ಯಾಸಗಳಲ್ಲಿ ಬದುಕಿನ ಬಗೆಗೆ ನನ್ನದೇ ಆದ ವೈಯಕ್ತಿಕವಾದರೂ ಸ್ಪಷ್ಟ ಕಾಳಜಿ ಪ್ರಕ್ರಿಯೆಗಳು ನುಂಬಿದಂತೆ ನನ ಗನಿಸುತ್ತದೆ. ನನ್ನ ಪಾಠ ಪ್ರವಚನಗಳ ಬಗೆಗೆ, ಉಪನ್ಯಾಸ ಚರ್ಚೆಗಳ ಬಗೆಗೆ ಸ್ಟಾಫ್ ರೂಮಿನ ವರೆಗೂ ಜತೆ ನಡೆದು ವಿಪುಲ ಚರ್ಚೆ ನಡೆಸುವ ಸಿದ್ಧಾಂತಗಳನ್ನು ಹೊರಗೆಡಹುವ ವಿದ್ಯಾರ್ಥಿ ಗಳ ನುಡಿಗಳಲ್ಲಿ ಮೆಚ್ಚುಗೆಯ ದನಿಯಿರುತ್ತಿತ್ತು. ಬಾಲ್ಯದಿಂದ ಬಯಸಿ ಹೊಂದಿದ್ದಕ್ಕಿರಬೇಕು; ಚಾಕ್ ಹಿಡಿದು ಸ್ಟೇಜ್ ಏರಿದಾಗಲೆಲ್ಲ ನನ್ನನ್ನೆ ಮರೆ ತಂತೆ ಯಾವುದೋ ಅನಿರ್ವಚನೀಯ ಅನು ಭವದ ನೆರೆಯಲ್ಲಿ ಸವೆದು ಹೋದಂತೆ ಅಂಥದ ರಲ್ಲಿ ಆಗೊಮ್ಮೆ ಈಗೊಮ್ಮೆ ಶೈಲಳ ಒಡ ನಾಟದ ಕ್ಷಣಗಳ ತುಣುಕುಗಳು ಸುಂದರ ವಾಗಿ ನೆನಪಾಗಿ ಮೈ ನವಿರಾಗಿ ನಡುಗು ತ್ತಿತ್ತು. ಪತ್ರವಾದರೂ ಬರೆದಿದ್ದರೆ ಆಗಿತ್ತು ಅಂದುಕೊಂಡುದು ಬರೇ ಅಂದುಕೊಂಡು ದಷ್ಟೇ. ಈ ಕಾಲೇಜಿನ ಪರಿಸರ ಕ್ಷಣಮಾತ್ರದಲ್ಲಿ ಎಲ್ಲವನ್ನೂ–ಅಮ್ಮನನ್ನೂ ಮರೆಸಿ ಬಿಡುತ್ತದೆ. ಸಹೋದ್ಯೋಗಿಗಳಲ್ಲಿ "You are lucky enough indeed Mr· Viji You see how these fellows ae dedicated to

you" ಅಂದವರೂ ಇದ್ದರು. ಒಳಗೊಳಗೇ ಕರುಬಿದವರೂ ಇದ್ದಾರೆ. ಏನಾದರಾಗಲಿ, ನನ್ನದೇ ಆದ ಒಬ್ಬಗೆಯ ಧೋರಣೆ ಅವರಾರನ್ನೂ ತೀವ್ರವಾಗಿ ಗಮನಿಸುವ ಗೋಜಿಗೆ ಎಡೆ ನೀಡಿದ್ದಿಲ್ಲ. ಎಷ್ಟಾದರೂ ಈ ಕಲಿಸುವ ಮಾಸ್ತರಿಕೆ ತೃಪ್ತಿ ಕೊಟ್ಟಿತ್ತು. ಸಮಾಧಾನ ನೀಡಿತ್ತು.

ಕಾಲೇಜಿನ ಹೆಬ್ಬಾಗಿಲು ದಾಟಿ ಮುಖ್ಯ ರಸ್ತೆಗೆ ಅಡಿಯಿಟ್ಟೆ. ಫೈನಲ್ಲಿನ ದಯಾನಂದ ಜತೆ ಬಂದ. ಈಚೆಗೆ ಅವನು ಕಾಲೇಜಿಗೆ ಬರದಿರುವುದು ಗಮನಿಸಿದ್ದೇನೆ. 'ಯಾಕೆ ದಯಾನಂದ್ ? ಈಚೆಗೆ ಕ್ಲಾಸ್‌ನಲ್ಲಿ ಕಾಣ್ಲಿಲ್ಲ," ಅಂದೆ. ದಯಾನಂದ ಅರೆ ಮಂಕಾಗಿದ್ದ. "ಬನ್ನಿ ಸಾರ್, ಸ್ವಲ್ಪ ಕಾಫಿ ಕುಡೀತ ಮಾತಾಡೋಣ" ಅಂದ. ಸೆಂಟ್ರಲ್ ಲಾಜ್‌ನಲ್ಲಿ ತಿಂಡಿ ತಿನ್ನುತ್ತ ಕಾಫಿ ಕುಡಿಯುತ್ತ ದಯಾನಂದ ಹೇಳಿದ್ದರ ಸಾರಾಂಶ ಇಷ್ಟು:

ಅವನು ಜಾತಿ ಗೀತಿ ಆಚಾರಗಳಿಗೆ ಬದ್ಧನಾದ ಬ್ರಾಹ್ಮಣನಂತೆ. ಆದರೂ ಅವನಿಗೆ ತನ್ನ ತಾಯಿಯ ಕುರಿತಾದ ಚಿಂತೆ, ಪ್ರೀತಿ. ಫೈನಲ್ಲಿನವಳೇ ಆದ ರೆಡ್ಡಿ ಹುಡುಗಿ ಸುಲೋಚನಾನ ಲವ್ ಮಾಡಿದ್ದು ತಿಳಿದು ಎಂಥದೋ ವಿಕ್ಷಿಪ್ತತೆಯಿಂದ ಅವನ ತಂದೆ ಆತ್ಮಹತ್ಯೆ ಮಾಡಿಕೊಂಡರಂತೆ. ಸ್ಲೀಪಿಂಗ್ ಡೋಸ್ ತಗೊಂಡು ದಿನವೂ ತಾಯಿಯದೊಂದು ಗೋಳು. ಸುಲೋಚನಾ ಕೂಡ "Forget me please, ನನ್ನಿಂದ ಹೀಗಾಯ್ತು." ಅಂಡಳಂತೆ. ಅವಳೂ ಪಕ್ಕ ತಿರುಗಿದರೆ? ಭಯವಿದೆ. "ಪ್ರೀತಿ, ವಿಶ್ವಾಸ...ನಾಯಿ ಮನ್ಷನ್ನ ಜಾತಿ ನೋಡಿ ವಿಶ್ವಾಸ ತೋರಿಸುತ್ತ ಸಾರ್" ಅಂದ. ಯೋಚಿಸಬೇಕಾದ್ದೆ. ನಾಯಿಗೂ ಮನುಷ್ಯನಿಗೂ ಅಂತರ ಅರಿಯಲ್ಲಿ.

ದಯಾನಂದನ ತಂದೆ ಮನಸ್ಸು ಮಾಡಿದ್ದರೆ ಅವರಿಬ್ಬರೂ ಸುಖವಾಗಿ ಬದುಕಲು ಆಸ್ಪದ ಮಾಡಬಹುದಿತ್ತು." ಹೋಗಲಿ, ಸ್ವಜಾತಿಯದೇ ಹೆಣ್ಣನ್ನು ಲಗ್ನವಾದರೆ ಬದುಕು ಸುಖವಾಗಿರುತ್ತೆ ಅನ್ನುವ ನಂಬಿಕೆ ಇದೆಯಾ? ಅದೂ ಇಲ್ಲ. ಏನಾದರೂ ಒಂದು (ಮಾರ್ಗ) ಹೇಳಿ ಸಾರ್, It is a sort of mental torture. I should say sir, To be Or Not to Be ನೆನಪಾಗ್ತಿದೆ." ಅಂದ. ಅದೂ ಸಹ ನಿಧಾನವಾಗಿ. ಯೋಚಿಸಬೇಕಾದ ವಿಷಯ. ಇಂಥವುಗಳಲ್ಲಿ ರ್ಯಾಶ್ ಜಜಮೆಂಟ್ ಫಲಕಾರಿಯಾಗಲ್ಲ. ಅಷ್ಟರಲ್ಲಿ ಮನೆ ಸಿಕ್ಕಿತ್ತು.ಕರೆಯೋಣ ಅಂದುಕೊಳ್ಳುವಷ್ಟರಲ್ಲಿ, "ಬರ್ತೀನಿ ಸಾರ್. ಮತ್ತೆ ಸಿಕ್ತೀನಿ," ಅಂದು ಹೊರಟೇ ಹೋದ.

ಅವರು ಊರಿಗೆ ಮರಳಿದ ಮೂರನೆಯ ಬೆಳಗ್ಗೇ ಶೈಲ ಬಂದಳು. ಅವಳ ನನ್ನ ಮಾತುಗಳ ನಡುವೆ ಈಗ ನಾಚಿಕೆಯಂಥದು ಅಡ್ಡ ಬರುತ್ತಿದೆ. ಸಂತೋಷವಾಗ್ತಿದೆ.

ಕಾಲೇಜಿಗೆ ಧೂಪ ಹಾಕಿ ದೂರ ನಡೆದದ್ದು ಒಂದೂವರೆ ಮೈಲಿ. ಅಲ್ಲಿ ಕೂರಲು ಯೋಗ್ಯ ಸ್ಥಳ ಸಿಕ್ಕಿತು. ತೀರ ಹತ್ತಿರ ಕೂತ ಅವಳ ಎದೆ ಬಡಿತದ ಶಬ್ದಗಳೂ ಕಿವಿಗೆ ಬಡಿದಂತೆ ಮೌನದಲ್ಲಿ ನಿಮಿಷಗಳಷ್ಟು ಸತ್ತಾಗ, "ಯಾಕೆ ಸುಮ್ಮನೆ" ಅಂದೆ. "ಮಾತಾಡಿ ಶೈಲ" ಅಂದೆ. "ಶೈಲೀಂತ ಕರೆಯಿರಿ. ಹಾಗೇ ನಾನಿವತ್ತು ನಿಮ್ಮನ್ನ ವಿಜೀಂತ ಕರೆಯಲಾ?' ಅಂದಳು. ವಿಚಿತ್ರ ಕೋರಿಕೆ ಕೇಳಿ ಆಶ್ಚರ್ಯವಾಯಿತು. "ಯಾಕೆ ಅಂದೆ. "ಸುಮ್ಮನೆ"ಅಂದು ಹೀಗಂದಳು: "ಅದೊಂಥರ ಆಶೆ ಆಯ್ತು. ಇವತ್ತಿನ ಆಶೆ ಇವತ್ತು ತೀರಿ ಹೋಗಬೇಕು. ಇವತ್ತಿನದು ನಾಳೆಗಿರುವ ನಂಬಿಕೆ ಇದೆಯಾ? For instance: ಮೊನ್ನೆ ಬಸ್ನಲ್ಲಿ ಹೋಗ್ತಿದ್ದೆ. ಆಕ್ಸಿಡೆಂಟ್ ಆಯ್ತು. ನನ್ನ ಫ್ರೆಂಡು, ಜತೆಗಿದ್ದರು ಸತ್ತೇ ಹೋದರು. ನನಗೆ ಸಣ್ಣ ಗಾಯ ಮಾತ್ರ!" ಮೊಣಕಾಲ ಮೇಲಿನ ಸಣ್ಣ ಗಾಯ ತೋರಿಸಿದಳು. ಎದ್ದು ಹೊರಡಲು ಉದ್ಯುಕ್ತಳಾದಳು. ಬರುತ್ತಾ, "ಹೊಸ ಮನೆ ಪಾಯ ಹಾಕಿದಿರಾ?" ಅಂದೆ. "ಸದ್ಯ, ಗೆದ್ದಲು ಉದುರಿಸದಿದ್ದರೆ ಹೋಗಲಿ..." ಅವಳದು ಜಡವಾದ ಸ್ವರ. ಅವಳು ನನ್ನ ವಿಜೀ ಅನ್ನಲಿಲ್ಲ. ನನಗೆ ಅವಳನ್ನು ಶೈಲೀಂತ ಕರೆಯುವ ಪ್ರಸಂಗವೂ ಬರಲಿಲ್ಲ.

ಸಂಜೆ ಹೊರಟು ಅಂದೆ. ನಿಂತವಳನ್ನು, "ಇವತ್ತಿದ್ದು ಹೋದರಾಗದೆ?" ಅಂದೆ. "ಇಲ್ಲ. ಅಪ್ಪಂಗೆ ಹೇಳಿ ಬರಲಿಲ್ಲ" ಅಂದಳು.

ಬಸ್ನಲ್ಲಿ ಕೂತು ಹ್ಯಾಂಡ್ ಬ್ಯಾಗಿದೊಂದು ಕ್ಯಾಲಂಡರಿನಂಥದ್ದು ಕೈಲಿಟ್ಟು, "ಮನೇಲಿ ನೋಡಿ"

ಅಂದಳು.

ಅದೊಂದು ಸಮ್ಮಿಶ್ರ ಭಾವನೆಗಳನ್ನು ಮುಖವಲ್ಲಡಗಿಸಿಕೊಂಡು ತಪೋನಿರತಳಾಗಿದ್ದ ಪಾರ್ವತಿಯ ಚಿತ್ರ. ಇಂಥದೇ ಭಾವನೆ ಎಂಬಂತಿಲ್ಲ. ಅಂದುಕೊಂಡಂತೆಲ್ಲ ಸ್ಪಷ್ಟವಾಗುತ್ತದೆ. ಶೈಲಳ ಕಲಾ ಪ್ರೌಢಿಮೆಗೆ ಮೆಚ್ಚುಗೆ ನುಗ್ಗಿಬರುತ್ತದೆ. ಇನ್ನಷ್ಟು ಸೂಕ್ಷ್ಮವಾಗಿ ಅವಲೋಕಿಸಿದಾಗ ಪಾರ್ವತಿಯುಗಳಿಕ್ಕೂ ಈಶ್ವರನನ್ನ ಪ್ರತಿಬಿಂಬಿಸುವ ಗೆರೆಗಳು ಹರಡಿ ನಿಂತಿರುವುದು ಸ್ಪಷ್ಟವಾಗುತ್ತದೆ. ಅದು ಅಷ್ಟನ್ನೆ ಅಲ್ಲದೆ ಬೇರೇನನ್ನೂ ಹೇಳುತ್ತಿದ್ದಂತೆ ಅನಿಸಿದಂತೆಲ್ಲ ಶೈಲ ನನ್ನಲ್ಲೆ ಬೆಳೆ ಬೆಳೆದು ಬೆಳಲು ಬಿಡುತ್ತಾಳೆ.

ಶೈಲಳ ತಂದೆಯಿಂದ ಎಂಟು ದಿನಗಳನಂತರ ಕಾಗದ ಬಂತು. "ನಾವು ಎಣಿಸಿದಂತೆ ಏನೂ ನಡೆಯುವುದಿಲ್ಲ ಅನ್ನುವುದಕ್ಕೊಂದು ದೃಷ್ಟಾಂತ, ವಿಜೇ, ಜೋಯಿಸರಿಗೆ ಕುಂಡಲಿ ತೋರಿಸಿದೆ. ಒಗ್ಗಿ ಬರೋಲ್ಲ ಅಂದರು. ಬಿಚ್ಚಿ ಹೇಳಬೇಕು ಅಂದರೆ ಶೈಲಳ ಮಾಂಗಲ್ಯ ಯೋಗ ಸರಿಯಿಲ್ಲವಂತೆ. ನಿನಗೆ ಮೋಸ ಮಾಡಿ ನಾವು ಸಾಧಿಸಬೇಕಾದ್ದೇನೂ ಇಲ್ಲ." –ಒಕ್ಕಣೆ.

ಮೊನ್ನೆ, "ಇವತ್ತಿನವರು ನಾಳೆಗಿರಲ್ಲ," ಅವಳು ಹೊರಡುವ ಮುಂಚೆ ಕೇಳಿದ್ದಳು, "ನನ್ನನ್ನೊಂದು ಸಲ ನಿಮಗೆ ಬೇಕಾದ ಹಾಗೆ ಉಪಯೋಗಿಸಿಕೊಳ್ಳಿ, ಪ್ಲೀಸ್. ನನ್ನ ಕೈಲಿ ಮರೆಯಾಕಾಗಲ್ಲ... ಆಗ್ತಾ ಇಲ್ಲ" ನನ್ನೆದೆಗೊರಗಿ ಬಿಕ್ಕಿದ ಅವಳದು ಬರೇ ಆವೇಶ, ಇಷ್ಟು ದಿನದ್ದೂ ಈಗ ಬೆಳಕಾಗ್ತಿದೆ ಅಂದುಕೊಂಡಿದ್ದೆ. ಅವಳು ಅಳುತ್ತಿದ್ದಳು. ನನ್ನಿಂದ ಕಸಿದು ಏನನ್ನೋ ಬಚ್ಚಿಡಲು ಯತ್ನಿಸುತ್ತಿದ್ದಂತೆ ಅನ್ನಿಸಿತು. ಬಾಗಿ ಕಣ್ಣೊರಸಿದ್ದೆ. ಇನ್ನಷ್ಟು ಶ್ರುತಿ ಹಿಡಿದು ಅತ್ತಿದ್ದಳು. ಸಮಾಧಾನ ಮಾಡುವಷ್ಟರಲ್ಲಿ ಸಾಕಾಗಿತ್ತು. ಕಾರಣ ಅವಳು ತಿಳಿಸಲಿಲ್ಲ. ದೀರ್ಘ ಕಾಲದ ಅಗಲಿಕೆಯಿರಬಹುದು ಅನ್ನುವ ನಿರ್ಧಾರಕ್ಕೆ ಬಂದಿದ್ದೆ. ಒಬ್ಬಗೆಯ ಅಪರಾಧಿ ಭಾವನೆ ಹೆಪ್ಪುಗಟ್ಟತೊಡಗಿತ್ತು ಬರೇ ಒಮ್ಮೆ ಅವಳನ್ನ ಮುಟ್ಟಿದ್ದಕ್ಕೆ.

ಹಾಗಾದರೆ? ನಾನು ಒಪ್ಪಲಾರೆ, ಸಂಪ್ರದಾಯ ಶರಣ ಅಂತ ಭಾವಿಸಿದಳೆ? ನನ್ನ ಕಡೆಗಿನ ಅವಳ ವಾಂಛೆ ಎಷ್ಟರ ಮಟ್ಟಿನದು ಎಂಬುದು ಸ್ಪಷ್ಟವಾಗಿ ತೋರತೊಡಗಿತು.

ಮರುದಿನ ಕಾಲೇಜಿನಲ್ಲೊಂದು ಸುದ್ದಿ. ದಯಾನಂದ ನೇಣು ಹಾಕಿಕೊಂಡನಂತೆ. ಕಡೆಗೂ ತನ್ನ ಪ್ರಶ್ನೆಗಳಿಗೆ ನನ್ನಿಂದ ಉತ್ತರ ಪಡೆಯದೇ ಹೋದ. ಪೂರ್ ಫೆಲೋ ಎಂದು ಸಹಾನುಭೂತಿ ವ್ಯಕ್ತಪಡಿಸಿ ನಂತರ ಸಂಬಂಧಿಸಿದ್ದೆ ಅಲ್ಲ ಎಂದು ಮರೆಯುವ ಜನ ಉಂಟಾದರೂ ದಯಾನಂದನ ವಿಚಾರಸರಣಿ ಮತ್ತವನ ಶಿಥಿಲ ಮನಸ್ಸು ನನ್ನನ್ನು ಪ್ರಶ್ನೆಗೀಡು ಮಾಡಿ ಹೋಗಿದ್ದವು.

ಈಗ ನಾನು ಮಾಡಬೇಕಾದದ್ದೇನು ? ಪ್ರಶ್ನೆ ಬರಿದು ಅದೇ ಆಗಿ ಉಳಿಯದೆ ಹಿರಿಹಿರಿದಾಗಿ ಕಾಡತೊಡಗಿದಾಗ ಪಾರ್ವತಿಯ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಅಮ್ಮನ್ನ ಮಾಂಗಲ್ಯ ಯೋಗ ಸರಿಯಿರದಿದ್ದರೆ ಏನಾಗುತ್ತೆ? ಅಂತ ಕೇಳಿದೆ. ಸಿಲ್ಲಿ ಪ್ರಶ್ನೆ. ಸರಿಯಿರದಿದ್ದರೆ ಸಾಯುತ್ತಾರೆ. ಇಲ್ಲ; ಇಲ್ಲ. ಅಷ್ಟೆ. "ಅಮ್ಮ ನಿನಗೆ ತಿಳಿಯದ್ದೇನೋ" ಕೆಲಸಕ್ಕೆ ಜಾರಿಕೊಂಡಳು. ಮಾತಿಗೆ ಮೌನ ಅಡ್ಡಿ.

ಒಗ್ಗರಣೆಗೆ ಹಾಕಿದ ಸಾಸುವೆ ಬೇಯಲು ಎಣ್ಣೆ ಇಲ್ಲ. ಎಣ್ಣೆಯ ಕಂಟೇನರ್‌ನಲ್ಲಿ ಒಂದು ಚಿಟ್ಟಿಲಿ. ಎಣ್ಣೆ ವಾಸನೆಗೆ ಒಳತೂರಿ ಹೊರ ಬರಲಾಗದೆ ಜಾರಿ ಜಾರಿ ಬೀಳುವ ಇಲಿ...ಅಮ್ಮನ ಮಾತು ಅಂತರಾಳ ಕೆದಕುತ್ತಿದೆ. ಪ್ರತಿಧ್ವನಿಸುತ್ತದೆ.

ಪಾರ್ವತಿಯ ಚಿತ್ರಕ್ಕೆ ಚೌಕಟ್ಟಿನ ಬಂಧನ. ಅವಳತ್ತ ನಾನೊಮ್ಮೆ ನೋಡಿದ್ದು ಹದಿನೈದು ದಿನಗಳ ನಂತರವೆ. ಇಲ್ಲದ ನಗೆ ಕಡ ತಂದುಕೊಂಡು ಅವರೆಲ್ಲರ ಮುಖಗಳೂ ಸ್ವಾಗತಿಸಿದವು. ನೆನಪಲ್ಲಿ ಗತಿಸಿದ ದಿನಗಳೂ ಜೀವಂತವಾದವು. ನನ್ನ ಶೈಲಳ ನಡುವೆ ಮಾತಾಡಲು ಅಡ್ಡಿಯಾಗದೆ ಮುದುಕರು ಸಂಜೆ ವಾಕಿಗೆ ರಸ್ತೆ ಸೇರಿದರು. ಮೌನದ ತೆರೆ ಸರಿಸಿ "ನೋಡಾಕೆ ಬಂದಿರಾ" ಶೈಲ ಅಂದಳು. "ಅಂತೂ ಮರೆತಿಲ್ಲ" ವ್ಯಸನ ನುಗ್ಗಿ ಕ್ಷಣ ಮಾತು ಬಂದಾಗಿ ಕೇಳಿದೆ: "ಯೋಗಗಳನ್ನು ಲಕ್ಷಣಗಳನ್ನು ಸರಿ ಮಾಡುವುದು ನಮ್ಮ ಕೈಲಿಲ್ಲವಾ ?" ಈಗಿನ ಶೈಲ ಬರೇ ಬೊಂಬೆ. ನೋಯಿಸಬಾರದೆಂದು ನಾನಂದಿದ್ದು. ಅವಳು ಬೇರೆ ರೀತಿ ತಿಳಿದದ್ದು ನೋವು ತಂದಿತು. ಬೇಸರವಾಯ್ತು. ನನ್ನ ಮಾತಿನರ್ಥ ಹೊಳೆದಿದ್ದರೂ ಶೈಲ

ಸ್ಪಂದಿಸಲಿಲ್ಲ. ಇಂಥದೇ ಜಡತೆ ಅವಳಲ್ಲಿ ಎಂಬುದರ ಸ್ಪಷ್ಟ ಅರಿವಾಗದೆ ನರಳಿದೆ. ಸುಧಾರಿಸಿಕೊಂಡು ಅಂದೆ, ನಿನ್ನ ಚಿತ್ರ ಬಹಳ ಸುಂದರವಾಗಿತ್ತು. ಒಳ್ಳೆಯ ಪ್ರತಿಬಿಂಬ ಅದು. ನಿನಗೆ ಉತ್ತಮ ಭವಿಷ್ಯವಿದೆ.' ತನಗೆ ಸಂಬಂಧಿಸಿಲ್ಲ ಎನ್ನುವಂತೆ ಅವಳು ಬೇರೆ ಮಾತಲ್ಲಿ ಮುಳುಗಿದಳು. ಮಾನವೀಯ ದೌರ್ಬಲ್ಯದ ಪರಿಧಿಯಾಚೆ ಹರಿದು ಹೋಗುವುದು ಅಸಾಧ್ಯ ಅಂತ ಬಗೆದಿದ್ದೆ. ಆದರೆ ಈ ಆವೇಗ, ಅನುಬಂಧ, ಅನುಭೂತಿ, ಸಂಬಂಧ...ಜೀವನವೂ ಕೂಡ ಎಲ್ಲ ಬರೇ ಅಬದ್ಧ; "ಏಲ್‌ಗಿಂತ ಮಿಗಿಲಾಗಿ ಏನೂ ಇಲ್ಲ. ಖಂಡಿತ. ನಾವು ಯಾವುದಕ್ಕೂ ಬದ್ಧರಾಗದೆ ಬದುಕಲು ಸಾಧ್ಯ. ವಿಜೀ, ಮುಖ್ಯ ಬದಲಾಗುವ ಮೌಲ್ಯಗಳಿಗೆ ಹೊಂದಿಕೊಳ್ಳಬೇಕು." ಮೊದಲ ಬಾರಿಗಂಪವಳು ಹಾಗೇ. ನಾನು ತೆಪ್ಪಗಿದ್ದೆ. "ಪ್ರೀತಿ, ಪ್ರೇಮ ಎಲ್ಲ ಅಪಕ್ವವಾದ ಅನುಭವಗಳು ಅನ್ನಿಸುತ್ತೆ. ಪಕ್ವವಾದ ಹಾಗೆ ಅವೆಲ್ಲ ವಾತ್ಸಲ್ಯದಂಥ ಅಪೂರ್ತತೆಗೆ ಸ್ವರೂಪ ಬದಲಾಯಿಸಿಕೊಳ್ಳುತ್ತವೆ. ವಸಂತೀ....ಹಾಗೇ ಕ್ಷಮಿಸಿಬಿಡುತ್ತೀ ಅಲ್ಲವಾ. ನನ್ನ ಮಾತು? ನಾವು ನಂಬಿಕೆಗಳನ್ನೂ ಅಳವಡಿಸಿಕೋಬೇಕು ವಿಜೀ, ಅವು ಬದುಕಿಗೆ ತೀರ ಅವಶ್ಯ. ಸಿಲ್ಲಿ ಅಂತೀಯೇನೋ." ಮಾತು ನಿಲ್ಲಿಸಿದಳು. ಎದ್ದು ನಿಂತಳು. ನಾನೂ ಯಾವುದೊ ಸೆಳೆತಕ್ಕೆ ಸಿಕ್ಕಿದಂತೆ ಎದ್ದುನಿಂತೆ.

ಶೈಲಳಿಗೆ ಎಷ್ಟು ಪ್ರೌಢಿಮೆ ಬಂದಿದೆ ಎಂದಾಗಲಿ ಅವಳ ಈ ಸ್ಥಿತಿಗೆ ಕಾರಣ ಏನೆಂಬುದನ್ನಾಗಲಿ ಊಹಿಸಬಲ್ಲೆ. ಕೇವಲ ಪ್ರಣಯಕ್ಕಾಗಿ ಚಿತ್ತ ಚಾಂಚಲ್ಯಗೊಂಡ ದಯಾನಂದನಿಗೂ ಪ್ರೇಮ ದುರ್ಲಭವೆಂದು ಬಗೆದು ಗತಿ ಬದಲಿಸಿಕೊಂಡ ಶೈಲಳಿಗೂ ಅಂತರ ಬಹುತೇಕ. ಸ್ವಾಗತಿಸಿದರೂ ಒಪ್ಪೆ ಎನ್ನುವ ಶೈಲ ನಂಬಿಕೆಗೆ ಬದ್ಧಳಾದದ್ದೆ ವಿಪರ್ಯಾಸ.

ಶೆಲ್ಫಿನಿಂದ ಅವಳು ಈಚಿನದೊಂದು ಆಯಿಲ್ ಪೇಂಟ್ ತೆಗೆದು ಕೈಲಿಟ್ಟಳು. ಮಗುವಿಗೆ ಮೊಲೆಯೂಡಿಸುತ್ತಿದ್ದ ತಾಯಿ ಚಿತ್ರಕ್ಕೆ "ವಾತ್ಸಲ್ಯ" ಎಂಬ ಶೀರ್ಷಿಕೆ. "ಮಾನಸಿಕ ಸ್ಥಿತ್ಯಂತರಗಳನ್ನು ಗುರುತಿಸಬಲ್ಲೆ ನೀನೀಗ, ಅವಳಂದಳು, ಅವತ್ತು ನಾನಿನ್ನ ಬೇಕಾದಂತೆ ಉಪಯೋಗಿಸಿಕೋ ಅಂತ ಕೇಳಿದ್ದೆ." ಅರಿವಿಲ್ಲದೇ ಕಣ್ಣಿಗೆ ನೀರು ತುಂಬಿ ಶೈಲ ಮಂಜಾಗಿ ಕಾಣುತ್ತಿದ್ದಳು. „ಥಟ್ಟನೆ ಹಣೆಗೊಮ್ಮೆ ಚುಂಬಿಸಿ, „ನನ್ನ ಒಂದು ಸಾರಿ ಅಕ್ಕಾಂತಲೋ ಅಮ್ಮಾಂತಲೋ ಅನ್ನಲು ಸಾಧ್ಯವಾಗುತ್ತದಾ...ಪ್ರಯತ್ನಿಸು" ಅಂದಳು. ಭಾವ ಬದಲಾಗಿದ್ದ ಅಪ್ಪುಗೆಯಲ್ಲಿ ಸ್ತಬ್ಧನಾದೆ. ಮೌನದಿಂದ ಮಾತು ಹೆಕ್ಕಲು ವಿಫಲನಾದೆ. ತಪ್ಪಿದ್ದ ಶೈಲಳ ಬಂಧನ ಏನನ್ನೂ ಕೆರಳಿಸಲಿಲ್ಲ. ಈಗ ಶೈಲ ಬಿಕ್ಕುತ್ತಿದ್ದಳು. ಗಂಟಲು ಬಿಗಿಯಾಗಿತ್ತು.

ಅವಳ ತಂದೆ ಬಂದರು. "ಜೀವನದಲ್ಲಿ ಕೆಲವೆಲ್ಲ ಮರೆಯುವುದು ಅನಿವಾರ್ಯ ಅನ್ನಿಸುತ್ತೆ ಅಲ್ಲವೇನಪ್ಪ" ಅಂದರು.

ನನ್ನ ಸ್ತಬ್ಧ ತೆರೆದೆವೆಗಳ ಪಿಳುಕಾಟದಲ್ಲಿ ಮೂಡಿ ಮಾಸುತ್ತವೆ, ನೂರೆಂಟು ಸತ್ತ ಪ್ರತಿಬಿಂಬಗಳು. ನಿಚ್ಚಳವಾಗಿ ಹರಡಿ ನಿಂತ ಜೀವಂತ ಶೈಲ ಬರೇ ಪ್ರತಿಬಿಂಬ ನಡುವೆ. ✡

ಕೆಲಸಕ್ಕಾಗಿ ಅಲೆದಲೆದು ಸಾಕಾದವನೊಬ್ಬನಿಗೆ ಕಡೆಗೆ ಒಂದೆಡೆ ಲೆಕ್ಕ ಬರೆಯುವ ಕೆಲಸ ಸಿಕ್ಕಿತು. ಒಂದು ತಿಂಗಳ ಮೇಲೆ ಮಾಲಿಕ ಅವನನ್ನು ಕರೆದು, "ನೀನು ತಪ್ಪು ಲೆಕ್ಕ ಬರೆದದ್ದರಿಂದ ಕಂಪನಿಗೆ ನಷ್ಟವಾಗಿದೆ. ಅದನ್ನು ನಿನ್ನ ಸಂಬಳದಿಂದ ಪ್ರತಿ ತಿಂಗಳು ಅಷ್ಟಷ್ಟು ವಜಾಮಾಡಿ ಕೊಳ್ಳುತ್ತೇನೆ," ಎಂದ.

"ಎಷ್ಟು ನಷ್ಟ?" ಎಂದ ಲೆಕ್ಕಿಗ. "ಎರಡು ಸಾವಿರ".

"ಅಂತೂ ನನಗೆ ಕಾಯಂ ನೌಕರಿ ಸಿಕ್ಕಿದಂತಾಯಿತು," ಎಂದನಾ ಭೂಪ.

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ **ಪುಟ** ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಅಪ್ರತಿಹತ
(ಅ) ಎದುರಾಳಿಲ್ಲದ (ಆ) ತಡೆಯಿಲ್ಲದ (ಇ) ಸೌಮ್ಯ (ಈ) ಸಾವಿಲ್ಲದ

೨. ಅಪ್ರಮತ್ತ
(ಅ) ಸಾವಧ (ಆ) ಅಮಲೇರಿದ (ಇ) ಹುಚ್ಚು ಬಿಟ್ಟ (ಈ) ಬುದ್ಧಿವಂತ

೩. ಮೂಗೇಟು
(ಅ) ಮೂರು ಹೊಡೆತ (ಆ) ಮೂಗಿನ ಆಭರಣ (ಇ) ತಿರಸ್ಕಾರ (ಈ) ಗುಟ್ಟಾದ ಪೆಟ್ಟು

೪. ತೇಟು
(ಅ) ಶುದ್ಧ (ಆ) ಪ್ರೇಮದ ಆಟ (ಇ) ದಂಟು (ಈ) ದಾಟು

೫. ಪಾರತ್ರಿಕ
(ಅ) ತಪ್ಪಿಸಿಕೊಳ್ಳುವ (ಆ) ಗಾಜು (ಇ) ಪರಲೋಕದ (ಈ) ಗಡಿಯ ಹತ್ತಿರದ

೬. ಸ್ಥಾಣು
(ಅ) ಬಲಿಷ್ಠ (ಆ) ಪರಿಶುದ್ಧ (ಇ) ಅಲುಗಾಡದ (ಈ) ಸ್ವಂತದ

೭. ಸಸ್ಮಿತ
(ಅ) ನಸು ನಗುವಿನ (ಆ) ಆಶ್ಚರ್ಯಗೊಂಡ (ಇ) ವಿಚಿತ್ರ (ಈ) ಗಾಬರಿಯಾದ

೮. ಹೂಣಿಕೆ
(ಅ) ಉಪಾಯ (ಆ) ಪ್ರತಿಜ್ಞೆ (ಇ) ತುಂಬಿದ್ದು (ಈ) ದುಷ್ಟತನ

೯. ಹುಸಿಕ
(ಅ) ಜಾರಿಕೊಳ್ಳುವ (ಆ) ಸುಳ್ಳುಗಾರ (ಇ) ಅಹಂಕಾರಿ (ಈ) ಮೂಕ

೧೦. ವಿಕ್ರಾಂತ
(ಅ) ಶೌರ್ಯ (ಆ) ಸತ್ತುಹೋದ (ಇ) ಕಡುಕಷ್ಟ (ಈ) ಗಲಭೆ

೧೧. ಉದ್ಭಾಸಿತ
(ಅ) ಬೆರಗಾದ (ಆ) ಯೋಚಿಸಿದ (ಇ) ಬೆಳಗಿದ (ಈ) ಒಡೆದದ್ದು

೧೨. ಅವಿನಾಭಾವ
(ಅ) ಇಲ್ಲದಿರುವಿಕೆ (ಆ) ಸೋಲು ಕಾಣದ್ದು (ಇ) ಅಧರ್ಮ (ಈ) ಒಂದನ್ನೊಂದು ಅಗಲದಿರುವಿಕೆ

೧. **ಅಪ್ರತಿಹತ** (ಅ) ತಡೆಯಿಲ್ಲದ; ನಿರ್ವಿಘ್ನ; ನಿರಾಶೆಯಿಲ್ಲದ. ಉದಾ—ಅಪ್ರತಿಹತವಾದ ಪ್ರಗತಿ [ಸಂ. ಅ = ಇಲ್ಲ; ಪ್ರತಿ = ಎದುರು; ಹತ = ಪೆಟ್ಟು ಬಿದ್ದ]

೨. **ಅಪ್ರಮತ್ತ** (ಅ) ಸಾವಧ, ಜಾಗರೂಕ, ಎಚ್ಚರಿಕೆಯುಳ್ಳ; ದಕ್ಷ. ಉದಾ—ಅಪ್ರಮತ್ತವಾದ ನಡವಳಿಕೆ. [ಸಂ. ಅ = ಅಲ್ಲ; ಪ್ರಮತ್ತ = ತಪ್ಪಿ ಬಿದ್ದವ]

೩. **ಮೂಗೇಟು** (ಈ) ಗುಟ್ಟಾದ ಪೆಟ್ಟು, ಹೊರಗೆ ತೋರದ ಹೊಡೆತ; ಹೇಳಿಕೊಳ್ಳಲಾರದ ನೋವು. ಉದಾ—ಮಗನ ವರ್ತನೆ ತಂದೆಗೆ ಮೂಗೇಟಾಗಿತ್ತು. [ಮೂಗು = (ಸಂ) ಮೂಕ, ಏಟು = ಪೆಟ್ಟು]

೪. **ತೇಟು** (ಅ) ಶುದ್ಧ, ಸಂಪೂರ್ಣ ಹೋಲಿಕೆಯುಳ್ಳ. ಉದಾ—ಅವನೊಬ್ಬ ತೇಟು ಮಂಗ. [ಮರಾಠಿ, ಥೇಟ್]

೫. **ಪಾರತ್ರಿಕ** (ಇ) ಪರಲೋಕಕ್ಕೆ ಸಂಬಂಧಿಸಿದ, ಮರಣಾನಂತರದ. ಉದಾ—ಪಾರತ್ರಿಕ ಸೌಖ್ಯ. [ಸಂ. ಪರತ್ರ = ಬೇರೆ ಕಡೆ]

೬ **ಸ್ಥಾಣು** (ಅ) ಅಲುಗಾಡದ, ಅಚಲ, ಸ್ಥಿರ; ಶಿವ. ಉದಾ—ಏನೆಂದರೂ ಸ್ಥಾಣುವಾಗಿ ಕುಳಿತಿದ್ದ. [ಸಂ.]

೭. **ಸಸ್ಮಿತ** (ಅ) ನಸುನಗುವುಳ್ಳ. ಉದಾ—ಬೈದರೂ ಸಸ್ಮಿತನಾಗಿಯೇ ಉತ್ತರಿಸುತ್ತಾನೆ. [ಸಂ. ಸ = ಒಡನೆ, ಸ್ಮಿತ = ನಗು]

೮. **ಹೂಣಿಕೆ** (ಅ) ಪ್ರತಿಜ್ಞೆ, ಶಪಥ ಉದಾ—ಅರ್ಜುನನ ಹೂಣಿಕೆ ಕೇಳಿ ಜಯದ್ರಥ ಗಾಬರಿಯಾದ. [ಕನ್ನಡ, ಹೂಣು = ಪ್ರತಿಜ್ಞೆಮಾಡು]

೯. **ಹುಸಿಕ** (ಅ) ಸುಳ್ಳುಗಾರ, ಮಿಥ್ಯಾವಾದಿ. [ಕನ್ನಡ, ಹುಸಿ = ಸುಳ್ಳು]

೧೦. **ವಿಕ್ರಾಂತ** (ಅ) ಶೌರ್ಯ, ಪರಾಕ್ರಮ; ಶೂರ, ಪರಾಕ್ರಮಿ; ನಡೆ, ಹೆಜ್ಜೆ. ಉದಾ—ವಿಕ್ರಾಂತಕ್ಕೆ ಜಯವುಂಟು. [ಸಂ. ವಿ = ಹೆಚ್ಚಿನ. ಕ್ರಾಂತ = ಹೆಜ್ಜೆ. ನಡೆ, ದಾಟುವಿಕೆ]

೧೧. **ಉದ್ಭಾಸಿತ** (ಇ) ಬೆಳಗಿದ, ಬೆಳಕು ಬಿದ್ದ; ಪ್ರಕಾಶಮಾನ. ಉದಾ— ಮುಖ ಉದ್ಭಾಸಿತವಾಯಿತು. ವಿವರಣೆಯಿಂದ ಸಮಸ್ಯೆ ಉದ್ಭಾಸಿತವಾಯಿತು. [ಸಂ, ಉದ್ = ಮೇಲೆ, ಭಾಸಿತ = ಬೆಳಗಿದ್ದು]

೧೨. **ಅವಿನಾಭಾವ** (ಈ) ಒಂದನ್ನೊಂದು ಅಗಲದಿರುವುದು, ಬಿಟ್ಟಿರದಿರುವುದು. ಉದಾ— ಅವನಿಗೂ ಇವನಿಗೂ ಅವಿನಾಭಾವ. [ಸಂ. ಅ = ಇಲ್ಲ, ವಿನಾ = ಇಲ್ಲದ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ "	...	ಉತ್ತಮ
೧೧—೧೨ "	...	ಅತ್ಯುತ್ತಮ

ನನ್ನ ಪ್ರಥಮ ಚಿರತೆಯ ಬೇಟೆ



◆ ಡಿ. ಆರ್. ಕುಲಕರ್ಣಿ

೧೯೫೦. ನಾನು ಅರಣ್ಯ ಶಾಖೆಯ ರೆಂಜರನಾಗಿ ಕಾರವಾರ ಜಿಲ್ಲೆಯ ಸುಪಾದಲ್ಲಿದ್ದ ಕಾಲ. ಊರು ಲೋಂಡಾ ಸ್ಟೇಶನ್ನಿನಿಂದ ಕಾರವಾರಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ಹದಿನಾರು ಮೈಲು ದೂರದಲ್ಲಿದೆ. ಒಮ್ಮೆ ಒಬ್ಬ ಕಾಂಟ್ರಾಕ್ಟರನಿಗೆ ಮರಗಳನ್ನು ಕಡಿಯುವುದಕ್ಕೆ ಗುರುತು ಹಾಕಿ ಕೊಡಲು ಸುಪಾದಿಂದ ಆರು ಮೈಲು ದೂರದ ಖೋಡ್ಲಿ ಎಂಬ ಹಳ್ಳಿಗೆ ಹೋಗಬೇಕಾಯಿತು. ನಾವಿಬ್ಬರೂ ಎರಡು ಮೂರು ಆಳುಗಳೊಂದಿಗೆ ಮುಂಜಾನೆ ಬೇಗನೆ ಹೊರಟು ಚಕ್ಕಡಿಯಲ್ಲಿ ಐದು ಮೈಲು ಸಾಗಿದೆವು. ಮುಂದೆ ಒಂದೂವರೆ ಮೈಲು ಕಾಲು ನಡಿಗೆಯಿಂದ ಆ ಸ್ಥಳವನ್ನು ಮುಟ್ಟಬೇಕಾಗಿತ್ತು. ಆಗ ನನ್ನ ಎಲ್ಲಾ ಸಾಮಾನುಗಳನ್ನು ಆಳಿನ ಬೆನ್ನ ಮೇಲೆ ಹೊರಿಸಿಕೊಂಡು ನನ್ನ ಬಂದೂಕನ್ನು ಹೆಗಲ ಮೇಲೆ ಇಟ್ಟುಕೊಂಡು ಮುಂದೆ ಸಾಗಿದೆ.


ಖೋಡ್ಲಿ ಗ್ರಾಮ ದಟ್ಟ ಕಾಡಿನಲ್ಲಿದೆ. ಅದನ್ನು ಸಮೀಪಿಸುವ ಹೊತ್ತಿಗೆ ಮಧ್ಯಾಹ್ನ ಸುಮಾರು ಹನ್ನೊಂದು ಗಂಟೆ ಆಯಿತು. ನಮ್ಮ ದಾರಿಯಲ್ಲಿ ಊರಿನಿಂದ ಈಚೆಗೆ ಎರಡು ಫರ್ಲಾಂಗು ದೂರದಲ್ಲಿ ಒಂದು ಹಳ್ಳವಿದೆ. ಆದರಲ್ಲಿ ಆಗ ಮೊಣಕಾಲು ಮಟ್ಟ ನೀರು ಹರಿಯುತ್ತಿತ್ತು. ನಾನು ಸಮವಸ್ತ್ರದಲ್ಲಿ ಇದ್ದುದರಿಂದ ಬಟ್ಟೆ ಕೊಳೆಯಾಗದಂತೆ ಬೇರೆಡೆ ಕಡಿಮೆ ಆಳವಿದ್ದಲ್ಲಿ ದಾಟುವದಕ್ಕಾಗಿ ಹಾಗೇ ಸ್ವಲ್ಪ ದೂರ ಹಳ್ಳದ ದಂಡೆಗುಂಟ ಹೋದೆ. ಹೋಗುತ್ತಿದ್ದಂತೆಯೇ ಒಮ್ಮೆಲೇ ಯಾವುದೋ ಪ್ರಾಣಿಯ ಕೆಲವು ಹೆಜ್ಜೆ ಗುರುತುಗಳನ್ನು ಕಂಡೆ. ಅವನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಚಿರತೆಯೋ ಮರಿ ಹುಲಿಯೋ ಕೆಲವೇ ಸಮಯ ಮೊದಲು ಅಲ್ಲಿ ಅಡ್ಡಾಡಿತ್ತೆಂದು ಅನಿಸಿತು. ಹೆಜ್ಜೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದ ಮೇಲೆ ಅವು ಚಿರತೆಯವೇ ಎಂಬುದರಲ್ಲಿ ನನಗೆ ಸಂಶಯವುಳಿಯಲಿಲ್ಲ. ಇದರಿಂದ ಹೊಸ ವಿಚಾರಕ್ಕೆ ಎಡೆಯಾಯಿತು. ಸ್ವಲ್ಪ ಕಾಲ ಮುಂಚೆ ಇಲ್ಲಿಂದ ಚಿರತೆ ಹಾದು ಹೋಗಿದ್ದರೆ ಅದು ಇಲ್ಲಿಯೇ ಎಲ್ಲಾದರೂ ಸಮೀಪದಲ್ಲಿಯೇ ಇರಬಹುದು ಎಂಬ ವಿಚಾರ ಮೆಲುಕು ಹಾಕುತ್ತಲೆ ಊರು ತಲುಪಿದ ಮೇಲೆ ಪಟೇಲನು ಗೊತ್ತುಮಾಡಿದ ಮನೆಯೊಂದರಲ್ಲಿ ಕಾಂಟ್ರಾಕ್ಟರನೊಂದಿಗೆ ಇಳಿದುಕೊಂಡೆ.

ಆ ಗ್ರಾಮದ ಪಟೇಲನಲ್ಲಿಯೂ ಊರಿನ ಕೆಲ ಜನರಿಂದಲೂ ಚಿರತೆಯು ತೊಂದರೆ ಕೊಡುತ್ತಿರುವುದೇ ಎಂದು ವಿಚಾರಿಸಲಾಗಿ ಹಿಂದಿನ ದಿನವೇ ಒಂದು ಬಲಿಷ್ಠವಾದ ಆಕಳನ್ನು ಹುಲಿಯೋ ಚಿರತೆಯೋ ಕೊಂದಿತ್ತೆಂದು ಅವರು ಹೇಳಿದರು. ನಾನು ಪಟೇಲರನ್ನು ಕರೆದು ಆಕಳು ಬಿದ್ದ ಜಾಗ ತೋರಿಸಲು ಕೇಳಿದೆ.

ನಾನು ಪಟೇಲ ಮತ್ತು ನಾಲ್ಕಾರು ಜನರೊಡನೆ ಕೂಡಿಕೊಂಡು ಆಕಳು ಸತ್ತು ಬಿದ್ದ ಸ್ಥಳಕ್ಕೆ ಹೋದೆ. ಅಲ್ಲಿ ತಲುಪಿದಾಗ ಮಧ್ಯಾಹ್ನದ ಬಿಸಿಲು ಚುರುಗುಡುತ್ತಿತ್ತು. ಅಲ್ಲಿ ಅರ್ಧಮರ್ಧ ತಿಂದುಳಿದ ಆಕಳದ ಕಳೇವರವನ್ನು ನಾನು ಕಂಡೆ. ಉಳಿದದ್ದನ್ನು ತಿನ್ನುವುದಕ್ಕೆ ಮತ್ತೆ ಆ ಪ್ರಾಣಿ ಬರುವದಂತೂ ನಿಶ್ಚಿತ. ಅದನ್ನು ಹೊಡೆಯಲು ರಾತ್ರಿ ಕಾಲವೇ ಸೂಕ್ತವೆಂದು ನಾನು ತೀರ್ಮಾನಿಸಿದೆ.

ಆ ಸಂಜೆಗೇ ಅದು ಅಲ್ಲಿ ಬರುವದೆಂದು ಅಲ್ಲಿಯ ಶಿಕಾರಿಯೂ ಅಂದ. ನನ್ನದೂ ಇದೇ ಅಭಿಪ್ರಾಯವಾಗಿತ್ತು. ಆ ಚಿರತೆಯನ್ನು ನಾನು ಹೊಡೆಯಬೇಕೆಂದು ಊರ ಜನರೂ ಆಗ್ರಹ ಪಡಿಸಿದರು. ಆದರೆ ಆ ಊರ ಪಟೇಲನಿಗೆ ನನ್ನಿಂದ ಚಿರತೆಯನ್ನು ಹೊಡೆಯಲಾಗುವದೇ ಎಂಬ ಬಗೆಗೆ ಸಂಶಯವಿದ್ದಂತಿತ್ತು. ಅಲ್ಲದೆ ಸರಕಾರಿ ಅಧಿಕಾರಿಯೊಬ್ಬನಿಗೆ ಏನಾದರೂ ಅಪಾಯ ವಾದರೆ ಅದಕ್ಕೆ ತಾನೇ ಹೊಣೆ ಎಂಬ ಭಾವನೆ. ಆದ್ದ ರಿಂದ ಆತ, "ಚಿರತೆ–ಹುಲಿಗಳನ್ನು ಬೇಟೆಯಾಡಿ ಅಭ್ಯಾಸವಿದೆಯೇ? ಹಾಗಿದ್ದರೆ ಮಾತ್ರ ನಿಮಗೆ ಅನು ಕೂಲ ಮಾಡಿಕೊಡುತ್ತೇನೆ" ಎಂದು ಹೇಳಿದ. ನಾನು, ಆ ಬಗ್ಗೆ ಚಿಂತಿಸಬೇಡ ಎಂದು ಅವನಿಗೆ ಹೇಳಿದೆ. ನಿಜ ಹೇಳಬೇಕೆಂದರೆ ನನಗೆ ಅಲ್ಲಿಯ ವರೆಗೆ ಚಿರತೆ ಹುಲಿಗಳಂಥ ಹಿಂಸ್ರ ಪ್ರಾಣಿಗಳನ್ನು ಒಬ್ಬನೆ ಬೇಟೆಯಾಡಿ ಅನುಭವವಿರಲಿಲ್ಲ. ಆದರೆ ಅನೇಕ ಬೇಟೆಗಾರರ ಜೊತೆ ಬೇಟೆಗಳಲ್ಲಿ ಭಾಗ ವಹಿಸಿ ನಾನೊಬ್ಬ ಗುರಿಕಾರನೆಂದೂ ಹೆಸರು ಪಡೆದಿದ್ದೆ. ಆತನಿಗೆ ಸ್ವಲ್ಪ ಸಮಾಧಾನವಾಯಿತೆಂದು ಮುಖ ಚರ್ಯೆಯಲ್ಲಿ ಕಾಣಿಸಿತು. ನನಗೆ ಸಹಾಯ ನೀಡಲು ಆತ ಒಪ್ಪಿಕೊಂಡ.

ಮಂಚಿಕೆ ಹಾಕಿ ಚಿರತೆಯನ್ನು ಕೊಲ್ಲಬೇಕಾಗಿತ್ತು. ಆದರೆ ಅದಕ್ಕೆ ಅನುಕೂಲವಾದ ಗಿಡಗಳೇನೂ ಅಲ್ಲಿ ಬಹಳ ಇರಲಿಲ್ಲ. ಹಳ್ಳದ ಒಂದು ಪಕ್ಕದಲ್ಲಿ ಕೆಲವು ಕುರುಚಲು ಗಿಡಗಳ ನಡುವೆ ಸ್ವಲ್ಪ ಬಯಲು; ಸ್ವಲ್ಪ ದೂರದಲ್ಲಿ ಬಹಳೆಂದರೆ ಹತ್ತು ಅಡಿ ಎತ್ತರವಾದ ಒಂದು ಬೋರೆ ಹಣ್ಣಿನ ಗಿಡ. ಆ ಊರ ಶಿಕಾರಿಯನ್ನು ಕರೆದು ಸಾಧ್ಯವಿದ್ದಷ್ಟ ರಲ್ಲಿಯೇ ಒಂದು ಮಂಚಿಕೆ ಕಟ್ಟುವಂತೆ ಹೇಳಿದೆ. ಆತ ಬೋರೆ ಗಿಡದ ಟೊಂಗೆಗಳಿಗೆ ನೆಲದಿಂದ ಸುಮಾರು ಒಂಬತ್ತು ಹತ್ತು ಅಡಿ ಎತ್ತರಕ್ಕೆ ಆಗುವಂತೆ ಒಂದು ಹಲಗೆಯನ್ನು ಕಟ್ಟಿ ಕೊಟ್ಟ. ಅದನ್ನು ಏರಲು ಮುಳ್ಳು ತುಂಬಿದ ಗಿಡವನ್ನು ಸ್ವಲ್ಪ ಸವರಿ ದಾರಿ ಮಾಡಬೇಕಾಯಿತು. ಆಕಳ ಶರೀರದ ಹಿಂಭಾಗವನ್ನು ಚಿರತೆ ಆಗಲೆ ತಿಂದು ಹಾಕಿತ್ತು. ಈ ಭಾಗವೇ ಬಹಳ ಮಾಂಸಮಯ ವಾಗಿದ್ದರಿಂದ ಮೊದಲು ಅದನ್ನೇ ತಿಂದಿತ್ತು. ಚಿರತೆ ಬಹಳ ಆಶೆಬುರುಕ ಪ್ರಾಣಿಯೆಂದು ಅರಿ



ತಿದ್ದೆ. ಒಮ್ಮೆ ರುಚಿ ನೋಡಿದ ಪ್ರಾಣಿಯನ್ನು ತಿನ್ನಲು ಚಿರತೆ ಮತ್ತೊಮ್ಮೆ ಬಹುಬೇಗ ಬರುತ್ತದೆ.

ಇಷ್ಟೆಲ್ಲ ಪೂರ್ವಸಿದ್ಧತೆ ಮಾಡಿ ಮರಳಿ ಊರಿಗೆ ಹೋದೆವು. ಸಂಜೆ ವರೆಗೆ ನನ್ನ ಕಚೇರಿಯ ಕೆಲಸವನ್ನು ಮುಗಿಸಿ ಸ್ವಲ್ಪ ವಿಶ್ರಮಿಸಿ ಸುಮಾರು ಆರು ಗಂಟೆ ವೇಳೆಗೆ ನನ್ನ ಬಂದೂಕು ತೆಗೆದುಕೊಂಡು ಬೇಟೆಗಾಗಿ ಹೊರಬಿದ್ದೆ. ಸ್ವಲ್ಪ ವಿಚಾರ ಮಾಡಿ ನೋಡಲಾಗಿ ಆ ರಾತ್ರಿ ಬೆಳದಿಂಗಳು ಇರುವದಿಲ್ಲವೆಂದು ನನ್ನ ಗಮನಕ್ಕೆ ಬಂತು. ರಾತ್ರಿ ಚಿರತೆ ಆಕಳ ತಿನ್ನುವುದಕ್ಕೆ ಬಂದಾಗ ಅದನ್ನು ಹೊಡೆಯುವುದಕ್ಕೆ ಬೇಕಾಗುವಷ್ಟಾದರೂ ಬೆಳಕಿನ ಅವಶ್ಯಕತೆ ಇತ್ತು. ಈಗ ಹೇಗೆ ಮಾಡುವುದು ? ಎಂದು ಯೋಚಿಸಿ ಕೊನೆಗೆ ಆ ಚಿಕ್ಕ ಊರಲ್ಲಿ ಹೇಗೋ ಮಾಡಿ ಒಂದು ಟಾರ್ಚು ಸಂಪಾದಿಸಿದೆ. ಅದು ಚೌಕಾಕಾರವಾಗಿ ಮುಕ್ಕಾಲು ಇಂಚು ಅಳತೆಯದಿತ್ತು. ಈಗಿನ ಬ್ಯಾಟರಿ ಅಲ್ಲ. ಗುಂಡಿಯನ್ನು ಈಗಿನಂತೆ ಒತ್ತಿಸರಿಸುವ ವ್ಯವಸ್ಥೆ ಇದ್ದರೆ ದೂರದಿಂದ ಟಾರ್ಚ ಹಚ್ಚುವದು ಸಾಧ್ಯವಾಗುತ್ತಿರಲಿಲ್ಲ. ಅದರ ಮಗ್ಗುಲಿನ ಗುಂಡಿಯನ್ನು ಹಿಂದಕ್ಕೆ ಎಳೆದು ಹಚ್ಚಬೇಕಾಗುತ್ತಿತ್ತು. ಇದೇ ನನಗೆ ಉಪಯುಕ್ತವಾಯಿತು. ಕತ್ತಲೆಯಾಗುತ್ತಿದ್ದಂತೆ ಕೆಲವು ಜನರನ್ನು ಕರೆದುಕೊಂಡು ಆ ಆಕಳ ದೇಹ ಬಿದ್ದಲ್ಲಿಗೆ ಹೊರಟೆವು. ಆಕಳ ಕಳೇವರ ಬಿದ್ದ ಸ್ಥಳಕ್ಕೆ ಬಂದು ಅದರ ಮೇಲೆ ಬೆಳಕು ನೇರವಾಗಿ ಬೀಳುವದಕ್ಕೆ ಯೋಗ್ಯವಾದ ಸ್ಥಳ ಆರಿಸಿ ಅಲ್ಲಿದ್ದ ಬಿದಿರು ಮಳೆಗಳಿಗೆ ಆ ಟಾರ್ಚನ್ನು ಬಿಗಿದು ಕಟ್ಟಿ ಅದರ ಬೆಳಕು ಸರಿಯಾಗಿ ದನದ ಹಿಂಭಾಗಕ್ಕೆ ಬೀಳುವಂತೆ ವ್ಯವಸ್ಥೆ ಮಾಡಿದೆ. ಹಿಡಿಕೆಯ ಗುಂಡಿಗೆ ದಾರವನ್ನು ಕಟ್ಟಿ ಅದನ್ನು ಜಗ್ಗಿದೊಡನೆ ದಾರ ಹರಿಯುವುದಿಲ್ಲವೆಂದು ಖಾತ್ರಿ ಮಾಡಿಕೊಂಡೆ. ದಾರದ ಇನ್ನೊಂದು ತುದಿಯನ್ನು ಹಿಡಿದುಕೊಂಡು ಬೆಳಕು ಬೀಳುವದನ್ನು ಎರಡು ಮೂರು ಸಾರೆ ಪ್ರಯೋಗ ಮಾಡಿ ಮರದ ಮೇಲಿನ ನನ್ನ ಸ್ಥಾನಕ್ಕೆ ಹೋಗಿ ಕುಳಿತೆ.

ಕೈಗಳು ಬಂದೂಕ. ಹಿಡಿಯಲೂ ಕುದುರೆಯನ್ನು ಜಗ್ಗುವದಕ್ಕೂ ತೊಡಗುವದರಿಂದ ಟಾರ್ಚ ಹಚ್ಚುವದಕ್ಕೆ ಬಾಯಿಯನ್ನು ಉಪಯೋಗಿಸಬೇಕಾಯಿತು. ಬಾಯಿಂದ ಆ ದಾರವನ್ನು ಜಗ್ಗಿ ಟಾರ್ಚ ಹಚ್ಚಲು ಬರುವದೆಂದು ಒಮ್ಮೆ ಖಾತ್ರಿ ಮಾಡಿಕೊಂಡು ಕೆಳಗಿದ್ದ ಆ ಹಳ್ಳಿಯ ಶಿಕಾರಿಗೆ ಆ ಟಾರ್ಚನ್ನು ಆರಿಸಲು ಹೇಳಿ ಎಲ್ಲರಿಗೂ ನನ್ನಿಂದ ಸಾಕಷ್ಟು ದೂರದಲ್ಲಿ ನಿಶ್ಶಬ್ದವಾಗಿ ಕುಳಿತುಕೊಳ್ಳಲು ತಿಳಿಸಿದೆ. ಬೇಟೆ ಹೊಡೆಯುವವರೆಗೂ ಆ ಸ್ಥಳದಿಂದ ಕದಲದಿರಲು ಅವರಿಗೆಲ್ಲ ಹೇಳಿದೆ. ಸುಮಾರು ಏಳು ಗಂಟೆಯಾಗಿರಬಹುದು. ಕತ್ತಲು ಆವರಿಸಿತ್ತು. ಚಿರತೆಯು ಬರುವದು ಇನ್ನೇನು ಬಹಳ ತಡವಾಗದೆಂದು ಅಂದುಕೊಂಡೆ. ಹಲಗೆಯ ಮೇಲೆ ಭದ್ರವಾಗಿ ಕುಳಿತೆ. ಏಕೆಂದರೆ ಸ್ವಲ್ಪ ಸರಿದಾಡಿದರೂ ಜೋರೆ ಗಿಡದ ಟೊಂಗೆ ಅಲುಗಾಡಿ ಸಪ್ಪಳವಾಗುಬಹುದಿತ್ತು. ನನ್ನಬಲಗಣ್ಣು ಮೊದಲೊಮ್ಮೆ ಬೇಟೆಯಾಡುವಾಗ ಪೆಟ್ಟು ತಿಂದು ಅದರ ದೃಷ್ಟಿ ತೀರ ಮಂದವಾಗಿತ್ತು. ಅದ್ದರಿಂದ ಬರಿ ಎಡಗಣ್ಣನ್ನೇ ನಾನು ಅವಲಂಬಿಸುತ್ತಿದ್ದೆ. ಎಡಗೈಯಲ್ಲಿ ಬಂದೂಕಿನ ಹಿಡಿಕೆ ಹಿಡಿದು ನಳಿಗೆಯನ್ನು ತೊಡೆಯ ಮೇಲಿಟ್ಟು ಬಲಗೈಯಿಂದ ಟಾರ್ಚಿಗೆ ಕಟ್ಟಿದ ದಾರವನ್ನು ಹಿಡಿದಿದ್ದೆ. ಅದೇ ಕೈಯಿಂದ ನಾನು ಕುಳಿತ ಹಲಗೆಯ ಹಗ್ಗವನ್ನು ಹಿಡಿದು ಚಿರತೆಯ ಬರುವನ್ನು ಕಾಯುತ್ತ ಕುಳಿತೆ. ಅನೇಕ ಬೇಟೆಗಾರರು ಹೀಗೆ ಮಾಡುವುದನ್ನು ನೋಡಿದ್ದರಿಂದ ಈ ವಿಚಿತ್ರ ಸ್ಥಿತಿಯೇನೂ ನನಗೆ ಹೊಸದಾಗಿರಲಿಲ್ಲ.

ಆದರೆ ಇದು ನನ್ನ ಮೊದಲ ಬೇಟೆ. ಹಿಂಸ್ರ ಪಶುವನ್ನು ಒಬ್ಬನೇ ಬೇಟೆಯಾಡಿದ ಅನುಭವ ಇಂದು ನನ್ನದಾದೀತೆಂದು ತಿಳಿದು ರೋಮಾಂಚಿತನಾಗಿದ್ದೆ. ನನ್ನ ಗುಂಡು ಸರಿಯಾಗಿ ಚಿರತೆಯ ಹೃದಯ ಹೊಕ್ಕರೆ ಅದು ಸಾಯುವುದು ನಿಶ್ಚಿತ. ತಪ್ಪಿದರೆ ಅದು ಓಡಿ ಹೋಗಬಹುದು. ಆದರೆ ಗಾಯಗೊಂಡರೆ ನನ್ನ ಮೇಲೆ ಜಿಗಿದರೂ ಜಿಗಿಯಬಹುದು. ನಾನು ಕುಳಿತ ಹಲಗೆಯು ಬಹಳ ಎತ್ತರದಲ್ಲಿದ್ದಿಲ್ಲ. ಆದರೆ ಜೋರೆ ಗಿಡದ ಮುಳ್ಳುಗಳಿದ್ದ ಕೊಂಬೆಗಳ ಮಧ್ಯ ನಾನು ಕುಳಿತಿದ್ದರಿಂದ ಅವು ನನ್ನ ರಕ್ಷಣೆಯನ್ನು ಮಾಡುವವೆನಿಸಿತು. ಎಲ್ಲರಿಗೆ ಪ್ರಥಮ ಅನುಭವಗಳಲ್ಲಿ ಆಗುವ ಅಧೈರ್ಯ ನನಗೂ ಆದರೂ ಸ್ವಲ್ಪ ಹೊತ್ತಿನ ಮೇಲೆ ನನ್ನ ಜೀವಕ್ಕೆ ಭಯವಿಲ್ಲವೆಂಬ ಯೋಚನೆಯಿಂದ ಸ್ವಲ್ಪ ಧೈರ್ಯ ಬಂದಿತು. ಇಕ್ಕಟ್ಟಾದ

ಆ ತೂಗು ಹಲಗೆಯ ಮೇಲೆ ಎಷ್ಟೂ ಅಲುಗಾಡದಂತೆ ಕುಳಿತುಕೊಳ್ಳುವುದು ಬಹು ಕಷ್ಟದಾಯಕವಾಗಿತ್ತು. ಮೇಲೆ ಸೊಳ್ಳೆಗಳು ಹಿಂಡು ಕಟ್ಟಿಕೊಂಡು ಬಂದು ರಕ್ತ ಹೀರುತ್ತಿದ್ದರೂ ಕೈ ಕಾಲುಗಳನ್ನು ಜಾಡಿಸದೆ ತುಟಿ ಕಚ್ಚಿ ಸುಮ್ಮನೆ ನೋವನ್ನು ಸಹಿಸಿಕೊಳ್ಳಬೇಕಾಗಿತ್ತು. ಹೀಗೆ ಸುಮಾರು ಒಂದು ಒಂದೂವರೆ ಗಂಟೆಯವರೆಗೆ ಕುಳಿತಾಗ ಅನೇಕ ಯೋಚನೆಗಳು ಮನಸ್ಸಿನಲ್ಲಿ ಬಂದು ಒಂದು ಕ್ಷಣ ಮೈಮರೆತೆ.

ಅಷ್ಟರಲ್ಲಿ ಕ್ಯಾಂಕ್ ಕ್ಯಾಂಕ್ ಎಂಬ ಕೂಗು ಕೇಳಿತು. ಲಕ್ಷ್ಯಗೊಟ್ಟು ಆಲಿಸಿದಾಗ ಅದು ಚುಕ್ಕೆ ಚಿಗರೆಗಳ ಚೀರಾಟ ಎಂದು ತಿಳಿಯಿತು. ಚಿರತೆ ಬರುತ್ತಿರುವುದಕ್ಕೆ ಇದು ಸಂಕೇತ. ಅದರ ಹಿಂದಿನಿಂದಲೆ ಮಂಗಗಳು ಕ್ಸೆಕ್ಸೆ ಕ್ಯಾಂವ್ ಕ್ಸೆಕ್ಸೆ ಕ್ಯಾಂವ್ ಎಂದು ಇನ್ನೂ ಹತ್ತಿರದಲ್ಲಿ ಕೂಗುವದು ಕೇಳಿಬಂತು. ಹಾಗಾದರೆ ಚಿರತೆ ಹತ್ತಿರ ಬರುತ್ತಿದೆ ಎಂದುಕೊಂಡು ಬಂದೂಕು ಸಿದ್ಧವಾಗಿದ್ದನ್ನು ಮತ್ತೊಮ್ಮೆ ನೋಡಿಕೊಂಡೆ. ಟಾರ್ಚಿನ ಪಾರವನ್ನು ಜಗ್ಗುವದಕ್ಕೆ ಸರಿಯಾಗಿ ಬರುವಂತೆ ಹಲ್ಲಿನಿಂದ ಹಿಡಿದುಕೊಂಡೆ. ಮತ್ತೆ ಕೆಲ ನಿಮಿಷಗಳು ಸಂದವು. ಅಷ್ಟರಲ್ಲಿ ಗಂಟಲಿನಿಂದ "ಗೊರಕ್ ಗೊರಕ್" ಎಂದು ಮಾಂಸವನ್ನು ಜಗ್ಗಿ ತಿನ್ನುವಾಗ ಉಸಿರಾಡಿಸುವದರಿಂದ ಆಗುವ ಸಪ್ಪಳ ಕೇಳಿಸಿತು. ಹಾಗಾದರೆ ಚಿರತೆ ಬಂದು ತಿನ್ನಲು ಸುರು ಮಾಡಿದೆಯೆಂದು ತಿಳಿಯಿತು. ಕಿವಿಗೊಟ್ಟು ಆಲಿಸಿದೆ. ಕತ್ತಲಲ್ಲಿ ಏನೂ ಕಾಣುತ್ತಿರಲಿಲ್ಲ. ಆಕಳ ದೇಹದ ಹಿಂಭಾಗದಿಂದಲೇ ಸಪ್ಪಳ ಬರುತ್ತಿತ್ತು. ಹಾಗಾದರೆ ಅದು ಚಿರತೆ



"ನೂರು ರೂಪಾಯಿ ನೋಟು ಇದ್ದರೇನು ಪರವಾಗಿಲ್ಲ ಸ್ವಾಮಿ... ನಾನು ಅದಕ್ಕೆ ಚಿಲ್ಲರೆ ಕೊಡ್ತೇನಿ...

ಎಂದು ನಿಶ್ಚಯಿಸಿಕೊಂಡೆ.

ಒಂದು ನಳಿಗೆಯಲ್ಲಿ ಸೀಸದ ಗುಂಡನ್ನೂ ಇನ್ನೊಂದರಲ್ಲಿ ದೊಡ್ಡ ಚರಿಗಳನ್ನೂ ತುಂಬಿದ್ದೆ. ನನ್ನ ಬಂದೂಕಿನ ಗುರಿ ಸರಿಯಾದರೆ ಅದರ ಪ್ರಾಣ ಹೀರಬಹುದೆಂಬ ನಂಬಿಕೆಯಿಂದ ಆ ಶಬ್ದ ಬರುವ ಸ್ಥಳಕ್ಕೆ ಗುರಿ ಇಟ್ಟು ಬಾಯಿಯಿಂದ ಟಾರ್ಚಿಗೆ ಕಟ್ಟಿದ ದಾರವನ್ನು ಎಳೆದೆ. ಟಾರ್ಚಿನಿಂದ ಫಕ್ಕನೆ ಬಿದ್ದ ಬೆಳಕಿನಲ್ಲಿ ಆರು ಆರೂವರೆ ಅಡಿ ಉದ್ದದ ಭಯಂಕರ ಚಿರತೆಯನ್ನು ನೋಡಿದೆ! ಈ ಬೆಳಕು ಎಲ್ಲಿಂದ ಬರುತ್ತದೆ ಎಂದು ಭಯಾಶ್ಚರ್ಯದಿಂದ ಅದು ಟಾರ್ಚಿನೆಡೆಗೆ ನೋಡುತ್ತಿತ್ತು. ಸುಯೋಗದಿಂದ ಚಿರತೆ ನನಗೆ ಅಡ್ಡವಾಗಿ ನಿಂತಿತ್ತು.

ತಕ್ಷಣ ಅದರ ಮುಂಗಾಲಿಗಿಂತ ಸ್ವಲ್ಪ ಹಿಂದೆ ಗುರಿಯಿಟ್ಟು ಬಂದೂಕಿನ ಎರಡೂ ಕುದುರೆಗಳನ್ನು ಜಗ್ಗಿದೆ. ಇದೇನಾಶ್ಚರ್ಯ ಎಂದು ಬೆಳಕಿನ ಕಡೆಗೆ ನೋಡುತ್ತಿದ್ದ ಚಿರತೆ ಹಾಗೆಯೇ ನಾನು ಹೊಡೆದ ಗುಂಡಿನ ಆಘಾತವನ್ನು ತಾಳದೆ ಜೋರಾಗಿ ಎರಡು ಸಲ ಅರಚಿ ಬಳಿಯಲ್ಲಿದ್ದ ಪೊದೆಗಳ ಗುಂಪಿನೆಡೆಗೆ ಚಂಗನೆ ನೆಗೆಯಿತು. ಅತ್ತ ಚಿರತೆಯ ನರಳುವಿಕೆಯೂ ಕೇಳಿ ಬರತೊಡಗಿತು. ಅದನ್ನು ಲಕ್ಷ್ಯವಿಟ್ಟು ಕೇಳುತ್ತಿದ್ದ ನನಗೆ ಅದು ಕೊನೆಯುಸಿರು ಬಿಟ್ಟಂತೆನಿಸಿದಾಗ ಸ್ವಲ್ಪ ವೇಳೆ ತಡೆದು ಹಳ್ಳಿಯ ಜನರನ್ನು ಕರೆದೆ. ತಮ್ಮ ಜೀವಕ್ಕೇನೂ ಅಪಾಯವಿಲ್ಲವೋ ಹೇಗೆಂದು ದೂರದಿಂದ ಕೂಗಿ ಅವರು ಕೇಳಿದರು. ಆಗ ಇನ್ನೂ ಸ್ವಲ್ಪ ತಾಳಲು ಅವರಿಗೆ ಹೇಳಿದೆ. "ಸ್ವಲ್ಪ ಹೊತ್ತು ಬಿಟ್ಟು ಒಂದು ಲಾಟೀನು ತೆಗೆದುಕೊಂಡು ಬಂದು ನನ್ನನ್ನು ಇಳಿಸಿಕೊಂಡು ಹಳ್ಳಿಗೆ ಕರೆದೊಯ್ಯಿರಿ" ಎಂದೂ ಅವರಿಗೆ ಹೇಳಿದೆ.

ಆಗಲೆ ಚಿರತೆ ನೋಡಬೇಕೆಂದು ಅವರು ತವಕಪಟ್ಟರು. ಆದರೆ ಗಾಯಗೊಂಡ ಚಿರತೆಯು ಮರಣಕ್ಕೆ ಮುನ್ನ ಬಹಳ ಅಪಾಯಕರ ಎಂದು ಹೇಳಿ ಅವರ ಆಸೆಯನ್ನು ಚಿವುಟಿ ಹಾಕಿದೆ.

ಪಟೇಲನು ಸೂರ್ಯೋದಯಕ್ಕೆ ಮುಂಚೆಯೇ ಎದ್ದು ಬಂದಿದ್ದ. ಅಷ್ಟರಲ್ಲಿಯೇ ನಾನೂ ಸಿದ್ಧನಾಗಿ ನಿಂತಿದ್ದೆ. ಈ ಊರಲ್ಲಿ ಬೇಟೆ ನಾಯಿಗಳು ಉಂಟೆ? ಎಂದು ವಿಚಾರಿಸಿದೆ. ಅದೃಷ್ಟವಶಾತ್ ಮೊಲಗಳನ್ನು ಬೇಟೆಯಾಡುವಾಗ ಉಪಯೋಗಿಸಲಾದ ನಾಯಿಯೊಂದು ಸಿಕ್ಕಿತು. ಚಿರತೆಯನ್ನು ಕೊಂದ ಸ್ಥಳಕ್ಕೆ ಅದನ್ನೊಯ್ದು ಚಿರತೆಯ ರಕ್ತದ ವಾಸನೆ ತೋರಿಸಿ ಕಟ್ಟು ಬಿಚ್ಚಿದೆವು. ಅದು ಮೂಸುತ್ತ ಅತ್ತಿತ್ತ ಸ್ವಲ್ಪ ಅಡ್ಡಾಡಿ ಚಿರತೆ ನೆಗೆದಿದ್ದ ಪೊದೆಯ ಬಳಿಗೆ ಹೋಗಿ ಬೊಗಳತೊಡಗಿತು. ಚಿರತೆ ಅಲ್ಲಿಯೇ ಬಿದ್ದಿದೆ ಎಂದು ನಾವು ಊಹಿಸಿದೆವು. ನನ್ನ ಗುರಿ ಎಷ್ಟು ನಿಖರ ಹಾಗೂ ಪ್ರಾಣಾಂತಿಕವಾಗಿತ್ತೆಂದು ಆಗ ತಿಳಿದು ಮನದಲ್ಲಿ ಹೆಮ್ಮೆಪಟ್ಟೆ. ಆದರೂ ಬಹು ಎಚ್ಚರಿಕೆಯಿಂದ ಮುಂದುವರೆದು ನೋಡಿದೆವು.

ಬೆಳಗಿನ ಸೂರ್ಯನ ಎಳೆ ಬಿಸಿಲಿನಲ್ಲಿ ಅದರ ಶರೀರದ ಹೊಂಬಣ್ಣ ವರ್ಧಿಸಿ ಒಡೆದು ತೋರುತ್ತಿದ್ದ ಕಪ್ಪು ಚುಕ್ಕೆಗಳಿಂದ ಕೂಡಿದ ಹೊಳೆಯುವ ಚಿರತೆಯ ದೇಹ ಕಣ್ಣು ಕುಕ್ಕಿಸುವಂತಿತ್ತು. ಅದು ಸಾಯುವ ಸಂಕಟದಲ್ಲಿ ಗಿಡವೊಂದರ ಬೇರನ್ನು ಬಲವಾಗಿ ಕಚ್ಚಿ ಹಿಡಿದಿತ್ತು. ಅದನ್ನು ಕಷ್ಟಪಟ್ಟು ಬಿಡಿಸಿದೆವು. ಅಂತೂ ಊರವರಿಗೆ ದುಃಸ್ವಪ್ನವಾಗಿದ್ದ ಅದರ ಸಾವನ್ನು ಕಂಡು ಆನಂದಿತರಾದ ಊರ ಜನ ಮೆರವಣಿಗೆಯನ್ನು ಹೊರಡಿಸಿ ನನ್ನನ್ನೂ ಕರೆದರು. ಆದರೆ ನಾನು ನಿರಾಕರಿಸಿದೆ. ಊರ ಜನ ಉತ್ಸಾಹದಿಂದ ಅದನ್ನು ಮೆರೆಸುವಾಗ ತಾವೇ ಅದರ ಬೇಟೆಯಾಡಿದ್ದೇವೆಂಬ ಹೆಮ್ಮೆ ಅವರ ಮುಖದಲ್ಲಿ ಮೂಡಿತ್ತು. ✡

(ಮೂಲ ಇಂಗ್ಲಿಷ್ ಲೇಖನವನ್ನು ಕನ್ನಡಿಸಿದವರು ರಾಜೇಂದ್ರ ಗುಂಜಾಳ)

ವರ್ತಮಾನದ ಒಡೆಯರು ನಾವಲ್ಲ. ಭೂತಕಾಲದ ಒಡೆಯರಂತೂ ಅಲ್ಲವೇ ಅಲ್ಲ. ಒಂದು ರೀತಿಯಲ್ಲಿ ನಮ್ಮ ಭವಿಷ್ಯತ್ತಿಗೆ ನಾವೇ ಒಡೆಯರು. ಅದನ್ನು ನಾವು ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳಬಹುದು. ಈ ಭವಿಷ್ಯತ್ತಿನ ಗಿಡವನ್ನು ಬೆಳೆಸಲು ಬೇಕಾದ ಸಾಧನಗಳು ಎರಡೇ ಎರಡು. ಒಂದು ನಮ್ಮ ಹಗಲುಗನಸುಗಳು ಇನ್ನೊಂದು ಮಾನವನಿಗೆ ಬಾಗಿಯೆ ಬಂದ ಸಾಂಪ್ರದಾಯಕ ಬಳುವಳಿ. ಈ ಮರ ಬಿಡುವ ಫಲವೆಂದರೆ ಆಶೆ.

—ವಿಕ್ಟೋರಿಯೋ ರೀಟ

ಸಂಧ್ಯಾಗೀತ-ಕೆಲ ಟಿಪ್ಪಣಿಗಳು

–ಜಯಂತ ಕಾಯ್ಕಿಣಿ

ಓಡೋಡಿ ಬಂದು ಮುಚ್ಚಿ ಹೋಗುವ ತೆರೆಯ
ತಲ್ಲಣದ ನುಡಿಗಟ್ಟು ಸಂಜೆ ಮಾತು
ಬಣ್ಣ ಬಣ್ಣಕು ನಿಮಿಷ, ಮತ್ತೆ ನಿಮಿಷಕೂ ಬಣ್ಣ
ಬದಲಾದ ಭೂ ಸೆರಗು ಸಂಜೆ ಮಾತು

ಈಗಷ್ಟೆ ಮೂಡೆದ್ದ ದೃಷ್ಟಿ ಕಾಳಿನ ಹಾಲು
ಮೈಗೂಡಿ ಕದಿರಾದ ಸಂಜೆ ಮಾತು
ತಾಜಾ ತೊಟ್ಟಿಲುಗಳಲಿ ಮಿಸುಕಾಡಿ ಕಣ್ತೆರೆದ
ಹೊಚ್ಚ ಹೊಸ ಹಾಲು ದನಿ ಸಂಜೆ ಮಾತು

ಹಿಡಿದಿಟ್ಟ ಕೈ ತಪ್ಪಿ ಹಾರಿ ಗಗನಕ್ಕಂಟಿ
ಅಣಕಿಸುವ ತಾರೆಗಳ ಸಂಜೆ ಮಾತು
ಕಡಲ ಕತ್ತಲಿನಲ್ಲಿ ಹೊಳಪು ಮೈ ಉಜ್ಜುತ್ತ
ಬಲೆಗೆ ಬೀಳುವ ಮೀನ ಸಂಜೆ ಮಾತು

ಹರಿವ ನೀರಿನ ಮೇಲೆ ಹರಿದು ಹೋದಾ ಮುಗಿಲು
ಭೂಪಟದ ಭೂಕಂಪ ಸಂಜೆ ಮಾತು
ಹರಡಿ ಹಂಚಿದ ಮೇಜು ಹೂದಾನಿಗಳ ಮೇಲೆ
ಗುದ್ದು ಹಾಕುವ ಮುಷ್ಟಿ ಸಂಜೆ ಮಾತು

ಶಹನಾಯಿ ತುಂಬೆಲ್ಲ ಗೀರಿದ ರಾಗದ ಕುಸುರ
ಕಿತ್ತು ತಿನ್ನುವ ಗಾಳಿ ಸಂಜೆ ಮಾತು
ಹರಿದ ತಂತಿಯಗುಂಟ ಓಲಾಡಿ ಧೃತಿಗೆಟ್ಟ
ಕನಕ ಪುರಂದರ ನಾದ ಸಂಜೆ ಮಾತು

ಹಾವು ಹಲ್ಲಿಯ ಮೇಲೆ ಕೂತ ದೇವರ ಹುಚ್ಚು
ಅಣಕ ನಾಟಕದಂಕ ಸಂಜೆ ಮಾತು
ಗೆದ್ದಲಿನ ಪರಿಮಳಕೆ ಅಬ್ಬ ಮೂಗರಳಿಸಿದ
ಕಿಸಿದ ಪುಸ್ತಕದ ಪುಟ ಸಂಜೆ ಮಾತು

ಅಸಂಖ್ಯ ಏಕಲವ್ಯರ ತುಂಡು ಹೆಬ್ಬೆರಳುಗಳ
ತೊಟ್ಟಿಕ್ಕುವ ರಕ್ತಮಣಿ ಸಂಜೆ ಮಾತು

ಕೊಚ್ಚಿದ ತೊಡೆ ಸ್ತನಗಳಲಿ ಎದ್ದು ಕಾಣುವ ಸೀತೆ
ಸಾವಿತ್ರಿಯರ ದೇವತ್ವ ಸಂಜೆ ಮಾತು

ದಾರಿ ತಪ್ಪಿದ ದಾರಿ ಕತ್ತಲೆಗೇ ತಾ ನುಗ್ಗಿ
ಬೆಳಕ ಬೇಡುವ ಕೂಗು ಸಂಜೆ ಮಾತು
ಬಾಗಿಲುಗಳ ತುಂಬೆಲ್ಲ ಬೀಗ ಮುದ್ರಿತ ಅಗಳಿ
ತಟ್ಟುವ ಕೈಗಳ ತವಕ ಸಂಜೆ ಮಾತು

ಚರಂಡಿಯು ತುಂಬ ಸರ ಸರ ತೇಲಿ ಹೋಗುವ ಪಗಡೆ
ಬಾಣ ಗದೆ ಭುಜಕೀರ್ತಿ ಸಂಜೆ ಮಾತು
ನೆನಪಿನ ಜತೆಗೇ ಉಂಗುರವನ್ನೂ ಕಳಕೊಂಡ
ದುಷ್ಯಂತನನುಕೂಲ ಸಂಜೆ ಮಾತು

ಒಮ್ಮೆ ಬಾರೆ ಹುಡುಗಿ ಬೇಯುತ್ತಿದೆ ಚಿಗುರು
ಐತಿಹಾಸಿಕ ನೋವು ಸಂಜೆ ಮಾತು
ಪರಸ್ಪರ ನೆರಳುಗಳ ಕಳಚಿಟ್ಟು ಸಿಕ್ಕು ಬಿದ್ದು
ನರಳುವ ವಿಹ್ವಲ ಕಾಮ ಸಂಜೆ ಮಾತು

ಮಕ್ಕಳಿಲ್ಲವೋ ಎಂದು ಅತ್ತು ಚೀರಾಡುವ
ಆಟದ ಬಯಲಿನ ಗೋಳು ಸಂಜೆ ಮಾತು
ಶಬ್ದಗಳ ನಡುವಲ್ಲೇ ಹೊಕ್ಕು ಹೊರ ಬಾರದ
ಜೀಕಿ ನೋಯುವ ಭಾವ ಸಂಜೆ ಮಾತು

ತಿರು ತಿರುಗಿ ಕುಣಿದು ಮುರಿದ ಹೆಜ್ಜೆಯ ಕೀಲು
ಕೂಡಿಸಲಿಲ್ಲದ ಮೊಳೆ ಸಂಜೆ ಮಾತು
ಬಡಿ ಬಡಿದು ಲಯ ಹರಿದ ಚರ್ಮದ ಡೋಲು
ಹೊಲಿಯಲಿಲ್ಲದ ನೂಲು ಸಂಜೆ ಮಾತು

ಚಾಚುವ ಕಣ್ಣಿನ ಮುಂದೆ ಚಾಚಿಕೊಳ್ಳುವ ದೃಶ್ಯ
ದೃಶ್ಯಕ್ಕೂ ಆಚೆ ನಿಂತ ಸಂಜೆ ಮಾತು
ಮುಚ್ಚಿಕೊಳ್ಳುವ ರೆಪ್ಪೆಯೊಳಗೆ ಮುಳುಗಿದ ಹಗಲು
ಹಿಂದಕೋಡುವ ಹೆಜ್ಜೆ ಸಂಜೆ ಮಾತು

ಅವನ ಮೊದಲ ಸೋತುವೆ

ಗೌರೀಶ ಕಾಯ್ಕಿಣಿ

ಭಗವದ್ಗೀತೆಯನ್ನು ಮೊತ್ತ ಮೊದಲು ಪಾಶ್ಚಾತ್ಯರಿಗೆ ಪರಿಚಯಿಸಿಕೊಟ್ಟವನು ನಮ್ಮ ದೇಶದ ಬ್ರಿಟಿಶ್ ಸಾಮ್ರಾಜ್ಯದ ಸ್ಥಾಪಕರಲ್ಲಿ ಒಬ್ಬನಾದ ವಾರನ್ ಹೆಸ್ಟಿಂಗ್ಸನಾದರೂ Song Celestial ಎಂಬುದಾಗಿ ಸರಳರಗಳೆಯಲ್ಲಿ ಅನುವಾದಿಸಿದವನು ಇನ್ನೊಬ್ಬ ಬ್ರಿಟಿಶ್ ಗೃಹಸ್ಥ ಸರ್ ಎಡ್ವಿನ್ ಅರ್ನಾಲ್ಡ್.

ಸರ್ ಅರ್ನಾಲ್ಡ್ ಇದಕ್ಕೂ ಮಿಗಿಲಾದ ಒಂದು ಕಾವ್ಯ ರಚಿಸಿದರು–ಅದು ಬುದ್ಧ ಚರಿತೆಯ ಕುರಿತು-ಜಗತ್ಪ್ರಸಿದ್ಧ Light of Asia. ಇದೂ ಸರಳರಗಳೆಯಲ್ಲಿ ಎರಕ ಹೊಯ್ದ ಅತ್ಯಂತ ಸಂವೇದನಾಪೂರ್ಣವಾದ ಖಂಡಕಾವ್ಯ. ಈ ಎರಡು ಕಾವ್ಯಗಳನ್ನು ರಚಿಸಿದಾಗ ಸರ್ ಎಡ್ವಿನ್ ಅರ್ನಾಲ್ಡ್ ಭಾರತದಲ್ಲಿ ಸಾಂಸ್ಕೃತಿಕ ಸೇವೆ ಸಲ್ಲಿಸುತ್ತಿದ್ದರು. ಅವರು ಮುಂಬಯಿಯಲ್ಲಿ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು.

ಸರ್ ಎಡ್ವಿನ್ ಮುಂಬಯಿಗೆ ಸಂಸ್ಕೃತ ಪ್ರಾಧ್ಯಾಪಕರಾಗಿ ಬರುವದಕ್ಕೆ ಮುಂಚೆ ಇಂಗ್ಲಂಡಿನಲ್ಲಿ ಒಂದು ಮಾಧ್ಯಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಆಗ ಅವರು ಭೂಮಿತಿಯನ್ನು ಕಲಿಸುತ್ತಿದ್ದರು. ಆ ವಿಷಯದಲ್ಲಿಯೂ ಅವರು ಉತ್ತಮ ಶಿಕ್ಷಕರೆಂದು ಶಾಲೆಯ ಮಕ್ಕಳಲ್ಲಿ ಮೆಚ್ಚುಗೆ ಗಳಿಸಿದ್ದರು.

ಒಂದು ಸಂಜೆ ಶಾಲೆಯ ಕೆಲಸ ಮುಗಿಸಿ ಎಡ್ವಿನ್ನರು ಮನೆಗೆ ಬಂದು ಉಪಾಹಾರ ತೀರಿಸಿ ಹಾಯಾಗಿ ಕುಳಿತಿದ್ದರು. ಆಗ ಬಾಗಿಲಲ್ಲಿ ಯಾರದೋ ನೆರಳು ಕಂಡಿತು. "ಬನ್ನಿ, ಹೆದರಬೇಡಿ. ಒಳಗೆ ಬನ್ನಿ" ಮೇಷ್ಟ್ರು ಅಂದರು. ಒಬ್ಬ ಹುಡುಗಿ ಒಬ್ಬ ಹುಡುಗನನ್ನು ಕರೆದು ತಂದಿದ್ದಳು. ಹುಡುಗಿ ದಿಟ್ಟಳಿದ್ದಷ್ಟೇ ಆ ಹುಡುಗ ಅಳುಕಿನವ (ನಾವು ಅವರಿಬ್ಬರನ್ನು ಕಥೆಯ ಅನುಕೂಲಕ್ಕಾಗಿ ಮೇರಿ ಮತ್ತು ಜಾನ್ ಎಂದು ಕರೆಯೋಣ). ಆದರೆ ಇಬ್ಬರೂ ಸುಟಿಯಾದ ತರಳರು.

"ಏನು, ಏನು ಬೇಕು ಮಕ್ಕಳೇ ? ಹೆದರಬೇಡಿ ಹೇಳಿ!" ಎಡ್ವಿನ್ ನಗುತ್ತಲೇ ಕೇಳಿದರು. "ಈತ ಜಾನ್, ನನ್ನ ಫ್ರೆಂಡ್. ಇವನಿಗೆ ತಾವು ಇಂದು ಕ್ಲಾಸಿನಲ್ಲಿ ಕಲಿಸಿದ ಪೈಥಾಗೊರಸ್ ಪ್ರಮೇಯ ಸರಿಯಾಗಿ ತಿಳಿಯಲಿಲ್ಲವಂತೆ. ಅದಕ್ಕಾಗಿ ಕರೆದು ತಂದೆ ಸರ್!"

"ಇಷ್ಟೇ ತಾನೇ, ಡಿಯರ್ ಬಾಯ್, ಕ್ಲಾಸು ಮುಗಿದ ಮೇಲೆ ಶಾಲೆಯಲ್ಲಿಯೇ ಏಕೆ ನನ್ನನ್ನು ಕೇಳಲಿಲ್ಲ ?"

ಹುಡುಗನಿಗೆ ಏನು ಹೇಳಬೇಕೆಂಬುದು ತೋಚಲಿಲ್ಲ. ಆಗ ಮೇರಿಯೇ ಮುಂದಾದಳು. "ಸಾರಿ ಸರ್, ಜಾನ್‌ಗೆ ತುಂಬ ಸಂಕೋಚ. ಈಗಲೂ ನಾನೇ ಎಳೆದುಕೊಂಡು ಬಂದೆ–ನಮ್ಮ ಸರ್ ಬಹಳ ದಯಾಳು ಒಳ್ಳೇಯವರು ಎಂತ" ಅಂದಳು.

ಎಡ್ವಿನ್ ಮರುಮಾತಾಡದೆ ತನ್ನ ಅಭ್ಯಾಸಿಕೆಯಿಂದ ಹಾಳೆಯನ್ನೂ ಬಣ್ಣದ ಪೆನ್ಸಿಲ್‌ಗಳನ್ನೂ

ತಂದು ವಿವರವಾಗಿ ವಿಶದವಾಗಿ ಮಕ್ಕಳಿಗೆ ಆ ಥಿಯರಂ ಕಲಿಸಿದರು.

"ಥ್ಯಾಂಕ್ ಯೂ ಸರ್. ಈಗ ಚೆನ್ನಾಗಿ ತಿಳಿಯಿತು"–ಹಾರ್ನರ್ ಹಾರು ಮುಖ ಬಗ್ಗಿ ಹೇಳಿದ.

ಅನೇಕ ವರ್ಷಗಳು ಕಳೆದವು. ಆ ಮಕ್ಕಳ ಸಾಲು ಕಾಲಪ್ರವಾಹದಲ್ಲಿ ನಾನಾ ಕ್ಷೇತ್ರಗಳ ತರೆಗಳ ಹಂಚಿಕೆಗಳಲ್ಲಿ ಎಲ್ಲೋ ತೇಲಿಹೋಯಿತು. ಎಡ್ವಿನ್ ಅರ್ನಾಲ್ಡ್ ಪ್ರಾಧ್ಯಾಪಕರಾಗಿ ಭಾರತಕ್ಕೆ ಬಂದು ಹೋದರು. ಅವರ ಕಾವ್ಯಕೃತಿಗಳು ಪ್ರಕಟವಾದವು. ಅವರು ಲೋಕವಿಖ್ಯಾತರಾದರು. ಬ್ರಿಟಿಶ್ ದೊರೆ ಅವರನ್ನು 'ಸರ್' ಪದವಿಯಿತ್ತು ಗೌರವಿಸಿದ್ದೂ ಆಯಿತು. ಕಾಲಾಂತರದಲ್ಲಿ ಸರ್ ಎಡ್ವಿನ್ ಸೇವಾನಿವೃತ್ತರೂ ಆಗಿ ಸ್ವದೇಶಕ್ಕೆ ಮರಳಿದರು.

ಆಮೇಲೆ ಅವರು ಪ್ರಪಂಚ ಪರ್ಯಟನಕ್ಕೆ ಹೊರಟರು. ಅಮೇರಿಕದ ಪ್ರವಾಸ ಮುಗಿಸಿ ಕೆನಡಾ ತಲುಪಿದರು. ರಾಜಧಾನಿ ಕ್ವಿಬೆಕ್‌ನಲ್ಲಿ ಅಂದು ಸಂಭ್ರಮ. ಸೇಂಟ್ ಲಾರೆನ್ಸ್ ಹೊಳೆಯ ಮೇಲೆ ಒಂದು ಪ್ರಚಂಡ ಹೊಸ ಸೇತುವೆ ಕಟ್ಟಿದ್ದು, ಸರ್ ಎಡ್ವಿನ್ ನಗರಕ್ಕೆ ಬಂದ ದಿನವೇ ಅದರ ಉದ್ಘಾಟನೆಯ ಸಮಾರಂಭ, ಸಮಾರಂಭದ ಸಂಚಾಲಕರಿಗೂ ಸರಕಾರಕ್ಕೂ ಸರ್ ಎಡ್ವಿನ್ ಬಂದ ಸುದ್ದಿ ತಿಳಿಯಿತು. ಅಂಥ ವಿಖ್ಯಾತ ಪುರುಷನನ್ನು ಅವರು ಬಿಡುತ್ತಾರೆಯೇ? ಅಂದಿನ ಸಮಾರಂಭದಲ್ಲಿ ಸರ್ ಎಡ್ವಿನ್‌ರೇ ಮುಖ್ಯ ಅತಿಥಿ. ಸಮಾರಂಭದಲ್ಲಿ ಅವರಿಗೆ ಆ ಸೇತುವೆ ಕಟ್ಟಿದ ಶ್ರೇಷ್ಠ ಇಂಜಿನಿಯರರ ಪರಿಚಯ ಮಾಡಿಕೊಡಲಾಯಿತು. ಸಭೆ ಮುಗಿದೊಡನೆ ಆ ಇಂಜಿನಿಯರ್ ಸರ್ ಎಡ್ವಿನ್‌ರನ್ನು ತಮ್ಮ ಮನೆಗೆ ಊಟಕ್ಕೆ ಕರೆದೊಯ್ದರು. ಇಂಜಿನಿಯರ್ ದಂಪತಿಗಳ ಅತ್ಯಾಗ್ರಹಕ್ಕೆ ಈ ವೃದ್ಧ ಕವಿ ಮಣಿದು ಅಲ್ಲಿಗೆ ಹೋದರು.

ಸನ್ಮಾನ್ಯ ಅತಿಥಿಯ ಮುನ್ಸೂಚನೆ ಮನೆಯಲ್ಲಿ ಕೊಡಲು ಇಂಜಿನಿಯರ್ ದಂಪತಿ ತುಸು ಮುಂದಾಗಿ ಮನೆಗೆ ಹೋಗಿದ್ದರು. ತುಸು ತಡದು ಎಡ್ವಿನ್ ಅರ್ನಾಲ್ಡ್ ಅಲ್ಲಿಗೆ ತಲುಪಿದರು. ಆಗ ಇಂಜಿನಿಯರ್ ಅವರ ಸ್ವಾಗತಕ್ಕೆ ಅಲ್ಲಿ ಇಲ್ಲ. ಹೆಂಡತಿ ಅವರನ್ನು ಎದುರುಗೊಂಡು ಕರೆದೊಯ್ದು ದಿವಾನಖಾನೆಯಲ್ಲಿ ಕೂಡ್ರಿಸಿ ಯಜಮಾನರು ಬರುವರೆಂದು ಹೇಳಿ ಒಳಗೆ ಹೋದಳು.

ಇಂಜಿನಿಯರ್ ಬರುವತನಕ ಹೊತ್ತು ಕಳೆಯುವುದು ಹೇಗೆ? ಸರ್ ಎಡ್ವಿನ್ ಅಲ್ಲಿ ಆ ಹಾಲಿನಲ್ಲಿ ಸುತ್ತಾಡುತ್ತಿದ್ದರು– ಕಪಾಟುಗಳಲ್ಲಿಯ ಮಹಾ ಗ್ರಂಥಗಳನ್ನು, ಅಲಂಕಾರದ ವಸ್ತುಗಳನ್ನು ನೋಡುತ್ತ. ಅದು ಮುಗಿದ ಮೇಲೆ ಗೋಡೆಗಳಲ್ಲಿ ತೂಗುತ್ತಿದ್ದ ಫೋಟೋಗಳನ್ನು ನೋಡತೊಡಗಿದರು. ಆ ಫೋಟೋಗಳ ಮಧ್ಯದಲ್ಲಿ ಬಿಳಿ ಪತ್ರಕ್ಕೆ ಫ್ರೇಮು ಕಟ್ಟಿದ ಎರಡು ಹಳೆಯ ಚಿತ್ರಗಳಿದ್ದವು. ಈ ವೃದ್ಧ ಕವಿಯ ಕುತೂಹಲ ಕೆರಳಿತು. ಅವರು ಒಂದು ಕುರ್ಚಿಯನ್ನೆಳೆದುಕೊಂಡು ಅದನ್ನು ಏರಿ ಆ ಚಿತ್ರಗಳನ್ನು ಹತ್ತಿರದಿಂದ ನೋಡಹತ್ತಿದರು. ಒಂದು ಚಿತ್ರದ ಮೇಲೆ 'First Bridge' ಎಂದು ಬರೆದಿತ್ತು. ಇನ್ನೊಂದರ ಮೇಲೆ 'Second Bridge' ಎಂದು ಬರೆದಿತ್ತು. ಆ ಎರಡನೆಯ ಸೇತುವೆಯನ್ನು ಸರ್ ಎಡ್ವಿನ್ನರು ತಕ್ಷಣ ಗುರುತಿಸಿದರು. ಅವರೇ ಅಂದು ಅಪರಾಹ್ನ ಉದ್ಘಾಟಿಸಿದ ಸೇಂಟ್ ಲಾರೆನ್ಸ್ ನದಿಯ ಹೊಸ ಸೇತುವೆ. ಆದರೆ ಈ ಮೊದಲನೆಯ ಸೇತುವೆ? ಇದೇನು ಆಕೃತಿ? ಅದು ಛಾಯಾಚಿತ್ರವಾಗಿದ್ದಿಲ್ಲ. ರೇಖಾಚಿತ್ರವೂ ಅಲ್ಲ. ಕೆಲವು ಕೆಂಪು ಹಸಿರು ನೀಲಿ ಗೆರೆಗಳಿಂದ ರಚಿಸಿದ ಏನೋ ಭೂಮಿತಿಯ ಆಕೃತಿ ರಚನೆ. ಇದು ಚಿತ್ರವಲ್ಲ. ಏನೋ ವಿಚಿತ್ರ.

ಮುದುಕ ಕುರ್ಚಿಯಲ್ಲಿ ನಿಂತು ಕತ್ತೆತ್ತಿ ನೋಡುತ್ತಿದ್ದಂತೆ ತರುಣ ಇಂಜಿನಿಯರ್ ಪ್ರವೇಶಿಸಿದ. ಅವರನ್ನು ಕೈಹಿಡಿದು ಕೆಳಗಿಳಿಸಿ ತನ್ನ ವಿಳಂಬಕ್ಕಾಗಿ ತುಂಬ ನಾಚಿ ಕ್ಷಮೆ ಕೋರಿದ.

"ಅದಿರಲಿ ಮಿಸ್ಟರ್. ಅದೇನು ಈ ರೇಖಾಚಿತ್ರ? ಅಲ್ಲಿ ತೂಗು ಹಾಕಿದ್ದೀರಿ?" ಎಂದು ಸರ್ ಅರ್ನಾಲ್ಡ್ ಕೇಳಿದರು.

ಇಂಜಿನಿಯರ್ ಮತ್ತಷ್ಟು ಆದರವಾಗಿ ನಕ್ಕ. "ಅದೇನು ಗೊತ್ತಾಗಲಿಲ್ಲವೇ? ಅದು ತಾವೇ ಬಿಡಿಸಿದ ಚಿತ್ರ!" ಎಂದುತ್ತರಿಸಿದ.

"ಅಂದರೆ ನಾನೇ ಬಿಡಿಸಿದ್ದು. ಮಿಸ್ಟರ್... ಇಂಜಿನಿ...?" ಸರ್ ಅರ್ನಾಲ್ಡ್ ಆಶ್ಚರ್ಯದಿಂದ ಕೇಳಿದರು.

"ನನ್ನನ್ನು ಇಂಜಿನಿಯರ್ ಅನ್ನಬೇಡಿ. ನನ್ನ

ಹೆಸರು ಜಾನ್. ಇನ್ನೂ ಗುರುತು ಸಿಗಲಿಲ್ಲವೇ ಸರ್?" "ಮೇರೀ." ಆತ ಹೆಂಡತಿಯನ್ನು ಕರೆದ. ಆಕೆ ಓಡಿ ಬಂದಳು. "ನೋಡು, ಡಾರ್ಲಿಂಗ್. ಗುರುಗಳಿಗೆ ನಮ್ಮ ಗುರುತೇ ಹತ್ತಿಲ್ಲ!"

"ಇಲ್ಲ, ಕ್ಷಮಿಸಿ, ನನಗಾಗಲೇ ವಯಸ್ಸಾಯಿತು."

"ಹಾಗಲ್ಲ ಸರ್. ತಾವು ನಮ್ಮನ್ನು ಮರೆಯುವುದು ಸಹಜ. ನಮ್ಮಂಥ ಸಾವಿರಾರು ಮಂದಿ ತಮ್ಮ ಕೈಕೆಳಗಿಂದ ಹಾಯ್ದು ಬಂದಿದ್ದೇವೆ. ಆದರೆ ನಾವು ತಮ್ಮನ್ನು ಎಂದೂ ಮರೆಯುವಂತಿಲ್ಲ ಸರ್"—ಜಾನ್ ಕುರ್ಚಿ ಹತ್ತಿ ಆ ಚೌಕಟ್ಟಿನ ಪಟವನ್ನು ತೆಗೆದು ತಂದು ಅವರ ಮುಂದಿಟ್ಟ. ಆಗ ಮೇರಿ ಅಂದಳು— "ಸರ್, ಇದು ತಾವು ನನ್ನ ಜಾನ್‌ನಿಗೆ ತಿಳಿಸಿ ಹೇಳಿದ ಪೈಥೋಗೊರಸ್ ಥಿಯರಂ. ತಮ್ಮ ಕೈಯೇ ಬಿಡಿಸಿದ ಆಕೃತಿ ಇದು. ತಮ್ಮ ಶಾಲೆಯಲ್ಲಿ ಓದುತ್ತಿದ್ದಾಗ ನಾನು ಒಂದು ಸಂಜೆ ಈ ಜಾನ್‌ನನ್ನು ತಮ್ಮಲ್ಲಿಗೆ ಕರೆತಂದಿದ್ದೆ—ಈ ಪ್ರಮೇಯ ತಿಳಿಸಿಕೊಳ್ಳಲಿಕ್ಕೆಂದು."

"ಹೌದು, ಸರ್, ತಾವು ಅಂದು ತಿಳಿಸಿ ಹೇಳಿದ ಆ ರೀತಿ ನನ್ನಲ್ಲಿ ಹೊಸ ಅರಿವನ್ನೇ ಹುಟ್ಟಿಸಿತು ಭೂಮಿತಿಯಲ್ಲಿ, ಗಣಿತದಲ್ಲಿ ಹೊಸ ಸ್ವಾರಸ್ಯವನ್ನೇ ಹುಟ್ಟಿಸಿತು. ಅಂದಿನಿಂದ ತಮ್ಮ ಪಾಠಗಳನ್ನು ತೀವ್ರ ಆಸಕ್ತಿಯಿಂದ ಕಲಿತೆ. ಗಣಿತದಲ್ಲಿ ಗಣ್ಯ ಶ್ರೇಯಸ್ಸು ಗಳಿಸಿದೆ. ಮುಂದೆ ಎಂಜಿನಿಯರ್ ಆದೆ. ನನ್ನ ಈ ಎಲ್ಲ ಭವಿಷ್ಯಕ್ಕೆ ಖ್ಯಾತಿಗೆ ಭಾಗ್ಯಕ್ಕೆ ತಾವೇ ಕಾರಣ, ತಮ್ಮ ಈ ಆಕೃತಿಯೇ ಕಾರಣ. ಅಂದು ಆ ಗಣಿತ ಪ್ರಮೇಯವನ್ನು ಒಂದು ಕವನದಂತೆ ಬಿಂಬಿಸಿದಿರಿ."

ಸರ್ ಎಡ್ವಿನ್‌ರ ಕಣ್ಣು ತೇವಗೊಂಡಿತು. ಗುರುವಿಗೆ ಇದಕ್ಕಿಂತ ಹಿರಿಯ ಗೌರವ ಇನ್ನೇನು ಬೇಕು? ಇಂಗ್ಲಿಷ್ ಮಕ್ಕಳಲ್ಲಿ ಪೈಥಾಗೊರಸ್ ಪ್ರಮೇಯದ ಆಕೃತಿಯನ್ನು 'ಸೇತುವೆ' (Bridge) ಎಂದು ಕರೆಯುವುದು ವಾಡಿಕೆ. ✡



ಇಡಿ ಗ್ರೀಸ್‌ದೇಶದಲ್ಲಿಯೇ ಬುದ್ಧಿವಂತನಾದ ಮನುಷ್ಯನಾರು? ಎಂಬ ಪ್ರಶ್ನೆಯನ್ನು ಒಬ್ಬಾತ ದೇವಾಲಯದಲ್ಲಿ ಕೇಳಿದಾಗ, "ನಿಸ್ಸಂಶಯವಾಗಿಯೂ ಸಾಕ್ರೆಟಿಸ್" ಎಂದು ಅಶರೀರವಾಣಿಯಿಂದ ಉತ್ತರ ಬಂದಿತಂತೆ. ಈ ಸುದ್ದಿ ಸಾಕ್ರೆಟಿಸನಿಗೆ ತಿಳಿದಾಗ ಆತ, "ಎಲ ಎಲಾ? ಇದು ಹೇಗಾದೀತು? ಅಂಥಾ ಬುದ್ಧಿವಂತನೆಂದು ಕರೆಸಿಕೊಳ್ಳಲು ಒಂದಾದರೂ ಲಕ್ಷಣವಿರಬೇಡವೆ? ಆದರೆ ಅಶರೀರವಾಣಿ ಅಸತ್ಯವನ್ನೆಂದು ನುಡಿಯುವುದಿಲ್ಲ. ಹಾಗಾದರೆ ನನ್ನಲ್ಲಿರುವ ಬುದ್ಧಿವಂತನಿಗಿರಬೇಕಾದ ಆ ಲಕ್ಷಣವಾದರೂ ಯಾವುದು?" ಎಂದು ತಲೆ ಕೆರೆದುಕೊಂಡ.

ಕೊನೆಗೆ ಅವನಿಗೆ ಹೊಳೆದದ್ದಿಷ್ಟು: ನಮ್ಮಲ್ಲಿ ಯಾರೂ ಬುದ್ಧಿವಂತರಲ್ಲ, ಆದರೂ ಎಲ್ಲರೂ ತಮ್ಮನ್ನು ಬುದ್ಧಿವಂತರೆಂದೇ ಭಾವಿಸಿಕೊಳ್ಳುತ್ತಾರೆ. ಇತರರಿಗೆ ತಮಗಿರುವ ಜ್ಞಾನದ ಬಗೆಗೆ ಭ್ರಮೆಯಿರುವಾಗ ನನಗೆ ನನ್ನಲ್ಲಿರುವ ಅಜ್ಞಾನದ ಬಗೆಗೆ ಜ್ಞಾನವಿದೆ. ರೋಗದ ಲಕ್ಷಣವನ್ನು ಕಂಡುಹಿಡಿಯದೆ ರೋಗವನ್ನು ನಿವಾರಿಸುವುದು ಹೇಗೆ ಸಾಧ್ಯ? ಹಾಗೆಯೇ ನಮ್ಮಲ್ಲಿ ಅಜ್ಞಾನದ ಅಸ್ತಿತ್ವವನ್ನು ಕಲಿತುಕೊಳ್ಳದೆ ಅದನ್ನು ಹೊಡೆದೋಡಿಸುವುದು ಹೇಗೆ ಸಾಧ್ಯ? ಇಷ್ಟು ಸಣ್ಣ ವಿಷಯವೂ ಇತರರಿಗೆ ಗೊತ್ತಿಲ್ಲ; ಆದರೆ ನನಗೆ ಗೊತ್ತಿದೆ. ಇತರರಿಗೂ ನನಗೂ ಇರುವ ಭೇದ ಇದೇ.

ಪ್ರಾಣದೊಂದಿಗೆ ಆಟ

ಚಿತ್ರ-ಲೇಖನ : 'ಶ್ರೀ' ಪಡ್ರೆ







ಹುಲಿಜೇಡವು ಹೆಚ್ಚಾಗಿ ಕಾಡು ಪ್ರದೇಶಗಳಲ್ಲಿ ದೊಡ್ಡದಾದ ಬಲೆ ಕಟ್ಟಿಕೊಂಡಿರುತ್ತದೆ. ಗಾತ್ರದಲ್ಲಿ ಇತರ ಜೇಡಗಳಿಗಿಂತ ದೊಡ್ಡದಾಗಿರುವ ಈ ಜೇಡ ಕಾಣಲು ಕ್ರೂರವಾಗಿರುತ್ತದೆ. ಹುಲಿ ಜೇಡನಿಗೆ ಹೊಟ್ಟೆ ಮತ್ತು ಎದೆಯ ಮೇಲ್ಭಾಗ ಹಾಗೂ ಕೆಳ ಭಾಗಗಳಲ್ಲಿ ಹಳದಿ ಪಟ್ಟೆಗಳಿರುವುದೇ ಆ ಹೆಸರು ಬರಲು ಕಾರಣ. ಕಾಲುಗಳಲ್ಲಿಯೂ ಚಿಕ್ಕ ಚಿಕ್ಕ ಮುಳ್ಳುಗಳಿದ್ದು ನಸು ಬಿಳಿ ಹಾಗೂ ಕಪ್ಪಿನ ಪಟ್ಟೆಗಳಿರುತ್ತವೆ.

ಹುಲಿ ಜೇಡವು ತನ್ನ ಎರಡೆರಡು ಕಾಲುಗಳನ್ನು ಹತ್ತಿರವಾಗಿಟ್ಟುಕೊಂಡು ವಿರಮಿಸುತ್ತದೆ. ಆದುದರಿಂದ ವಿರಾಮದ ವೇಳೆಯಲ್ಲಿ ನೋಡಿದರೆ ಇದರ ಎಂಟು ಕಾಲುಗಳು ನಾಲ್ಕು ಜೊತೆಯಲ್ಲಿದ್ದು ನಾಲ್ಕೇ ಕಾಲುಗಳಂತೆ ಕಂಡು ಬರುವುವು.

ಹುಲಿ ಜೇಡನ ಬಲೆಯು ಎಳೆಗಳೂ ಉಳಿದವುಗಳಿಗಿಂತ ತುಂಬಾ ದೃಢವಾಗಿರುತ್ತವೆ. ಮೈಗೆ ಈ ಬಲೆಯು ಅಂಟಿಕೊಂಡರೆ ಬಿಡಿಸಲು ನಮಗೂ ಕಷ್ಟವಾಗುತ್ತದೆ. ಹೊರವರ್ತುಲಗಳ ಹಾಗೂ ಚೌಕಟ್ಟಿನ ಎಳೆಗಳಂತೂ ತೀರಾ ಗಟ್ಟಿಯಾಗಿರುತ್ತವೆ.

ಹುಲಿ ಜೇಡನಿಗೆ ಚಿಕ್ಕ ಚಿಕ್ಕ ಬಲಿಗಳ ಮೇಲೆ ಆಸಕ್ತಿ ಇರುವುದಿಲ್ಲ. ಹೆಚ್ಚಾಗಿ ಈ ಬಲೆಗೆ ಬೀಳುವುವೆಂದರೆ ಮಿಡತೆಗಳು, ಕೆಲವೊಮ್ಮೆ ಚಿಕ್ಕ ಹಕ್ಕಿಗಳು. ಭಾರಿ ಮಿಡತೆಗಳು, ಕಪ್ಪೆಗಳನ್ನು ಕೂಡ ಅದು ಯುಕ್ತಿಯಿಂದ ಬಂಧಿಸುತ್ತದೆ. ಬಲೆಯ ಎಳೆಗಳು ತುಂಬಾ ಅಂಟುವ ಗುಣ ಹೊಂದಿರುವ ಕಾರಣ ಬಲಿಗೆ ಅದರಿಂದ ಬಿಡಿಸಿಕೊಳ್ಳುವುದು ಅಸಾಧ್ಯ.

ಹುಲಿ ಜೇಡವು ತನ್ನ ಬಲಿಯ ಮೇಲೆ ಆಕ್ರಮಣ ನಡೆಸುವುದೂ ಅದನ್ನು ಕೊಲ್ಲುವ ವರೆಗೆ ಪ್ರಾಣದೊಂದಿಗೆ ಆಡುವುದೂ ಆಸಕ್ತಿಯ ವಿಚಾರವಾಗಿದೆ. ಬಲಿಯು ಬಂದು ಬಿದ್ದೊಡನೆ ಅದು ಅಲ್ಲಿಗೆ ಧಾವಿಸುತ್ತದೆ. ಒಂದು ವೇಳೆ ಬಿದ್ದ ಪ್ರಾಣಿ-ಯು ತನಗೇ ಅಪಾಯ ಮಾಡುವಂಥದ್ದಾಗಿದ್ದರೆ ಎಳೆಗಳನ್ನು ಕಡಿದು ಅದನ್ನು ಬಂಧಮುಕ್ತವಾಗಿಸಿ ಬಿಡುತ್ತದೆ. ಇಲ್ಲವಾದರೆ ಕೂಡಲೆ ಬಲಿಯ ಮೈ ಮೇಲೆ ಒಂದು ರೀತಿಯ ನೂಲಿನ ಎಳೆಗಳನ್ನು ಸುತ್ತತೊಡಗುತ್ತದೆ. ಈ ನೂಲಿನ ಎಳೆಗಳು ಹತ್ತಿಯಂತೆ ಬೆಳ್ಳಗಾಗಿದ್ದು ಹುಲಿ ಜೇಡನ ಹಿಂಬದಿಯ ಹೊಟ್ಟೆಯ ಕೆಳ ಭಾಗದ ಒಂದು ಗ್ರಂಥಿಯಿಂದ ಹೊರಬರುತ್ತವೆ. ಈ ನೂಲಿನ ಎಳೆಗಳು ತುಂಬಾ ದಪ್ಪವಾಗಿರುತ್ತವೆ ಮಾತ್ರವಲ್ಲ, ಹುಲಿಜೇಡವು ಎಷ್ಟು ಕ್ಷಿಪ್ರವಾಗಿ ಈ ಬಲಿ ಸುತ್ತುವ ಕಾರ್ಯ ಮುಗಿಸುತ್ತದೆಂದರೆ, ಪ್ರತಿಯೊಂದು ಹಂತದ ಛಾಯಾಚಿತ್ರ ತೆಗೆಯುವುದೂ ಛಾಯಾಗ್ರಾಹಕನಿಗೆ ಒಂದು ಸವಾಲೇ ಆಗುತ್ತದೆ. ಈ ಕ್ಷಿಪ್ರ ಆಕ್ರಮಣ ಮತ್ತು ಅಂಟಿಕೊಳ್ಳುವ ಬಲೆಯಿಂದಾಗಿ ಬಲಿಗೆ ಪ್ರತಿಭಟನೆಯ ಅಥವಾ ತಪ್ಪಿಸಿಕೊಳ್ಳುವ ಅವಕಾಶವೇ ಸಿಗುವುದಿಲ್ಲ.

ಒಂದೊಂದು ಬಾರಿ ಈ ರೀತಿ ಬಲೆಯನ್ನು ಬಲಿಯ ಮೈ ಮೇಲಿಡೀ ಸುತ್ತುವ ಮೊದಲು ತನ್ನ ಕಾಲುಗಳ ಸಹಾಯದಿಂದ ಬಲಿಯನ್ನೇ ನೂಲಿನ ಅಕ್ಷದಲ್ಲಿ ಸುತ್ತು ಸುತ್ತು ತಿರುಗಿ-ಸುತ್ತಾ ತನ್ಮೂಲಕ ಬಲೆಯ ಇತರ ಎಳೆಗಳು ಅದರ ಮೈಗೆ ಸುತ್ತುವಂತೆ ಮಾಡುವುದೂ ಇದೆ. ಬಲೆಯಿಡೀ ಸುತ್ತಲ್ಪಟ್ಟ ಬಲಿಯು ತೆಳುವಾದ ವಸ್ತ್ರ ಹೊದಿಸಿದಂತೆ ಕಾಣುತ್ತದೆ. ಕಟ್ಟ ಕಡೆಗೆ ಒಂದು ರೀತಿಯ ವಿಷಪೂರಿತ ದ್ರವವನ್ನು ಚುಚ್ಚಿ ಬಲಿಯನ್ನು ಹುಲಿಜೇಡ ಕೊಲ್ಲುತ್ತದೆ. ಆದರೆ ಈ ರೀತಿ ಕೊಲ್ಲುವ ಮೊದಲು ಅದು ಬಲಿಯ ಪ್ರಾಣದೊಂದಿಗೆ ಈ ಮೊದಲೇ ವಿವರಿಸಿದಂತೆ ಆಡದೆ ಇರುವುದಿಲ್ಲ.

☆

← ಚಿತ್ರಗಳು:

೧. ಹುಲಿಜೇಡನ ವಿರಾಮದ ಭಂಗಿ.

೨. ಬಲಿ ಪೂರ್ತಿಯಾಗಿ ನೂಲಿನಿಂದ ಸುತ್ತಲ್ಪಟ್ಟಿದೆ. ಹೊರಬರುತ್ತಿರುವ ನೂಲಿನ ಎಳೆಗಳನ್ನು ಗಮನಿಸಿ.

೩. ಬಲಿ ಬಂದು ಬಿದ್ದ ತಕ್ಷಣ ಹುಲಿಜೇಡ ಅದನ್ನು ದಪ್ಪನೆ ಎಳೆಗಳಿಂದ ಸುತ್ತತೊಡಗುತ್ತದೆ. ಈ ನೂಲು ಹಿಂಬದಿಯ ಗ್ರಂಥಿಯಿಂದ ಬರುವುದನ್ನೂ ಗಮನಿಸಿ.



ಲೆಬನಾನ್ ಪಶ್ಚಿಮ ಏಶಿಯದಲ್ಲಿ ಇಸ್ರೇಲಿನ ಉತ್ತರಕ್ಕಿರುವ ಒಂದು ಪುಟ್ಟ ಅರಬ್ ದೇಶ. ಇತಿಹಾಸದಲ್ಲಿ ಯಹೂದ್ಯ, ಕ್ರೈಸ್ತ ಮತ್ತು ಇಸ್ಲಾಮ್ ಧರ್ಮ ಸಂಸ್ಕೃತಿಗಳು ಹುಟ್ಟಿ ಬೆಳೆದ ಪ್ರದೇಶ. ಇಂದು ಅರಬ್ ಮುಸಲ್ಮಾನರೂ ಅರಬ್ ಕ್ರೈಸ್ತರೂ ಒಟ್ಟಿಗೆ ಬಾಳುವ ಇಲ್ಲಿ ಕೆಲ ವರ್ಷಗಳ ಹಿಂದೆ ಎರಡೂ ಪಂಗಡಗಳಲ್ಲಿ ವಿಪರೀತ ವಿರಸ ಬೆಳೆದು ಆಂತರಿಕ ಯುದ್ಧವೇ ನಡೆಯಿತು. ಒಂದು ಕಾಲಕ್ಕೆ ಅತ್ಯಂತ ಶಾಂತ ದೇಶವೆನಿಸಿದ್ದ ಇದಿಂದು ಬೂದಿ ಮುಚ್ಚಿದ ಕೆಂಡದಂತಿದೆ.

ಲೆಬನಾನಿನಲ್ಲಿ ನಾನು

ಓಂಪ್ರಕಾಶ್ ಬಹುಖಂಡಿ

ಅಂತಃಕಲಹದ ಅಗ್ನಿಯಲ್ಲಿ ಬೆಂದ ಲೆಬನಾನಿನ ಸ್ಥಿತಿ ಇಂದಿಗೂ ಅಂದಿನಂತೆಯೇ; ಅಂದರೆ ಇಪ್ಪತ್ತು ವರ್ಷಗಳ ಹಿಂದಿದ್ದ ಪರಿಸ್ಥಿತಿಯೇ. ೧೯೫೮ರ ಮಾತು. ಭಾರತ ಸರಕಾರ ನನ್ನನ್ನು ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕನಾಗಿ ಕಳುಹಿಸಿತು. ಸರಕಾರದ ಪ್ರತಿನಿಧಿಯೆಂಬ ಹೆಮ್ಮೆ ಒಂದು ಕಡೆ. ವಿದೇಶ ಯಾತ್ರೆಯ ಅವಕಾಶ ಸಿಕ್ಕ ಸಂತೋಷ ಮತ್ತೊಂದೆಡೆ.

ಅಕ್ಟೋಬರ್ ೫ರ ರಂದು ದಿಲ್ಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಇಂಡಿಯನ್ ಏರ್‌ಲೈನ್ಸಿನ ವೈಕೌಂಟ್ ವಿಮಾನವೊಂದರಲ್ಲಿ ನಾನು ಕುಳಿತು ಕಲ್ಪನಾಲೋಕದಲ್ಲಿ ವಿಹರಿಸತೊಡಗಿದ್ದೆ. ರಾತ್ರಿ ೧೦ ಗಂಟೆ. ವಿಮಾನ ಮುಂಬಯಿಯ ಸಾಂತಾ ಕ್ರೂಜ್‌ಗೆ ಬಂದಿಳಿದಾಗಲೇ ನನಗೆ ವಾಸ್ತದ ಅರಿವು. ವಿದೇಶಗಳಿಗೆ ಹೋಗುವವರೆಲ್ಲ ಬೇರೆ ವಿಮಾನಗಳನ್ನೇರಬೇಕಾಗಿತ್ತು. ನನ್ನ ವಿಸಾ ಮುಂತಾದವುಗಳ ಪರೀಕ್ಷೆ, ಉಳಿದ ವ್ಯವಸ್ಥೆ ಮುಗಿಯುವುದರೊಳಗೇ ಒಂದು ಗಂಟೆ ಸಂದಿತ್ತು. ಆಗಲೇ ಏರ್ ಇಂಡಿಯಾದ 'ಝಾಂಸಿ ಕಿ ರಾಣಿ' ಬಂದು ನಿಂತಿತ್ತು. ವಿಶಾಲವಾದ ವಿಮಾನ ಅದು. ಮುಂದೆ ಅರ್ಧ ಗಂಟೆಯಲ್ಲಿಯೇ ನಮ್ಮನ್ನು ಹೊತ್ತ 'ಝಾಂಸಿ' ಅರಬ್ಬೀ ಸಮುದ್ರದ ಮೇಲೆ ಹಾರತೊಡಗಿತ್ತು.


ಕೆಲವರಿಗೆ ನಿದ್ದೆ. ಕೆಲವರಿಗೆ ಮಾತನಾಡುವ ಬಯಕೆ. ಪರಿಚಾರಿಕೆಯರ ನಗುಮಾತು ಇವೆಲ್ಲವನ್ನೂ ನೋಡುತ್ತ, ಕೇಳುತ್ತ ಕಿಟಕಿಯಿಂದ ಕೆಳಗೆ ದಿಟ್ಟಿಸುತ್ತ ಕುಳಿತಿದ್ದ ನನಗೆ ಒಮ್ಮಿಂದೊಮ್ಮೆಲೇ ಗಾಬರಿ. ವಿಮಾನದ ಎಂಜಿನ್ನಿನಿಂದ ಕ್ಷಣ ಬಿಟ್ಟು ಕ್ಷಣದಲ್ಲಿ ಕಿಡಿಗಳೇಳುತ್ತಿದ್ದವು. ನಮ್ಮ ಸ್ಥಿತಿ ಏನಾದೀತು ಎಂದು ಯೋಚಿಸುತ್ತ ಪಕ್ಕದಲ್ಲಿ ಕುಳಿತವನಿಗೂ ತೋರಿಸಿದೆ. ಆತ ಆ ಕಡೆ ನೋಡಿದ. ಆತ ಗಾಬರಿಯಿಂದ ಚೀರಿ ಕೊಂಡೇಬಿಡುತ್ತಾನೆ, ಎಲ್ಲರ ಲಕ್ಷ್ಯವೂ ಆ ಕಡೆ ಹೋಗುತ್ತದೆ, ಸುಟ್ಟು ಹೋಗುವ ವಿಮಾನವನ್ನು ರಕ್ಷಿಸಿದಂತಾಗುತ್ತದೆ, ನಾವೂ ಬದುಕುತ್ತೇವೆ. ಎಂದುಕೊಂಡಿದ್ದ ನಾನು ಅವನತ್ತಲೇ ನೋಡುತ್ತ ಕುಳಿತರೆ ಆ ಮಹಾಶಯ ಏನೂ ಆಗಿಲ್ಲವೆಂಬಂತೆ ಸೀಟಿಗೊರಗಿ ಕುಳಿತುಬಿಟ್ಟ. ಆತನ ಮುಖದ ಮೇಲೆ ಯಾವ ಆತಂಕವೂ ಕಾಣುತ್ತಿರಲಿಲ್ಲ. ವಿಮಾನ ವೇಗ ಹೆಚ್ಚಿಸುತ್ತಲೇ ಇತ್ತು. ಗಗನಸಖಿಯರು ನಗುತ್ತ ಮಾತನಾಡುತ್ತ ಇದ್ದ ಹಾಗೆ ನಾನು ಸ್ವಲ್ಪ ಧೈರ್ಯ ತಾಳಿದೆ. ನಿದ್ದೆ ಆವರಿಸಿತು. (ಮುಂದೆಷ್ಟೋ ದಿನಗಳ ಮೇಲೆ

ತಿಳಿಯಿತು. ವಿಮಾನದ ಎಂಜಿನ್ನಿನಿಂದ ಆಗಾಗ ಕಿಡಿಗಳೇಳುತ್ತಿದ್ದುವು.)

ಜೋರಾಗಿ ಬಂದ ಗಂಟೆಯ ಸದ್ದು ನನ್ನನ್ನು ಎಚ್ಚರಿಸಿತು. ಜತೆಗೇ ಗಗನಸಖಿಯ ಮಧುರಸ್ವರ: “ದಯವಿಟ್ಟು ಪಟ್ಟಿ ಕಟ್ಟಿಕೊಳ್ಳಿ. ಬೈರೂತ್ ನಿಮ್ಮ ಕೆಳಗಿದೆ. ಇಷ್ಟರಲ್ಲಿ ನೀವು ಬೈರೂತ್ ವಿಮಾನ ನಿಲ್ದಾಣದಲ್ಲಿಳಿಯಲಿದ್ದೀರಿ. ಧನ್ಯವಾದ.”

ಬೈರೂತ್‌ನಲ್ಲಿಳಿದಾಗ ನಾವು ಗಡಿಯಾರಗಳನ್ನು ಮೂರೂವರೆ ತಾಸು ಹಿಂದಿಡಬೇಕಾಯಿತು.

ಭೂಮಧ್ಯ ಸಮುದ್ರದ ಸೆರಗಿನಲ್ಲಿ ಹರಡಿರುವ ಬೈರೂತ್ ಒಂದು ಸುಂದರ ನಗರ, ಸ್ವರ್ಗಲೋಕ. ಎತ್ತರೆತ್ತರದ ಸಾವಿರಾರು ಕಟ್ಟಡಗಳು, ಹೋಟೆಲ್, ಬಾರ್, ಡಾನ್ಸ್ ಹಾಲ್, ಸದಾ ಜಾಗ್ರತ ಪೇಟೆ, ಕ್ಲಬ್, ಎಲ್ಲೆಂದರಲ್ಲಿ ಜನಸಂದಣಿ. ಅಲ್ಲಿ ಕಂಡುಬರುವ ಜನಗಳಲ್ಲಿ ಅರ್ಧದಷ್ಟು ಬರಿ ಪ್ರಯಾಣಿಕರು, ವಿದೇಶೀಯರು.



ನಮ್ಮನ್ನೆಲ್ಲಾ ಒಂದು ಬೃಹತ್ ಹೋಟೆಲ್ಲಿಗೆ ಕರೆದೊಯ್ಯಲಾಯಿತು. ಅಲ್ಲಿಯೇ ನಮ್ಮ ವಾಸ. ಕೆಲ ದಿನ ಬೈರೂತ್‌ನಲ್ಲಿದ್ದು ಲೆಬನಾನಿನ ರಾಷ್ಟ್ರ ಸಂಘದ ಪ್ರೇಕ್ಷಕ ಆಯೋಗ(ಯುನೈಟೆಡ್ ನೇಶನ್ಸ್ ಅಬ್ಸರ್ವೇಶನ್ ಗ್ರೂಪ್ ಇನ್ ಲೆಬನಾನ್)ದ ಕಾರ್ಯವಿಧಾನ ಮತ್ತು ಲೆಬನಾನಿನ ಆಂತರಿಕ ಸ್ಥಿತಿಯನ್ನು ಅಭ್ಯಸಿಸಬೇಕಿತ್ತು.

ಒಂದು ದಿನ ನಾವು ಕೆಲ ಭಾರತೀಯರು ಬೈರೂತ್ ನಗರದ ಸಂದರ್ಶನಕ್ಕೆಂದು ಹೊರಟೆವು. ಅರಾಜಕತೆಯಿಂದಾದ ಅವ್ಯವಸ್ಥೆ ಅಲ್ಪಸ್ವಲ್ಪ ಮಾಯವಾಗಿ ಸ್ಥಿತಿ ಸುಧಾರಿಸುತ್ತಿದ್ದ ದಿನಗಳವು. ರಸ್ತೆಯ ಬದಿಯಲ್ಲಿ ಕಾಫಿ ರೆಸ್ಟೋರೆಂಟೊಂದು ಕಂಡಿತು. ಹೊಕ್ಕೆವು. ಕಾಫೀ ಕುಡಿದಾದ ಮೇಲೆ ಮಾಲಿಕನೊಂದಿಗೆ ಅರೆಬರೆ ಫ್ರೆಂಚ್ ಭಾಷೆಯಲ್ಲಿ ಮಾತನಾಡುತ್ತ, “ನಾವು ಭಾರತೀಯರು” ಎಂದೆವು. ಕೂಡಲೇ ಆತ ಗೌರವದಿಂದ ಎದ್ದು ನಿಂತು ನಮ್ಮನ್ನಾಲಿಂಗಿಸಿಕೊಂಡು, “ನೀವು ನಮ್ಮ ಸೋದರರು” ಎಂದ. ನಾವೆಷ್ಟು ಒತ್ತಾಯಿಸಿದರೂ ಕಾಫಿಯ ಬಿಲ್ಲನ್ನು ಆತ ಸ್ವೀಕರಿಸಲೇ ಇಲ್ಲ. ಭಾರತದಿಂದಸಾವಿರಾರು ಮೈಲಿ ದೂರದ ದೇಶದಲ್ಲಿ ಭಾರತೀಯರಿಗೆಷ್ಟು ಮರ್ಯಾದೆ ಎಂದು ಅಚ್ಚರಿಗೊಂಡೆ.

ಬೈರೂತ್‌ನಿಂದ ೧೨೦ ಕಿಲೊಮೀಟರ್ ದೂರ ಪೂರ್ವಕ್ಕೆ ಬಾಲ್‌ಬೆಕ್ ನಗರ. ಲೆಬನಾನಿನ ಅತ್ಯಂತ ಪ್ರಾಚೀನ ನಗರ ಅದು. ಕಾರ್ಯನಿಮಿತ್ತ ನಾನಲ್ಲಿ ನಿಲ್ಲಬೇಕಾಯಿತು. ಬಾಲ್‌ಬೆಕ್ ಐತಿಹಾಸಿಕ ಸ್ಥಳ. ಅಲ್ಲಿಯ ಐತಿಹಾಸಿಕ ಭಗ್ನಾವಶೇಷಗಳು ಇನ್ನೂ ಉಳಿದುಕೊಂಡು ಬಂದಿವೆ. ಬಾಕೂ (ಮದ್ಯ ದೇವತೆ) ಮಂದಿರ, ಜ್ಯುಪಿಟರ್ ಮಂದಿರಗಳು ಸುಮೇರಿಯನ್, ಫಿನೀಶಿಯನ್, ಗ್ರೀಕ್, ರೋಮನ್, ತುರ್ಕ ಹಾಗೂ ಇಸ್ಲಾಮಿ ಶಾಸನಗಳ ನೆನಪುಂಟುಮಾಡುತ್ತವೆ.

ಬಾಕೂ ಮಂದಿರದಿಂದ ಸ್ವಲ್ಪ ಅಂತರದಲ್ಲಿ ಸೌಂದರ್ಯ ದೇವತೆ ವೀನಸ್‌ಳ ಮಂದಿರದ ಭಗ್ನಾವಶೇಷಗಳನ್ನು ಕಾಣಬಹುದು. ಈ ಮಂದಿರದ ಅಂಗಳದಲ್ಲಿ ಎತ್ತರದ ಮೇಲೊಂದು ಶಿಲಾಶಿಲ್ಪ. ಈ ಶಿಲಾಶಿಲ್ಪದ ಬಗೆಗೊಂದು ದಂತಕಥೆ ಇದೆ. ಈ ಪ್ರದೇಶದಲ್ಲಿ ಒಂದಾನೊಂದು ಕಾಲದಲ್ಲಿ ಕನ್ಯಾದಾನ ಪದ್ಧತಿ ಇರಲೇ

ಇಲ್ಲವಂತೆ. ವಿವಾಹವೆಂಬುದು ತೀರಾ ವಿರಳ. ಕನ್ಯೆಯನ್ನು ಮದುವೆಯಾಗುವುದು ಮಹಾ ಪಾಪದ ಮತ್ತು ಕಂಕಟಕಾರಿ ಕೆಲಸ ಎಂಬ ನಂಬಿಕೆ ಇತ್ತಂತೆ. ಅಲ್ಲದೇ ಈ ಸೌಂದರ್ಯ ದೇವತೆಯ ಮಂದಿರದ ಜಾತ್ರೆಯಲ್ಲೊಂದು ವಿಶಿಷ್ಟ ಕ್ರಮವಿತ್ತಂತೆ. ಕನ್ಯೆಯರನ್ನು ವಾದ್ಯ ಮೇಳದೊಂದಿಗೆ ಮೆರವಣಿಗೆಯಲ್ಲಿ ಈ ಮಂದಿರದ ಅಂಗಣಕ್ಕೆ ಕರೆತಂದು ಶಿಲಾಶಯ್ಯೆಯಲ್ಲಿ ಮಲಗಿಸಿ ಅವರ ಕೌಮಾರ್ಯ ಹರಣಮಾಡಲಾಗುತ್ತಿತ್ತಂತೆ.

ಬಾಲ್‌ಬೆಕ್‌ನ ಎತ್ತರಕ್ಕೆ ಶಾಸ್ ಬಾಲ್ ಬೆಕ್ ಎಂಬುದೊಂದು ಹಳ್ಳಿ. ಅಲ್ಲಿಯೇ ನನಗೆ 'ಮಮಾ (ತಾಯಿ) ಮರಿಯಾ'ಳ ಭೇಟಿಯಾದದ್ದು. ಮಮಾ ಮರಿಯಾ ಅಷ್ಟೇನೂ ಎತ್ತರವಲ್ಲದ ಗಟ್ಟಿಮುಟ್ಟಾದ ಹೆಂಗಸು. ಗೌರವರ್ಣ, ಸುಂದರಮುಖ, ಮುಖದ ಮೇಲೆ ಹಾರಾಡುವ ಮುಂಗುರುಳು, ನಗೆಯೊಂದಿಗಿನ ಮೃದು ಮಾತು ಎಂಥವರನ್ನೂ ಸೆಳೆಯುತ್ತಿದ್ದುವು. ಆಕೆ ನಮ್ಮ ಉಪದಳದ ಪೋಷಣೆಯ ಭಾರ ಹೊತ್ತುಕೊಂಡಿದ್ದಳು. ಮಮಾ ಬಲು ಸ್ವಾದಿಷ್ಟ ಅಡುಗೆ ಮಾಡುವಂಥವಳು. ಅಡುಗೆ ಮಾಡಿಟ್ಟು, ಭೋಜನ ಮೇಜಿನ ಮೇಲೆ ತಟ್ಟೆ ಬಟ್ಟಲು ಹೊಂದಿಸಿಟ್ಟು ತಾನೂ ನಮ್ಮೊಂದಿಗೆ ಬಂದು ಕುರ್ಚಿಯಲ್ಲಿ ಕುಳಿತು ತಾಯಿಯಂತೆ ಹೊಟ್ಟೆ ತುಂಬಾ ಊಟ ಮಾಡಿಸಿದರೇನೇ ಆಕೆಗೆ ತೃಪ್ತಿ. ಊಟ ಮುಗಿದ ಮೇಲೆ ಮತ್ತೆ ಇತರ ಕೆಲಸ.

ಶಾಸ್ ಬಾಲ್‌ಬೆಕ್‌ನ ಕುಟುಂಬವೊಂದು ನನಗೆ ತೀರಾ ಆತ್ಮೀಯವಾಯಿತು. ೧೦೫ ವರ್ಷದ ವೃದ್ಧೆ ಆ ಕುಟುಂಬದ ಮುಖ್ಯಸ್ಥೆ. ನನ್ನೊಂದಿಗಂತೂ ಆ ಅಜ್ಜಿ ತಾನು ನನ್ನ ಸಂಬಂಧಿಕಳೇನೋ ಎಂಬಂತೆ ವರ್ತಿಸುತ್ತಿದ್ದಳು. ನಾನೇನಾದರೂ ಹೇಳಿದರಾಯಿತು, ಆ ಸುಕ್ಕುಗಟ್ಟಿದ್ದ ಮುಖದಲ್ಲಿ ಸಂತೋಷ ಕುಣಿಯುತ್ತಿತ್ತು. ಸದಾ ಬಾಗಿಲ ಬಳಿ ಕುಳಿತಿರುತ್ತಿದ್ದಳು. ಒಂದು ದಿನ ನನ್ನ ಕೆಲಸ ಮುಗಿಸಿಕೊಂಡು ಬಳಲಿ, ದಣಿದು ಅವರ ಮನೆಗೆ ಹೋದೆ. ಅಜ್ಜಿ ಕೈಯಲ್ಲೊಂದು ರೊಟ್ಟಿ ಹಿಡಿದು ಉಪ್ಪಿನಕಾಯಿಯೊಂದಿಗೆ ತಿನ್ನುತ್ತ ಕುಳಿದ್ದವಳು ನನ್ನನ್ನು ನೋಡಿ ಎದ್ದು ನಿಂತಳು. ನನ್ನ ಬಳಲಿದ ಮುಖ, ಅಸ್ಥಿರ ಹೆಜ್ಜೆ ಕಂಡು ನನ್ನ ಸ್ಥಿತಿ ಅರಿವಾಗಿರಬೇಕು ಆಕೆಗೆ. ಸಮೀಪ ಬಂದಳು. ತಾನು ಬಾಯಿಗಿಡಬೇಕಿದ್ದ ರೊಟ್ಟಿಯ ತುಂಡನ್ನು ನನ್ನ ಬಾಯಿಗಿಟ್ಟಳು. ಆ ಮಮತೆ, ಸ್ನೇಹ ಮತ್ತು ರುಚಿಕರ ರೊಟ್ಟಿ ಉಪ್ಪಿನಕಾಯಿ ನನ್ನ ಬಳಲಿಕೆಯನ್ನೆಲ್ಲ ಕ್ಷಣಾರ್ಧದಲ್ಲೇ ಓಡಿಸಿಬಿಟ್ಟವು.

ಆ ಕುಟುಂಬ ನನ್ನನ್ನು ತಮ್ಮವನೆಂದೇ ತಿಳಿದಿತ್ತು. ಮನೆ ತೀರಾ ದೊಡ್ಡದು. ಭೋಜನ ಶಾಲೆ, ಸ್ನಾನಗೃಹ, ಶಯನಾಗಾರ ಎಲ್ಲದರಲ್ಲೂ ನನಗೆ ಮುಕ್ತ ಪ್ರವೇಶ. ಶಯನಾಗಾರವಂತೂ ಬಲು ಸುಸಜ್ಜಿತ, ಆದರೂ ಸರಳ. ದೊಡ್ಡದಾದ ಮಖಮಲ್ ಹಾಸಿಗೆ. ಅದರ ಮೇಲೆ ಈ ಗೋಡೆಯಿಂದ ಆ ಗೋಡೆಯವರೆಗೆ ಮೆದುವಾಸು. ಆ ಪರಿವಾರವೆಲ್ಲಾ ಅಲ್ಲಿ



ಜ್ಯೂಪಿಟರ್ ದೇವಾಲಯದ ಭಗ್ನಾವಶೇಷ

ಯೇ ಮಲಗುತ್ತಿತ್ತು. ನನಗೂ ಅಲ್ಲಿಯೇ ಅವಕಾಶ. ಅಜ್ಜಿ, ಆಕೆಯ ಮಗ, ಮೊಮ್ಮಗ, ಮೊಮ್ಮಗಳು, ಸೊಸೆಯಂದಿರು ಎಲ್ಲರಿಗೂ ಅದೊಂದೇ ಶಯನಾಗಾರ. ನನ್ನೊಂದಿಗೆ ಬಂದಿದ್ದ ಇತರರಿಗಂತೂ ನಾನು ಅವರೊಂದಿಗೆ ಒಂದೇ ಹಾಸುಗೆಯಲ್ಲಿ ಮಲಗುವುದೊಂದು ಅಚ್ಚರಿಯ ವಿಷಯ. ಅವರಿಗೆ ಒಳಗೆ ಪ್ರವೇಶಿಸಲು ಕೂಡ ಅಜ್ಜಿಯ ಆಕ್ಷೇಪ. ಅದೇನು ಕಾರಣವೋ ಗೊತ್ತಿಲ್ಲ. ನನ್ನನ್ನು ಮಾತ್ರ ತೀರಾ ಪ್ರೇಮದಿಂದ ನೋಡುತ್ತಿತ್ತು ಮುದುಕಿ. ನನ್ನ ಸ್ನೇಹಿತರಿಗೆಲ್ಲ ಮುದುಕಿಯ ಮೇಲೆ ಇರಲು ಸ್ವಲ್ಪ ಸಿಟ್ಟಿದ್ದರು.

ಆ ಕುಟುಂಬದ ಸ್ನೇಹ–ವಿಶ್ವಾಸ ನನ್ನ ಹೃದಯದಲ್ಲಿ ಎಂದಿಗೂ ಉಳಿಯುವಂಥವು.

ಆಯೋಗದ ಕೆಲವೇ ಅದೃಷ್ಟಶಾಲಿಗಳಲ್ಲಿ ನಾನೂ ಒಬ್ಬ. ಸಂಯುಕ್ತ ರಾಷ್ಟ್ರಸಂಘದ ಡ್ರೈವಿಂಗ್ ಲೈಸೆನ್ಸ್ ನನಗೂ ಕೊಡಲ್ಪಟ್ಟಿತ್ತು. ಜತೆಗೊಂದು ಸ್ಟೇಶನ್ ವ್ಯಾಗನ್.

ಬಾಲ್‌ಬೆಕ್‌ನ ಪೂರ್ವಕ್ಕೆ ಎಂಟಿಲೆಬನಾನ್ ಪರ್ವತಶ್ರೇಣಿ. ಇಲ್ಲಿ ಗಿಡಗಳಿಲ್ಲ. ಮರಗಳಿಲ್ಲ. ಹುಲ್ಲು ಕೂಡ ಹುಟ್ಟುವದಿಲ್ಲ. ಬರಿ ಬಣ ಬಣ–ಭಣ ಭಣ. ಅದರ ಸೆರಗಿನಲ್ಲಿ ನೆಲಸಿರುವ ನಗರಗಳನ್ನು ನೋಡಬೇಕಾದರೆ ಈ ಭೂಮಿಯಲ್ಲಿ ನಡೆದೇ ಹೋಗಬೇಕು.

ಒಮ್ಮೆ ನಾನು ಮತ್ತು ನನ್ನ ಒಬ್ ಮಿತ್ರನನ್ನು ಇವುಗಳಲ್ಲಿ ಒಂದರೊಳಗೆ ಕೆಲಸದ ನಿಮಿತ್ತ ಕಳಿಸಲಾಯಿತು. ಕೆಟ್ಟ ದಾರಿ. ನಡೆದಷ್ಟೂ ಆಯಾಸ. ಎಲ್ಲಿ ಬೀಳುವೆವೋ ಎಂದು ಭಯ ಹುಟ್ಟಿಸುವಂಥ ಪ್ರದೇಶ. ಹಾಗೆಯೇ ಹೊರಟೆವು. ಹೆದರಿಕೆಯನ್ನು ಹೊತ್ತುಕೊಂಡು. ಸಂಜೆಯಾಗುತ್ತಿದ್ದಂತೆಯೇ ಒಂದೆಡೆ ಬೀಡುಬಿಟ್ಟೆವು. ಡೇರೆ ಹೂಡಿ, ರೇಡಿಯೋ ಮೂಲಕ ಬಾಲ್‌ಬೆಕ್‌ನಲ್ಲಿದ್ದ ನಮ್ಮ ಹೆಡ್ ಕ್ವಾರ್ಟರಿಗೆ ಆವಶ್ಯಕ ಸಮಾಚಾರ ಕಳಿಸಬೇಕೆಂದು ಹೊರ ಹೋಗಿ ವಾಪಸಾಗುತ್ತಿದ್ದಂತೆಯೇ ಇಬ್ಬರಿಗೂ ದಿಗ್ಭ್ರಾಂತಿ. ನಮ್ಮ ಡೇರೆಯಲ್ಲಿಟ್ಟಿದ್ದ ಟೂತ್‌ಪೇಸ್ಟ್, ಬ್ರಶ್, ಸಾಬೂನು. ಇತರ ಪಾತ್ರೆಗಳು ಇತ್ಯಾದಿ ದಿನನಿತ್ಯದ ಉಪಯುಕ್ತ ವಸ್ತುಗಳೆಲ್ಲ ಮಾಯವಾಗಿದ್ದವು.

ಕೆಲಸವಂತೂ ಮುಗಿದಿತ್ತು. ರಾತ್ರಿಯಾದರೂ ಸರಿ, ಅಲ್ಲಿಂದ ಮುಂದೆ ಸಾಗುವುದೇ ವಿಹಿತವೆಂದು ಭಾವಿಸಿ, ಸ್ಟೇಶನ್ ವ್ಯಾಗನ್ ತುಂಬಿ ಮತ್ತೆ ಆ ಕೆಟ್ಟ ರಸ್ತೆಯ ಮೇಲೆ ಮುಂದೆ ಹೊರಟೆವು. ನಾನು ಸ್ಟಿಯರಿಂಗ್ ಹಿಡಿದಿದ್ದೆ. ನನ್ನ ಮಿತ್ರ ಪಕ್ಕದಲ್ಲಿ ಕುಳಿತಿದ್ದ. ಸುತ್ತಲೂ ಕತ್ತಲೆಯದೇ ಸಾಮ್ರಾಜ್ಯ. ವ್ಯಾಗನ್ನಿನ ಗಾಲಿಗೇನೋ ಅಡ್ಡಿಯಾಯಿತು. ನಾನು ಬ್ರೇಕ್ ಹಾಕಿದೆ. ಮುಂದೆ ವ್ಯಾಗನ್ ಲೈಟಿನ ಬೆಳಕಿನಲ್ಲಿ ವಿಕರಾಳವಾಗಿ ಕಾಣುತ್ತಿದ್ದ ಕಿರಿ ಶಿಖರಗಳು, ತಗ್ಗು ದಿನ್ನೆಗಳು. ದಾರಿ ಎಲ್ಲಿದೆ ಎಂಬುದೇ ಕಾಣದಷ್ಟು ಕಲ್ಲುಗಳು. ಏನು ಮಾಡಬೇಕೆಂದು ಯೋಚಿಸುತ್ತಿರುವಷ್ಟರಲ್ಲೇ ಮೂವರು ಆಜಾನುಬಾಹುಗಳು ನಮ್ಮೆದುರು ಬಂದು ನಿಂತರು.

ಅವರಲ್ಲೊಬ್ಬ ಹೊಳೆಯುವ ಚೂರಿಯನ್ನು ಹಿಡಿದು ನನ್ನ ಬಳಿ ಬಂದು, "ಹಿಂತಿರುಗಿ ಸಿರಿಯಾಕ್ಕೆ ಹೋಗಿ" ಎಂದ. ಅಬ್ಬಾ, ಆ ಗಡಸು ದನಿಯಲ್ಲೆಂಥ ಗಡಸು ಆಜ್ಞೆ! ನನ್ನ ಮಿತ್ರ ನನ್ನೆಡೆ ನೋಡತೊಡಗಿದ. ಆತನಿಗೆ ಬಲು ಹೆದರಿಕೆಯಾಗಿರಬೇಕು, ಮಾತನಾಡಲೂ ಆಗುತ್ತಿರಲಿಲ್ಲ. ನಮಗೆ ಸಿರಿಯಾಕ್ಕೆ ಹೋಗಬೇಕೆಂಬ ಆಜ್ಞೆ ನಮ್ಮನ್ನು ಕಳಿಸಿದವರಿಂದ ಬಂದಿರಲೇ ಇಲ್ಲ. ನಾನು ನಿರುತ್ತರನಾದಾಗ ಆತನಿಗೆ ಕೋಪ ಉಕ್ಕಿರಬೇಕು. ಚೂರಿಯನ್ನು ಎದೆಗೆ ಹಿಡಿದು "ಹೂಂ......" ಎಂದ.

ನಾನಿಗಾಗಲೇ ನಾನು ಅರಬ್ಬೀ ಭಾಷೆಯಲ್ಲಿ. 'ಮಾಮನೂನ್' ಎಂದೆ. ಹಾಗಂದರೆ 'ಹಿತೈಷಿ ಬಿಡು' ಎಂದರ್ಥ. ನನ್ನ ವ್ಯಾಗನ್ ಇಂಜಿನ್ ಇನ್ನೂ ಬಂದಾಗಿರಲಿಲ್ಲ. ಬಂದು ಮಾಡಿದೆ.

ಆ ಮೂವರೂ ತಮ್ಮ ತಮ್ಮೊಳಗೇ ಮಾತಾಡಿಕೊಂಡರು. ಅವರಲ್ಲೊಬ್ಬ ನನ್ನೆಡೆಗೆ ದುರುಗುಟ್ಟಿ ನೋಡಿ ಅರಚಿದ. ನಾನು ವ್ಯಾಗನ್ನಿನ ಚಾವಿಯನ್ನು ಚೂರಿ ಹಿಡಿದವನ ಕೈಗಿತ್ತುಬಿಟ್ಟೆ.

ನನ್ನ ಈ ಪ್ರತಿಕ್ರಿಯೆಯಿಂದ ಮೂವರಿಗೂ ಅಚ್ಚರಿಯಾಗಿರಬೇಕು. ನಾನಂತೂ ಅರೆಬರೆ ಅರಬ್ಬಿ, ಫ್ರೆಂಚ್ ತಿಳಿದವ.

ಚೂರಿ ಹಿಡಿದವ ಕೇಳಿದ? "ಯಾರು ನೀನು?"

"ಅನ್ ಹಿಂದೀ". ಎಂದೆ ಅರಬ್ಬಿಯಲ್ಲಿ (ಹಿಂದು ಸ್ಥಾನದವ).

"ಈತ ಯಾರು?" ನನ್ನ ಮಿತ್ರನತ್ತ ನೋಡಿ ಕೇಳಿದ, "ಈತನೂ ಹಿಂದುಸ್ಥಾನದವನಾ?"

"ಹೌದು," ಎಂದೆ.

"ಹಾಗಾದರೆ ದಾಡಿ ಬೆಳೆಸಿದ್ದೇಕೆ ?"

"ಅವನನ ಧಾರ್ಮಿಕ ಕಟ್ಟಳೆ."

ನನ್ನ ಉತ್ತರದಿಂದ ಆತನಿಗೆ ಸಮಾಧಾನವಾಗಿರಬೇಕು. ನಂತರ ಆ ಮೂವರಿಗೂ ನಮ್ಮ ಪರಿಚಯ ಪತ್ರ ತೋರಿಸಿದೆವು. ಅವನ್ನು ನಮಗೆ ಲೆಬನಾನ್ ಸರಕಾರ ನೀಡಿತ್ತು. ನಾವು ಭಾರತೀಯರೆಂದು ಅರಿವಾದ ಕೂಡಲೇ ಅವರ ನಡವಳಿಕೆಯಲ್ಲಿ ಆಕಸ್ಮಿಕ ಬದಲಾವಣೆಗಳು ಕಂಡು ಬಂದವು.

"ನೆಹರೂ......ಗಾಂಧಿ......" ಎನ್ನುತ್ತ ಆ ಮೂವರೂ ಹಣೆ-ಎದೆ ಮುಟ್ಟಿಕೊಂಡರು. ನಮ್ಮ ಬಳಿ ಬಂದು, ಗಾಡಿಯಿಂದ ಇಳಿಸಿ ಅಪ್ಪಿಕೊಂಡು "ನಾವು-ನೀವು ಸೋದರರು" ಎಂದರು. ಮುಂದೆ ಎರಡು ನಿಮಿಷಗಳಲ್ಲಿ ಗಾಡಿಗೆ ಅಡ್ಡವಾಗಿಟ್ಟಿದ್ದ ಕಲ್ಲುಗಳನ್ನು ತೆಗೆದು ಹಾಕಿ ಚಾವಿ ನನ್ನ ಕೈಗಿತ್ತು, "ಹೋಗಿ ಬನ್ನಿ." ಎಂದು ಸಹೃದಯತೆಯಿಂದ ವಿದಾಯ ಹೇಳಿದರು.

ಅವರು ಮರೆಯಾದ ಕೂಡಲೇ ಆ ಕಲ್ಲು ಮುಳ್ಳುಗಳುಳ್ಳ ಗುಡ್ಡಗಾಡಿನ ರಸ್ತೆಯಲ್ಲಿ ನಾನೆಷ್ಟು ವೇಗದಲ್ಲಿ ವ್ಯಾಗನ್ ಓಡಿಸಿದೆನೆಂದರೆ ಸಪಾಟಾದ ರಸ್ತೆಯಲ್ಲೂ ಅಷ್ಟು ಜೋರಾಗಿ ನಾನೆಂದೂ ಓಡಿಸಿರಲಿಕ್ಕಿಲ್ಲ.

ಭಾರತೀಯನೆನಿಸಿಕೊಂಡ ಹೆಮ್ಮೆಯಿಂದ ನಾನು ಆ ಎಂಟಿಲೆಬನಾನ್ ಪರ್ವತಶ್ರೇಣಿಯ ಶಿಖರಗಳಿಗಿಂತ ಎತ್ತರದಲ್ಲಿ ತಲೆ ಎತ್ತಿ ನಿಂತಂತೆ ಭಾವಿಸಿಕೊಂಡೆ. ಗಾಂಧಿ, ನೆಹರೂ ಹೆಸರು ಇಷ್ಟು ದೂರದ ನಾಡಿನಲ್ಲಿ ಭಾರತೀಯರಿಗೊಂದು ಅತ್ಯುನ್ನತ ಗೌರವ ದೊರಕಿಸಿ ಕೊಟ್ಟದ್ದು ನನಗೆ ಮತ್ತಷ್ಟು ಹೆಮ್ಮೆಗೆ ಕಾರಣವಾಯಿತು.

ಮತ್ತೊಮ್ಮೆ ಕಾರ್ಯಕಾರಣದ ನಿಮಿತ್ತ ನನಗೆ ಬಾಲ್‌ಬೆಕ್‌ನಿಂದ ಲೆಬನಾನ್ ಪರ್ವತದ ಮೂಲಕವೇ ಲೇ-ಸೀಡರ್‌ಗೆ ಹೋಗಬೇಕಿತ್ತು. ಸೀಡರ್ ಲೆಬನಾನಿನ ಒಂದು ಪ್ರೇಕ್ಷಣೀಯ ಸ್ಥಳ. ಲೆಬನಾನ್ ಪರ್ವತದ ಮೇಲೆ ಸುಮಾರು ಆರು ಸಾವಿರ ಅಡಿ ಎತ್ತರದಲ್ಲಿರುವ ಇದು ಪ್ರವಾ ಆದರೆ ಯಾತ್ರಾರ್ಥಿಗಳಿಂದ ದಟ್ಟವಾದ ಶಹರ. ವಿಶ್ವದ ಏಕಮಾತ್ರ ಸೀಡರ್ ಅರಣ್ಯವಿರುವುದು ಇಲ್ಲಿಯೇ. ಸೀಡರ್ ಸೂಚಿಪರ್ಣ ಜಾತಿಯ ಮರ. ಅದನ್ನು ಪವಿತ್ರವೆಂದು ತಿಳಿಯುತ್ತಾರೆ ಅಲ್ಲಿನ ಜನ. ಇದು ಲೆಬನಾನಿನ ರಾಷ್ಟ್ರ ಚಿನ್ಹವೂ ಹೌದು.

ಈ ರಮಣೀಯ ಸ್ಥಳದಲ್ಲಿ ಜನ ಹಿಮಜಾರು ಆಟ (ಸ್ಕೀಯಿಂಗ್) ಆಡುತ್ತಾರೆ. ಈ ಆಟ ಮುಗಿಸಿಕೊಂಡವರೆಲ್ಲಾ ಒಂದೂವರೆ ಗಂಟೆಗಳ ಕಾಲ ಮೋಟಾರಿನಲ್ಲಿ ಪ್ರಯಾಣಗೈದು ಸ್ಯಾಹೀಸುಮಾದಲ್ಲಿ ಭೂಮಧ್ಯ ಸಮುದ್ರದಲ್ಲಿ ಸ್ನಾನ ಮಾಡುವುದುಂಟು. ಸ್ಕೀಯಿಂಗ್ ಮತ್ತು ಸಮುದ್ರ ಸ್ನಾನವನ್ನು ಒಂದೇ ದಿನದಲ್ಲಿ ಮಾಡುವ ಇಂಥ ಅವಕಾಶ ವಿಶ್ವದ ಬೇರಾವ ದೇಶದಲ್ಲೂ



"ಕೆಲವು ಕಾಲ, ರಾಜಕೀಯದಿಂದ ನಿವೃತ್ತನಾಗಿ, ಚಿತ್ರನಟನಾಗಿ, ಜನರ ಪ್ರೀತಿ ವಿಶ್ವಾಸ ಗಳಿಸಿ, ಮತ್ತೆ ರಾಜಕೀಯ ಪ್ರವೇಶ ಮಾಡಬೇಕೆಂದಿದ್ದೇನೆ!"

ಅಲಭ್ಯ. ಜೇ–ಟೀವರ್‌ನಲ್ಲಿ ಪ್ರಸಿದ್ಧ ಗುಹೆಗಳೂ ಇವೆ. ಈ ಗುಹೆಗಳಲ್ಲಿ ನೀರಿನ ಕೊರೆತದಿಂದಾದ ನಾನಾ ಆಕೃತಿಯ ಶಿಲಾಸ್ತಂಭಗಳು ನೋಡಸಿಕ್ಕುತ್ತವೆ.

ಅತಿಥಿ ಸತ್ಕಾರವೆ ಒಂದು ವೈಶಿಷ್ಟ್ಯವನ್ನು ಇಲ್ಲಿ ಕಾಣುವುದು. ಅತಿಥಿ ದೇವೋಭವ ಎಂಬ ಮಾತು ಇಲ್ಲಿ ಬರಿ ಮಾತಾಗಿ ಉಳಿದಿಲ್ಲ. ಅತಿಥಿಗಳನ್ನು ದೇವರೆಂದೇ ಕಾಣುತ್ತಾರೆ. ಇಲ್ಲಿನ ಜನ. ದಿನವಿಡೀ ಒಂದು ಗಡಿಗೆಯಲ್ಲಿ ಸದಾ ಕುದಿಯುತ್ತಿರುವ ಕಾಫಿಯಿಂದಲೇ ಈ ಸತ್ಕಾರ. ಈ ಕಾಫಿಗೆ ಹಾಲೂ ಇಲ್ಲ, ಸಕ್ಕರೆಯೂ ಇಲ್ಲ. ಅದೆಷ್ಟು ಕಹಿಯಾಗಿರುತ್ತದೆಂದರೆ ಮೊದಲ ದಿನ ಒಂದೇ ಗುಟುಕಿಗೇ ನನ್ನ ಮೈಯೆಲ್ಲ ಬೆವತು ಬಿಟ್ಟಿತು.

ಲೆಬನಾನಿನ ಹಳ್ಳಿಗಳೆಲ್ಲಾ ನಮ್ಮ ಹಳ್ಳಿಗಳನ್ನೇ ಹೋಲುತ್ತವೆ. ಅ ಧೂಳುಮಯ ರಸ್ತೆ. ಬೀಡಾಡಿ ನಾಯಿಗಳು. ಹಾಲು ಕರೆಯುತ್ತ ನಿಂತಿರುವ ಹಸುಗಳು ಹೆಂಗಸರು ಎಲ್ಲಾ ನಮ್ಮ ಹಳ್ಳಿಗಳನ್ನು ನೆನಪಿಗೆ ತರುತ್ತವೆ. ಪುರುಷರೆಲ್ಲ ಪಾಶ್ಚಿಮಾತ್ಯ ಉಡುಗೆ ತೊಡುಗೆಗಳಿಗೆ ಶರಣು ಹೋದವರು. ಮುದುಕಿಯರು ಮಾತ್ರ ಪರಂಪರಾಗತ ಪೋಷಾಕು ತೊಡುತ್ತಾರೆ: ಉದ್ದನೆಯ ತೋಳಂಗಿ. ಚೂಡಿದಾರ್ ಪೈಜಾಮಾ. ಕೆಲ ಯುವತಿಯರು ಮಾತ್ರ ಆಧುನಿಕ ಸ್ಕರ್ಟ್. ಲಿಪ್‌ಸ್ಟಿಕ್ ಹೀಗೆ ಫ್ಯಾಶನ್ನಿನ ಮೊರೆ ಹೊಕ್ಕಿದ್ದಾರೆ.

ಬೈರೂತ್ ಸ್ವರ್ಗಸಮಾನ ಪ್ರದೇಶ. ಒಂದೆಡೆ ಪರ್ವತಶ್ರೇಣಿ. ಮತ್ತೊಂದೆಡೆ ಹಚ್ಚ ಹಸುರಿನ ಹೂಗಳಿಂದ ತುಂಬಿದ ತೋಟ ಪಟ್ಟಿಗಳು. ಸ್ವಾದಿಷ್ಟ ಊಟ. ಸಂತೋಷದಾಯಕ ಸೊಬಗು, ಜತೆಗೆ ಆಹ್ಲಾದಕರ ಸ್ಕೀಯಿಂಗ್ ಮತ್ತು ಸಮುದ್ರ ಸ್ನಾನ.

ಈ ನಗರದ ಉತ್ತರಕ್ಕೆ ಐತಿಹಾಸಿಕ ನಗರ ಬೆಬ್ಲಸ್ ಇದೆ. ಇಲ್ಲಿಯ ಹಾಳು ಕೋಟೆ ಪ್ರಾಚೀನ ವಾಸ್ತುಶಿಲ್ಪಕ್ಕೊಂದು ಶ್ರೇಷ್ಠ ಉದಾಹರಣೆ. ಬೈಬಲ್ ಇಲ್ಲಿಯೇ ಸೃಜಿಸಲ್ಪಟ್ಟಿತೆಂಬ ಪ್ರತೀತಿಯೂ ಉಂಟು.

೧೯೬೮ರ ಡಿಸೆಂಬರಿನಲ್ಲಿ ನನ್ನ ಕೆಲಸ ಮುಗಿಯಿತು. ಸವಿ ನೆನಪುಗಳೊಂದಿಗೆ ಭಾರತಕ್ಕೆ ಮರಳಿದೆ. ☼

❀❀❀❀❀❀

"ರವೆ ಉಂಡಿ ಬಂದಾರ್ರಿ"

ಧಾರವಾಡದಲ್ಲಿ ನಡೆದ ಸ್ನೇಹಿತನೊಬ್ಬನ ಮದುವೆಗೆ ಹೋಗಲಾರದಕ್ಕೆ ಕಾರಣ ತಿಳಿಸಿ ಮದುವೆಯ ದಿನ ಒಂದು ಟೆಲೆಗ್ರಾಂ ಗ್ರೀಟಿಂಗ್ ಕಳುಹಿಸಿದೆವು. ಮದುವೆ ಮುಗಿಸಿಕೊಂಡು ಊರಿಗೆ ಹಿಂದಿರುಗಿದ ನಂತರ 'ಚಹಾ' ಏರ್ಪಡಿಸಿ ಮನೆಗೆ ಆಹ್ವಾನಿಸಿದ್ದರಿಂದ ಹೋದಮೇಲೆ, ಮದುಮಗನನ್ನು ಮದುವೆಯಲ್ಲಾ ಯಾವ ರೀತಿಯಾಯ್ತು ಎಂದೆಲ್ಲಾ ವಿಚಾರಿಸಿ ಕಡೆಗೆ ನಮ್ಮ ಗ್ರೀಟಿಂಗ್ ಸಿಕ್ಕಿತಾ ಎಂದಾಗ ಆತ ರೇಗಿಬಿದ್ದ. ನಾವೆಷ್ಟೇ ಹೇಳಿದರೂ ನಂಬದಿದ್ದಾಗ ಅವನಿಗೆ ಬಂದಿದ್ದ ಗ್ರೀಟಿಂಗ್ ಹೆಸರನ್ನೆಲ್ಲಾ ಓದತೊಡಗಿದಾಗ ಕಂಡದ್ದು 'ರವೆ ಉಂಡಿ' ಎಲ್ಲರಿಗೂ ನಗೆ ತರಿಸಿತ್ತು. ಟೆಲಿಗ್ರಾಫಿನ ಅಚಾತುರ್ಯದಿಂದ ಆದ ತಪ್ಪು ಎಲ್ಲರನ್ನು ನಗೆಗಡಲಿನಲ್ಲಿ ಮುಳುಗಿಸಿತು. ನನ್ನ ಹೆಸರಿನ ಕಡೆ ಪದ್ಮರಾವ್ ಹಾಗೂ ನನ್ನ ಸ್ನೇಹಿತ ರಾಘುವ ಹುಂಡಿ ಯವರ ಕಡೆ ಪದ ಹುಂಡಿ ಎರಡನ್ನು ಸೇರಿಸಿ 'ರಾವ್-ಹುಂಡಿ' ಎಂದು ಕೊಟ್ಟದ್ದು 'ರವೆ ಉಂಡಿ' ಯಾಗಿ ಹೋಗಿತ್ತು. ಇಂದೂ ನಾವಿಬ್ಬರೂ ಸ್ನೇಹಿತರು ಕೂಡಿ ನನ್ನ ಸ್ನೇಹಿತನ ಮನೆಗೆ ಹೋದರೆ ಅವನ ಶ್ರೀಮತಿ "ರವೆ ಉಂಡಿ ಬಂದಾ ರ್ರೀ", ಎಂದೇ ರೇಗಿಸುವರು.

–ವೈ. ಎನ್. ಗುಂಡೂರಾವ್

ಪರ್ವತಸಿಂಹ

ಜಿ. ಎಸ್. ಭಟ್ಟ

ಪೆಟಗೊನಿಯಾ, ಕೆನಡ ಮತ್ತು ದಕ್ಷಿಣ ಅಮೇರಿಕದ ಕಾಡಿನಲ್ಲಿರುವ ಪರ್ವತಸಿಂಹ ಪ್ರವಾಸಿಗರಿಗೆ ಎದೆ ಝಲ್ಲೆನಿಸುವ ಪ್ರಾಣಿ. ಬೆಕ್ಕಿನ ಜಾತಿಯ ಪ್ರಾಣಿಯಾದ ಇದು ಸಿಂಹದಂತೆ ಕಾಣುವುದು. ಆದರೆ ಅದರಂತೆ ಇದಕ್ಕೆ ಕೇಸರಗಳು ಇಲ್ಲ. ದುಂಡು ಮುಖ, ಚಿಕ್ಕ ತಲೆ. ಉದ್ದ ಬಾಲವಿರುವ ಇದರ ಕಣ್ಣುಗಳು ಬೆಂಕಿಯಂತೆ ಜಾಜ್ವಲ್ಯಮಾನವಾಗಿವೆ. ಕೆಂಪು ಮಿಶ್ರಿತ ಕಂದು ಬಣ್ಣದ ಪರ್ವತಸಿಂಹಗಳ ತೂಕ ಸುಮಾರು ೪೫ ಕೆ.ಜಿ. ಆದರೆ ಗಂಡು ಪರ್ವತಸಿಂಹಗಳು ೬೦ ಕೆ.ಜಿ.ಯ ವರೆಗೂ ತೂಕವಿರುವ ಉದಾಹರಣೆಗಳು ನಮಗೆ ದೊರೆಯುತ್ತವೆ. ಅಮೇರಿಕದ ಕಾಡಿನಲ್ಲಿ ಸಂಚರಿಸುವ ಪ್ರವಾಸಿಗರು ಇದರ ಹೆಸರು ಕೇಳಿದರೇ ಭಯಪಡುತ್ತಾರೆ. ಒಂದು ಕಾಲದಲ್ಲಿ ಭಾರಿ ಸಂಖ್ಯೆಯಲ್ಲಿ ದಕ್ಷಿಣ ಅಮೇರಿಕದ ಅರ್ಜೆಂಟಿನಾದಿಂದ ಪೆಟಗೋನಿಯಾದ ವರೆಗೂ ಹರಡಿದ್ದ ಇವುಗಳ ಸಂತತಿ ಮಾನವನ ಸತತ ಬೇಟೆಯಿಂದ ಈಗ ಕಡಿಮೆಯಾಗುತ್ತಿದೆ. ಈ ಪ್ರಾಣಿಗೆ ಎಲ್ಲ ರೀತಿಯ ಹವಾಗುಣವೂ ಒಗ್ಗುತ್ತದೆ.

ಪರ್ವತಸಿಂಹ ಕುಶಲಿಯಾದ ಬೇಟೆಗಾರ. ಹಗಲು ಹೊತ್ತಿನಲ್ಲಿ ಬೆಟ್ಟಗಳ ಮೇಲಿರುವ ಗುಹೆಯಲ್ಲಿ ಎತ್ತರದ ಬಂಡೆಗಳ ಮೇಲೆ ವಿಶ್ರಾಂತಿ ಪಡೆಯುವ ಇವು ಸಾಯಂಕಾಲದ ಅನಂತರ ಬೇಟೆಗೆ ಹೊರಡುತ್ತವೆ. ಬೇಟೆಯನ್ನು ಅರಸುತ್ತ ಇವು ನದಿಯನ್ನೂ ಈಜಿಕೊಂಡು ಹೋಗಬಲ್ಲವು. ಇವು ೨೦ ಮೈಲಿಗಳ ವರೆಗೂ ಈಜಬಲ್ಲವೆಂದು ಹೇಳುತ್ತಾರೆ.

ಮೊಲ, ಎಲ್ಕ್, ಜಿಂಕೆ, ಗಿಣಿಮಂದಿ, ಕಾಡುಕುರಿ ಮೊದಲಾದ ಪ್ರಾಣಿಗಳು ಪರ್ವತಸಿಂಹಕ್ಕೆ ಬಲಿಯಾಗುವವು. ಆದರೂ ಸಾಕುಪ್ರಾಣಿಗಳಾದ ದನ, ಕುರಿ, ಕುದುರೆ, ಹಂದಿಗಳನ್ನು ಇದು ಹಾರಿಸಿಕೊಂಡು ಹೋದ ನಿದರ್ಶನಗಳೂ ಇವೆ. ವಿವಿಧ ಬಗೆಯ ಹಕ್ಕಿಗಳನ್ನು ಇದು ಬೇಟೆಯಾಡಬಲ್ಲದು. ಸಿಂಹ, ಹುಲಿಗಳಂತೆ ಎರೆಯ ಸುಳಿ ಹಿಡಿದು ಸದ್ದಿಲ್ಲದೇ ಬಂದು ಎರಗಿ ಹಿಡಿಯುವ ಚಾಣಾಕ್ಷತನ ಇದಕ್ಕಿದೆ. ಇದು ತನ್ನ ಬೇಟೆಯನ್ನು ಒಮ್ಮೆಗೆ ತಿಂದು ಮುಗಿಸದೆ ಬಚ್ಚಿಟ್ಟಿದ್ದು ಅನಂತರ ಎರಡು ಮೂರು ದಿನ ತಿನ್ನುವುದೂ ಉಂಟು. ಕ್ಯಾಲಿಫೋರ್ನಿಯದ ನಿವಾಸಿಗಳು ಆಹಾರಕ್ಕಾಗಿ ಇದನ್ನು ಅವಲಂಬಿಸಿದ್ದರಂತೆ. ಹಸಿದ ಇಂಡಿಯನ್‌ರು ಇದರ ಸುಳಿವು ಹಿಡಿದು ಅದು ಬೇಟೆಯಾಡಿ ಬಚ್ಚಿಟ್ಟಿದ್ದ ಮಾಂಸವನ್ನು ಅಪಹರಿಸಿ ತಿನ್ನುತ್ತಿದ್ದರು.

ಪರ್ವತಸಿಂಹ ಕೇವಲ ನೆಗೆಯುವುದಷ್ಟೇ ಅಲ್ಲ, ಸುಮಾರು ೨೦ ಅಡಿಗಳವರೆಗೂ ಜಿಗಿಯಬಲ್ಲದು. ಮೇಲಿನಿಂದ ಬೀಳುವ ಭಯ ಅದಕ್ಕಿಲ್ಲ. ತನಗೆ

ಪೆಟ್ಟು ಮಾಡಿಕೊಳ್ಳದೇ ಇದು ೬೦ ಅಡಿಗಳ ವರೆಗೂ ಜಿಗಿಯಬಲ್ಲದೆಂದು ಹೇಳುತ್ತಾರೆ. ತುಂಬಾ ಶಕ್ತಿಶಾಲಿಯಾದ ಈ ಪ್ರಾಣಿ ತನಗಿಂತಲೂ ಹೆಚ್ಚು ಭಾರದ ಪ್ರಾಣಿಗಳನ್ನೂ ಎಳೆದೊಯ್ಯಬಲ್ಲುದು. ಜಾಗ್ವಾರ್ ಅನಂತರ ಗಾತ್ರದ ದೃಷ್ಟಿಯಿಂದ ಇದಕ್ಕೆ ಎರಡನೆಯ ಸ್ಥಾನ. ಹಾವು ಮುಂಗಸಿಯಂತೆ ಜಾಗ್ವಾರ್ ಮತ್ತು ಪರ್ವತಸಿಂಹಕ್ಕೆ ಬದ್ಧ ದ್ವೇಷ.

ಪರ್ವತಸಿಂಹದ ಹೆಸರು ಭಯವನ್ನು ಹುಟ್ಟಿಸುತ್ತದಾದರೂ ಮನುಷ್ಯ ಅದಕ್ಕೆ ಹೆದರಬೇಕಾಗಿಲ್ಲ. ಮನುಷ್ಯನ ಮೇಲೆ ಪರ್ವತಸಿಂಹಗಳು ತಾನಾಗಿಯೇ ಎರಗಿದ ಪ್ರಸಂಗಗಳು ತೀರ ಕಡಿಮೆ. ಮನುಷ್ಯ ಏನು ಮಾಡುತ್ತಾನೆ ಎನ್ನುವುದರ ಬಗ್ಗೆ ಇದಕ್ಕೆ ತುಂಬ ಕುತೂಹಲ. ಹಲವು ಬಾರಿ ಅವನನ್ನು ಹಿಂಬಾಲಿಸಿ ಹೋಗುವುದೂ ಉಂಟು. ಆದರೆ ತಿರುಗಿ ನೋಡಿ ಬಿಟ್ಟರೆ ಕಾಡಿನಲ್ಲಿ ಮಾಯವಾಗಿಬಿಡುವುದು.

ಸಾಕುಪ್ರಾಣಿಗಳನ್ನು ತಿನ್ನುವುದರಿಂದ ಜನರು ಈ ಪ್ರಾಣಿ ಸಿಕ್ಕರೆ ಸಾಕು, ಬೇಟೆಯಾಡಿ ಬಿಡುತ್ತಾರೆ. ಇದನ್ನು ಬೇಟೆಯಾಡಲು ಬೇಟೆನಾಯಿಗಳನ್ನೂ ಬಳಸುವುದುಂಟು. ಬೇರೆ ಹಾದಿಯೇ ಇಲ್ಲವೆಂದಾಗ ಮಾತ್ರ ಪರ್ವತಸಿಂಹ ಮರವನ್ನೇರಿ ಬೇಟೆಗಾರನಿಗೆ ಬಲಿಯಾಗುವುದು. ಪರ್ವತಸಿಂಹಗಳ ಬೇಟೆ ತುಂಬ ಜನಪ್ರಿಯವೆನಿಸಿದೆ. ಇಂಕಾ ದೊರೆಗಳು ಇವುಗಳನ್ನು ಬೇಟೆಯಾಡಿದ ಉಲ್ಲೇಖಗಳಿವೆ. ಬಿಳಿಯರು ಬರುವುದಕ್ಕಿಂತ ಮುಂಚಿತವಾಗಿ ಅಮೇರಿಕದಲ್ಲಿಯ ಮೂಲನಿವಾಸಿಗಳಿಗೂ ಇವುಗಳ ಬೇಟೆ ಮೋಜೆನಿಸಿತ್ತು.

ಪರ್ವತಸಿಂಹಗಳನ್ನು ಜನ ಸಾಕಿದ್ದನ್ನು ಅಲ್ಲಿ ಇಲ್ಲಿ ಕೇಳಿದ್ದೇವೆ. ಕೆಲವು ವರ್ಷಗಳ ಹಿಂದೆ ಉಟಾದಲ್ಲಿ ಒಬ್ಬ ಅರಣ್ಯಾಧಿಕಾರಿ ಪರ್ವತಸಿಂಹದ ಮರಿಯೊಂದನ್ನು ತಂದು ತನ್ನ ಮನೆಯಲ್ಲಿ ಸಾಕಿದ. ಅವನು ಮನೆಗೆ ಬಂದಾಗಲೆಲ್ಲ ಅದು ಬಾಲವನ್ನು ಅಲ್ಲಾಡಿಸುತ್ತ ಕುರ್ಚಿಯ ಬುಡದಲ್ಲಿ ಹೋಗಿ ಕುಳಿತುಕೊಳ್ಳುತ್ತಿತ್ತು. ಒಮ್ಮೊಮ್ಮೆ ಅವನ ಭುಜದ ಮೇಲೆ ಕುಳಿತುಕೊಂಡು ಪ್ರೀತಿ ಮತ್ತು ಸ್ನೇಹದಿಂದ ಅವನನ್ನು ಮೂಸಿ ನೋಡುತ್ತಿತ್ತು. ಆದರೆ ಅದು ಬಹಳ ದಿವಸ ಅವನ ಮನೆಯಲ್ಲಿ ಉಳಿಯಲಿಲ್ಲ. ಆತ ಮನೆಯಲ್ಲಿಲ್ಲದಾಗ ಮನೆಯಲ್ಲಿರುವ ರಗ್ಗು, ಗೋಡೆಯ ಮೇಲಿರುವ ಚಿತ್ರಗಳನ್ನೆಲ್ಲ ಹರಿದು ಚೂರು ಚೂರು ಮಾಡಿತ್ತು. ಆತ ಇದನ್ನು ಪ್ರಾಣಿಸಂಗ್ರಹಾಲಯಕ್ಕೆ ಕಳುಹಿಸಿದ. ಅಲ್ಲಿ ಇದನ್ನು ಬಂಧಿಸಿಡಲಾಯಿತು. ಸ್ವತಂತ್ರವಾಗಿ ತಿರುಗಾಡಿಕೊಂಡಿದ್ದ ಪರ್ವತಸಿಂಹಕ್ಕೆ ತುಂಬ ಕೋಪ ಬಂದಿತ್ತು. ಅದು ತನ್ನ ಹತ್ತಿರ ಯಾರನ್ನೂ ಸೇರಿಸುತ್ತಿರಲಿಲ್ಲ. ಯಾರಾದರೂ ಬಂದರೆ ಗರ್ಜಿಸುತ್ತಿತ್ತು. ಎರಡು ವರ್ಷಗಳ ಅನಂತರ ಅರಣ್ಯಾಧಿಕಾರಿ ತಾನು ಪ್ರಾಣಿಸಂಗ್ರಹಾಲಯಕ್ಕೆ ನೀಡಿದ ಪರ್ವತಸಿಂಹವನ್ನು ನೋಡಲು ಬಂದ. ಅದು ತುಂಬ ಕ್ರೂರವಾಗಿ ವರ್ತಿಸುತ್ತಿದೆಯೆಂದೂ ಅದರ ಹತ್ತಿರ ಹೋಗಕೂಡದೆಂದೂ ಪ್ರಾಣಿಸಂಗ್ರಹಾಲಯದ ಅಧಿಕಾರಿಗಳು ಎಚ್ಚರಿಸಿದರು. ಆದರೂ ಆತ ಪಂಜರದೊಳಗೆ ಪ್ರವೇಶಿಸಿದ. ಸುತ್ತಲಿನ ಅಧಿಕಾರಿಗಳಿಗೆ ಆಶ್ಚರ್ಯ ಕಾದಿತ್ತು. ಅದು ಅರಣ್ಯಾಧಿಕಾರಿಯ ಮೈಮೇಲೆ ಎರಗುವುದೆಂದು ಅವರು ಭಾವಿಸಿದ್ದರು. ಆದರೆ ಪರ್ವತಸಿಂಹ ತನ್ನ ಸ್ನೇಹಿತನನ್ನು ಮರೆತಿರಲಿಲ್ಲ. ಜಿಗಿದು ಆತನ ಭುಜದ ಮೇಲೆ ಕುಳಿತು ಎಂದಿನಂತೆ ಪ್ರೀತಿ, ಸ್ನೇಹದಿಂದ ಮೂಸತೊಡಗಿತು.

ಪರ್ವತಸಿಂಹಗಳ ಸಂತಾನೋತ್ಪತ್ತಿಗೆ ನಿರ್ದಿಷ್ಟ ಕಾಲವಿಲ್ಲ. ವರ್ಷದಲ್ಲಿ ಯಾವ ತಿಂಗಳಾದರೂ ಮರಿ ಹಾಕಬಲ್ಲದು. ಒಂದು ಸಲಕ್ಕೆ ೧ರಿಂದ ೬ ಮರಿಗಳನ್ನು ಹಾಕಬಹುದು. ಗರ್ಭ ಧರಿಸುವ ಕಾಲ ೯೦ ರಿಂದ ೯೬ ದಿವಸ. ಮರಿ ಹುಟ್ಟಿದಾಗ ೧೨ ಅಂಗುಲ ಉದ್ದ ಒಂದು ಪೌಂಡು ಭಾರ ಇರುತ್ತದೆ. ಹುಟ್ಟಿದ ಎರಡನೆಯ ಅಥವಾ ಒಂಬತ್ತನೆಯ ದಿನ ಮರಿಯು ಕಣ್ಣು ತೆರೆಯುತ್ತದೆ. ಮರಿಯ ಬಣ್ಣ ಹಳದಿ ಇದ್ದು ಅದರ ಮೇಲೆ ಕಪ್ಪು ಮಚ್ಚೆಗಳಿರುತ್ತವೆ. ಇವು ಆರು ತಿಂಗಳ ಅನಂತರ ಮಾಯವಾಗಿ ಬಿಡುತ್ತವೆ. ಒಂದು ಅಥವಾ ಎರಡು ವರ್ಷಗಳು ಆಗುವವರೆಗೂ ಅದು ತಾಯಿಯೊಂದಿಗೆ ಇರುತ್ತದೆ. ಅನಂತರ ಸ್ವತಂತ್ರ ಜೀವನ ನಡೆಸುವವು. ಪರ್ವತಸಿಂಹ ಸುಮಾರು ೨೦ ವರ್ಷ ಬದುಕಬಲ್ಲದು. ಇವುಗಳಲ್ಲಿ ೨೭ ಪ್ರಭೇಧಗಳನ್ನು ಪ್ರಾಣಿಶಾಸ್ತ್ರಜ್ಞರು ಗುರುತಿಸಿದ್ದಾರೆ. ನಶಿಸುತ್ತಿರುವ ಪರ್ವತಸಿಂಹಗಳನ್ನು ರಕ್ಷಿಸದಿದ್ದರೆ ಅವು ಮುಂದೆ ನಮಗೆ ನೋಡಲೂ ಸಿಗಲಾರವು. ✡



ಒಂದು ಮಾತು ಹೇಳ್ತೀನೆ
ಕೇಳಿ–ನಮ್ಮ ಕಂಪನಿಗೆ
ಉಳಿತಾಯ ಮಾಡಿಸಿದೆ;
"ಏನು" ಅಂತೀರಾ—
ಇಮಲ್ಶನ್ ಪೇಂಟ್‌ನಿಂದಾಗಿ
20% ಉಳಿತಾಯ—
"ಅದು ಹೇಗೆ"
ಅಂತೀರಾ—
ಸುಪರ್ ಡೆಕೋಪ್ಲಾಸ್ಟ್—
ಉತ್ತಮ ಇಮಲ್ಶನ್ ಫಿನಿಶ್
ತರುವ ಜಾಣ ಉಪಾಯ.
DECOPLAST
ಸುಪರ್
ಡೆಕೋಪ್ಲಾಸ್ಟ್
ಏಶಿಯನ್ ಪೇಂಟ್ಸ್



ಒರಿಸ್ಸಾದಲ್ಲಿಯ ಕೊಣಾರ್ಕ ಪುರಾತನ ಭಾರತೀಯ ಮಿಥುನಶಿಲ್ಪ, ವಾಸ್ತುಶಿಲ್ಪಗಳ ಆಗರವೆನಿಸಿದೆ. ಇಲ್ಲಿಯ ಸೂರ್ಯದೇವಾಲಯ ವಿಶ್ವವಿಖ್ಯಾತ. ಅಲ್ಲಿನ ಒಂದು ಮಿಥುನ ಶಿಲ್ಪವಿದು. ಗಂಡು-ಹೆಣ್ಣುಗಳು ಕೂಡುವುದಕ್ಕೆ ಕಾಮಕೇಳಿ ಎಂಬುದಕ್ಕಿಂತಲೂ ಹಿರಿದಾದ ಅರ್ಥವನ್ನಿಲ್ಲಿ ಕಾಣಬಹುದು. ಇಲ್ಲಿ ಹೆಣ್ಣು-ಗಂಡುಗಳು ಬಂಧದಲ್ಲೊಂದು ಮಿಲನಗೊಂಡು ತಮ್ಮ ಪ್ರತ್ಯೇಕ ಅಸ್ತಿತ್ವವನ್ನೇ ಮರೆತಂತೆ ಕಂಡರೂ ಅವುಗಳ ಮುಖಗಳಲ್ಲಿ ಮಾತ್ರ ಏನೋ ಒಂದು ಸಾಕ್ಷಾತ್ಕಾರವನ್ನು ಅನುಭವಿಸುತ್ತಿರುವಂತಹ ಭಾವನೆ ಒಂದು ಎಳೆಯಲ್ಲಿ ಉಳಿದುಹೋಗಿರುವುದು ಕಂಡಿದೆ.

ಮಾನವ ದೇಹದ ಹುಲುಸಾದ ಬೆಳೆ

ಡಾ. ಮಯೂರ ಮಡಿಯಾಲ

ಅನಾದಿ ಕಾಲದಿಂದಲೂ ಮಾನವನು ಕೇಶ ಶೃಂಗಾರ ಮತ್ತು ಕೇಶಸಂಪತ್ತಿಗೆ ಅತಿ ಹೆಚ್ಚಿನ ಪ್ರಾಮುಖ್ಯವನ್ನು ಕೊಡುತ್ತಿದ್ದಾನೆ. ಕಾವ್ಯಗಳಲ್ಲೂ ವಿವಿಧ ರೀತಿಯ ಕೇಶಶೃಂಗಾರಗಳನ್ನು ವರ್ಣಿಸುತ್ತಾರೆ. ಲೇಖಕರು. ಕವಿಗಳು. ಸ್ತ್ರೀಯರನ್ನು ವರ್ಣಿಸುವಾಗ ಕೇಶಾಲಂಕಾರ ಮತ್ತು ಕೇಶಸಂಪತ್ತುಗಳ ವಿಷಯದಲ್ಲಿ ಅತಿ ಎಚ್ಚರಿಕೆಯನ್ನು ವಹಿಸುತ್ತಾರೆ. ಉದುರುತ್ತಿರುವ, ನೆರೆಯುತ್ತಿರುವ ಕೂದಲು. ಬಕ್ಕವಾಗುತ್ತಿರುವ ತಲೆ ಇವು ಸದಾ ಕಾಲವೂ ಕೆಲವರನ್ನು ಚಿಂತಿಸುವಂತೆ ಮಾಡುತ್ತಿದ್ದರೆ ಅದನ್ನೇ ಬಂಡವಾಳವನ್ನಾಗಿ ಮಾಡಿ ಅನೇಕ ವ್ಯಾಪಾರಿ ಸಂಸ್ಥೆಗಳು. ವಿವಿಧ ರೀತಿಯ ಕೇಶವರ್ಧಕ ತೈಲ. ಶಾಂಪೂ ಹಾಗೂ ಬಣ್ಣಗಳ ಹೆಸರಿನಿಂದ ಅಪಾರವಾಗಿ ಹಣವನ್ನೂ ಗಳಿಸುತ್ತಿವೆ.

ಚರ್ಮದಲ್ಲಿರುವ ರೋಮಕೂಪಗಳಿಂದ ಉತ್ಪತ್ತಿಯಾಗುವ ಒಂದು ಚರ್ಮಾಂಗವೇ ಕೂದಲು. ದೇಹದಲ್ಲಿ ಸುಮಾರು ಐವತ್ತು ಲಕ್ಷಗಳಷ್ಟು ರೋಮಕೂಪಗಳಿದ್ದು ಅವುಗಳಲ್ಲಿ ಸುಮಾರು ಒಂದು ಲಕ್ಷದಷ್ಟು ತಲೆಯಲ್ಲಿಯೇ ಅಡಕವಾಗಿವೆ. ಅಂಗೈ, ಪಾದ ಮತ್ತು ಜನನೇಂದ್ರಿಯದ ಕೆಲವು ಭಾಗಗಳನ್ನು ಬಿಟ್ಟರೆ ದೇಹದ ಇತರೆಲ್ಲ ಭಾಗಗಳಲ್ಲೂ ಕೂದಲುಗಳಿವೆ. ಸುಮಾರು ಎಂಟನೆಯ ವಾರದಲ್ಲೇ ಗರ್ಭಸ್ಥ ಶಿಶುವಿನ ದೇಹದಲ್ಲಿ ರೋಮಕೂಪಗಳು ಉತ್ಪತ್ತಿಯಾಗುತ್ತವೆ. ಮಗು ಬಾಹ್ಯಜಗತ್ತಿಗೆ ಬಂದ ನಂತರ ಈ ರೋಮಕೂಪಗಳ ಸಂಖ್ಯೆಯಲ್ಲಿ ವೃದ್ಧಿಯಾಗುವುದಿಲ್ಲ. ಪ್ರಾಣಿಗಳಿಗೆ ಕೂದಲು ದೇಹದ ಉಷ್ಣತೆಯನ್ನು ಕಾಪಾಡುವುದಕ್ಕೆ ಸಹಾಯ ಮಾಡುತ್ತದೆಯಾದರೂ ಮಾನವರಿಗೆ ಅಂತಹ ಯಾವ ಪ್ರಯೋಜನಗಳೂ ಕೂದಲಿನಿಂದ ಕಂಡು ಬರುವುದಿಲ್ಲ.

ರೋಮಕೂಪಗಳು ಉತ್ಪತ್ತಿಯಾದೊಡನೆಯೇ ಪ್ರತಿ ರೋಮಕೂಪವೂ ತನ್ನ ಬೆಳವಣಿಗೆ (Anogen) ನಶಿಸುವಿಕೆ (Calogen) ಹಾಗೂ ಸುಪ್ತಾವಸ್ಥೆ (Telogen), ಎಂಬ ಮೂರು ಮುಖ್ಯ ಅವಸ್ಥೆಗಳಲ್ಲಿ ಬದಲಾಗುತ್ತಲೇ ಇರುತ್ತದೆ. ಪ್ರತಿ ತಲೆಗೂದಲಿನ ಅನೋಜನ್ ಸುಮಾರು ನಾಲ್ಕು ವರ್ಷಗಳಷ್ಟು ಕೆಟೋಜನ್ ಸುಮಾರು ಎರಡು ವಾರಗಳಷ್ಟು ಟೆಲೋಜನ್ ಮೂರು ತಿಂಗಳುಗಳಷ್ಟು ಆಗಿರುತ್ತದೆ. ಈ ರೀತಿಯಾಗಿ ಕೆಲವು ಕೂದಲುಗಳು ಉದುರುತ್ತಲೂ ಅದೇ ರೋಮಕೂಪಗಳಿಂದ ಹೊಸ ಕೂದಲುಗಳು ಉತ್ಪತ್ತಿಯಾಗುತ್ತಲೂ ಇರುತ್ತವೆ. ತನ್ನ ಬೆಳವಣಿಗೆಯ ಸಮಯದಲ್ಲಿ ತಲೆಕೂದಲು ಪ್ರತಿ ಮೂರು ದಿನಗಳಿಗೆ ಒಂದು ಮಿಲಿ ಮೀಟರಿನಂತೆ ಬೆಳೆಯುತ್ತಿರುತ್ತದೆ.

ಮಗುವು ಹುಟ್ಟಿದೊಡನೆ ಅದರ ಹೆಚ್ಚಿನ ರೋಮಕೂಪಗಳೂ ಟೆಲೋಜನ್ ಅವಸ್ಥೆಗೆ

ಮಾರ್ಪಡುವುದರಿಂದ ಮಗುವಿಗೆ ಸುಮಾರು ಮೂರು ತಿಂಗಳಾಗುವಾಗ ಹೆಚ್ಚಿನ ಕೂದಲುಗಳು ಉದುರಿಹೋಗುವುದಿದೆ. ಆದರೆ ಕೆಲವು ದಿನಗಳಲ್ಲೇ ಪುನಃ ಹೊಸ ಕೂದಲು ಬೆಳೆಯಲಾರಂಭಿಸಿ ಪೂರ್ವಸ್ಥಿತಿಗೇ ಬರುವುದು. ಹೆಚ್ಚಿನ ತಾಯಂದಿರು ತಮ್ಮ ಮಗುವಿನ ಕೂದಲು ಉದುರುವುದು ಎಂದು ಭಯಪಡಬೇಕಾಗಿಲ್ಲ.

ಬಸುರಿಯಲ್ಲಿ ಸುಮಾರು ಮೂರು ತಿಂಗಳ ಬಳಿಕ ಹೆಚ್ಚಿನ ರೋಮಕೂಪಗಳೂ ಅನೋಜನ್‌ಗಳಾಗಿ ಮಾರ್ಪಡುತ್ತವೆ. ಆದರೆ ಹೆರಿಗೆಯಾದೊಡನೆಯೇ ಪುನಃ ಟೆಲೋಜನ್‌ಗಳ ಸಂಖ್ಯೆ ಹೆಚ್ಚಾಗುವುದರಿಂದ ಹೆರಿಗೆಯ ಬಳಿಕ ಮೂರು ನಾಲ್ಕು ತಿಂಗಳಲ್ಲಿ ತನ್ನ ಕೂದಲು ಅಧಿಕ ಸಂಖ್ಯೆಯಲ್ಲಿ ಉದುರುವುದನ್ನು ಸ್ತ್ರೀಯರು ಗಮನಿಸಬಹುದು. ಆದರೆ ಅವರು ಸಾಮಾನ್ಯವಾಗಿ ಬಕ್ಕತಲೆಯವರಾಗಿ ಕಾಣಿಸುವುದಿಲ್ಲ. ಹೆರಿಗೆಯಾಗುವಾಗ ಉಂಟಾಗುವ ರಕ್ತಸ್ರಾವವೂ ಇದಕ್ಕೆ ಒಂದು ಕಾರಣವಾಗಿರಬಹುದು.

ಬಕ್ಕ ತಲೆ

ವಯಸ್ಸು ಹೆಚ್ಚಿದಂತೆ ಕೆಲವು ರೋಮಕೂಪಗಳು ನಶಿಸುವುದರಿಂದ ಕ್ರಮೇಣ ತಲೆಯಲ್ಲಿರುವ ಕೂದಲುಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತದೆ. ಹೆಚ್ಚಾಗಿ ನೆತ್ತಿಯಲ್ಲಿ ಕೂದಲು ನಶಿಸುವುದರಿಂದ ಬಕ್ಕ ತಲೆಯುಂಟಾಗುತದೆ. ಬಕ್ಕ ತಲೆ ಉಂಟಾಗುವ ಪ್ರಾಯ ಮತ್ತು ವೇಗದಲ್ಲಿ ವ್ಯತ್ಯಾಸಗಳಿದ್ದು ಹೆಚ್ಚಾಗಿ ಇದು ಅನುವಂಶಿಕವಾಗಿ ಬರುವುದೂ ಇದೆ. ಎಷ್ಟೇ ಬಕ್ಕ ತಲೆಯವರಾದರೂ ಅವರ ತಲೆಯಲ್ಲಿ ಕೂದಲು ಸಂಪೂರ್ಣವಾಗಿ ಇಲ್ಲವೆಂದಾಗುವುದಿಲ್ಲ. ಎಂದಿನಂತೆ ದಪ್ಪ ಹಾಗೂ ಉದ್ದ ಕೂದಲುಗಳ ಬದಲಿಗೆ ಅತಿ ಸಣ್ಣ ಸೂಕ್ಷ್ಮವಾದ ಮೃದು ಕೂದಲುಗಳು ಹುಟ್ಟಿಬರುತ್ತವೆ. ಮಹಿಳೆಯರ ಕೂದಲ ವೃದ್ಧಾಪ್ಯದಲ್ಲಿ ಇದೇ ರೀತಿಯ ಬದಲಾವಣೆ ಹೊಂದುವುದಿದ್ದರೂ ಅವರು ಪುರುಷರಂತೆ ತೀರಾ ಬೋಳು ತಲೆಯವರಾಗುವುದಿಲ್ಲ.

ನೆರೆಗೂದಲು

ಬಕ್ಕ ತಲೆಯಂತೆಯೇ ಇದೂ ಅನುವಂಶಿಕವಾಗಿ ಬರುವುದಿದೆ. ಸಾಮಾನ್ಯವಾಗಿ ನಾಲ್ಕನೆಯ ದಶಕದಲ್ಲಿ ಪ್ರಾರಂಭವಾಗುವ ಈ ನರೆ ಕೂದಲಿಗೆ ಕೂದಲಿರುನಲ್ಲಿರುವ ಮೆಲನಿನ್ ಎಂಬ ಬಣ್ಣದ ವರ್ಣಜನಕದ ಪ್ರಮಾಣ ಕಡಿಮೆಯಾಗುವುದೇ ಕಾರಣವಾಗಿದೆ. ಸಾಮಾನ್ಯವಾಗಿ ಇದು ವೃದ್ಧಾಪ್ಯದ ಕುರುಹು ಆಗಿದ್ದರೂ ಕೆಲವೊಮ್ಮೆ ಅತಿ ಚಿಕ್ಕ ಪ್ರಾಯದಲ್ಲೂ ಈ ರೀತಿಯಾಗುವುದನ್ನು ಕಾಣಬಹುದು. ಪರ್ನೀಶಿಯಸ್ ಅನೀಮಿಯಾ ಎಂಬ ರಕ್ತಹೀನತೆಯ ರೋಗವೂ ನರೆಕೂದಲನ್ನುಂಟುಮಾಡುವುದಿದ್ದು ಎಳೆ ವಯಸ್ಸಿನಲ್ಲೇ ಇದು ಕಾಣಿಸಿಕೊಳ್ಳಬಹುದು. ಆದರೆ ಅಂತಹ ರೋಗಿಗಳಿಗೆ ಜೀವಸತ್ವಗಳನ್ನು ಕೊಟ್ಟಾಗ ಪುನಃ ಅವರ ಕೂದಲು ಮೊದಲಿನ ಕಪ್ಪು ಬಣ್ಣಕ್ಕೆ ತಿರುಗುತ್ತದೆ.

ವಿವಿಧ ರೋಗಗಳು ಮತ್ತು ಕೂದಲು

ತೀವ್ರವಾದ ಜ್ವರದಿಂದ ಚೇತರಿಸಿಕೊಳ್ಳುವವರ, ತೀವ್ರವಾದ ರಕ್ತಸ್ರಾವವಾದ ಬಳಿಕ, ಕೆಲವೊಂದು ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವವರ ತಲೆಗೂದಲು ಕೆಲವು ಬಾರಿ ಅತಿಯಾಗಿ ಉದುರುವುದಿದೆ. ಆದರೆ ಎರಡು ಅಥವಾ ಮೂರು ತಿಂಗಳುಗಳಲ್ಲಿ ಅವರು ಮೊದಲಿನಂತೆ ಕೂದಲನ್ನು ಪಡೆಯುತ್ತಾರೆ. ರಕ್ತದಲ್ಲಿ ಕಬ್ಬಿಣದ ಅಂಶ ಕಡಿಮೆಯಾಗಿ ರಕ್ತಹೀನತೆ ಉಂಟಾದಾಗ, ರಕ್ತಸ್ರಾವದ ಬಳಿಕ ಹಾಗೂ ರಕ್ತದಾನದ ಬಳಿಕ ಬಕ್ಕ ತಲೆಯವರಂತೆ ಕಾಣಿಸಬಹುದು. ಆದರೆ ಸೂಕ್ತ ಕಬ್ಬಿಣದಂಶದೊಡಗೂಡಿದ ಚಿಕಿತ್ಸೆ ತೆಗೆದುಕೊಂಡೊಡನೆಯೇ ಇದು ಗುಣವಾಗುತ್ತದೆ. ಕೆಲವು ಬಾರಿ ನಿರ್ನಾಳಗ್ರಂಥಿಗಳ ರೋಗಗಳಲ್ಲಿ, ಉದಾಹರಣೆಗೆ ಥೈರಾಯ್ಡ್ ಗ್ರಂಥಿಯು ತನ್ನ ಕೆಲಸವನ್ನು ಕಡಿಮೆಗೊಳಿಸಿದಾಗ ಕೂದಲು ಉದುರುವುದಿದ್ದರೆ, ಇತರ ರೋಗಗಳ ಚಿಕಿತ್ಸೆಗಾಗಿ ಬಳಸಲ್ಪಡುವ ಕೆಲವು ಔಷಧಿಗಳೂ ಕೂದಲು ಉದುರುವಿಕೆಗೆ ಕಾರಣವಾಗಬಹುದು. ಹೆಪಾರಿನ್, ಸೈಕ್ಲೋಫೋಸ್ಫಮೈಡ್, ವಾರ್ಫರಿನ್, ಮೆಥೋಟೆಕ್ಸೇಟ್. ಮೊದಲಾದ ಔಷಧಿಗಳು ಇವುಗಳ ಪೈಕಿ ಮೊದಲ ಸ್ಥಾನದಲ್ಲಿವೆ. ತೀವ್ರ ಕ್ಷ–ಕಿರಣ (Deep X ray) ಚಿಕಿತ್ಸೆಗಳೂ ಬಕ್ಕ

ತಲೆಯನ್ನುಂಟುಮಾಡಬಲ್ಲದು.

ಕೆಲವು ಬಾರಿ ತಲೆ, ಗಡ್ಡ, ಹುಬ್ಬು ಮೊದಲಾದೆಡೆಗಳಲ್ಲಿ ಅಲ್ಲಲ್ಲಿ ಬೋಳಾಗುವುದು ಕಂಡುಬರುತ್ತದೆ. ಬೋಳಾದ ಭಾಗದ ಚರ್ಮ ಇತರ ಭಾಗದ ಚರ್ಮದಂತೆಯೇ ಆರೋಗ್ಯವಾಗಿದ್ದು ಸಣ್ಣ ಸಣ್ಣ ಕೂದಲುಗಳು ಆಶ್ಚರ್ಯಸೂಚಕ ಚಿಹ್ನೆಗಳಂತೆ ಅಲ್ಲಲ್ಲಿ ಗೋಚರಿಸುತ್ತವೆ. ಶೇಕಡಾ ೫ರಿಂದ ೧೦ ಮಂದಿಯಲ್ಲಿ ಈ ಕಾಯಿಲೆ ಮುಂದುವರಿದು ತಲೆಯ, ಕೆಲವೊಮ್ಮೆ ದೇಹದ ಎಲ್ಲ ಕೂದಲುಗಳೂ ಉದುರುವುದಿದೆ. ಕಾರ್ಟಿಕೋಸ್ಟಿರಾಯ್ಡ್‌ಗಳೆಂಬ ಔಷಧಿಯನ್ನು ಆಧುನಿಕವಾದ ಸೂಚಿರಹಿತ ಕ್ರಮದಲ್ಲಿ (Jet injection method) ಅಂತಹ ಭಾಗಗಳಿಗೆ ಹಚ್ಚಿದಾಗ ಕೆಲವು ಬಾರಿ ವಾಸಿಯಾಗುವುದೂ ಇದೆ.

ಹಸುಳೆಯರ ತಲೆಗೂದಲು, ತಲೆ ಮತ್ತು ದಿಂಬುಗಳು ಒಂದನ್ನೊಂದು ತಗಲುವುದರಿಂದ ಉಂಟಾಗುವ ಘರ್ಷಣೆಯಿಂದಾಗಿ ಉದುರಲೂ ಬಹುದು. ಅಂತೆಯೇ ಹೆಚ್ಚು ಬಲವಾಗಿ ಬಿಗಿಯಾಗಿ ಕೂದಲನ್ನು ಎಳೆದು ಅಲಂಕರಿಸಿಕೊಳ್ಳುವುದರಿಂದಲೂ (ಉದಾ: ಕುದುರೆ ಜುಟ್ಟು) ಕೂದಲು ಉದುರುವ ಸಾಧ್ಯತೆಗಳಿವೆ. ಯಾವಾಗಲೂ ಶಿರಸ್ತ್ರಾಣ, ಟೋಪಿಗಳನ್ನು ಧರಿಸುವುದರಿಂದಲೂ ಬಕ್ಕ ತಲೆಯವರಾಗಬಹುದು.

ಕೇಶರಕ್ಷಣೆ ಹೇಗೆ?

ವೃತ್ತಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ ಸದಾ ನಾನಾ ರೀತಿಯ ಕೇಶವರ್ಧಕ ಎಣ್ಣೆ, ಶಾಂಪೂಗಳ ವಿಚಾರವಾಗಿ ನಾವು ಕೇಳುತ್ತಿರುತ್ತೇವೆ. ಕೆಲವು ಶಾಂಪೂಗಳು ಕೇಶವರ್ಧಕ ಪ್ರೊಟೀನುಗಳಿಂದ ಕೂಡಿವೆ ಎಂದು ಪ್ರಸಿದ್ಧವಾದರೆ ಕೆಲವು ತಲೆಯ ಹೊಟ್ಟು ನಿವಾರಕ ಎಂದು ಪ್ರಸಿದ್ಧವಾಗಿವೆ. ಆದರೆ ವೈಜ್ಞಾನಿಕವಾಗಿ ಈ ಪ್ರೊಟೀನ್ ಶಾಂಪೂಗಳು ಕೂದಲ ಬೆಳವಣಿಗೆಯನ್ನು ಹೆಚ್ಚಿಸುತ್ತವೆ ಎಂದು ಪ್ರಮಾಣಿತವಾದರೂ ಹೊಟ್ಟು ನಿವಾರಿಸುವುದರಲ್ಲಿ ಕೆಲವು ಯಶಸ್ವಿಯಾಗುತ್ತವೆ.

ಈ ತಲೆ ಹೊಟ್ಟು ನಿವಾರಕ ಶಾಂಪೂಗಳಲ್ಲಿ ಜಿಂಕ್ ಪೈರಿಥಿಯೋನ್ ಅಥವಾ ಸೆಲನಿಯಂ ಸಲ್ಫೈಡ್ ಎಂಬ ರಾಸಾಯನಿಕಗಳಿರುತ್ತವೆ.

ಪೂರ್ವ ಕಾಲದಿಂದಲೂ ನೆರೆಗೂದಲನ್ನು ಕೃತಕ ಬಣ್ಣಗಳ ಸಹಾಯದಿಂದ ಕಪ್ಪುಗೊಳಿಸುವ ಪ್ರಯತ್ನ ನಡೆಯುತ್ತಲೇ ಇದೆ. ಈಗೀಗ ಕೂದಲ ಬಣ್ಣ ಬದಲಾವಣೆಯು ಒಂದು ಫ್ಯಾಶನ್ನು ಆಗಿದೆ. ಬಣ್ಣಗಳಲ್ಲಿ ತಾತ್ಕಾಲಿಕ ಮತ್ತು ದೀರ್ಘಕಾಲಿಕವಾಗಿ ಉಳಿಯುವಂತಹ ಎರಡು ವಿಧಗಳಿವೆ. ತಾತ್ಕಾಲಿಕ ಬಣ್ಣಗಳು ಸ್ನಾನ ಮಾಡಿದೊಡನೆಯೇ ತೊಳೆದು ಹೋಗುತ್ತವೆ. ದೀರ್ಘಕಾಲಿಕ ಬಣ್ಣಗಳು ಕೆಲವು ವಾರಗಳಷ್ಟಾದರೂ ಉಳಿಯುತ್ತವೆ. ಆದರೆ ದೀರ್ಘಕಾಲಿಕ ಬಣ್ಣಗಳಲ್ಲಿರುವ ಪಾರಫಿನಲಿಯಮೈನ್ ಎಂಬ ರಾಸಾಯನಿಕವು ಕೆಲವೊಮ್ಮೆ ಅಲರ್ಜಿಯನ್ನು ಉಂಟುಮಾಡುತ್ತದೆ.

ಬಿಳಿ ಕೂದಲನ್ನು ಕಪ್ಪುಗೊಳಿಸಲು ಕೆಲವರು ಭಗೀರಥ ಪ್ರಯತ್ನ ನಡೆಸಿದರೆ ಇನ್ನು ಕೆಲವರು ಕಪ್ಪು ಕೂದಲಿನ ಸ್ವಾಭಾವಿಕ ಬಣ್ಣವನ್ನು ತೆಗೆಯಲೂ ಪ್ರಯತ್ನಿಸುತ್ತಾರೆ.

ಹೈಡ್ರೋಜನ್‌ಪೆರಾಕ್ಸೈಡ್, ಅಮೋನಿಯಾ ಮತ್ತು ಮಿಥಲೀನ್ ಬ್ಲೂಗಳ ಸಹಾಯದಿಂದ ಕೂದಲಿನ ಸ್ವಾಭಾವಿಕ ಬಣ್ಣವನ್ನು ತೆಗೆಯಬಹುದು. ಆದರೆ ಬಹು ಬಾರಿ ಈ ವಿಧಾನವನ್ನು ಬಳಸಿದ ಕೂದಲು ತನ್ನ ಮೃದುತ್ವವನ್ನು ಕಳೆದುಕೊಂಡು ಹಸಾಗಿ ಕೊನೆಗೆ ನಾಶವಾಗುತ್ತದೆ.

ಫ್ಯಾಶನ್ ಬದಲಾದಂತೆ ಕೂದಲನ್ನು ಬೇರೆ ಬೇರೆ ಆಕಾರಗಳಲ್ಲಿರಿಸಲು ಅಲ್ಲಲ್ಲಿ ತಿರುವುಗಳನ್ನು ಕೊಡುತ್ತಾರೆ. ಇನ್ನು ಕೆಲವರು ಇದಕ್ಕಾಗಿ ಕೆಲವು ದ್ರಾವಕಗಳನ್ನು ಬಳಸುತ್ತಾರೆ. ಅದರಲ್ಲಿರುವ ಥಿಯೋಗ್ಲೈಕೋಲಿಕ್ ಆಸಿಡ್ ತೀವ್ರತರವಾದ ಅಲರ್ಜಿಗಳನ್ನು ಉಂಟುಮಾಡುವುದಿಲ್ಲವಾದರೂ ಅವುಗಳನ್ನು ದೀರ್ಘಕಾಲ ಬಳಸಿದರೆ ಬೇರೆ ದುಷ್ಪರಿಣಾಮಗಳುಂಟಾಗಬಹುದು.

ಈ ರೀತಿ ಕೂದಲು ಕೆಲವರಿಗೆ ಸಂಪತ್ತು ಆಗಿದ್ದರೆ ಕೆಲವರಿಗೆ ಸದಾ ಚಿಂತನೆಗೆ ಆಧಾರವಾಗುತ್ತದೆ. ಹಲವರಿಗೆಸಂಪಾದನೆಗೆ ವಿವಿಧ ರೀತಿಯ ದಾರಿಗಳನ್ನು ತೋರಿಸಿಕೊಡುತ್ತದೆ.

ಸಮ್ಮರಿ ಅಸೆಸ್‌ಮೆಂಟ್ ಯೋಜನೆಯು ನಿಮಗೆ

ಬೇಗ ಹಾಗೂ ಸುಲಭ ಆದಾಯ ತೆರಿಗೆ ಅಸೆಸ್‌ಮೆಂಟ್ ನೀಡುತ್ತದೆ

- ❁ ಆದಾಯ ತೆರಿಗೆ ಕಚೇರಿಗೆ ನೀವು ಹಾಜರಾಗುವಂತೆ ಯಾವ ನೋಟೀಸುಗಳೂ **ಬೇಕಿಲ್ಲ !**
- ❁ ನಿಮ್ಮ ಅಕೌಂಟ್ ಪುಸ್ತಕಗಳನ್ನು ಆಯುಕರ ಅಧಿಕಾರಿಗಳೆದುರು ಹಾಜರುಪಡಿಸುವಂತೆ ಯಾವ ಸಮನ್‌ಗಳೂ ಬೇಕಿಲ್ಲ !!
- ❁ ಅವಶ್ಯಕವೆನಿಸಿದ ಕಾಯಿದೆಗೆ ಸಂಬಂಧಿಸಿದ ವಿಷಯಗಳ ಹೊಂದಾಣಿಕೆ ಅಥವಾ ಗಣಿತದ ತಪ್ಪುಗಳೇನಾದರೂ ಇದ್ದರೆ ಸರಿಪಡಿಸುವುದನ್ನುಳಿದು ರಿಟರ್ನ್‌ನಲ್ಲಿ ನೀವು ಘೋಷಿಸಿದ ಆದಾಯಕ್ಕೆ ಹೆಚ್ಚಿಗೆ ಏನನ್ನೂ ಸೇರಿಸಬೇಕಿಲ್ಲ !!!

  ಈ ರೀತಿ ನಿಮ್ಮ ತೆರಿಗೆ ನಿರ್ಧಾರವಾಗಬೇಕು ಎಂದು ನೀವು ಖಂಡಿತ ಬಯಸುವಿರಿ.

ಇದಕ್ಕಾಗಿ ನೀವು ಮಾಡಬೇಕಾದ್ದು ಇಷ್ಟೆ :

- ❁ ನಿಮಗೆ ಅನ್ವಯಿಸುವ ಗೊತ್ತುಪಡಿಸಿದ ಫಾರಂನಲ್ಲಿ ಎಲ್ಲ ವಿಧದಿಂದಲೂ ಸಂಪೂರ್ಣವಾದ **ರಿಟರ್ನ್ ನೀಡಿ.**
- ❁ ರಿಟರ್ನ್‌ನ ವಿವಿಧ ಭಾಗಗಳಲ್ಲಿ ಹಾಗೂ ಅನುಬಂಧಗಳಲ್ಲಿ ನಿಮ್ಮ ಆದಾಯಕ್ಕೆ ಸಂಬಂಧಿಸಿದ ಸಂಪೂರ್ಣ ಹಾಗೂ ಸರಿಯಾದ ವಿವರಗಳನ್ನು **ನೀಡಿ.**
- ❁ ಟ್ರೇಡಿಂಗ್/ಮ್ಯಾನುಫ್ಯಾಕ್ಚರಿಂಗ್ ಅಕೌಂಟ್, ಲಾಭ ಮತ್ತು ನಷ್ಟಗಳ ಅಕೌಂಟ್, ಆಯವ್ಯಯ ಪಟ್ಟಿ ಮುಂತಾದವುಗಳನ್ನು ನಿಮ್ಮ ರಿಟರ್ನ್ ಜೊತೆ **ಲಗತ್ತಿಸಿ.**
- ❁ ಮೂಲದಲ್ಲಿ ಹಿಡಿದುಕೊಂಡ ತೆರಿಗೆಯ ಸರ್ಟಿಫಿಕೇಟ್, ಅಡ್ವಾನ್ಸ್ ಟ್ಯಾಕ್ಸ್ ಮತ್ತು ಸ್ವಯಂ ನಿರ್ಧಾರಿತ ತೆರಿಗೆ ಪಾವತಿ ಮಾಡಿದ ಚಲನ್‌ಗಳ ದ್ವಿಪ್ರತಿಗಳು, ಕಂಪಲ್ಸರಿ ಡಿಪಾಸಿಟ್ ನೀಡಿದ ರಶೀತಿಗಳು, ಜೀವವಿಮಾ ಕಂತುಗಳನ್ನು ಕಟ್ಟಿದ ವಿವರಗಳು ಮುಂತಾದವುಗಳನ್ನು ನಿಮ್ಮ ರಿಟರ್ನ್ ಜೊತೆ **ಲಗತ್ತಿಸಿ.**

  ತೆರಿಗೆಯ ಚಿಂತೆಯಿಂದ ಸುರಕ್ಷಿತವಾಗಿರಲು ಸಂಪೂರ್ಣ ಹಾಗೂ ಸರಿಯಾದ ರಿಟರ್ನ್ ನೀಡಿ.

ಇವರಿಂದ ಪ್ರಕಟಿತ:
ದಿ ಡೈರೆಕ್ಟರ್ ಆಫ್ ಇನ್‌ಸ್ಪೆಕ್ಷನ್
(ರಿಸರ್ಚ್, ಸ್ಟೇಟಿಸ್ಟಿಕ್ಸ್ ಆ್ಯಂಡ್ ಪಬ್ಲಿಕೇಶನ್)
ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್,
ನ್ಯೂ ಡೆಲ್ಲಿ-೧೧೦ ೦೦೧.
davp 78/157



ಅಣುಸ್ಫೋಟಕ್ಕೆ ಒಂದು ಸಾಕ್ಷಿ

ನಾವು ಎಂತಹ ಜಗತ್ತಿನಲ್ಲಿ ಬದುಕಿದ್ದೇವೆ? ೨೦ನೇ ಶತಮಾನ ಹಿಂದೆಂದೂ ಸಾಧಿಸಲಾರದ ಪ್ರಗತಿಯನ್ನು ಸಾಧಿಸಿದೆಯೆಂದು ಹೇಳುತ್ತಾರೆ. ಆದರೆ ಅದೇ ಸುಸಂಸ್ಕೃತ ಜನಾಂಗ ಎರಡು ಭೀಕರ ಯುದ್ಧಗಳನ್ನು ಹಾಗೂ ಹಿರೋಷಿಮಾದಲ್ಲಿ ಸಾವಿರಾರು ನಿರ್ದೋಷ ಪುರುಷ, ಸ್ತ್ರೀ ಮತ್ತು ಮಕ್ಕಳನ್ನು ನಾಶಗೊಳಿಸಿದ ಪ್ರಥಮ ಅಣುಸ್ಫೋಟವನ್ನು ಕಂಡಿದೆ. ಆದರೆ ಅಣು ಸ್ಫೋಟದ ನಂತರ ಅಳಿದುಳಿದ ಜನಾಂಗದ ದುರಂತ ಕಥೆ ಕರುಣಾಜನಕ. ಅಂತಹ ಅಳಿದುಳಿದ ಒಬ್ಬಳಾದ 'ಯಾಕೊ ಅಹೇರಾ' ಎಂಬುವರು ಭಾರತ ದೇಶಕ್ಕೆ ಬಂದು ಇಲ್ಲಿಯ ಭಾರತೀಯ ಸಂಗೀತ ಸಂಸ್ಕೃತಿಯನ್ನು ಅಭ್ಯಸಿಸಿ ಮೆಚ್ಚಿ ತನ್ನ ದೇಶಕ್ಕೆ ಮರಳುತ್ತಾರೆ. ಅವರ ಭಾರತದಲ್ಲಿನ ಸಂಗಾತಿ ಶ್ರೀಮತಿ ಶೋಭಾ ಮೊದಲಿಯಾರ್ ಎಂಬುವರು 'ಟೆಸ್ಟಿಮನಿ ಟು ದಿ ಸೆಂಚುರಿ' ಎಂದು ನಿರೂಪಿಸಿರುವ ಸತ್ಯಕಥೆ ಇದು.

ಮೂಲ : ಶೋಭಾ ಮೊದಲಿಯಾರ್
ಅನು : ಚ. ವ. ಅ. ಶಾಸ್ತ್ರಿ

ಅಂದು ಆರು ಘಂಟೆಯ ಸಮಯ. ಯಾಕೋಳ ಮನಸ್ಸಿನಲ್ಲಿ ಏನೋ ವ್ಯಥೆ ಇರುವುದನ್ನು ಹಾಗೂ ಕಣ್ಣುಗಳಲ್ಲಿ ಕಾಂತಿ ಇಲ್ಲದುದನ್ನು ಗಮನಿಸಿದ ನಾನು ಆಕೆಯ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಲೋಸುಗ ಪ್ರಶ್ನೆಯನ್ನು ಹಾಕಿದೆ. "ಯಾಕೊ. ನಿನ್ನ ಬಾಲ್ಯದಲ್ಲಿನ ಅತಿ ಸವಿಯಾದ ಘಟನೆಯೊಂದಾದರೂ ನಿನಗೆ ನೆನಪಿದ್ದರೆ ಹೇಳು-ವೆಯಾ?" ಆದರೆ ನನ್ನ ಊಹೆಗೆ ವಿರುದ್ಧವಾಗಿ ತಕ್ಷಣ ಅವಳ ಕಡೆಗೆ ನನ್ನೊಡನೆ ಇದ್ದ ಎಲ್ಲ ಗೆಳತಿಯರ ಗಮನ ಸೆಳೆಯಿತು. ಅದಕ್ಕೆ ಸರಿಯಾಗಿ ಊಟದ ಘಂಟೆ ಬಾರಿಸಿದುದರಿಂದ ನಾವೆಲ್ಲರೂ ಊಟದ ಮನೆಗೆ ಹೊರಟೆವು. ನಾನು ಯಾಕೋಳ ಪಕ್ಕದಲ್ಲಿಯೇ ನಡೆದೆ. ಆದರೆ ಅವಳ ಮನಸ್ಸನ್ನು ಹೆಚ್ಚು ಕಲಕಬಾರದೆಂದು ಮತ್ತೆ ನಾನು ಪ್ರಶ್ನಿಸಲಿಲ್ಲ. ನಮ್ಮ ಊಟ ಸದ್ದಿಲ್ಲದೆಯೇ ಮುಗಿಯಿತು. ನಂತರ ಪ್ರತ್ಯೇಕ ಕೆಲಸವಿದ್ದುದರಿಂದ ನಾನು ಹೊರಗೆ ಹೋದೆ. ವಾಪಸ್ಸು ಬರುವ ವೇಳೆಗೆ ಯಾಕೋ ಆಗಲೇ ನಿದ್ರಿಸುತ್ತಿದ್ದಳು. ನಾನು ಸಹ ಬಟ್ಟೆ ಬದಲಾಯಿಸಿ ಹಾಸಿಗೆಯಲ್ಲಿ ಉರುಳಿದೆ. ಆದರೆ ತಕ್ಷಣ ನಿದ್ದೆ ಬರಲಿಲ್ಲ. ಕಿಟಕಿಯ ಹೊರಗೆ ಪ್ರಶಾಂತವಾದ ವಾತಾವರಣವಿತ್ತು. ಬೇವಿನ ಮರದ ತಂಪಾದ ಗಾಳಿ ಬೀಸುತ್ತಿತ್ತು. ನಾನು ಯಾಕೋ ಹೇಳಿದ್ದ ಮಾತುಗಳನ್ನೇ ಮೆಲುಕು ಹಾಕುತ್ತಾ ಕಣ್ಣು ಮುಚ್ಚಿದೆ.

ನನಗೆ ಯಾವಾಗ ನಿದ್ರೆ ಹತ್ತಿತೋ ಗೊತ್ತಿಲ್ಲ. ನಾನು ಸುಮಾರು ೨ ಗಂಟೆಗಳಷ್ಟು ನಿದ್ರಿಸಿರಬಹುದು. ಭೀಕರ ವಾತಾವರಣವನ್ನು ಭೇದಿಸಿ ಕಿರುಚಿದ ಶಬ್ದವೊಂದು ನನ್ನ ಕಿವಿಗೆ ಬಿದ್ದು ಭಯದಿಂದ ನಡುಗಿ ಎದ್ದು ಹಾಸಿಗೆಯ ಮೇಲೆ ಕುಳಿತೆ. ಯಾಕೋ ತನ್ನ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

"ಯಾಕೊ ಏನಾಯಿತು?" ಎಂದೆ. ಅದಕ್ಕೆ ಅವಳು, "ನನಗೆ ಭಯಂಕರವಾದ ಕನಸು ಬಿತ್ತು. ದಯವಿಟ್ಟು ನನಗೊಂದು ನಿದ್ರೆ ಬರಿಸುವ ಮಾತ್ರೆ ತಂದು ಕೊಡುವೆಯಾ?" ಎಂದಳು. ಕೆಲವು ನಿಮಿಷಗಳಲ್ಲಿಯೇ ನಾನು ಮಾತ್ರೆಯನ್ನು ತಂದುಕೊಟ್ಟೆ. ೧೦ ನಿಮಿಷಗಳಲ್ಲಿ ಮತ್ತೆ ಅವಳು ನಿದ್ರೆ ಹೋದಳು.

ಮರುದಿನ ಬೆಳಗ್ಗೆ ನಾವು ತಿಂಡಿ ತಿಂದು ಹಾಗೆಯೇ ಹಾಸ್ಟೆಲಿನ ಹೊರ ಗೇಟಿನ ಬಳಿ ತಂಪಾದ ಕೊಳವೊಂದರ ಪಕ್ಕದಲ್ಲಿ ಕುಳಿತೆವು. ಅವಳು ತುಂಬಾ ವ್ಯಸನದಿಂದ ನುಡಿದಳು. "ನಿನ್ನೆ ರಾತ್ರಿ ನಿನ್ನನ್ನು ನಾನು ತುಂಬಾ ಗಾಬರಿಪಡಿಸಿರಬೇಕು. ಆದರೆ ನನ್ನ ಕಥೆಯನ್ನು ಕೇಳಿದಲ್ಲಿ ಅದರ ಕಾರಣವನ್ನು ನೀನು ಊಹಿಸಬಹುದು. ನನ್ನ ಕಥೆಯನ್ನು ಕೇಳಲು ತೊಂದರೆಯಾಗುವುದೆ?"

"ಇಲ್ಲ" ಎಂದು ಅವಳ ಮೃದುವಾದ ಕೈ ಹಿಡಿದು "ಹೇಳು" ಎಂದೆ. ಅವಳು ಮುಖ ತುಂಬಿದ ಸ್ವರ

ಯಿಂದ ಹೇಳಲಾರಂಭಿಸಿದಳು:

“ಅಂದು ಆಗಸ್ಟ್ ೬. ೧೯೪೫. ಅಂದು ನನ್ನ ಜನ್ಮ ದಿನ. ಎಲ್ಲ ಮಕ್ಕಳಂತೆ ಜನ್ಮದಿನ ಆಚರಿಸಲು ನನಗೆ ತುಂಬಾ ಸಂತೋಷ. ನನ್ನ ಅಮ್ಮ ಸಣ್ಣ ಪಾರ್ಟಿಗಾಗಿ ಕೇಕ್ ಬೇಯಿಸುತ್ತಿದ್ದಳು. ನಾನು ನನ್ನ ಉತ್ಸಾಹದಲ್ಲಿ ಅವಳಿಗೆ ಸಹಾಯ ಮಾಡಲೋಸುಗ ಓಡಾಡುತ್ತಿದ್ದೆ. ನನ್ನ ಅಕ್ಕ ಅಕಿ ಒಳಗೆ ಬಂದಳು. ನಮ್ಮದು ಚಿಕ್ಕ ಸಂಸಾರ. ನಾನು ಮತ್ತು ೧೩ ವರ್ಷದ ಅಕಿ, ನಮ್ಮ ತಂದೆ ಮತ್ತು ತಾಯಿ ಹಿರೋಶಿಮಾದಲ್ಲಿನ ಸಣ್ಣ ಸ್ಕೂಲಿನಲ್ಲಿ ಕೆಲಸಮಾಡುತ್ತಿದ್ದರು.

“ನನ್ನ ತಾಯಿ ಹೇಳಿದಳು. ಯಾಕೋ ಇಂದು ನಿನ್ನ ಜನ್ಮದಿನ ಅಲ್ಲವೆ? ಬಾ. ಹೋಗಿ ದೇವರನ್ನು ಪ್ರಾರ್ಥಿಸೋಣ. ಇಂದು ನೀನು ಏನನ್ನು ಬಯಸುತ್ತೀಯೋ ಅದು ನಿಜವಾಗುವುದು. ಈ ಕ್ರೂರ ಯುದ್ಧ ನಿಲ್ಲಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ.’

“ನನಗೆ ತುಂಬಾ ಹೆಮ್ಮೆ ಹಾಗೂ ಸಂತೋಷವಾಯಿತು. ನಾವು ಮನೆಯಿಂದ ಹೊರಗೆ ಬಂದೆವು. ಅಂದು ವಾತಾವರಣ ತುಂಬಾ ಪ್ರಶಾಂತವಾಗಿತ್ತು. ನಾನು ಓಡಿಹೋಗಿ ಅಕಿಯನ್ನು ಪ್ರೀತಿಯಿಂದ ಅಪ್ಪಿಕೊಂಡೆ. ದೇವಾಲಯಕ್ಕೆ ಹೋಗಿ ನಮ್ಮ ಪ್ರಾರ್ಥನೆಯನ್ನು ಸಲ್ಲಿಸಿದೆವು. ಆಗ ಸುಮಾರು ಬೆಳಗಿನ ೮ ಘಂಟೆ ಆಗಿರಬಹುದು.

“ತಕ್ಷಣ ಎಲ್ಲ ವಾತಾವರಣ ಬದಲಾಯಿತು. ಸೂರ್ಯನಿಗಿಂತ ಸುಮಾರು ಇಪ್ಪತ್ತರಷ್ಟು ಪ್ರಕಾಶಮಾನವಾದ ಬೆಳಕೊಂದು ಕಾಣಿಸಿದಂತಾಗಿ ಕಿವಿ ಕಿತ್ತುಹೋಗುವಷ್ಟು ಭಯಂಕರವಾದ ಶಬ್ದ ಕೇಳಿಸಿತು. ಅದು ಮಾನವನು ಪ್ರಥಮ ಬಾರಿಗೆ ಸ್ಫೋಟಿಸಿದ ಪರಮಾಣು ಬಾಂಬ್ ಆಗಿತ್ತು.

“ಅದಾದ ಸ್ವಲ್ಪ ಹೊತ್ತಿಗೆ ಮತ್ತೆ ನಿಶಬ್ದವಾಯಿತು. ಆದರೆ ಎಲ್ಲೆಲ್ಲೂ ಗಲಿಬಿಲಿ ಹಾಗೂ ಅಸ್ತವ್ಯಸ್ತತೆ ಕಾಣಿಸಿತು. ಭಾರಿ ಪ್ರಮಾಣದ ಬೆಂಕಿ ಆಕಾಶದವರೆಗೂ ಪ್ರಜ್ವಲಿಸಿ ನೀಲಿ ಆಕಾಶವನ್ನು ಕೆಂಪಾಗಿ ರಂಜಿಸಿತು. ಎಲ್ಲೆಲ್ಲಿಯೂ ಚೀರಾಟ ಕೇಳಿ ಬಂತು. ನಾನು ನೋವು ಮತ್ತು ಗಾಬರಿಯಿಂದ ಸ್ತಬ್ಧಳಾದೆ. ನನ್ನ ಕಣ್ಣುಗಳಿಂದ [illegible]. ನನ್ನ ಅಕಿ ನನ್ನೆಡೆಗೆ ಎರಡೂ ಕೈಗಳನ್ನು ಚಾಚಿ ಓಡಿ ಬಂದು ತಕ್ಷಣ ನನ್ನನ್ನು ಅವಳ ಬೆನ್ನ ಮೇಲೆ ಕೂಡಿಸಿಕೊಂಡು ನೂರಾರು ಜನಗಳೊಂದಿಗೆ ಸುರಕ್ಷಿತ ಸ್ಥಳಕ್ಕೆ ಓಡಲಾರಂಭಿಸಿದಳು.

“ಜಡವಾಗಿದ್ದ ನನ್ನ ಪ್ರಜ್ಞೆಗೆ ಪ್ರತಿಯೊಂದೂ ಭಯಾನಕ ವೇಗದಲ್ಲಿ ನಡೆಯುತ್ತಿರುವಂತೆ ತೋರುತ್ತಿತ್ತು. ಬಾಂಬ್ ಸ್ಫೋಟಿಸಿದ ಸ್ಥಳದಿಂದ ದಪ್ಪವಾದ ಹೊಗೆಯಿಂದ ಸೂರ್ಯ ಮುಚ್ಚಲ್ಪಟ್ಟು ಬೆಳಕು ಮಾಯವಾಗಿ ಅಂಧಕಾರ ಕವಿದಿತ್ತು. ನಾವು ಆಗ ಸ್ಫೋಟವಾದ ಸ್ಥಳದಿಂದ ಸುಮಾರು ಎರಡು ಕಿಲೊಮೀಟರ್ ದೂರದಲ್ಲಿದ್ದೆವು. ನನ್ನ ಎಡಗೈ, ಬಲಗಾಲು ಹಾಗೂ ಕುತ್ತಿಗೆಯ ಹಿಂಭಾಗಗಳಲ್ಲಿ ಸಣ್ಣ ಸುಟ್ಟ ಗಾಯಗಳಾಗಿದ್ದವು. ನಾವು ಸ್ವಲ್ಪ ಸುರಕ್ಷಿತವೆನಿಸಿದ ಸ್ಥಳಕ್ಕೆ ಬಂದ ಮೇಲೆ ನನ್ನ ಅಕ್ಕ ನನ್ನನ್ನು ಕೆಳಗಿಳಿಸಿ ತಬ್ಬಿಕೊಂಡಳು. ನಾವು ನಮ್ಮ ತಂದೆ ತಾಯಿಗಳಿಗಾಗಿ ಚಡಪಡಿಸತೊಡಗಿದೆವು. ನಾನು ನನ್ನ ಅಕ್ಕನ ತೋಳತೆಕ್ಕೆಯಲ್ಲಿ ನಿದ್ರೆಹೋದೆ.

“ಸ್ವಲ್ಪ ಹೊತ್ತಿನಲ್ಲೇ ನಮ್ಮ ತಂದೆ ತಾಯಿಗಳು ನಮ್ಮಲ್ಲಿಗೆ ಬಂದರು. ನಾವು ಅವರನ್ನು ಅಪ್ಪಿಕೊಂಡೆವು. ನಾವು ಕೆಲವೇ ಗಂಟೆಗಳಷ್ಟು ಬೇರ್ಪಟ್ಟಿದ್ದರೂ ಅದು ನಮಗೆ ವರ್ಷಗಳಂತಾಗಿತ್ತು.

“ನನ್ನ ತಾಯಿ ಅಡಿಗೆ ಮನೆಯಲ್ಲಿ ಕೇಕ್ ಮಾಡುತ್ತಿದ್ದ ವೇಳೆಗೆ ಅಣು ಸ್ಫೋಟದ ಪರಿಣಾಮದಿಂದಾಗಿ ಮೈಮೇಲೆ ಅಲ್ಲಲ್ಲಿ ಸ್ವಲ್ಪ ಗಾಯಗಳಾಗಿದ್ದವು. ನನ್ನ ತಂದೆ ಅದೃಷ್ಟವಶಾತ್ ಸಾವಿನಿಂದ ಪಾರಾಗಿದ್ದರೂ ಸಹಾ ಅವರು ತುಂಬಾ ಕಾಯಿಲೆಯಿಂದ ಬಳಲಿದವರಂತೆ ಕಾಣುತ್ತಿದ್ದರು. ನಾವು ಸಾಯದೆ ಮತ್ತೆ ಒಟ್ಟಿಗೆ ಬದುಕಿದ್ದಕ್ಕೆ ದೇವರಿಗೆ ಮನದಲ್ಲಿಯೇ ನಮಿಸಿದೆವು.

“ಆ ರಾತ್ರಿ ನಾವೆಲ್ಲ ಒಂದೇ ರೂಮಿನಲ್ಲಿ ಮಲಗಿದೆವು. ನಾನು ನನ್ನ ಅಕ್ಕಳನ್ನು ತಬ್ಬಿಕೊಂಡು ಮಲಗಿದ್ದೆ. ಮರುದಿನ ಬೆಳಗಾದಂತೆ ನಾನು ಮೃದುವಾಗಿ ನನ್ನ ಅಕ್ಕಳನ್ನು ಕರೆದೆ. ‘ಅಕಿ’ ಎಂದೆ. ಉತ್ತರ ಬರಲಿಲ್ಲ. ಗಾಬರಿಯಿಂದ ‘ಅಕೀ’ ಎಂದು ಕಿರುಚಿದೆ. ಅವಳು ಆ ವೇಳೆಗೆ ಆಗಲೇ ಅವಳು ಸತ್ತುಹೋಗಿದ್ದಳು. ನನಗೆ ದುಃಖ ತಡೆಯಲಾರದಷ್ಟಾಯಿತು. ನನ್ನ ತಂದೆ [illegible]

ದರು. ಜೊತೆಗೆ ಅವರಿಗೆ ವಾಂತಿ ಮತ್ತು ರಕ್ತ ಸ್ರಾವವಾಗಿ ಗಂಟಲು ಸಹ ಊದಿಕೊಂಡು ಒಂದು ತೊಟ್ಟು ನೀರೂ ಕುಡಿಯದಂತಾಯಿತು. ಅವರೂ ಸಹ ಸುಮಾರು ೧೧ ದಿನಗಳ ನಿರಂತರ ನೋವಿನಿಂದ ಬಳಲಿ ನಮ್ಮನ್ನಗಲಿ ಹೋದರು.

"ಒಂದು ರೀತಿಯ ಜಡತ್ವ ಉಂಟಾದಂತಾಗಿ ನನ್ನ ನಡಿಗೆ ಹಾಗೂ ಚಲನವಲನಗಳು ತುಂಬಾ ನಿಧಾನವಾದವು. ನನ್ನ ತಾಯಿ ತಲೆ ಬಾಚಿದಾಗ ಹಿಡಿಹಿಡಿಯಾಗಿ ಕೂದಲು ಉದುರುವುದಕ್ಕೆ ಶುರು ವಾಯಿತು.

"ಮುಂದೆ ಕಳೆದ ದಿನಗಳು ತುಂಬಾ ದುಃಖಮಯ ಹಾಗೂ ಭಯಂಕರವಾಗಿದ್ದವು. ನಾನು ಆಗಾಗ ನನ್ನ ಅಕ್ಕನನ್ನು ನೆನೆದು ಅಳುತ್ತಿದ್ದೆ. ನನ್ನ ತಂದೆ ಮತ್ತು ಅಕ್ಕನೊಂದಿಗೆ ಕಳೆದ ಸವಿದಿನಗಳನ್ನು ನೆನೆದು ಅನೇಕ ವೇಳೆ ಬಿಕ್ಕಿ ಬಿಕ್ಕಿ ಅತ್ತೆ. ಆದರೆ ನನ್ನ ನೆನಪೂ ಶೂನ್ಯವಾದಂತೆ ಕಂಡಿತು. ನನ್ನ ಪ್ರಶಸ್ತವಾದ ಬಾಲ್ಯ ಈ ರೀತಿಯಾಗಿ ನಿಶ್ಚೇತವಾಗತೊಡಗಿತ್ತು.

"ನಾನು ಮತ್ತು ನನ್ನ ತಾಯಿ ಬಾಳ ಪಥವನ್ನು ಮುಂದುವರಿಸಿದೆವು. ನನಗೆ ಸಂಗೀತದಲ್ಲಿ ಅತೀವ ಉತ್ಸಾಹ ಇರುವುದನ್ನು ಕಂಡು ನನ್ನ ತಾಯಿ ನನಗೆ ಪಿಯಾನೋ ಪಾಠಗಳನ್ನು ಹೇಳಿಸಲಾರಂಭಿಸಿದಳು. ನಾನು ಬೆಳೆದಂತೆ ಸಂಗೀತ ನನ್ನ ಬಾಳಿನ ಮೇಲೆ ಪರಿಣಾಮ ಬೀರಿ ನನ್ನ ಮನಸ್ಸನ್ನು ದ್ವೇಷ, ಕ್ರೌರ್ಯ ಹಾಗೂ ಯುದ್ಧಗಳ ಘರ್ಷಣೆಯಿಂದ ಶಾಂತಿ ಹಾಗೂ ಆನಂದದೆಡೆಗೆ ಕೊಂಡೊಯ್ದಿತ್ತು. ನನ್ನ ಗಾಯದ ಗುರುತುಗಳು ಮಾಯವಾಗಿ ತಾಯಿಯ ಪ್ರೀತಿಯ ಶುಶ್ರೂಷೆಯಿಂದಾಗಿ ತಲೆಗೂದಲು ಮತ್ತೆ ಬೆಳೆಯಲಾರಂಭಿಸಿತು. ನನ್ನ ತಾಯಿ ಮಾತ್ರ ಆಗಾಗ್ಗೆ ಹೆದರಿ ಅನೇಕ ದುಷ್ಪರಿಣಾಮಗಳಿಂದ ನರಳುತ್ತಲೇ ಇದ್ದಳು.

"ನಾನು ೧೯ನೇ ವರ್ಷಕ್ಕೆ ಹಿರೋಷಿಮಾದಲ್ಲಿ ಹೈಸ್ಕೂಲ್ ಮುಗಿಸಿ ಟೋಕಿಯೋ ವಿಶ್ವವಿದ್ಯಾಲಯದಿಂದ ಸಂಗೀತ ಮತ್ತು ಕಲೆಯಲ್ಲಿ ಡಿಗ್ರಿ ಪಡೆದೆ. ನನಗೆ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ತುಂಬಾ ಆಸಕ್ತಿಯುಂಟಾಯಿತು. ಅದನ್ನು ಕಲಿಯಲೋಸುಗ ಶ್ರಮಿಸಿದೆ. ನಾನೀಗ ಭಾರತ ಸರ್ಕಾರದ ಸ್ಕಾಲರ್‌ಶಿಪ್ ಪಡೆದು ನಿಮ್ಮೊಡನಿದ್ದೇನೆ."

ಇಷ್ಟು ಹೇಳಿ ಯಾಕೋ ತನ್ನ ದುರಂತ ಕಥೆಯನ್ನು ನಿಲ್ಲಿಸಿದಳು. ನಂತರ ಸಣ್ಣ ಕಲ್ಲೊಂದನ್ನು ಕೊಳಕ್ಕೆ ಎಸೆದಳು. ನೀರಿನಲ್ಲಿ ಅಲೆಗಳು ಹೊರಟು ತೇಲಿ ತೇಲಿ ದಡ ಸೇರಿದವು. ಅದನ್ನೇ ನೋಡುತ್ತಾ ಅವಳು ಹೇಳಿದಳು, "ಅಣುಸ್ಫೋಟದಿಂದ ಉಳಿದುಳಿದಿರುವ ಜನಾಂಗ ತುಂಬಾ ಅಪಾಯಕಾರಿಯಾದ ಕಾಯಿಲೆ, ಕ್ಷಯ ಇವುಗಳಿಂದ ನರಳುವ ಸಂಭವವಿದೆ. ಆದ್ದರಿಂದ ಸತತವಾಗಿ ನಾವು ಆಗಾಗ ವೈದ್ಯಕೀಯ ಪರೀಕ್ಷೆಗೆ ಒಳಗಾಗುತ್ತಿರಬೇಕು ಎಂದು ಡಾಕ್ಟರ್ ಹೇಳಿದ್ದಾರೆ."

ಅವಳ ಸುಂದರವಾದ ಮೃದುವಾದ ಅಚ್ಚ ಬಿಳುಪಿನ ಮುಖದತ್ತ ನೋಡಿದೆ. ಯಾವಾಗಲೂ ನಗುನಗುತ್ತಲೇ ಇರುತ್ತಿದ್ದಳು. ಈಗ ಮಾತ್ರ ಅವಳು ತನ್ನ ಮನಸ್ಸನ್ನು ಮುದುರಿಸಿದ್ದನ್ನು ಗಮನಿಸಿದೆ. ತಾನು ಕೈಗೊಂಡಿರುವ ಕಾರ್ಯವನ್ನು ನಡೆಸಲೋಸುಗ ಇಷ್ಟೊಂದು ನಿರ್ಧಾರದಿಂದ ನಡೆಯುತ್ತಿರುವ ಇವಳ ಮನಸ್ಸನ್ನು ಶ್ಲಾಘಿಸಿದೆ. ಯಾವ ಕ್ಷಣದಲ್ಲಾದರೂ ಕ್ಷಯರೋಗಕ್ಕೆ ತುತ್ತಾಗಬಹುದೆಂದು ತಿಳಿದಿದ್ದರೂ ಅದನ್ನು ಯಾಕೋ ಮನಸ್ಸಿಗೆ ತಂದುಕೊಳ್ಳುತ್ತಿರಲಿಲ್ಲ. ಇದು ನನಗೆ ಆಶ್ಚರ್ಯವಾಗಿ ತೋರುತ್ತಿತ್ತು."

ಕೆಲ ದಿನಗಳ ನಂತರ ಯಾಕೋ ಒಂದು ಮೋಟಾರ್ ಬೈಕ್ ಕೊಂಡುಕೊಂಡು ಎರಡೇ ದಿನಕ್ಕೆ ಅದನ್ನು ನಡೆಸುವುದನ್ನು ಕಲಿತಳು. ನಾವಿಬ್ಬರೂ ಅನೇಕ ಬಾರಿ ವಿಶಾಲವಾದ ಮೌಂಟ್ ರೋಡಿನಲ್ಲಿ ಹೋಗಿ ಹಾಗೆಯೇ ಮೆರೀನ್ ಬೀಚ್‌ನಲ್ಲಿ ಇಳಿದು 'ಸುಂಡಾಲ್' ಮತ್ತು 'ಮುರುಕ್ಕು'ಗಳ ರುಚಿಯನ್ನು ಸವಿಯುತ್ತಾ ಹರಟುತ್ತಾ ಕಾಲ ಕಳೆದೆವು. ಅವಳು ಬಂದ ಹೊಸದರಲ್ಲಿ ಭಾರತೀಯ ಅಡಿಗೆಯ ರುಚಿಗೆ ಹೊಂದಿಕೊಳ್ಳಲು ಕಷ್ಟಪಟ್ಟರೂ ಸ್ವಲ್ಪೇ ದಿನಗಳಲ್ಲಿ ಅದಕ್ಕೆ ಹೊಂದಿಕೊಂಡಳು. ಅನೇಕ ವೇಳೆ ಹೋಟೆಲ್ 'ದಾಸಪ್ರಕಾಶ್'ಗೆ ಹೋದಾಗ ಅಲ್ಲಿಯ ಫಿಲ್ಟರ್ ಕಾಫಿ ಮತ್ತು ಮಸಾಲೆ ದೋಸೆಯ ರುಚಿ ಸವಿಯದೆ ಬರುತ್ತಿರಲಿಲ್ಲ.

ಅವಳು ಸೆಂಟ್ರಲ್ ಕಾಲೇಜ್ ಆಫ್ ಕರ್ನಾಟಕ್ ಮ್ಯೂಸಿಕ್‌ನಲ್ಲಿ ವೀಣೆ ಅಭ್ಯಾಸ ಮಾಡಿದಳು. ಹಾಗೂ ಶ್ರೀ ಕಲ್ಯಾಣ ಕೃಷ್ಣ ಭಾಗವತರ್ ಅವ

ರಿಂದ ಶಿಕ್ಷಣ ಪಡೆದಳು. ಜೊತೆಗೆ ತಂಬೂರಿ ಹಾಗೂ ಮೃದಂಗವನ್ನು ಸಹ ಕಲಿತಳು. ಅವಳಿಗೆ ಮೃದಂಗ ಕಲಿಸಿದ ಗುರುಗಳು ಸುಮಾರು ೪೦ ಮೈಲಿ ದೂರದ ಹಳ್ಳಿಯಿಂದ ಬರಬೇಕಿತ್ತು. ಅನೇಕ ವೇಳೆ ಆಯಾಸದಿಂದ ಬಳಲಿ ಮರದ ನೆರಳಿನಲ್ಲಿ ಕಲ್ಲನ್ನೇ ತಲೆದಿಂಬಾಗಿ ಮಾಡಿ ನಿದ್ರಿಸುತ್ತಿದ್ದರೂ ಸಹ ಯಾಕೊ ಓಡಿ ಬಂದೊಡನೆಯೇ ಜಿಗಿದೆದ್ದು ಹಾರುತ್ತಿದ್ದ ಪುಳಿ ಜುಟ್ಟನ್ನು ಕಟ್ಟಿ ಹೆಗಲಿನ ವಸ್ತ್ರವನ್ನು ಸೊಂಟಕ್ಕೆ ಬಿಗಿದು ಮೃದಂಗವನ್ನು ಬಾರಿಸತೊಡಗುತ್ತಿದ್ದರು. ಅವಳು ಎಲ್ಲವನ್ನು ಅಚ್ಚುಕಟ್ಟಾಗಿ ಕಲಿತು ಅವರನ್ನು ಆಶ್ಚರ್ಯಪಡಿಸುತ್ತಿದ್ದಳು.

ಅವಳು ವೀಣೆ ಕಾರ್ಯಕ್ರಮ ಕೊಡುವ ದಿನ ಬಂತು. ಅವಳು ಅಂದು ನನ್ನನ್ನು ಕರೆದು, "ಬಾ, ಮಯಲಾಪುರದಲ್ಲಿರುವ ಕಪಿಲೇಶ್ವರ ದೇವಸ್ಥಾನಕ್ಕೆ ಹೋಗಿ ಬರೋಣ, ನಾಳೆ ನಡೆಯುವ ನನ್ನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ನಾನು ಪೂಜೆ ಮಾಡಿಸಬೇಕು" ಅಂದಳು. ನಾನು ಅವಳತ್ತ ನೋಡಿ ನಕ್ಕೆ.

ಅವಳು ಸುಂದರವಾದ ಸೀರೆಯುಟ್ಟು ಹಣೆಗೆ ಕುಂಕುಮವಿಟ್ಟು ತಲೆಗೆ ಹೂ ಮುಡಿದು ನೇಪಾಳಿ ಸ್ತ್ರೀಯಂತೆ ಕಂಡಳು. ನಾನು ಆಗ ಅವಳನ್ನು ಯಾವ ತೊಂದರೆಯೂ ಇಲ್ಲದೆ ದೇವಸ್ಥಾನದ ಒಳಕ್ಕೆ ಕರೆದೊಯ್ದೆ. ಅವಳು ಬುಟ್ಟಿಯೊಂದರಲ್ಲಿ ಹಣ್ಣು, ಕಾಯಿ, ಹೂವು ಕರ್ಪೂರ ಮುಂತಾದ ಪೂಜಾ ಸಾಮಗ್ರಿಗಳನ್ನು ಹಿಡಿದು ಮುಂದೆ ನಡೆದು ಅರ್ಚಕರಿಗೆ ಕೊಟ್ಟಳು. ಅರ್ಚಕರು ಕೇಳಿದರು, "ಹೆಸರೇನು?"

"ಲಕ್ಷ್ಮಿ" ನಾನು ತಕ್ಷಣ ಹೇಳಿದೆ; "ಗೋತ್ರ?" "ವಿಷ್ಣು" ನಾನು ಸುಳ್ಳು ಹೇಳಿದೆ. ನನ್ನಲ್ಲೇ ನನಗೆ ನಗು ಬಂತು. ಇದಾವುದನ್ನೂ ಗಮನಿಸದೆ ಯಾಕೊ ಮಾತ್ರ ನಿಷ್ಕಲವಾದ ಮನಸ್ಸಿನಿಂದ ಭಗವಂತನನ್ನು ಪ್ರಾರ್ಥಿಸುತ್ತಿದ್ದಳು.

ವೀಣೆ ಕಚೇರಿಯ ದಿನದಂದು ಅವಳಿಗೆ ಸ್ವಲ್ಪ ಭಯವುಂಟಾಗಿತ್ತು. ಅವಳು ಅಂದು ಅಚ್ಚ ಬಿಳುಪು ಹಾಗೂ ಕೆಂಪು ಸೆರಗಿನ ಸಿಲ್ಕ್ ಸೀರೆಯನ್ನುಟ್ಟಿದ್ದಳು. ಅವಳು ರಿಹರ್ಸಲ್ ಮಾಡುವಂತೆ, "ನಾನೀಗ ಬಾರಿಸುವ ಸಂಗೀತ ಭಾರತೀಯರು ನುಡಿಸಿದಂತಿದೆಯೊ ಅಥವಾ ವಿದೇಶಿಯರು ನುಡಿಸಿದಂತಿದೆಯೊ ಹೇಳು ನೋಡೋಣ" ಅಂದಳು. ನಾನು ನಗುತ್ತ ಹೇಳಿದೆ. ನನ್ನ ಒಪ್ಪಿಗೆಯ ಅವಶ್ಯಕತೆ ಇರಲಿಲ್ಲ. ಅವಳ ಕಛೇರಿ ಬಹುಜನರಿಗೆ ಮೆಚ್ಚಿಗೆಯಾಯಿತು.

ಅವಳು ಮದ್ರಾಸಿನಲ್ಲಿದ್ದ ಸುಮಾರು ಎರಡು ವರ್ಷದಲ್ಲಿ ಅನೇಕ ಬಾರಿ ತ್ಯಾಗರಾಜರು ಸಮಾಧಿ ಹೊಂದಿದ ಕಿರುವಾಯೂರ್ ಎಂಬಲ್ಲಿ ನಡೆಯುತ್ತಿದ್ದ ಕರ್ನಾಟಕ ಸಂಗೀತ ಸಮ್ಮೇಳನಕ್ಕೆ ತಪ್ಪದೇ ಹೋಗುತ್ತಿದ್ದಳು. ಅವಳಿದ್ದ ಎರಡು ವರ್ಷದ ಕಾಲ ಭಾರತದ ಅನೇಕ ಕಡೆ ಹೋಗಿ ಬಂದು ಭಾರತದಲ್ಲಿದ್ದ ಪ್ರತಿ ಕ್ಷಣವನ್ನು ಅವಳು ಆನಂದಿಸುತ್ತಿದ್ದಳು. ಎರಡು ವರ್ಷಗಳು ಎರಡು ಕ್ಷಣದಂತೆ ಕಳೆದು ಅವಳು ಜಪಾನಿಗೆ ಹಿಂದಿರುಗುವ ಕಾಲ ಬಂದಿತು.

ಯಾಕೋ ಜಪಾನಿಗೆ ಹೋಗಿ ೧೫ ದಿನಗಳ ನಂತರ ಅವಳಿಂದ ಪತ್ರ ಬಂದಿತ್ತು; "ಎಲ್ಲವೂ ಮಾಮೂಲಿನಂತೆಯೇ ಇದೆ. ನನ್ನ ತಾಯಿ ಮಾತ್ರ ಮತ್ತಷ್ಟು ವಯಸ್ಸಾದಂತೆ ಕಾಣುತ್ತಿದ್ದಾಳೆ. ನಾನು ನಿನ್ನನ್ನು ಮತ್ತು ನಿನ್ನ ದೇಶವನ್ನು ಅನೇಕ ಬಾರಿ ನೆನೆಯುತ್ತಿದ್ದೇನೆ. ಟೋಕಿಯೋ ವಿಶ್ವವಿದ್ಯಾನಿಲಯದಲ್ಲಿ ಅಕೆಡೆಮಿಕ್ ಅಡ್ವೈಸರ್ ಆಗಿ ನನಗೆ ಕೆಲಸ ದೊರೆತಿದೆ. ನನಗೆ ವೀಣೆ ಹಾಗೂ ಸಿತಾರ್‌ನಲ್ಲಿ ತುಂಬಾ ಉತ್ಸಾಹ ಉಂಟಾಗಿದೆ. ನಾನಾಗಲೇ ಇದರ ಬಗ್ಗೆ ಅನೇಕ ಲೇಖನಗಳನ್ನು ಬರೆಯಲಾರಂಭಿಸಿದ್ದೇನೆ. ಭಾರತೀಯ ಸಂಗೀತವನ್ನು ಇಲ್ಲಿಯ ಜನರಿಗೆ ಕಲಿಸುವ ಕಾಲ ಬರಲೆಂದು ಕಾಯುತ್ತಿದ್ದೇನೆ"

ಯಾಕೋಳನ್ನು ನಾನು ಬಹಳವಾಗಿ ಕಳೆದುಕೊಂಡಿದ್ದೆ. ಅವಳ ಉತ್ಸಾಹ, ಧೈರ್ಯ ಮತ್ತು ದೃಢ ನಿರ್ಧಾರವನ್ನು ಮನದಲ್ಲಿಯೇ ಮೆಚ್ಚಿದೆ. ಎರಡು ತಿಂಗಳ ನಂತರ ಅವಳಿಂದ ಮತ್ತೊಂದು ಪತ್ರ ಬಂತು:"ಎರಡು ಆಶ್ಚರ್ಯಕರವಾದ ಘಟನೆಗಳು ನಡೆದಿವೆ. ಒಂದು ನಾನೊಬ್ಬನನ್ನು ಪ್ರೀತಿಸಿದ್ದೇನೆ, ಎರಡನೆಯದು ಇಲ್ಲಿಯ ಸುಮಾರು ೨೦ ವಿದ್ಯಾರ್ಥಿಗಳಿಗೆ ಭಾರತೀಯ ಸಂಗೀತ ಕಲಿಸುವ ಸದವಕಾಶ ನನಗೆ ದೊರೆತಿದೆ. ನಾನು ವಿವಾಹವಾಗಲಿರುವವರು ತುಂಬಾ ಒಳ್ಳೆಯವರು. ನೀನು ಅವರನ್ನು ನೋಡ

ಬೇಕು. ದಯೆ ಹಾಗೂ ಶಾಂತಿ ಅವರಲ್ಲಿ ಮೂರ್ತಿವೆತ್ತಂತಿದೆ. ಅವರ ಹೆಸರು ಅಕೀರಾ ಯ ಹೇರಾ"

ಆ ವರ್ಷ ನಾನು ಎಂ. ಎಸ್ಸಿ. ಮಾಡಲೋಸುಗ ಇಂಗ್ಲಂಡಿಗೆ ಪ್ರಯಾಣ ಮಾಡಿದೆ. ನನಗೆ ಅಲ್ಲಿಗೇ ಮತ್ತೊಂದು ಪತ್ರ ಬಂತು: "ನಮಗೀಗ ಚಿಕ್ಕ ಮಗಳಿದ್ದಾಳೆ. ಅವಳು ದುಂಡಾಗಿ ಮುದ್ದಾಗಿದ್ದಾಳೆ. ನನ್ನ ಅಕ್ಕನ ನೆನಪಿಗಾಗಿ ಅವಳಿಗೆ ಅಕಿ ಎಂದು ಹೆಸರಿಟ್ಟಿದ್ದೇನೆ. ಆದರೆ ಅನೇಕ ಬಾರಿ ನಾನೆಲ್ಲಿ ಸತ್ತು ಅವಳನ್ನು ಒಂಟಿ ಮಾಡುವೆನೋ ಎಂಬ ಭಯ ನನ್ನನ್ನು ಕಾಡುತ್ತಿದೆ. ನಾನೀಗ ಸಿನಿಮಾ ಮತ್ತು ಟೆಲಿವಿಷನ್‌ಗೆ ಹಿನ್ನಲೆ ಸಂಗೀತ ಕೊಡುತ್ತಿದ್ದೇನೆ. ಇಲ್ಲಿಯ ಪ್ರಸಿದ್ಧವಾದ ಹಂಗಾನ್‌ಜಿ–ಜಿ ದೇವಸ್ಥಾನವೊಂದರಲ್ಲಿ ಭಾರತೀಯ ನೃತ್ಯವೊಂದು ನನ್ನಿಂದ ನಡೆಯಿತು. ನನಗೀಗ ಕೈತುಂಬಾ ಕೆಲಸವಿದೆ. ಇದರ ಬಗ್ಗೆ ನನಗೆ ತುಂಬಾ ಹೆಮ್ಮೆ ಮತ್ತು ಸಂತೋಷವಾಗುತ್ತಿದೆ. ಆಗಸ್ಟ್ ೬, ೧೯೪೫ರಂದು ಸಾವಿರಾರು ಜನ ಮೃತಪಟ್ಟು ನಾನೊಬ್ಬಳು ಏಕೆ ಅಳಿದುಳಿದೆನೆಂದು ತಪ್ಪು ತಿಳಿದಿದ್ದೆ. ನನ್ನ ಉಳಿವಿಕೆಯನ್ನು ಸಾರ್ಥಕ ಪಡೆಸಲು ನಾನು ಭಾರತೀಯ ಸಂಗೀತ ಹಾಗೂ ಭಾರತೀಯ ಸಂಸ್ಕೃತಿಯನ್ನು ಇಲ್ಲೆಲ್ಲಾ ಬೆಳಗಬೇಕೆಂದು ಹಂಬಲಿಸುತ್ತಿದ್ದೇನೆ."

೧೯೭೬ರಲ್ಲಿ ಅವಳು ಮತ್ತೆ ಬರೆದಳು: "ನಾನು ಮತ್ತೆ ಭಾರತಕ್ಕೆ ಬರುತ್ತಿದ್ದೇನೆ. ನನ್ನ ಮಗಳನ್ನೂ ಕರೆತರುತ್ತಿದ್ದೇನೆ. ನೀನು ಸಹ ಅಲ್ಲಿರುತ್ತೀಯೆಂದು ನಂಬಿದ್ದೇನೆ. ಓ! ಎಷ್ಟು ಸಂತೋಷ! ನಾವೀಗಾಗಲೇ ೪೧ರ ಗಡಿ ದಾಟಿದ್ದೇವೆ. ಇಷ್ಟು ದಿನಗಳನಂತರ ನಮ್ಮ ಭೇಟಿ ಹೇಗಿರಬಹುದು? ಶ್ರೀ ದೇವವ್ರತ ಚೌಧರಿಯವರಲ್ಲಿ ಸಿತಾರ್ ಕಲಿಯಲು ದಿಲ್ಲಿಗೆ ಬರುತ್ತಿದ್ದೇನೆ. ನನಗೆ ಮತ್ತು ನನ್ನ ಮಗಳಿಗೆ ತುಂಬಾ ಸಂತೋಷವಾಗುತ್ತಿದೆ. ಆದರೆ ದುರದೃಷ್ಟವಶಾತ್ ನನ್ನ ಪತಿ ನನ್ನ ಜೊತೆ ಈಗ ಬರಲಾಗುತ್ತಿಲ್ಲ."

ಆದರೆ ನಾನು ಇಂಗ್ಲಂಡಿನಿಂದ ಭಾರತಕ್ಕೆ ಹೋಗಲು ಪ್ರಯತ್ನಪಟ್ಟೆನಾದರೂ ಅಲ್ಲಿಗೆ ಹೋಗುವ ವೇಳೆಗೆ ಅವಳಾಗಲೇ ಬಂದು ಜಪಾನಿಗೆ ಹಿಂದಿರುಗಿದ್ದಳು. ನನಗೆ ತುಂಬಾ ವ್ಯಥೆಯಾಯಿತು. ಹಾಗಾದರೂ ಜಪಾನಿಗೇ ಹೋಗಿ ಬರಬೇಕೆಂದು ನಿರ್ಧರಿಸಿ ನಾನು ಬರುವ ಬಗ್ಗೆ ಅವಳಿಗೆ ಪತ್ರ ಬರೆದೆ. ಅವಳು ಉತ್ತರ ಬರೆದಳು: "ಇಲ್ಲಿ ವಸಂತ ಮಾಸ. ತುಂಬಾ ಹಬ್ಬಗಳಿಂದ ಕೂಡಿದ ಹರ್ಷವಾದ ದಿನಗಳು. ಆಗ ಖಂಡಿತಾ ಬಾ. ನೀನು ತುಂಬಾ ಆನಂದಿಸುವೆ."

ನಾನು ಮಾರ್ಚ್‌ನಲ್ಲಿ ಹೋಗಲು ನಿರ್ಧರಿಸಿದೆ. ಸುಮಾರು ನಾಲ್ಕು ತಿಂಗಳು ಕಳೆದವು. ಆಗ ಜನವರಿ ಇರಬಹುದು. ಯಾಕೋಳಿಂದ ಪತ್ರವೇ ಬಂದಿರಲಿಲ್ಲ. ಬಹುಶಃ ಅವಳು ಸಿತಾರ್ ಕಲಿಯುವುದರಲ್ಲಿ ಕಾಲ ದೊರೆತಿರಲಾರದೆಂದು ಊಹಿಸಿದೆ.

ಬಾಗಿಲಿನ ಘಂಟೆ ಬಾರಿಸಿತು. ಬಾಗಿಲಿನ ಕಿಟಕಿಯೊಂದರಿಂದ ಪೋಸ್ಟ್‌ಮ್ಯಾನ್ ಕಾಗದವೊಂದನ್ನು ತೂರಿಸಿದ... ಆಹಾ। ಅದು ಯಾಕೋ ಪತ್ರವಾಗಿತ್ತು. ನಾನು ಅತೀವ ಉತ್ಸಾಹದಿಂದ ಬೇಗ ಬೇಗ ಕವರನ್ನು ಹರಿದು ಓದಲಾರಂಭಿಸಿದೆ. ಓದುತ್ತಿರುವಂತೆ ನನ್ನ ಕಣ್ಣು ಮಂಜಾಯಿತು. ಕಾಗದ ಹೀಗಿತ್ತು: "ನೀವು ಬರೆದ ಕಾಗದಗಳಿಗೆ ತುಂಬಾ ವಂದನೆಗಳು. ಇಷ್ಟು ದಿನ ಬರೆಯಲಾರದದುಕ್ಕೆ ದಯವಿಟ್ಟು ಕ್ಷಮಿಸಿ. ನನ್ನ ಹೆಂಡತಿ ಯಾಕೋ ನವೆಂಬರ್ ೨೦, ೧೯೭೬ರಂದು ಶ್ವಾಸಕೋಶದ ಕ್ಷಯದಿಂದ ಬಹಳ ನರಳಿ ಮೃತಪಟ್ಟಳು. ಅವಳು ಕಲಿತ ಅಗಾಧವಾದ ಭಾರತೀಯ ಸಂಗೀತ ಸಂಪತ್ತು ಅವಳಲ್ಲೇ ಉಳಿಯಿತು. ಅವಳ ಹೃದಯದ ಮಹದಾಸೆ ನೆರವೇರಲಿಲ್ಲ. ಅವಳ ಭಾರತ ವಾಸ ಅತ್ಯಂತ ಮನೋಹರವಾಗಿಯೂ ಹಾಗೂ ಮರೆಯಲಾರದಂತೆಯೂ ಮಾಡಿದ್ದಕ್ಕೆ ನಿಮಗೆ ತುಂಬಾ ವಂದನೆಗಳು. ಭಾರತಿಯ ಸಂಸ್ಕೃತಿಗೆ ಹಾಗೂ ಅದನ್ನು ಆಚರಿಸುತ್ತಿರುವ ಭಾರತೀಯರಿಗೆ ನಮ್ಮ ಕೃತಜ್ಞತೆಗಳು. ವೀಣಾ ಹಾಗೂ ಸಿತಾರ್‌ಗಳನ್ನು ಹೃದಯಂಗಮವಾಗಿ ನುಡಿಸುತ್ತಾ ಯಾಕೊ ಆತ್ಮ ಚಿರ ಶಾಂತಿ ಪಡೆಯಲೆಂದು ಆಶಿಸುತ್ತೇನೆ."

ಅದರ ಜೊತೆಗೆ ಯಾಕೊಳ ತಾಯಿ ಬರೆದ ಪತ್ರವೊಂದಿತ್ತು:

"ನನ್ನ ಪ್ರೀತಿಯ ಮಗೂ, ನಾನು ನಿನ್ನನ್ನು ನನ್ನ ಮಗುವೆಂದೇ ಭಾವಿಸಿದ್ದೇನೆ. ಯಾಕೆಂದರೆ ಯಾಕೋ ನಿನ್ನ ಬಗ್ಗೆ ತುಂಬಾ ಹೇಳುತ್ತಿದ್ದಳು. ನನ್ನ ಸುಂದರ ಯಾಕೊ ಇನ್ನಿಲ್ಲ. ಅವಳು ಭಾರತದಿಂದ ಹಿಂದಿರುಗಿದ ಒಂದು ತಿಂಗಳ ನಂತರ ಶ್ವಾಸ

ಕೋಶದ ಕ್ಷಯದಿಂದ ನರಳಲಾರಂಭಿಸಿದಳು. ಕ್ರೂರ ವಿಧಿ ಅವಳನ್ನು ಅವಳಿಗರಿವಿಲ್ಲದಂತೆಯೇ ಕೊಂಡೊಯ್ದಿತು. ಅವಳು ಕಲಿತ ವಿದ್ಯೆ, ಕಷ್ಟಪಟ್ಟು ಸಂಪಾದಿಸಿದ ಜ್ಞಾನ ಯಾರಿಗೂ ವಿನಿಯೋಗವಾಗದಂತೆ ವ್ಯರ್ಥವಾಗುತ್ತದಲ್ಲಾ ಎಂದು ಅವಳು ತುಂಬಾ ನಿರಾಶೆಗೊಂಡಿದ್ದಳು. ಅವಳು ಬಾಂಬ್ ಸ್ಫೋಟದಿಂದಾಗಿ ತುಂಬಾ ವ್ಯಥೆ ಪಟ್ಟಿದ್ದಳು. ಯಾವ ವೈದ್ಯಕೀಯದಿಂದಲೂ ಅವಳಿಗೆ ಸಂಪೂರ್ಣ ಗುಣವಾಗಲಿಲ್ಲ. ಅವಳು ಬದುಕಿದಷ್ಟು ದಿನಗಳನ್ನು ಸದುಪಯೋಗಿಸಿಕೊಂಡಳೆಂಬುದೇ ನನಗೆ ಸಮಾಧಾನ. ಅವಳು 'ದಿ ಟೆಸ್ಟಿಮನಿ ಆಫ್ ದಿ ಸೆಂಚುರಿ' ಎಂಬ ಸಿನಿಮಾಕ್ಕೆ ನುಡಿಸಿದ ಹಿನ್ನೆಲೆಯ ವೀಣಾಗಾನ ನನಗೆ ತುಂಬಾ ಹಿಡಿಸಿತು. ಅವಳ ಮಗಳು ಅಕಿ ತುಂಬಾ ದುಃಖಿತನಾಗಿದ್ದಾಳೆ. ಅವಳನ್ನು ನೋಡಿದಾಗ ನನ್ನ ಹೃದಯ ಮಮ್ಮಲ ಮರುಗುತ್ತದೆ. ನನಗಾಗಲೇ ವಯಸ್ಸಾಗಿದೆ ಈ ದುಃಖವನ್ನು ಸಹಿಸುವ ಶಕ್ತಿ ನನಗಿಲ್ಲ.

"ಅಣು ಸ್ಫೋಟದಲ್ಲಿ ಉಳಿದವರಲ್ಲಿ ಒಬ್ಬಳಾದ ನಾನು ಜಗತ್ತಿನ ಜನ ಈ ಬಾಂಬಿನ ದುಷ್ಪರಿಣಾಮವನ್ನು ತಿಳಿಯಲೆಂದು ಬಯಸುತ್ತೇನೆ. ನನ್ನ ಮಗಳ ಪ್ರತಿಭಟನೆ ನರಳಿದ ಯಾತನೆಯ ಕೂಗು ಅಳಿದು ಹೋಗದಂತೆ ಉಳಿದು ಅಣುಬಾಂಬುಗಳ ತಯಾರಿಕೆ ಹಾಗೂ ಪರೀಕ್ಷೆ ತಕ್ಷಣ ನಿಂತು ಹೋಗಲೆಂದು ನಾನು ಪ್ರಾರ್ಥಿಸುತ್ತೇನೆ. ಇಂಥಹ ದುರಂತ ಈ ಭೂಮಿಯಲ್ಲಿ ಇನ್ನೆಂದೂ ಆಗಬಾರದು.

"ಯಾಕೊಳನ್ನು ಸೀರೆಯೊಂದರಲ್ಲಿ ಸುತ್ತಿ ಸಮಾಧಿಗೊಳಿಸಿದೆವು. ಭಾರತೀಯ ಸಂಗೀತದ ನಂತರ ಬೌದ್ಧ ಧರ್ಮದಂತೆ ನಮಸ್ಕಾರ ನೆರವೇರಿತು. ಅವಳು ಪ್ರೀತಿಸಿದ ಭಾರತದ ನದಿ ಮತ್ತು ಪರ್ವತ ಶಿಖರಗಳನ್ನು ನನ್ನ ಕಣ್ಣಿಂದ ನೋಡ ಬಯಸುತ್ತೇನೆ. ಒಂದಲ್ಲ ಒಂದು ದಿನ ನಾನು ಭಾರ–ತಕ್ಕೆ ಬಂದು ಅಲ್ಲಿಯ ಪವಿತ್ರ ಗಂಗಾನದಿಯಲ್ಲಿ ಅವಳ ಬೂದಿಯನ್ನು ಜಲಾಂತರ್ಗತಗೊಳಿಸುವ ಶಕ್ತಿಯನ್ನು ದೇವರು ನನಗೆ ಕೊಡಲೆಂದು ಪ್ರಾರ್ಥಿಸುತ್ತೇನೆ."

ಪತ್ರವನ್ನು ಓದಿ ಮುಗಿಸಿ ಕಾಲೆಳೆದುಕೊಂಡು ಬಂದು ಕಿಟಕಿಯಿಂದಾಚೆ ಗಗನದತ್ತ ನೋಡಿದೆ ಯಾಕೊಳ ನಗುಮುಖ ಚಿತ್ರಿಕೆಯು ಪ್ರತಿಬಿಂಬಿಸುವಂತೆ ತೋರಿತು. ಅವಳನ್ನು ಮತ್ತೆ ಜೀವಂತ ನೋಡಲಾರದಷ್ಟಕ್ಕಾಗಿ ಮನಸ್ಸು ಮರುಗಿದೆ.

ಅಣು ಸ್ಫೋಟದಿಂದ ಸತ್ತವರ ಸಂಖ್ಯೆಗೆ ಅವಳೊಬ್ಬಳು ಅಧಿಕವಾದಳು. ಆದರೆ ಜೀವನ ನಡೆಯುತ್ತಿದೆ. ದಿನದಿನಕ್ಕೆ ಹೆಚ್ಚು ಪ್ರಮಾಣದಲ್ಲಿ ಅಣು ಅಸ್ತ್ರಗಳು ನಿರ್ಮಾಣವಾಗುತ್ತಿವೆ. ಅಮೇರಿಕನ್ ಕವಿ ಜಾನ್ ಚಿಪನ್ ಹೇಳಿರುವಂತೆ, "ಯುದ್ಧದ ಅತೀವ ದಾರುಣ ಸುಗತಿ ಏನೆಂದರೆ ಅದು ಅನೇಕರನ್ನು ಕೊಂದದ್ದಲ್ಲ; ಆದರೆ ಅದು ಸಾವಿನ ದುಃಖವನ್ನೆ ಕೊಲ್ಲುತ್ತದೆ."

ಯಾಕೊಳ ತಾಯಿಯಂಥವರ ಪ್ರಾರ್ಥನೆ ನಿಷ್ಪ್ರಯೋಜಕವಾಯಿತೆ? ಅಗೋಚರವಾದ ವಿಧಿ ಮಾನವನನ್ನು ಸ್ವಯಂವಿನಾಶದತ್ತ ಕೊಂಡೊಯ್ಯುತ್ತಿದೆಯೆ? ✡



"ನೋಡಿ ಮಿಸ್ಟರ್, ನೀವು ಬ್ಯಾಂಕಿನ ನಿಯಮಗಳಿಗೆ ವಿರುದ್ಧ ನಡೆಯುತ್ತಿದ್ದೀರಿ. ಫೈಲನ್ನು ಜವಾನನ ಕೈಯಲ್ಲಿ ಕಳಿಸುವುದು ಬಿಟ್ಟು ನೀವೇ ತಂದುಕೊಡುತ್ತಿದ್ದೀರಲ್ಲ!"

ಪ್ರೇಮ ವಿಮರ್ಶೆ

ಮ. ಪ್ರ. ಪೂಜಾರ

೧. ಮನುಷ್ಯನು ತನ್ನ ಒಳಗಿರುವ ಸತ್ಯದ–ಸೌಂದರ್ಯದ-ರಸದ (ಆನಂದದ) ರಾಜ್ಯವನ್ನು ಹೊರಗೆ – ಕಣ್ಣೆದುರಿಗೆ – ತರುವದಕ್ಕಾಗಿ ಬಹುಕಾಲದಿಂದ ಎಡೆಬಿಡದೆ ಪ್ರಯತ್ನಿಸುತ್ತ ಬಂದಿರುವನು. ಅಂತರಂಗದ ಆ ಆನಂದಮಯ ನಿತ್ಯ ಪ್ರಕಾಶವನ್ನು ಬಹಿರಂಗದಲ್ಲಿ ನೋಡಿ ತಲ್ಲೀನನಾಗಲು ಆತನು ಕುತೂಹಲಪಡುವನು. ಕಾವ್ಯ, ಸಂಗೀತ, ಚಿತ್ರ, ಮೂರ್ತಿಶಿಲ್ಪ ಮೊದಲಾದ ಲಲಿತ ಕಲೆಗಳು ಈ ಪ್ರಯತ್ನದ ಫಲಗಳು. ಇವು ಆ ಆನಂದವನ್ನು ನೋಡಿಕೊಳ್ಳುವ ಸಾಧನೆಗಳು – ಕನ್ನಡಿಗಳು.

ಕಾವ್ಯಾದಿಗಳು ಆನಂದಕ್ಕೆ ನಿಮಿತ್ತಗಳು; ಜನಕಗಳಲ್ಲ, ಮನುಷ್ಯನು ತನ್ನೊಳಗಿನ ಆನಂದವನ್ನೇ ಅವುಗಳಲ್ಲಿ ಒಡಮೂಡಿಸಿ ನೋಡುವನು. ಆನಂದದ ಆಧಾರವು ತಾನೇ ಅಲ್ಲದೆ ಅವುಗಳಲ್ಲ. ಕಾವ್ಯ, ಸಂಗೀತ, ಚಿತ್ರ, ಶಿಲ್ಪಾದಿಗಳ ಘಟಕಗಳಾದ ಶಬ್ದ, ಸ್ವರ, ರೇಖೆ, ಮಣ್ಣು, ಕಲ್ಲು ಮೊದಲಾದುವು ಆನಂದದ ಜನಕಗಳಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಹಾಗಿದ್ದರೆ ಎಲ್ಲ ಸಮಯಗಳಲ್ಲಿ ಅವುಗಳಿಂದ ಆನಂದವನ್ನೇ ಅನುಭವಿಸುತ್ತಿದ್ದೆವು. ನಮ್ಮ ಮನೋವೃತ್ತಿಯು ಆನಂದಾಭಿಮುಖವಾಗದಿರುವಾಗ ಅದೇ ಕಾವ್ಯವೇ, ಅವೇ ಸಂಗೀತವೇ, ಅವೇ ಚಿತ್ರಶಿಲ್ಪಗಳೇ ಬೇಡಾಗುವವು. ಅಂತರಾತ್ಮವು ಸ್ವ–ಸ್ವರೂಪದ ಕಡೆಗೆ ಅಭಿಮುಖವಾಗದಿರುವಾಗ, 'ಶೇಷಣ್ಣನವರೇ ನಿಮ್ಮ ವೀಣೆಯನ್ನು ನಿಲ್ಲಿಸಿ'ರೆಂದು ಹೇಳುವೆವು. ಅದರೆ ಸ್ವಸ್ವರೂಪದ ಕಡೆಗೆ ಧಾವಿಸುವಾಗ ಚಿನ್ನಯ್ಯನ ಕಿನ್ನರಿಗೆ ತಲೆದೂಗುತ್ತ ಪರವಶರಾಗುವೆವು.

ಆನಂದವು ವಸ್ತುಗಳ ಗುಣವಲ್ಲ; ಅದು ಮಾನವನ ಸ್ವಭಾವವು. ಈ ಆನಂದವು ಜಾಗ್ರತವಾಗುವಂತೆ ಮಾಡಿಕೊಳ್ಳುವದೇ ಪ್ರೀತಿಯ ಮೂಲವು. ಈ ಆನಂದವೇ ಪ್ರೀತಿಯ ತಾಯ್ನೆಲೆಯು; ಇದೇ ಪ್ರೀತಿಯ ಪರಮಫಲವು. ಆನಂದಕ್ಕಾಗಿ ಪ್ರೀತಿ ಮಾಡಿ ಪ್ರೀತಿಯಿಂದ ಆನಂದದ ಕಡೆಗೆ ಸಾಗುವದೇ ಮಾನವ ಜೀವನ ಕ್ರಮದ ರಹಸ್ಯವು. ಮುತ್ತಿನ ಹುಳು ತನ್ನೊಳಗಿನ ಪ್ರಕಾಶಮಯ ಲೇಪವನ್ನು ತನ್ನ ವೈರಿಯಾದ ಮಳುವಿನ ಮೇಲೆ ಬಳಿದು ಸುಂದರವಾದ ಮುತ್ತನ್ನುಂಟುಮಾಡುವಂತೆ ಒಳಗಿನ ಆಧಾರವಾದ ಆನಂದವನ್ನು ಬಾಹ್ಯವಸ್ತುಗಳ ಮೇಲೆ ಬಳಿದು ಅವನ್ನು ಅವಚಿಕೊಳ್ಳುವಷ್ಟು ಪ್ರಿಯವಾಗಿ ಮಾಡಿಕೊಳ್ಳುವದೇ ಮಾನವ ಜೀವನದ ಧ್ಯೇಯವು. ಜಗವನ್ನು ಕಂಡು ನಲಿಯಿರಿ, ಅದರೊಳಗೆ ತೋರುವ ಅನೈಕ್ಯವನ್ನು ಹೋಗಲಾಡಿಸಿರಿ, ವಿಶ್ವಾತ್ಮನೊಡನೆ ಸಾಮರಸ್ಯವನ್ನು ಅನುಭವಿಸಿರಿ ಎಂದು ಮಾನವಧರ್ಮವು ಸಾರುವದು.

(ವಾಗ್ಭೂಷಣ-೧೯೨೭)

ತಂದೆಯ ತೊಡೆಯ ಮೇಲೆ ಕುಳಿತ ತನ್ನನ್ನು ಒದೆದು ಕೆಡಹಿದ ಮಲತಾಯಿಗೆ ಕಲ್ಯಾಣವನ್ನು ಕೋರಿದಾಗಲೇ ಧ್ರುವನು ಮೋಕ್ಷಕ್ಕೆ ತಕ್ಕವನಾದ ನೆಂಬುದನ್ನು ನಾವು ಮನನಮಾಡಬೇಕು.

೨. ಯಾಜ್ಞವಲ್ಕ್ಯ ಮುನಿಗಳು ಬ್ರಹ್ಮನಿಷ್ಠರು. ಸಂಸಾರವನ್ನು ತೊರೆದು ಆಶ್ರಮದಿಂದ ತೆರಳುವಾಗ ತಮ್ಮ ಇಬ್ಬರು ಹೆಂಡಂದಿರು ಕಾತ್ಯಾಯಿನಿ, ಮೈತ್ರೇಯಿ ಎಂಬವರಿಗೆ ಆಸ್ತಿಯನ್ನು ಪಾಲು ಮಾಡಿ ಕೊಡಬೇಕೆಂದಿರಲು ಅವರಲ್ಲಿ ಬ್ರಹ್ಮವಾದಿನಿಯಾದ ಮೈತ್ರೇಯಿಯು—"ಮಹಾನುಭಾವರೇ. ವಿತ್ತಪೂರ್ಣವಾದ ಈ ಪೃಥ್ವಿಯನ್ನೇ ತಾವು ದಯಪಾಲಿಸಿದರೂ ಅದರಿಂದ ತಮಗಿರುವ ಆನಂದಮಯ ಸ್ಥಿತಿಯು ನನಗೆ ಒದಗೀತೆ? ಈ ಹಾಳು ವಿತ್ತವನ್ನೇನು ಮಾಡಲಿ? ಮುನಿವರ್ಯರೇ,

ಯಾಜ್ಞವಲ್ಕ್ಯರು ತನ್ನನ್ನು (ಆತ್ಮವನ್ನು) ಕಂಡವರು. ಆತನ "ಸತ್ಯಂ ಶಿವಂ ಆನಂದಂ" ಎಂಬೀ ಸತ್ಯ–ಸುಂದರ–ಆನಂದಸ್ವರೂಪವನ್ನು ಸಾಕ್ಷಾತ್ಕರಿಸಿದವರು. ಅವರು ಹೇಳುವದೇನೆಂದರೆ ಯಾವುದೊಂದು ವಸ್ತುವಿನ ಮೇಲಿರುವ ನಮ್ಮ ಪ್ರೀತಿಯು ಆ ವಸ್ತುವಿಗಾಗಿ ಅಲ್ಲ; ಆ ವಸ್ತುವಿನಲ್ಲಿ ಆತ್ಮಸ್ವರೂಪವು ಭಾಸವಾಗುವದರಿಂದ ಆತ್ಮಸ್ವರೂಪ ಭಾಸದಿಂದ ಜಗತ್ತನ್ನು ಕಾಣಬಲ್ಲ ದಿವ್ಯದೃಷ್ಟಿಯುಳ್ಳವರೇ ಜಗತ್ತನ್ನು ಪ್ರೀತಿಸಬಲ್ಲರು; ಹಾಗೆ ಜಗವನ್ನು ಪ್ರೀತಿಸಬಲ್ಲವರೇ ಅಮೃತತ್ವವನ್ನು ಪಡೆವರು.

೩. ಇಂತಹ ಪ್ರೀತಿಯು ನಮ್ಮಲ್ಲುಂಟೋ? ಜಗವ ತುಂಬಿ ಮಿಕ್ಕಿರುವ ಆತ್ಮನನ್ನು ಜಗದಲ್ಲೆಲ್ಲ ಕಾಣುವಂತೆ ನಮ್ಮ ಕಣ್ಣ ಮುಸುಕು ತೆರೆದಿದೆಯೆ?

ಪ್ರೇಮ-ಪ್ರೀತಿ ಅಂದರೇನು? ಪ್ರೇಮ ಯಾವುದು, ಪ್ರೀತಿ ಯಾವುದು? ಅವರ ಮೂಲ, ಉತ್ಕರ್ಷ ಎಂತು? ಪ್ರೇಮದಲ್ಲಿನ ಭೇದಭಾವ ಎಂಥದು? ಮುಂತಾದುವುಗಳ ಸೋದಾಹರಣ ವಿವೇಚನೆ ಇದು. ಇದು ಅರ್ಧ ಶತಮಾನದಷ್ಟು ಹಿಂದಿನ ಕನ್ನಡ ಗದ್ಯದ ಮಾದರಿಯೂ ಹೌದು. ಕನ್ನಡದ ಸಮರ್ಥ ಶೈಲಿಯ ಬರೆಹಗಾರ ಮ. ಪ್ರ. ಪೂಜಾರರವರು ಮಕ್ಕಳಿಗಾಗಿ ಕನ್ನಡ ವ್ಯಾಕರಣ ರಚಿಸಿ ಆಧುನಿಕ ಕನ್ನಡ ಗದ್ಯಶೈಲಿ ರೂಪಗೊಳ್ಳುವಲ್ಲಿ ಮಹತ್ವದ ಪಾತ್ರವನ್ನಾಡಿದವರು.

ನಿಮ್ಮ ಆನಂದವನ್ನೈದಿಸುವಂತಹ ಜ್ಞಾನಾಮೃತವನ್ನು ಶಿಷ್ಯಳಂತಿರುವ ನನ್ನ ಮೇಲೆ ಕರುಣೆಯಿಟ್ಟು ದಯಪಾಲಿಸಿರಿ" ಎಂದು ಬೇಡಿಕೊಳ್ಳಲು ಆ ಮಹಾನುಭಾವರು ಅಮೃತತ್ವದ ಮೋಕ್ಷದ ಸ್ವರೂಪವನ್ನು ನಿರೂಪಿಸುವವರಾಗಿ ಮೊದಲು ಪ್ರೀತಿಯ ಉಗಮವನ್ನು ಕುರಿತು ಹೀಗೆ ಹೇಳುವರು:

"ಹೆಂಡತಿಗೆ ಗಂಡನು ಪ್ರಿಯನು, ಆ ಪ್ರೀತಿಯು ಗಂಡನಿಗಾಗಿ ಅಲ್ಲ ತನಗಾಗಿ; ಮಕ್ಕಳು ಪ್ರಿಯರು; ಆ ಪ್ರೀತಿಯು ಮಕ್ಕಳಿಗಾಗಿ ಅಲ್ಲ; ತನಗಾಗಿ, ದುಡ್ಡು ಪ್ರಿಯವು; ಆ ಪ್ರೀತಿಯು ದುಡ್ಡಿಗಾಗಿ ಅಲ್ಲ; ತನಗಾಗಿ. ಈ ಮೇರೆಗೆ ಎಲ್ಲವೂ ಪ್ರಿಯವು; ಆ ಪ್ರೀತಿಯು ಎಲ್ಲದಕ್ಕಾಗಿ ಅಲ್ಲ; ತನಗಾಗಿ." *

ನಮ್ಮನ್ನೂ ನಮ್ಮ ನೆರೆಯವರನ್ನೂ ನಮ್ಮ ದೇಶವನ್ನೂ ನಾವು ಹೀಗೆ ಪ್ರೀತಿಸಬಲ್ಲೆವೊ? ಪರರ ಮೇಲೆ ಆತ್ಮಪ್ರೀತಿಯನ್ನು ನಾವು ಮಾಡಬಲ್ಲೆವೋ? * ಈ ಪ್ರೀತಿಯು ಕೃಪಣನ ಧನದಂತೆ ಎಲ್ಲರಿಗೆ ಅಗಮ್ಯವಾಗಿದೆ. ಇಂತಹ ಪ್ರೀತಿಯ ಕಲ್ಪನೆಯು ನಮಗೆ ಆದರೆ, ಆ ದಾರಿಯು ನಮಗೆ ಸಿಕ್ಕಿದರೆ ಮೈತ್ರೇಯಿಯು ಸವತಿಯಾದ ಕಾತ್ಯಾಯಿನಿಗೇ ಎಲ್ಲ ಆಸ್ತಿಯು ಇರಲೆಂದು ಹೇಳಿದಂತೆ ನಾವೂ ನಮ್ಮ ಆಸ್ತಿಯನ್ನು ಕಂಡವರಿಗೆ ಅರ್ಪಿಸಲು ಸಿದ್ಧವಾಗುವೆವು. ಆಗ ಈಗಿನ ಅಪ್ರೀತಿಯು, ಈಗೀನ ಕಲಹವು, ಈಗಿನ ಅಸಮಾಧಾನವು ಅಡಗಿಹೋದೀತು.

* ಬೃಹದಾರಣ್ಯಕ- ಅಧ್ಯಾಯ ೨. ಬ್ರಾ. ೪.

* ಕರ್ತವ್ಯಾ ಸರ್ವಭೂತೇಷು ಭಕ್ತಿರವ್ಯಭಿಚಾರಿಣೀ -ವಿಷ್ಣು ಪುರಾಣ ೧-೧೯-೯.

ನಮ್ಮನ್ನೇ ನಾವು ದ್ವೇಷಿಸುವ ಯುಗವಿದು; ಬಲಗೈಯು ಎಡಗೈಯನ್ನು ಕಂಡರೆ ವೈರ ಮಾಡುವ ಕಾಲವಿದು. ಇಂತಹ ಕಾಲದಲ್ಲಿ ಪರರನ್ನು ಪರ ಜಾತಿಯವರನ್ನು ಪರಮತಗಳನ್ನು ಕಂಡು ಹೇಗೆ ಸೈರಣೆಗೊಳ್ಳುವೆವು? ನಮ್ಮಿಂದ ಭಿನ್ನವೆಂದು ತೋರುವ ಜಗತ್ತಿನಲ್ಲಿ ಎಡೆಬಿಡದೆ ನಡೆದಿರುವ ಕೋಲಾಹಲಗಳಲ್ಲಿ ಆತ್ಮಸ್ವರೂಪ ಭಾವನೆಯಿಂದ ಸಾಮಂಜಸ್ಯವನ್ನು ಕಾಣುವಂತಹ ಯಾಜ್ಞವಲ್ಕ್ಯರ ದಿವ್ಯ ದೃಷ್ಟಿಯು ನಮಗೆಲ್ಲಿಂದ ಬರಬೇಕು? ಪರರನ್ನು ತುಳಿಯಬೇಕೆಂದು ಹವಣಿಸುತ್ತಿರುವ ನಾವು ಪರರನ್ನು ಕಂಡು, ಪರರ ಹೆಚ್ಚಳವನ್ನು ಕಂಡು ಉಬ್ಬಬಹುದೇ? ಜನಗಳಲ್ಲಿ ವಿಘಾತಕಗಳಾದ ಹಲವು ಕೃತ್ರಿಮ ಭಾವನೆಗಳನ್ನು ಹುಟ್ಟಿಸಿ ಜನತೆಯನ್ನು ಭಿನ್ನಭಿನ್ನವಾಗಿ ಮಾಡಲು ಹೆಣಗುವ ಸ್ವಾರ್ಥಪರರಾದ ನಾವು ಒಕ್ಕಟ್ಟನ್ನು ಹೇಗೆ ಉಂಟು ಮಾಡೇವು? ಅನೇಕಗಳಲ್ಲಿ ಏಕವನ್ನು ಹೇಗೆ ಕಂಡೇವು? ಕಲಿಯುಗವನ್ನು ಕೃತಯುಗವನ್ನಾಗಿ ಮಾಡುವ ಇಂದ್ರಜಾಲದ ಕೋಲು ನಮಗೆಲ್ಲಿ ದೊರೆಯಬೇಕು?

೪. "ಇದು ನನಗೆ ಬೇಕಾದ ವಸ್ತುವು" ಎಂಬೀ ಭಾವನೆಯಿಂದ ಮಾತ್ರ ನಾವು ಪ್ರೀತಿಯನ್ನು ಮಾಡಬಲ್ಲೆವು. "ನನಗೆ" ಬಾಧೆ ಬಾರದಿರುವವರೆಗೆ, ಮತ್ತು ವಸ್ತುವಿನ ವಿಷಯವಾಗಿ ಇರುವ "ಬೇಕುತನವು" [ಬೇಕೆಂಬ ಭಾವನೆಯು] ಅಳಿಯದಿರುವವರೆಗೆ ಸಂಗಮ ಮಹಿಮೆಯಿಂದ ಈ ಪ್ರೀತಿಯು ವೃದ್ಧಿ ಹೊಂದುತ್ತಲೂ ಇರಬಹುದು. "ನನಗೆ" ಬಾಧೆ ಬರುವಂತೆ ತೋರಿದ ಕೂಡಲೆ "ಬೀರಬಲನ ಮಂಗ"ನಂತೆ ನಮ್ಮ ಕೂಸನ್ನು ನಾವೇ ಮೆಟ್ಟಿ ನಿಲ್ಲಬಹುದು. ಇಲ್ಲವೆ ಬೇಕೆಂಬ ಬಗೆಯು ಅಳಿದು ಹೋದಾಗ ವಿಲಾಸಿನಿಯು ಬೆಳಿಗ್ಗೆ ಅಂಗರಾಗವನ್ನು ಅಳಿಸಿ ತೊಳೆದು ಬಿಸುಡುವಂತೆ ಆ ವಸ್ತುವನ್ನು ಪರಿಹರಿಸಿದಾಗಲೇ ನಮಗೆ ಸೊಗಸಾದೀತು. ಯಾವಾಗಲೂ ಅಚ್ಚಳಿಯದಿರುವ ಸ್ವಚ್ಛ ಪ್ರೀತಿಯ ಗುರುತು ನಮಗಿಲ್ಲವೆಂದೇ ಹೇಳಬೇಕು. ಈ ಕೃತಕ ಪ್ರೀತಿಯ ಮಹಿಮೆಯೂ ಕಡಿಮೆಯಾಗಿಲ್ಲ; "ಬೇಕೆಂಬ ಬಗೆ"ಯು ಪ್ರಬಲವಾಗಿರುವಾಗ ಹಲವರು ಆ ವಸ್ತುವಿಗಾಗಿ ಪ್ರಾಣವನ್ನರ್ಪಿಸಿದವರೂ ಉಂಟು .ಅದನ್ನು ಕೆಲವರು ಮನೋದೌರ್ಬಲ್ಯವೆಂದು ಹೇಳುವರು; ನೈರಾಶ್ಯ ಮೂಲಕವಾದ ಸರ್ವತ್ಯಾಗವೆಂದು ಕೆಲವರು ಹೇಳುವರು.

"ಬೇಕೆಂಬ ಬಗೆ"ಯಿಂದ ಉಂಟಾಗುವ ಪ್ರೀತಿಯು "ಬಾಜಾರ"ದ ಪ್ರೀತಿಯು. ಈ ಪ್ರೀತಿಯನ್ನು ಕೊಳ್ಳಲೂ ಮಾರಲೂ ಬರುವದು. ಮನುಷ್ಯನು ಸಂಸಾರದಲ್ಲಿ ಹಲವರ ಪ್ರೀತಿಯು ತನ್ನ ಮೇಲೆ ಆಗಬೇಕೆಂದು ಹಂಬಲಿಸುವನು; ಅದಕ್ಕಾಗಿ ಮೆಚ್ಚುಗಳನ್ನೀವನು; ಕಾಣಿಕೆಗಳನ್ನು ಸಲ್ಲಿಸುವನು ಉಡುಗೊರೆಗಳನ್ನು ಮಾಡುವನು. ಕೊಂಡು ತಂದ ಸರಕು ಅಳಿಯದೇ ಉಳಿದೀತೇ—ಎಂಬುದನ್ನು ಆತನು ಆಲೋಚಿಸುವದಿಲ್ಲ. ಕೃತ್ರಿಮ ಪ್ರೀತಿಗೆ ಬೇಸತ್ತ ಮಾನವನು ಕೊನೆಗೆ ನಾಯಿ, ಬೆಕ್ಕು, ಗಿಳಿ ಮೊದಲಾದ ಪಶುಪಕ್ಷಿಗಳ ಮೇಲೆ ಪ್ರೀತಿ ಮಾಡುವುದೂ ಅವುಗಳ ಪ್ರತಿಪ್ರೀತಿಯನ್ನು ಅನುಭೋಗಿಸುವುದೂ ಲೇಸೆಂದೆಣಿಸುವನು.

ಯೇಸು ಕ್ರಿಸ್ತನು ಒಂದೆಡೆಯಲ್ಲಿ ಹೇಳುವುದೇನೆಂದರೆ, "ನಿಮ್ಮ ಮೇಲೆ ಪ್ರೀತಿ ಮಾಡುವವರನ್ನು ನೀವು ಪ್ರೀತಿಸುವುದರಲ್ಲಿ ನಿಮ್ಮ ಮಹತ್ವವೇನು?

"ನೆರೆಯವರನ್ನು ಪ್ರೀತಿಸಿರೆಂದೂ, ವೈರಿಗಳನ್ನು ದ್ವೇಷಿಸಿರೆಂದೂ ನಿಮಗೆ ಹಲವರು ಹೇಳುವರು. ಆದರೆ ನಾನು ಹೇಳುವುದೇನೆಂದರೆ ನೀವು ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಬಯ್ಯುವವರ ಕಲ್ಯಾಣವನ್ನು ಕೋರಿರಿ."

ಮಹಾತ್ಮನ ಈ ವಾಣಿಯಲ್ಲಿ ಪ್ರೀತಿಯು ಹಗೆತನವನ್ನು ಹೊಡೆದೋಡಿಸುವ ಪರಮೌಷಧವೆಂಬುದು ವ್ಯಕ್ತವಾಗುತ್ತಿರುವದು. ಇಂತಹ ಪ್ರೇಮದ ಪರಿಚಯವು ನಮಗೆ ಕಡಿಮೆ; ಇದು ಸಹೇತುಕಪ್ರೇಮವಲ್ಲ. ಸ್ವರ್ಗೀಯ ಪ್ರೇಮವು.

೫. 'ಸಂಗಾತ್ಸಂಜಾಯತೇ ಕಾಮಃ' ಎಂಬ ಭಗವದುಕ್ತಿಯನ್ನೂ 'ಅತಿಪರಿಚಯಾದವಜ್ಞಾ' ಎಂಬ ಲೋಕೋಕ್ತಿಯನ್ನೂ ವಿಮರ್ಶಿಸಿ ನೋಡಿರಿ. ಸಹವಾಸವು ಹೆಚ್ಚುತ್ತ ಹೋದಂತೆ ಕಾಮವೂ ತನ್ಮೂಲಕ ಪ್ರೀತಿಯೂ ಉಂಟಾಗುವುದೆಂದು ಒಂದು ನುಡಿಯು ಹೇಳಿದರೆ ಇನ್ನೊಂದು ನುಡಿಯು ಸಹವಾಸವು ಹೆಚ್ಚುತ್ತ ಹೋದಂತೆ ತಿರಸ್ಕಾರವೂ ತನ್ಮೂಲಕ ದ್ವೇಷವೂ ಉಂಟಾಗುವುದೆಂದು ಹೇಳುತ್ತದೆ. ಅಂಗಡಿಯ ಪ್ರೀತಿಯನ್ನೇ ನಾವು ಪ್ರೀತಿಯೆಂದು ಇಟ್ಟು

ಕೊಂಡರೆ ಪರಸ್ಪರ ವಿರುದ್ಧವಾದ ಈ ಎರಡು ಮಾತುಗಳೂ ಸಮಂಜಸವಾಗಿ ತೋರುವವು. ಬೇಕು ಎಂಬ ಬಗೆಯಿಂದ ಉಂಟಾದ ಪ್ರೀತಿಯು ಆ ಬಗೆಯು ಬಲವಾಗಿ ಇರುವವರೆಗೆ ಆ ವಸ್ತುವಿನೊಳಗಿನ ಕುಂದುಕೊರತೆಗಳನ್ನೆಣಿಸದೆ ಅದನ್ನು ಪ್ರೀತಿಸುವುದಕ್ಕೆ ಪ್ರೇರಿಸುವುದು. ಆ ಬಗೆಯು ಅಷ್ಟೊಂದು ಪ್ರಬಲವಾಗಿ ಇಲ್ಲದಾಗ ಆ ವಸ್ತುವಿನಲ್ಲಿದ್ದ ಕುಂದು ಕೊರತೆಗಳೇ ನಮ್ಮ ಮುಂದೆ ಬಂದು ಪ್ರೀತಿಯನ್ನ-ಡಗಿಸಿ ದ್ವೇಷಾಂಕುರವನ್ನು ಬಿತ್ತುವವು. ಬಾಲ್ಯದ ಜೀವನದ ಗೆಳೆಯರು ಪ್ರೌಢಾವಸ್ಥೆಯಲ್ಲಿ ಬೇಡಾಗುವುದುಂಟು. ಆಗ ನಾವು "ಸಮಾನ ಶೀಲ ವ್ಯಸನೇಷು ಸಖ್ಯಂ" ಎಂದು ಹೇಳತೊಡಗುವೆವು. ಸಮಾನ ಶೀಲರಲ್ಲಿ ಕೂಡ ಬಾಲ್ಯದ ಪ್ರೀತಿಯನ್ನು ಮಾಡುತ್ತಿರುವೆವೇನು?

ದ್ರೋಣಾಚಾರ್ಯನು ದ್ರುಪದರಾಜನ ಓಲಗದ ಬಾಗಿಲಿಗೆ ಹೋಗಿ ನಿಮ್ಮ ಸತೀರ್ಥ್ಯನೂ, ಬಾಲಸ್ನೇಹಿತನೂ ಆದ ದ್ರೋಣನೆಂಬ ಹಾರ್ವನು ಬಂದಿರುವನೆಂದು ಹೇಳಿ ಕಳುಹಲು ದ್ರುಪದನು— "ಅಂತೆಂಬಂ ಆರ್ಗೆ? ಪಿರಿದುಂ। ಭ್ರಾಂತುದಲ್ ಏಂ ದ್ರೋಣನೆಂಬನೇಂ ಹಾರ್ವನೇ? ಪೇಳೆಂತೆನಗೆ ಕೆಳೆಯನೇ? ನೂಂ। ಕಂತಪ್ಪನಂ ಅರಿಯೆಂ" ಎಂದು ಸಭೆಯೊಳ್ ನಿಷ್ಠುರವಾಗಿ ನುಡಿದನೆಂಬುದನ್ನೂ ಬಳಿಕ ದ್ರೋಣನು "ಎನ್ನ ಭಟ್ಟ(ಶಿಷ)ರಿಂ ತಳಮಳಗಾಗೆ ಕಟ್ಟಿಸದೆ ಮಾಣ್ದೊಡೆ ಇನ್ನೆಗಮೀಸೆ ಪೊತ್ತೆನೇ ಎಂದು ಪೂಣ್ದು ತನ್ನ ಭಟ್ಟನಾದ ಅರ್ಜುನನಿಂದ ದ್ರುಪದನನ್ನು ಕೋಡಗಗಟ್ಟು ಕಟ್ಟಿ ತರಿಸಿ ಮಂಚದ ಕಾಲಿಗೆ ಕಟ್ಟಿಸಿ ಕಾಲ್ಸೊನಿಂದ ಒದೆದನೆಂಬುದನ್ನೂ ಪುರಾಣದಲ್ಲಿ ಕೇಳುವೆವು. ಮೊದಲು ಅರ್ಧರಾಜ್ಯವನ್ನು ಕೊಡುವೆನೆಂದು ಹೇಳುವಷ್ಟು ಮಟ್ಟಿಗೆ ವಿದ್ಯಾಭ್ಯಾಸ ಕಾಲದಲ್ಲಿ ದ್ರೋಣನ ವಿಷಯವಾಗಿ ದ್ರುಪದನಲ್ಲಿದ್ದ ಪ್ರೀತಿರಸದ ತೊರೆಯು ಅರಸನಾದ ಬಳಿಕ ಒಮ್ಮೆಲೆ ಬತ್ತಿಹೋದುದೇಕೆ? ದ್ರುಪದನು ತನ್ನ ಕ್ಷತ್ರಿಯತನದ ಮುಸುಕು, ಅರಸುತನದ ಪರದೆ, ಸಿರಿವಂತಿಕೆಯ ತೆರೆ ಮೊದಲಾದ ಹಲವು ಆವರಣಗಳಿಂದ ಆತ್ಮಸ್ವರೂಪವನ್ನು ಮರೆಮಾಡಿಕೊಂಡಿದ್ದನೆಂದೂ, ಅಪಮಾನದಿಂದ ಸೈರಣೆಗುಂದಿದ ದ್ರೋಣನ (ತೀಕ್ಷ್ಣ) ದೃಷ್ಟಿಯು ದ್ರುಪದನ ಆ ಮುಸುಕುಗಳನ್ನೆಲ್ಲ ಭೇದಿಸಿ ಒಳಸೇರುವಷ್ಟು ತೀಕ್ಷ್ಣವಾಗಿರಲಿಲ್ಲವೆಂದೂ ಹೇಳಬೇಕಾಗುವದು. ದಾರಿದ್ರ್ಯದ ದಪ್ಪವಾದ ಮುಸುಕನ್ನು ದ್ರೋಣನ ಮೇಲೆ ಹೊದೆಯಿಸಿ ನೋಡುತ್ತಿದ್ದುದರಿಂದ ದ್ರುಪದನ ಕಣ್ಣಿಗೆ ಮೊದಲಿನ ದ್ರೋಣನು ಕಾಣಿಸಲೇ ಇಲ್ಲವೆಂದೂ ಹೇಳಬೇಕಾಗುವದು. ಕಪಟವಿಲ್ಲದ ಮನುಷ್ಯನು ಜನಪ್ರಿಯನಾಗುವ ಕಾರಣವನ್ನು ವಿಚಾರಿಸಲು, ಆತನು ತನ್ನ ಮೇಲೆ ಹಲವು ಮುಸುಕುಗಳನ್ನು ಹಾಕಿಕೊಳ್ಳದೆ ತನ್ನನ್ನು—ಸ್ವಭಾವವನ್ನು—ಕಾಣಿಸಿಕೊಳ್ಳುತ್ತಾನೆಂಬುದೇ ಕಾರಣವೆಂದು ಕಂಡುಬರುವದು.

ಸ್ವಕೀಯತ್ವದ – ತನ್ನದೆಂಬ ಅಭಿಮಾನದ – ಮುಸುಕು ತೆಳ್ಳಗಿರುವುದು. ಪರಕೀಯತ್ವದ – ತನ್ನದಲ್ಲವೆಂಬ ಭಾವನೆಯ – ಮುಸುಕು ದಪ್ಪವಾಗಿರುವುದು. ಆದುದರಿಂದಲೇ ನಮ್ಮ ಮಗುವಿನ ಹೊಲಸಾದ ಗಂಟು ಮೋರೆಯನ್ನು ಮುದ್ದಿಸಿ ನಲಿದಾಡುವ ನಾವು ಹೆರವರ ಮಕ್ಕಳ ಹಸನಾದ ನಗುಮೊಗವನ್ನು ಮುದ್ದಿಸಹೋಗುವದಿಲ್ಲ.

೬. ನಾವು ಚಿಕ್ಕ ಮಕ್ಕಳನ್ನು ಕಂಡಾಗ ಸಂತೋಷಬಡುವೆವು. ನಮ್ಮ ಪ್ರೀತಿಯು ಆಗ ಉಕ್ಕೇರಿ ಬರುವುದು; ಸೃಷ್ಟಿದೇವಿಯ ಲೀಲಾವಿಲಾಸಗಳನ್ನು ನೋಡುವಾಗ ನಮ್ಮ ಕಣ್ಣುಗಳಿಂದ ಆನಂದಬಾಷ್ಪಗಳುದುರುವುವು. ಇದರ ಗುಟ್ಟು ಏನು? ಆತ್ಮನ "ಸತ್ಯ ಸುಂದರಂ ಆನಂದ" ಸ್ವರೂಪವು ಅಲ್ಲಿ ನಿಚ್ಚಳವಾಗಿ ಕಂಡುಬರುವದೇ ಅದರ ಗುಟ್ಟು. ಕನ್ನಡಿಯಲ್ಲಿ ಸ್ವರೂಪವು ಕಾಣಿಸುವಂತೆ ಅಲ್ಲಿ ಆತ್ಮಾನುಭವವನ್ನು ಮಾಡುವೆವು. ಮಗುವಿನಲ್ಲಿ ಮುಚ್ಚುಮರೆಯಿಲ್ಲ. ನೀನು ತಾನೆಂಬ ಭೇದಬುದ್ಧಿಯಿಲ್ಲ. ಪೂತನಿಯಂತೆ ವಿಷದ ಮೊಲೆಯುಣಿಸಬಂದವರೂ ಅದು ಕೃಷ್ಣನಂತೆ ಅಸು ಹೀರುವದಕ್ಕೆ ಹೋಗುವುದಿಲ್ಲ, ಕಾಳಸರ್ಪವನ್ನು ಮೆಟ್ಟಿ ಕೃಷ್ಣನಂತೆ ಕುಣಿದಾಡ ಹವಣಿಸುವುದು, ಅದನ್ನು ಆಟಿಗೆ ಮಾಡಿ ಅಮುಚಿಕೊಳ್ಳ ಹೋಗುವುದು. ಅದೇ ಮಗುವು ದಿನ ಹೋದಂತೆ ಆತ್ಮಸ್ವರೂಪವನ್ನು ಮರೆಮಾಡಿಕೊಂಡಂತೆ ಅದರ ಅಂತರಂಗದ ಮೇಲೆ ರಾಗದ್ವೇಷಾದಿಗಳ ಮುಸುಕು ಬೀಳುತ ಹೋದಂತೆ ಕನ್ನಡಿ ಹೋಗಿ ಕಲ್ಲಾದಂತೆ ಪ್ರೀತಿಬಡಿಸಲಾರದು. ಮಗನು ದೊಡ್ಡವನಾಗುತ್ತ ಹೋದಂತೆ ಆತನ ಮೇಲೆ ಪಶು ಪಕ್ಷಿಗಳ ತಾಯಂತೆ ಮಾನವ

ಜಾತಿಯ ತಾಯಿಯ ಪ್ರೀತಿಯೂ ಕಡಿಮೆಯಾಗುತ್ತ ಹೋಗುವುದರಲ್ಲಿ ಆಶ್ಚರ್ಯವೇನು? ಮನುಷ್ಯನು ತಾನು ಬೇರೆಯಾಗುತ್ತ ನಡೆದಂತೆ (ಅವನಿಗೆ) ಜಗತ್ತು ಬೇರೆಯಾಗಿ ಕಾಣುವದು.

೭. ಹರಿಶ್ಚಂದ್ರ*ನೆಂಬ ರಾಜನಿಗೆ ರೋಹಿತನೆಂಬ ಮಗನು ಆದನು. ಹುಟ್ಟಿದ ಮಗುವನ್ನು ಬಲಿಕೊಡುವೆನೆಂದು ವರುಣದೇವನಿಗೆ ಹರಿಕೆ ಹೊತ್ತು ಈ ಮಗನನ್ನು ಪಡೆದುದರಿಂದ ಹರಿಶ್ಚಂದ್ರನು ಈತನನ್ನು ವರುಣನಿಗೆ ಬಲಿಕೊಡಬೇಕಾಗಿತ್ತು. ತಿಳುವಳಿಕೆ ಬಂದ ಬಳಿಕ ರೋಹಿತನು ಅಂಜಿ ಹಲವು ವರ್ಷ ಕಾಡಿನಲ್ಲಿ ತೊಳಲಿದನು. ಕೊನೆಗೆ ಅಜೀಗರ್ತನೆಂಬ ಒಬ್ಬ ಬ್ರಾಹ್ಮಣನು ಬಡತನದಿಂದ ಬಳಲುತ್ತಿರುವುದನ್ನು ಕಂಡು ವರುಣದೇವನ ಬಲಿಗೆ ಆತನ ಒಬ್ಬ ಮಗನನ್ನು ಕೊಂಡುಕೊಳ್ಳಬೇಕೆಂದು ರೋಹಿತನು ಅವನ ಬಳಿಗೆ ಹೋಗಿ ನೂರು ಗೋಗಳಿಗೆ ನಿನ್ನ ಒಬ್ಬ ಮಗನನ್ನು ಕೊಡು ಎಂದು ಕೇಳಿದನು. ಅಜೀಗರ್ತನಿಗೆ ಶುನಃಪುಚ್ಛ, ಶುನಃಶೇಪ, ಶುನೋಲಾಂಗೂಲ ಎಂಬ ಮೂವರು ಮಕ್ಕಳು. ರೋಹಿತನು ಅಜೀಗರ್ತನನ್ನು ಕುರಿತು ನಿನ್ನ ಒಬ್ಬ ಮಗನನ್ನು ನನಗೆ ಮಾರಿಕೊಳ್ಳೆಂದು ಕೇಳಿಕೊಂಡನು. ತಂದೆಯು ಜ್ಯೇಷ್ಠಪುತ್ರನನ್ನು ಅಪ್ಪಿಕೊಂಡು ಈತನು ನಿನಗೆ ದೊರೆಯಲಾರನೆಂದು ರೋಹಿತನಿಗೆ ಹೇಳಿದನು. ತಾಯಿಯು ಕನಿಷ್ಠಪುತ್ರನನ್ನು ಅಪ್ಪಿಕೊಂಡು ಈತನು ನಿನಗೆ ದೊರೆಯಲಾರನೆಂದು ಹೇಳಿದಳು. ಶುನಃಶೇಪನು ನಡುವೆ ಹಾಗೆಯೇ ಉಳಿದನು. ತಾಯಿ ತಂದೆಗಳಿಬ್ಬರೂ ಶುನಃಶೇಪನನ್ನು ನೂರು ಗೋಗಳಿಗೆ ಮಾರಿಬಿಟ್ಟರು.

ಮುಂದೆ ಶುನಃಶೇಪನನ್ನು ಯಜ್ಞದಲ್ಲಿ ಬಲಿಕೊಡುವಾಗ ಆತನನ್ನು ಯೂಪಸ್ತಂಭಕ್ಕೆ ಯಾರೂ ಕಟ್ಟುವುದಕ್ಕೆ ಒಪ್ಪದಿರಲು ತಂದೆಯಾದ ಅಜೀಗರ್ತನೇ ಈ ಕೆಲಸಕ್ಕಾಗಿ ಮತ್ತೆ ನೂರು ಗೋಗಳನ್ನು ತೆಗೆದುಕೊಂಡು ಮಗನನ್ನು ಯೂಪಸ್ತಂಭಕ್ಕೆ ಕಟ್ಟಿದನು. ಆ ಬಳಿಕ ವಧೆಮಾಡಲು ಯಾರೂ ಒಪ್ಪದಿರಲು ಅಜೀಗರ್ತನು ಮತ್ತೆ ನೂರು ಗೋಗಳನ್ನು ತೆಗೆದುಕೊಂಡು ಆ ಕೆಲಸಕ್ಕೂ ಸಿದ್ಧನಾದನು. ಆದರೆ ಶುನಃಶೇಪನು ಹಲವು ದೇವತೆಗಳಿಗೆ ಮೊರೆಹೊಕ್ಕು ಈ ಸಂಕಟದಿಂದ ಬಿಡುಗಡೆ ಹೊಂದಿದನು.

ಕೆಲವು ಜನ ತಂದೆಗಳು ಹಿರಿಯ ಮಗನ ಮೇಲೂ ಕೆಲವು ಜನ ತಾಯಂದಿರು ಕಡೆ ಹುಟ್ಟಿದ ಮಗನ ಮೇಲೂ ಹೆಚ್ಚಿಗೆ ಪ್ರೀತಿಸುವರೆಂಬುದು ಇಲ್ಲಿ ಸೂಚಿತವಾಗುತ್ತಿದೆ. ನಡುವಿನ ಮಗನ ವಿಷಯದಲ್ಲಿ ಮಾತ್ರ ಅಜೀಗರ್ತನು ತೋರಿಸಿದ ಕ್ರೌರ್ಯವು ಯಾವ ಕಟುಕನಲ್ಲಿಯೂ ಕಂಡು ಬಾರದೆಂಬುದನ್ನು ಶುನಃಶೇಪನೇ ಮುಂದೆ ತಂದೆಯನ್ನು ಕುರಿತು ಹೇಳಿದಂತೆ ಆ ಕಥೆಯಲ್ಲುಂಟು.

ತಂದೆಯು ಹಿರಿಯ ಮಗನ ಮೇಲೂ ತಾಯಿಯು ಕಡೆಹುಟ್ಟಿದ ಮಗನ ಮೇಲೂ ಹೆಚ್ಚಿಗೆ ಪ್ರೀತಿಯನ್ನು ತೋರಿಸುವ ಕಾರಣವೇನಿರಬಹುದು? ತಂದೆಯು ಮಗನು ಬೇಕು ಎಂಬ ಭಾವನೆಯಿಂದ ಪ್ರೇರಿತನಾಗಿ ನಿರೀಕ್ಷಿಸಿಕೊಂಡಿರುವುದರಿಂದ ಮೊದಲು ಹುಟ್ಟಿದ ಮಗನ ಮೇಲೆಯೇ ಮಗನೆಂಬ ಅಭಿಮಾನವನ್ನು ಹೆಚ್ಚಿಗೆ ಇಟ್ಟುಕೊಳ್ಳುತ್ತ ಬರುವನೆಂದೂ ತಾಯಿಯು ಕಡೆಹುಟ್ಟಿದ ಮಗನಲ್ಲಿ ಕಿರುಗೂಸುತನದ ಕಲ್ಪನೆಯನ್ನು ಬಿಡದಿರುವಳೆಂದೂ ತೋರುವದು.

ಅತ್ಯಂತ ತೀಕ್ಷ್ಣವಾದ ದೃಷ್ಟಿಶಕ್ತಿಯು ಚಿತ್ರ ಬರೆಯುವ ಕೆಲಸದಲ್ಲಿ ಬಾಧಕವಾದುದೆಂದು ಒಂದು ಕಡೆ ಉಲ್ಲೇಖಿಸಿರುವುದನ್ನು ಓದಿರುವೆವು. ಆ ಮಾತಿನ ಅಭಿಪ್ರಾಯವೇನೆಂದರೆ ದೃಷ್ಟಿಶಕ್ತಿಯು ಅತಿಶಯ ತೀಕ್ಷ್ಣವಾಗಿದ್ದರೆ ಚಿತ್ರಗಾರನ ಕಣ್ಣಿಗೆ ವಸ್ತುವಿನೊಳಗಿನ ಕುಂದುಕೊರತೆಗಳೆಲ್ಲ ಒಡೆದು ಕಾಣುವವು. ಆಗ ಆ ವಸ್ತುವು ಆತನಿಗೆ ಕುಂದು ಕೊರತೆಗಳ ಸಮಷ್ಟಿಯಾಗಿ ಪರಿಣಮಿಸುವುದು. ಆದರಿಂದ ಆ ಚಿತ್ರಗಾರನು ಆ ವಸ್ತುವನ್ನು ಅಂದವಾಗಿ ಚಿತ್ರಿಸಲಾರದೆ ಹೋಗುವನು. ಹೆಚ್ಚಿಗೆ ಹಣವನ್ನು ತೆತ್ತು ನಾಟಕಗೃಹದಲ್ಲಿ ರಂಗಸ್ಥಳದ ಹತ್ತಿರವೇ ಕಾದಿರಿಸಿದ (ರಿಝರ್ವ್) ಆಸನದಲ್ಲಿ ಕುಳಿತುಕೊಂಡು ಖಂಡಿತ ಶ್ಮಶ್ರುವಾಗಿ ಸ್ತ್ರೀಭೂಮಿಕೆಯನ್ನಭಿನಯಿಸುವ ಪುರುಷ ನಟನ ಮುಖದ ಮೇಲಿನ ರೋಮಾಂಕುರ ಮೊದಲಾದ ಪುರುಷ ಚಿಹ್ನೆಗಳನ್ನು ಕಂಡು ಆತನಲ್ಲಿ ಸ್ತ್ರೀತ್ವ ಭಾವನೆಯು ಬಾರದೆ ರಸಾನುಭವಕ್ಕೆ ತಡೆಯಾಗಲು ಬಳಲುತ್ತಿರುವ ರಸಿಕನನ್ನು ಆ ಚಿತ್ರಕಾರನು ಹೋಲುತ್ತಾನೆಂದು

---

* ಐತರೇಯ ಬ್ರಾ, ಋಗ್ವೇದ ಸಂ.೧ ಮಾ.೧ ಅಧ್ಯಾಯ ೬, ಸೂ-೨೪

ಹೇಳಬಹುದು. ಈ ಮಾತಿನ ಪ್ರಸ್ತಾಪವನ್ನಿಲ್ಲಿ ಮಾಡಿದುದರ ಉದ್ದೇಶವೇನೆಂದರೆ 'ಪ್ರೇಮವು ಕುರುಡವಿರುತ್ತದೆ ಎಂದು' ಮರಾಟಿಗರಲ್ಲಿರುವ ಒಂದು ನುಡಿಯನ್ನು ಕೇಳಿ, ಅದರ ಉಪಪತ್ತಿಯು ಮೇಲಿನ ಮಾತಿನಲ್ಲಿರುವದೇ–ಎಂದು ಆಲೋಚಿಸಲು ಪಾಠಕರನ್ನು ಕೇಳಿಕೊಳ್ಳುವುದೇ ಆಗಿದೆ. ಪ್ರೇಮವು ಕುರುಡನಂತೆ ಆಗಲಿ, ಅದರಿಂದ ಕೊರತೆಯೇನು? ಪ್ರಾಣಿಗೆ ಕುರುಡು ಬಾಧಕವಲ್ಲದೆ ಪ್ರೇಮಕ್ಕೆ ಬಾಧಕವಲ್ಲ. ತಿರುಗಿ ಕೇಳಿದರೆ ಅದು ಅದಕ್ಕೆ ಭೂಷಣವು. ಪ್ರೇಮವು ಕುರುಡಾಗಿ ಪ್ರೇಮವಸ್ತುವಿನಲ್ಲಿರುವ ಕುಂದುಕೊರತೆಗಳನ್ನು ನಿರುಕಿಸದಿದ್ದರೆ ತಾನು ಬೆಳೆಯುವುದಲ್ಲದೆ ಕುಂದಲಾರದು. ಸರ್ವವಸ್ತುಗಳೂ ಸಗುಣಗಳಾಗಿರುವಂತೆ ಸದೋಷಗಳಾಗಿಯೂ ಇರುವಾಗ ಪ್ರೇಮಿಯ ಕಣ್ಣೂ ಮನವೂ ಕುರುಡಾಗಿ ಅಸಂದೋಷ್ಮುಖವಾಗುವದು, ಅದೊಂದು ಗುಣವೆಂದೇ ಹೇಳಬೇಕಾಗುವದು.

೮. ಎಲ್ಲ ಪ್ರೇಮವೂ ಸಹೇತುಕ ಪ್ರೇಮವಲ್ಲ; ಬ್ರಹ್ಮಜ್ಞಾನಿಗಳಾದ ಯಾಜ್ಞವಲ್ಕ್ಯರು ಹೇಳುವಂತಹ ಪ್ರೀತಿಯನ್ನು ಪಾಮರರಾದ ನಾವು ಸಂಪೂರ್ಣವಾಗಿ ಅರಿಯೆವೆಂದು ಹೇಳಲಾರೆವು. ಈ ಪ್ರೀತಿಭಾವವು ಚಿಕ್ಕವರನ್ನು ಕುರಿತಿದ್ದರೆ ವಾತ್ಸಲ್ಯವೆಂದೂ ಸಮಾನರನ್ನು ಕುರಿತಿದ್ದರೆ ಪ್ರೇಮವೆಂದೂ ಹಿರಿಯರನ್ನು ಕುರಿತಿದ್ದರೆ ಭಕ್ತಿಯೆಂದೂ ವಿಭಾಗಿಸಿ ಅದಕ್ಕೆ ಅನುಭಾವಸಂಚಾರಿಭಾವಾದಿಗಳನ್ನೂ ಕಲ್ಪಿಸಿರುವರು. ಭಾರತೀಯ ಕವಿಗಳಲ್ಲನೇಕರು ಸ್ತ್ರೀ–ಪುರುಷರಲ್ಲಿ ಪ್ರೇಮೋತ್ಪತ್ತಿಯು ಯೌವನದ ಕಾಲದ ಮಬ್ಬಿನಲ್ಲಿ ಪರಸ್ಪರ ದೈಹಿಕ ಸೌಂದರ್ಯಾವಲೋಕನದಿಂದ ಉಂಟಾದುದನ್ನು ಹೇಳಿದರೆಂಬ, ಆದುದರಿಂದಲೇ ಅವರು ಅವ್ಯಾಜ ಪ್ರೇಮವನ್ನರಿಯರೆಂಬ ಆಕ್ಷೇಪಣೆಗೆ ಗುರಿಯಾಗಿದ್ದರೂ ಕವಿಗಳೇ ನಮಗೆ ಈ ದಿವ್ಯ ಪ್ರೇಮವನ್ನು ನಿರೂಪಿಸಿ ತೋರಿಸಿರುವರು. ಮಹಾಕವಿ ಭವಭೂತಿಯು ಒಂದೆಡೆಯಲ್ಲಿ ದಿವ್ಯ ಪ್ರೇಮಕ್ಕೆ ಬಹಿರ್ನಿಮಿತ್ತವು ಇರುವುದಿಲ್ಲವೆಂದೂ ಸನಿಮಿತ್ತಕವಾದ ಪ್ರೇಮವು ನಿಜವಾದ ಪ್ರೇಮವೇ ಅಲ್ಲವೆಂದೂ ಹೇಳಿರುವನು.*

ಒಬ್ಬ ಕವಿಯು ಅವ್ಯಾಜ ಪ್ರೇಮವು ಚಿರಸ್ಥಾಯಿಯೆಂದು ಹೇಳುವಾಗ ಪ್ರೀತಿಯು ಜನ್ಮಾಂತರಸ್ಪರ್ಶಿಯಾಗಿಯೂ ಇರುವುದೆಂದು ಹೇಳಿರುವನು.

ಮೇಲ್ತರದ ಮನುಷ್ಯರು ಇಂತಹ ಪ್ರೀತಿಯನ್ನು ಮಾಡಬಲ್ಲರು. ಅಕಬರ ಬಾದಶಹನ ಕಾಲಕ್ಕಿಂತ ಮುಂಚೆಯಾಗಲಿ ಲಾರ್ಡ್ ಬೆಂಟಿಂಕನ ಕಾಲಕ್ಕಿಂತ ಮುಂಚೆಯಾಗಲಿ ಭಾರತೀಯ ಸತಿಯರು ಪತಿಪ್ರೇಮದಿಂದಲೊ ಇಲ್ಲವೆ ಕಾಲಮರ್ಯಾದೆಯ ಮೋಹದಿಂದಲೊ ಅಂಧಪರಂಪರೆಯಿಂದಲೊ ಸಹಗಮನಮಾಡುತ್ತಿದ್ದರೆಂದು ಸಂಶಯಗೊಂಡರೂ ಕೂಡ ಈಚೆಗೂ ಹಲವು ಜನ ಕುಲ ನಾರಿಯರು ಪತಿವಿಯೋಗವು ಸಮೀಪಿಸಿತೆಂದು ತೋರಿದಾಗಲೇ "ನಭರ್ತೃಹೀನ ವ್ಯವಸಾಮಿಜೀವಿತುಂ" ಎಂಬ ಸಾವಿತ್ರಿಯ ಉಕ್ತಿಯನ್ನು ನೆನೆದು ಪ್ರಾಣವನ್ನು ತೊರೆದರೆಂದು ಕೇಳುತ್ತಿರುವೆವು. ಮಕ್ಕಳ ಅಗಲಿಕೆಯಿಂದ ಹಲುಬಿ ಜೀವ ಬಿಡುವ ಜನ ಹಲವರಿರುವರು. ಅಸಮರ್ಥನಾದ ಇಲ್ಲವೆ ಮಂದ ಬುದ್ಧಿಯ ಮಗನನ್ನು ಹೆಚ್ಚಿಗೆ ಪ್ರೀತಿಸುವ ತಾಯಿಯ ಅಂತರಂಗವನ್ನು ಹೊಕ್ಕು ನೋಡಿದರೆ ಈ ನಿರ್ವ್ಯಾಜ ಪ್ರೇಮದ ಹೊಳಪು ಸ್ವಲ್ಪ ಕಂಡು ಬರುವುದು. ಧೃತರಾಷ್ಟ್ರನ ಕುರುಡಿಗಾಗಿ ಗಾಂಧಾರಿಯು ತಾನೂ ಆಮರಣ ಕಣ್ಣುಗಳನ್ನು ಕಟ್ಟಿಕೊಂಡಿದ್ದಳೆಂಬುದನ್ನು ಕೇಳುವಾಗ ಈ ಅವ್ಯಾಜ ಪ್ರೇಮದ ಒಂದು ಕಿರಣವು ನಮ್ಮ ಕಣ್ಣಿಗೆ ಕಾಣುವದು. ಮೃತ್ಯುವಿನ ಮನೆಗೆ ಹೊರಟಂತೆ ಅಡವಿಗೆ ಹೊರಟ 'ಸತ್ಯವಂತ'ನನ್ನು ಆತನ ಮಡದಿ, ಅರಸು ಮಗಳಾದ ಸಾವಿತ್ರಿಯು ಹಿಂಬಾಲಿಸಿದುದನ್ನು ನೆನೆಸಿಕೊಂಡಾಗ ಈ ಅನಿಮಿತ್ತ ಪ್ರೇಮವನ್ನು ಸ್ವಲ್ಪ ಗುರುತಿಸುವೆವು. ಕೈಕೇಯಿಯ ತಂತ್ರದಿಂದ ಅಡವಿಗೆ ಹೋದ ರಾಮಚಂದ್ರನನ್ನು ಮರಳಿ ಕರೆತರುವೆನೆಂದು ಹೊರಟ ಭರತನಲ್ಲಿ ಈ ಅಹೈತುಕ ಪ್ರೇಮದ ಒಂದು ಲಹರಿಯನ್ನು ಕಾಣುವೆವು. ಕೂಸನ್ನು ಎರಡು ತುಂಡು ಮಾಡಿ ಈ ಇಬ್ಬರೂ ತಾಯಂದಿರಿಗೂ ಒಂದೊಂದು ತುಂಡನ್ನು ಕೊಡಿರೆಂದು ಕಾಜಿಯು ತನ್ನ ಸೇವಕರಿಗೆ ಆಜ್ಞಾಪಿಸಲು "ಎಲ್ಲಿದ್ದರೂ ನನ್ನ ಈ ಕಂದನಿಗೆ ಕಲ್ಯಾಣವಾಗಲಿ" ಎಂದು ಹರಸಿ ಸವತಿಗೇ ಕೂಸನ್ನು ಕೊಡಿಸಹೋದ ತಾಯಿಯಲ್ಲಿ ಈ ಪರಮ ಪ್ರೇಮದ ಒಂದು ಮಾದರಿಯನ್ನು ಕಾಣಬಹುದು.

---

* ವ್ಯತಿಷಜತಿ ಪದಾರ್ಥಾನ್ ' ಆಂತರಃ ಕೋಽಪಿ ಹೇತುಃ

ಸಾವಿನ ಸಿದ್ಧತೆ

ಮೂಲ : ಜಾನ್ ಗಾಡ್‌ಫ್ರೇ
ಕನ್ನಡಕ್ಕೆ : ಸವ್ಯಸಾಚಿ

ಈ ಕಾರಾಗೃಹಕ್ಕೆ ಮರಣದಂಡನೆಗೀಡಾದ ಕೈದಿಗಳನ್ನಷ್ಟೇ ತರಲಾಗುವುದೆಂದು ಜಾನ್ ರೆಸ್ಕೋನಿಗೆ ತಿಳಿದಿತ್ತು. ಈ ಯೋಚನೆ ಮೂಡುತ್ತಲೇ ಬಾಗಿಲಿನ ಉಕ್ಕಿನ ಸರಳುಗಳ ಮೇಲೆ ಅವನ ಹಿಡಿತ ಬಲವಾಯಿತು. ಅವನ ದೃಷ್ಟಿ ಮೇಲ್ಭಾಗದ ಬಲ್ಬಿನತ್ತ ಹರಿಯಿತು. ಅದರಿಂದ ಹೊಮ್ಮುವ ಹಳದಿ ಬೆಳಕು ನೆಲದ ಮೇಲೆ ಹರಡುತ್ತಿತ್ತು. ಒಂದು ದಿನದೊಳಗೆ ಈ ಬೆಳಕೇ ಅವನನ್ನು ಗಾಢಾಂಧಕಾರದಲ್ಲಿ ತಳ್ಳುವುದಲ್ಲವೆ?

ಹತ್ತಿರದ ಕೈದಿ, "ತಮ್ಮಾ...ಏನು ಯೋಚಿಸುತ್ತೀ?" ಎಂದ.

ರೆಸ್ಕೋ ಬಲ್ಬು ನೋಡುವುದನ್ನು ಬಿಟ್ಟ. ಸಾವಿನತ್ತ ಸಾಗುವವರು ತಮ್ಮ ದೌರ್ಬಲ್ಯವನ್ನು ತೋರ್ಪಡಿಸಬಾರದು ಎಂದು ಅವನ ಹೃದಯ ಒಡನುಡಿಯಿತು. "ನೀನು ಯೋಚಿಸುತ್ತಿರುವುದನ್ನೇ." ಎಂದು ತುಂಬ ನಿಶ್ಚಿಂತೆಯಿಂದ ಉತ್ತರಿಸಿದ.

"ಮುಸುಕು ಹೊದೆದು ಮಲಗಿಕೋ."

"ಆಗಲಿ...ಆಗಲಿ..." ತೀಕ್ಷ್ಣವಾಗಿ ಮುಗುಳು ನಕ್ಕು ನುಡಿದ ರೆಸ್ಕೋ.

ಆದರೆ ಸಾವಿನ ವಿಚಾರ ಅವನ ಮಿದುಳಿನಲ್ಲಿ ಸುಳಿಯುತ್ತಲೇ ಇತ್ತು. ವಿದ್ಯುತ್ ಕುರ್ಚಿ ಇಟ್ಟಿದ್ದ ಕೋಣೆಯ ಉಕ್ಕಿನ ಬಾಗಿಲನ್ನು ಆತ ಈಗಾಗಲೇ ಕಂಡಿದ್ದ. 'ಆ ಬಾಗಿಲಿನ ಮೂಲಕ ಹಾದು ನಿಶ್ಚಿಂತೆಯಿಂದ ವಿದ್ಯುತ್ ಕುರ್ಚಿಯ ಮೇಲೆ ಕುಳಿತು ಕೊಳ್ಳುವವರು ನಿಜಕ್ಕೂ ಎಂಟೆದೆಯವರಿರಬೇಕು. ಚೀತ್ಕಾರ ಮಾಡದೆ ನಾನು ಈ ಕೆಲಸವನ್ನು ಅದೆಂತು ಮಾಡಬಲ್ಲೆ? ಅವರು ವಿದ್ಯುತ್ ಗುಂಡಿಯನ್ನೊತ್ತಿದಾಗ ಹೇಗೆನಿಸೀತು?'

ಮುಂದಿನ ೨೪ ತಾಸುಗಳಲ್ಲಿ ಅವನಿಗೆ ಎಲ್ಲವೂ ಅರ್ಥವಾಗುವುದು. ವಿದ್ಯುತ್ ಗುಂಡಿ ಒತ್ತಿದಾಗ ಒಮ್ಮೆಲೇ ಸಿಡಿಲೆರಗಿದ ಅನುಭವವಾದೀತು. ಕ್ಷಣಕಾಲ ಅವನನ್ನು ಮೃತ್ಯುಭಯ ಆವರಿಸಿತು. ಸರಳುಗಳ ಮೇಲೆ ಅವನ ಹಿಡಿತ ಇನ್ನಷ್ಟು ಬಲವಾಯಿತು. ಆ ಬಳಿಕ ತನ್ನಿಂದ ಕೊಲೆಯಾದ ವ್ಯಕ್ತಿಯ ರೂಪ ಕಣ್ಮುಂದೆ ನಲಿದಾಡಿತು.

ಇದು ಮೊದಲ ಮಹಾಯುದ್ಧದ ನಂತರದ ಸಂಗತಿ. ಆ ವೇಳೆ ಆತ ಲೋವರ್ ಸ್ಟೇಟ್

ಸೈಡ್‌ನಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ ವಾಸಿಸುತ್ತಿದ್ದ. ಅವನ ಎರಡನೇ ಮಗು ಹುಟ್ಟುವುದರಲ್ಲಿತ್ತು. ಬಡತನದಲ್ಲಿ ಮುಳುಗಿದ್ದ ಆತ ನಿರುದ್ಯೋಗಿಯಾಗಿದ್ದ. ಉದ್ಯೋಗ ಹುಡುಕುತ್ತ ಆತ ಒಂದು ತಿಂಗಳ ವರೆಗೂ ಬೀದಿ ಬೀದಿ ಅಲೆದಾಡುತ್ತಿದ್ದ.

ಫೆಬ್ರುವರಿ ೮ರ ಆ ಕತ್ತಲಿನ ಬಿರುಗಾಳಿಯ ರಾತ್ರಿ ಯಾವಾಗಲೂ ಅವನ ನೆನಪಿನಲ್ಲುಳಿಯುವುದು. ಅವನ ೧೯ನೇ ಜನ್ಮದಿನಕ್ಕೆ ಒಂದು ದಿನ ಮಾತ್ರ ಉಳಿದಿತ್ತು. ಅದೆಂತೋ ಒಂದು ಪಿಸ್ತೂಲು ಅವನಿಗೆ ಸಿಕ್ಕಿತು. ಅದನ್ನು ಓವರ್ ಕೋಟಿನ ಜೋಬಿಗೆ ಹಾಕಿಕೊಂಡು ಆತ ಮನೆಯಿಂದ ಹೊರಬಿದ್ದ ಮತ್ತು ಗಲ್ಲಿಯ ತುದಿಯಲ್ಲಿರುವ ಕಿರಾಣಿಯಂಗಡಿಗೆ ನುಗ್ಗಿದ.

ಮುದಿ ಅಂಗಡಿಕಾರ ದಿನವಿಡಿಯ ಗಳಿಕೆಯ ಹಣ ಲೆಕ್ಕಿಸುತ್ತಿದ್ದ. ರೆಸ್ಕೋ ಪಿಸ್ತೂಲು ತೋರಿಸುತ್ತ, "ಒಂದು ಕಾಸನ್ನೂ ಮುಟ್ಟಬೇಡ" ಎಂದು ಜಬರಿಸಿದ. ಇದನ್ನು ಕೇಳುತ್ತಲೇ ಮುದುಕ ಕೈ ಚಾಚಿ ತನ್ನ ಲಾಠಿ ಹಿಡಿದುಕೊಂಡ. ಆದರೆ ರೆಸ್ಕೋ ಅವನಿಗೆ ಅವಕಾಶವನ್ನೇ ನೀಡದೆ ಗುಂಡು ಹಾರಿಸಿ ಹಣ ಕಿತ್ತುಕೊಂಡು ಹೊರಗೋಡಿದ....

ಅವನ ಕತೆ ಕೇಳಿ ನ್ಯಾಯಾಲಯ ಸಹಾನುಭೂತಿ ವ್ಯಕ್ತಪಡಿಸಿತು. ಆದರೆ ಉದ್ದೇಶಪೂರ್ವಕವಾಗಿ ಕೊಲೆಗೈದುದರಿಂದ ಅವನಿಗೆ ಮರಣದಂಡನೆ ವಿಧಿಸಿತು.

ಈ ತೀರ್ಪು ಪ್ರಕಟವಾಗಿ ಆರು ತಿಂಗಳು ಕಳೆದವು. ಅಪೀಲು ಮಾಡಲು ಅವನಿಗೆ ಅವಕಾಶ ದೊರೆಯಿತು. ಆದರೆ ಅದೂ ತಿರಸ್ಕೃತವಾಯಿತು. ಈಗ ಅವನನ್ನು ವಿದ್ಯುತ್ ಕುರ್ಚಿಯ ಪಕ್ಕದ ಕೋಣೆಯಲ್ಲಿ ಇರಿಸಲಾಯಿತು. ಆತ ಬಾಗಿಲ ಸರಳುಗಳನ್ನು ಹಿಡಿದು ಕಾರಾಗಾರದ ಸಂರಕ್ಷಕರನ್ನೂ ಕೊಲೆಯಾದ ವ್ಯಕ್ತಿಯನ್ನೂ ತನ್ನ ಹೆಂಡತಿ ಮಕ್ಕಳನ್ನೂ ಬಯ್ಯತೊಡಗಿದ.

ಅರ್ಧ ರಾತ್ರಿಯ ಬಳಿಕ ಸುಸ್ತಾಗಿ ರೆಸ್ಕೋ ನಿದ್ರಿಸಲು ಯತ್ನಿಸಿದ. ಅದಕ್ಕೂ ಮುನ್ನ ಅವನು ಕೈ ಬಾಯಿ ತೊಳೆದುಕೊಂಡ. ಹಲ್ಲುಜ್ಜಿಕೊಂಡು ನಿಶ್ಚಿಂತೆಯಿಂದ ಹಾಸಿಗೆಯ ಮೇಲೊರಗಿದ. ತರತರದ ಶಂಕೆಗಳು ಅವನ ಮನದಲ್ಲಿ ಮೂಡತೊಡಗಿದವು. ಆದರೆ ಆತ ಅವಾವುದನ್ನೂ ಲೆಕ್ಕಿಸಲಿಲ್ಲ. ಇದು ಅವನ ಬದುಕಿನ ಕೊನೆಯ ರಾತ್ರಿ. ತುಸು ಹೊತ್ತಿನಲ್ಲೇ ಅವನು ನಿದ್ದೆ ಹೋದ.

ಬೆಳಿಗ್ಗೆ ೬-೩೦ಕ್ಕೆ ಅವನಿಗೆ ಎಚ್ಚರವಾಯಿತು. ಗುರುವಾರದ ಬೆಳಗು ಅದು.

ಸಿಂಗ್ ಸಿಂಗ್ ಎಂಬ ಹೆಸರಿನ ಆ ಕಾರಾಗೃಹದ ನಿಯಮದಂತೆ ಅಪರಾಧಿಗಳನ್ನು ಗುರುವಾರ ಮಾತ್ರ ವಿದ್ಯುತ್ ಕುರ್ಚಿಯ ಮೇಲೆ ಕುಳ್ಳಿರಿಸಲಾಗುತ್ತಿತ್ತು. ಈ ಪರಂಪರೆಗೆ ಕಾರಣವೇನೆಂಬುದನ್ನು ಯಾರೂ ಅರಿಯರು. ಹಲವಾರು ವರ್ಷಗಳಿಂದ ಈ ನಿಯಮವನ್ನು ತಪ್ಪದೆ ಪಾಲಿಸಲಾಗುತ್ತಿತ್ತು.

ಕೈದಿಗಳಿಗೆ ಬೆಳಗಿನ ಉಪಾಹಾರ ಬಂತು. ಹೊರಗೆ ಜಗಲಿಯಲ್ಲಿ ಬಿಸಿಲು ಸುಖಕರವಾಗಿ ಹರಡಿತ್ತು. ಅಂದು ತುಂಬ ರುಚಿಕರವಾದ ಉಪಾಹಾರ ದೊರೆಯಿತು. ಅದನ್ನು ತಿನ್ನುವಾಗ ತನಗೆ ಎರಡು ವ್ಯಕ್ತಿತ್ವಗಳಿವೆಯೆಂದು ಅವನಿಗನ್ನಿಸಿತು. ನಿಶ್ಚಿಂತೆಯಿಂದ ತಿನ್ನುತ್ತಿರುವ ರೆಸ್ಕೋ ಒಬ್ಬನಾದರೆ, ವಿದ್ಯುತ್ ಕುರ್ಚಿಯ ಮೇಲೆ ಕುಳಿತುಕೊಳ್ಳಲಿರುವ ರೆಸ್ಕೋ ಇನ್ನೊಬ್ಬ!

ಮೂವರು ಕಾವಲುಗಾರರು ಅಕಸ್ಮಾತ್ ಬಾಗಿಲಿನಿಂದ ಒಳಬಂದರು. ಅವರನ್ನು ಕಾಣುತ್ತಲೇ ತನ್ನ ಪ್ರಾಣ ಹಾರಿಹೋದಂತೆ ಅವನಿಗನ್ನಿಸಿತು. ಇದು ಮೃತ್ಯುದೇವತೆಯ ಮೊದಲ ದರ್ಶನ.

ಒಬ್ಬನೆಂದ: "ರಾತ್ರಿ ೧೧ ಗಂಟೆಗೆ ಸರಿಯಾಗಿ... ನಿನಗೆ ಇದೇ ವೇಳೆಯನ್ನು ಗೊತ್ತುಪಡಿಸಲಾಗಿದೆ." ಆ ಬಳಿಕ ಅವರು ಅವನಿಗೆ ಹೊರಡಲು ಹೇಳಿದರು.

ಅವರ ಮಾತು ಕೇಳಿ ಉಳಿದ ಕೈದಿಗಳೂ ಬಾಗಿಲ ಹತ್ತಿರ ಬಂದು ನಿಂತರು. ಅವರೆಲ್ಲ ಅವನಿಗೆ ವಿದಾಯ ಹೇಳಿದರು.

ಮರಣದಂಡನೆಗೆ ಗುರಿಯಾದ ವ್ಯಕ್ತಿ ತನ್ನ ಕೊನೆಯ ಕೆಲ ಕ್ಷಣಗಳನ್ನು ಕಳೆಯುವಂತಹ ಕೋಣೆಗೆ ತಾನೀಗ ಹೋಗುತ್ತಿದ್ದೇನೆಂದು ಅವನಿಗೆ ಮನದಟ್ಟಾಯಿತು.


ಕಳೆದ ೬ ತಿಂಗಳ ಅವಧಿಯಲ್ಲಿ ಈ ಹಾದಿಯಾಗಿ ಸಾಗಿದ ಎಲ್ಲ ಮುಖಗಳೂ ಅವನಿಗೆ ಒಂದೊಂದಾಗಿ ನೆನಪಾದವು. ಆ ಜನರಲ್ಲಿ ಕೆಲವರಂತೂ ಕೋಣೆಯ ಬಳಿ ಸಾಗುವುದರೊಳಗೇ ಮೂರ್ಛಿತರಾಗಿ ಬಿದ್ದಿದ್ದರು. ಕೆಲವರು ಚೀರಿದರೆ ಕೆಲವರು ದೇವರನ್ನು ಪ್ರಾರ್ಥಿಸಿದ್ದರು. ಆದರೆ ಅನೇಕರು ಸಂತೋಷದಿಂದ ಅಟ್ಟಹಾಸಗೈದುದೂ ಉಂಟು.

ಈ ಕೋಣೆ ತುಂಬ ಇಕ್ಕಟ್ಟಾಗಿದ್ದು ಕತ್ತಲೆಯಿಂದ ತುಂಬಿತ್ತು. ಬಾಗಿಲ ಬಳಿಯೇ ಟೆಲಿಫೋನು ಇತ್ತು. ಎದುರಿನ ಗೋಡೆಗೆ ಒಂದು ಬಾಗಿಲಿದ್ದು ಅದು ಕುರ್ಚಿಯಿರುವ ಕೋಣೆಗೆ ಕೊಂಡೊಯ್ಯುತ್ತಿತ್ತು. ಮರಣದಂಡನೆಗೀಡಾದವರು ಅದನ್ನು ನೃತ್ಯಾಗಾರ ಎಂದು ಕರೆಯುತ್ತಿದ್ದರು.

ಅವರೆಲ್ಲ ಒಳನುಗ್ಗುತ್ತಲೇ ಬಾಗಿಲು ತಾನಾಗಿಯೇ ಮುಚ್ಚಿಕೊಳ್ಳುತ್ತಿತ್ತು. ಕಾವಲುಗಾರರು ಅವನನ್ನು ಕುರ್ಚಿಯಿರುವ ಕೋಣೆಯ ಬಾಗಿಲವರೆಗೆ ಕರೆದೊಯ್ದರು. ಇಲ್ಲಿಗೆ ತಲುಪಿದ ಬಳಿಕ ಸಾಯುವವನ ಪ್ರತಿಯೊಂದು ಸಣ್ಣ ಪುಟ್ಟ ಇಚ್ಛೆಯನ್ನು ಈಡೇರಿಸಲಾಗುತ್ತಿತ್ತು. ಕಾವಲುಗಾರರು ಅವನಿಗೆ ಸಿಗರೇಟು ಕೊಡಬಹುದು, ಅವನಿಗೆ ವೇಳೆ ತಿಳಿಸಬಹುದು, ಆತ ಏನಾದರೂ ಪ್ರಶ್ನಿಸಿದರೆ ಅದಕ್ಕೆ ಉತ್ತರವನ್ನು ಕೊಡಬಹುದು. ಆತ ಮೌನವಾಗಿಯೇ ಇರಬಯಸಿದರೆ ಅವರು ಕೂಡ ಸುಮ್ಮನೆ ಸಿಗರೇಟು ಸೇದುತ್ತ ಕುಳಿತುಕೊಳ್ಳುತ್ತಿದ್ದರು.

ಈ ಕೊಠಡಿಗೆ ಬಂದ ಬಳಿಕವೂ ಎಷ್ಟೋ ಜನರ ಜೀವವುಳಿದ ಘಟನೆಗಳನ್ನು ರೆಸ್ಕೋ ಕೇಳಿದ್ದ. ಕೊನೆಯ ಗಳಿಗೆಯಲ್ಲಿ ಏನಾದರೂ ಚಮತ್ಕಾರ ನಡೆಯುತ್ತಿತ್ತು. ಆದರೆ ಅವನು ಇಂತಹ ಯಾವ ಕತೆಯನ್ನೂ ನಂಬಲಿಲ್ಲ.

ತುಸು ಹೊತ್ತಿನ ಬಳಿಕ ಜೈಲಿನ ಕ್ಷೌರಿಕ ಕುಪ್ಪಳಿಸುತ್ತಾ ಅಲ್ಲಿಗೆ ಬಂದ. ಅವನು ಕಳೆದ ಆರು ತಿಂಗಳಿಂದಲೂ ಇತರ ಕೈದಿಗಳೊಂದಿಗೆ ರೆಸ್ಕೋನಿಗೂ ಕ್ಷೌರವನ್ನೂ ಮಾಡುತ್ತಿದ್ದ. ಇಂದು ಆತ ಅವನ ತಲೆಯ ಮೇಲೆ ಕತ್ತಿ ಚಲಾಯಿಸಿದ. ಕುರ್ಚಿಯ ಮೇಲೆ ಕುಳಿತುಕೊಳ್ಳುವುದಕೆ



ಮೊದಲು ಈ ಕೆಲಸ ನಡೆಯಬೇಕಿತ್ತು. ವಿದ್ಯುತ್ ತಂತಿಗಳನ್ನು ತಲೆಗೆ ಜೋಡಿಸಲು ಇದು ಅಗತ್ಯವಿತ್ತು. ಆ ವೇಳೆಗೆ ಜೋರಾಗಿ ಚೀತ್ಕರಿಸುವ ಮನಸ್ಸಾಯಿತು ಅವನಿಗೆ. ಕ್ಷೌರಿಕ ತುಂಬ ನಿಧಾನವಾಗಿ ತನ್ನ ಕೆಲಸ ಮಾಡುತ್ತಿದ್ದ. ಸಾಯುವವನ ಬಳಿ ಹೆಚ್ಚು ಕಾಲ ಇರಬೇಕೆಂಬುದೇ ಅವನ ಉದ್ದೇಶ. ಅವನು ಹೋದ ಬಳಿಕ ಭಯಂಕರ ಒಂಟಿತನದ ಅನುಭವವಾಯಿತು ರೆಸ್ಕೋನಿಗೆ.

ಈ ಕಾವಲುಗಾರರು ಸ್ನಾನ ಮಾಡುವಂತೆ ಅವನಿಗೆ ಸೂಚಿಸಿ ಶುಭ್ರ ಬಟ್ಟೆಗಳನ್ನು ಕೊಟ್ಟ–ರು. ಮಧ್ಯಾಹ್ನದೂಟವನ್ನು ಆತ ಅದೇ ಕೋಣೆಯಲ್ಲಿ ಉಣ್ಣಬೇಕಿತ್ತು. ಅವನು ಬಹು ಹೊತ್ತಿನ ವರೆಗೆ ಆ ಕೊನೆಯ ಊಟದ ಸವಿ ಸವಿಯುತ್ತಿದ್ದ. ಮತ್ತೆ ಸಿಗರೇಟು ಹಚ್ಚಿ ಹೊಗೆ ಹಾರಿಸತೊಡಗಿದ.

ಹಗಲಿನ ಉಳಿದ ಭಾಗ ಹೊಗೆಯಂತೆಯೇ ಹಾರಿಹೋಯಿತು. ಸಂಜೆ ವೇಳೆ ಒಬ್ಬ ಕಾವಲುಗಾರ ಅವನನ್ನು ಒಂದೆಡೆಗೆ ಕರೆದೊಯ್ದ. ಇಲ್ಲಿ ಸಾಯುವವನ ಸಂಬಂಧಿಕರು ಅವನೊಡನೆ ಕೊನೆಯ ಭೇಟಿ ಪಡೆಯುತ್ತಿದ್ದರು. ರೆಸ್ಕೋನ ತಾಯಿ, ಹೆಂಡತಿ ಹಾಗೂ ಇಬ್ಬರು ಸೋದರಿಯರು ಅಲ್ಲಿದ್ದರು. ಹಗಲಿನ ಬೆಳಕು ಮಸಕಾಗುತ್ತ ಹೋದಂತೆ ಅವರು ಪರಸ್ಪರರ ಮೋರೆಯನ್ನು ಸರಿಯಾಗಿ ನೋಡದಾದರು. "ನಿನ್ನ ವಕೀಲ ದಯಾಭಿಕ್ಷೆಯ ಅರ್ಜಿ ಹಿಡಿದು ಗವರ್ನರರ ಬಳಿ ಹೋಗಿದ್ದಾನೆ," ಎಂದಳು ತಾಯಿ.

ರೆಸ್ಕೋನ ಸೋದರಿಯರು ಈ ದೃಶ್ಯ ನೋಡಲಾರದೆ ಅಳತೊಡಗಿದರು. ಅವರ ಅಳು ಅವನ ಹೃದಯವನ್ನು ಭೇದಿಸತೊಡಗಿತು. ಆತ ಅವರಿಗೆ ಧೈರ್ಯ ತಳೆಯುವಂತೆ ಉಪದೇಶಿಸಿದ. ವೇಳೆ ವೇಗ ವೇಗವಾಗಿ ಸರಿಯುತ್ತಿತ್ತು. ಮರಳುವಂತೆ ಕಾವಲುಗಾರರು ರೆಸ್ಕೋನಿಗೆ ಸಂಕೇತ ಮಾಡಿದರು. ಸಂಜೆ ಕಳೆಯುತ್ತಿತ್ತು. ಇನ್ನು ಅವನ ಬದುಕಿನ ಕೆಲವೇ ತಾಸುಗಳು ಉಳಿದಿದ್ದುವು.

ನಾಲ್ವರೂ ಮಹಿಳೆಯರು ಮೆಲ್ಲ ಮೆಲ್ಲನೆ ಅವನಿಂದ ದೂರವಾದರು. ಎಲ್ಲರೂ ತಮ್ಮ ಮೊರೆಯನ್ನು ಕರವಸ್ತ್ರದಿಂದ ಮುಚ್ಚಿಕೊಂಡಿದ್ದರು.

ವಕೀಲನಿಂದ ಆಶಾದಾಯಕ ಸಂದೇಶ ಬಂದೀತೆಂದು ಅವನು ಹಾರೈಸುತ್ತಿದ್ದ. ಆದರೆ ಕಾವಲುಗಾರ ಗಡಿಯಾರ ನೋಡಿ, "ಒಂಬತ್ತು ಆಯಿತು," ಎಂದಾಗ ರೆಸ್ಕೋನ ಕೊನೆಯಾಸೆಯೂ ಹುಡಿಗೂಡಿತು.

ನೃತ್ಯಾಗಾರ ಅರ್ಥಾತ್ ಕುರ್ಚಿಯ ಕೋಣೆ ಬೆಳಕಿನಲ್ಲಿ ತೊನೆದಾಡುತ್ತಿತ್ತು. 'ಓ! ನೌಕರರು ಕುರ್ಚಿಯನ್ನು ಪರೀಕ್ಷಿಸುತ್ತಿದ್ದಾರೆ. ವಿದ್ಯುತ್ ಇಲಾಖೆಯವರು ಏನಾದರೂ ದೋಷವಿದೆಯೋ ಎಂದು ನೋಡುತ್ತಿದ್ದಾರೆ,' ಎಂದು ಯೋಚಿಸಿದ ರೆಸ್ಕೋ. ಕ್ಷಣಕಾಲ ಅವನಿಗೆ ತನ್ನ ಸಾವಿನ ನೆನಪಾಯಿತು. ಆದರೆ ಆತ ಈ ವಿಚಾರವನ್ನು ಅಟ್ಟಹಾಸದಲ್ಲಿ ಮುಳುಗಿಸಿಬಿಟ್ಟ.

ಇಬ್ಬರೂ ಕಾವಲುಗಾರರು ಕೋಣೆಗೆ ಬಂದರು. ಅವರಲ್ಲೊಬ್ಬ ಕೈಯಲ್ಲಿ ಕತ್ತರಿಯಿತ್ತು. "ನಿನ್ನ ಪ್ಯಾಂಟಿನ ಮೊಣಕಾಲುಗಳನ್ನು ಮಾತ್ರ ಕತ್ತರಿಸಲಾಗುವುದು" ಎಂದನೊಬ್ಬ

ಮೊಣಕಾಲುಗಳಿಗೆ ವಿದ್ಯುತ್ ತಂತಿಗಳನ್ನು ಜೋಡಿಸಲು ಅನುಕೂಲವಾಗಲೆಂಬುದೇ ಇದರ ಉದ್ದೇಶ. ಅವರು ಅವನ ಮೊಣಕಾಲುಗಳನ್ನು ಬರಿದು ಮಾಡಿ ಹೊರಟು ಹೋದಾಗ ರೆಸ್ಕೋನ ಚಡಪಡಿಕೆ ಆರಂಭವಾಯಿತು. ಆತ ಅತ್ತಿತ್ತ ತಿರುಗಾಡಿದ.

"ಎಷ್ಟು ವೇಳೆ?" ಕೇಳಿದ ಒಬ್ಬನನ್ನು.

"ಒಂಬತ್ತೂವರೆ ಅರ್ಥಾತ್ ೫೪೦೦ ಸೆಕೆಂಡ್!" ಎಂದಿತು ಅವನ ಹೃದಯ. ಇಬ್ಬರೂ ಕಾವಲುಗಾರರು ಅವನೆದುರು ಕುಳಿತು ಸಿಗರೇಟ್ ಸೇದುತ್ತ ಮಾತಾಡತೊಡಗಿದರು. ತುಸು ಹೊತ್ತಿನಲ್ಲೇ ಪಾದರಿಯೊಬ್ಬ ಒಳಬಂದ. ಅವನನ್ನು ಕಾಣುತ್ತಲೇ ಕಾವಲುಗಾರರು ಸಿಗರೇಟ್ ಬಿಸುಟು ತಲೆಯಿಂದ ಹ್ಯಾಟ್ ತೆಗೆದರು.

"ಫಾದರ್... ನನಗೆ ನಿಮ್ಮ ಅಗತ್ಯವಿಲ್ಲ." ಖಂಡತುಂಡವಾಗಿ ನುಡಿದ ರೆಸ್ಕೋ. ಕಾವಲುಗಾರರು ಅವನನ್ನು ಅರ್ಥಪೂರ್ಣ ದೃಷ್ಟಿಯಿಂದ ದಿಟ್ಟಿಸಿ ಮೊಣಕಾಲೂರಿ ಕುಳಿತುಕೊಳ್ಳುವಂತೆ ಸಂಕೇತ ಮಾಡಿದರು. ರೆಸ್ಕೋನ ಮಾತಿನತ್ತ ಗಮನ ಕೊಡದೆ ಕ್ರೈಸ್ತ ಪದ್ಧತಿಯಿಂದ ಸಾಯುವವನಿಗಾಗಿ ಪಾದರಿ ಪ್ರಾರ್ಥನೆ ಮಾಡತೊಡಗಿದ.

"ಮಗು ನಾವೆಲ್ಲರೂ ಅಪರಾಧಿಗಳೇ" ಎಂದು ಹೇಳುತ್ತಿದ್ದನಾತ. ಗಂಟೆ ೧೦-೩೦! ತನ್ನ ಬೆರಳುಗಳ ತುದಿಯಿಂದ ಜೀವನ ಹನಿ ಹನಿಯಾಗಿ ಒಸರುತ್ತಿದ್ದಂತೆ ರೆಸ್ಕೋನಿಗೆ ಅನ್ನಿಸಿತು. ನೃತ್ಯಾಗಾರದ ಕೆಲಸಗಾರರು ಭಜನೆ ಮಾಡುತ್ತಿದ್ದರು. ಇದು ಜೈಲಿನ ಹಳೆಯ ನಿಯಮ.

ರೆಸ್ಕೋ ಯೋಚಿಸತೊಡಗಿದ. 'ನಾನು ಸಾವಿನತ್ತ ಸಾಗುತ್ತಿರುವುದನ್ನು ಯಾರಾರು ನೋಡುವವರು? ರಾಜನೀತಿಜ್ಞರೆ? ನ್ಯಾಯವಾದಿಗಳೆ? ಪತ್ರಕರ್ತರೆ?' ಅವರ್ಣನೀಯ ಭಯ ಲಹರಿಯೊಂದು ಅವನ ಎಲುಬುಗಳ ವರೆಗೂ ಹರಿಯಿತು. ಆದರೆ ಆತ ಅದನ್ನು ದೂರ ಸರಿಸಿ 'ಇದು ಹೆದರುವ ಸಮಯವಲ್ಲ. ತುಂಬ ಧೈರ್ಯದಿಂದ ಕುರ್ಚಿಯತ್ತ ಸಾಗಬೇಕು. ಸಾಯುವಾತ ನಿಜಕ್ಕೂ ವೀರನಾಗಿದ್ದ ಎಂದು ಇತರ ಕೈದಿಗಳು ಭಾವಿಸಬೇಕು.' ಎಂದು ತನ್ನಲ್ಲೇ ಹೇಳಿಕೊಂಡ.

೧೦-೪೦ ಎಂದು ಕಾವಲುಗಾರರು ಹೇಳಿದರು.

ಇನ್ನು ೨೦ ನಿಮಿಷ ಅರ್ಥಾತ್ ೧೨೦೦ ಸೆಕೆಂಡ್ ಉಳಿದಿದೆ! ಎಂದ ರೆಸ್ಕೋ. ಅಗಲೇ ಫೋನಿನ ಗಂಟೆ ಬಾರಿಸಿತು. ಒಬ್ಬ ಕಾವಲುಗಾರ ಮುಂದುವರಿದು ರಿಸೀವರ್ ಎತ್ತಿದ. ರೆಸ್ಕೋ ಅವನ ಮುಖದ ಏರಿಳಿತಗಳನ್ನು ನೋಡತೊಡಗಿದ.

ಕಾವಲುಗಾರ ನಗುತ್ತ ರೆಸ್ಕೋನ ಬಳಿ ನಡೆದು ಹೇಳಿದ: "ಬಾ ಗೆಳೆಯ! ಹೊರಗೆ ಬಾ.... ಗವರ್ನರರು ನಿನ್ನ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಬದಲಾಯಿಸಿದ್ದಾರೆ!" ✡

ಇದು ಕನ್ನಡ

ಮಹಾರಾಷ್ಟ್ರ ಬೇರೆ, ಕರ್ನಾಟಕ ಬೇರೆ ಅಲ್ಲ. ಎರಡರಲ್ಲೂ ಒಂದೇ ರಕ್ತವು ಆಡುತ್ತದೆ. ಎರಡೂ ದೇಶಗಳ ಭಾಷೆಯೂ ಮುಂಚೆ ಒಂದೇ-ಅಂದರೆ ಕನ್ನಡವಿತ್ತು. ಭಾಷೆಯ ವಿಷಯದಲ್ಲಿ ಮಹಾರಾಷ್ಟ್ರವು ತನ್ನ ಮೊದಲ ಭಾಷೆಯನ್ನು ಬಿಟ್ಟು ಮರಾಠಿಯಾಗಿದೆ.

— ಲೋಕಮಾನ್ಯ ಟಿಳಕ

(೧೯೦೭ ರ ಜನೆವರಿ ೨೬ ರಂದು ಗುರ್ಲಹೊಸೂರಲ್ಲಿ ಅವರು ಮಾಡಿದ ಭಾಷಣದಿಂದ ಉಧೃತ)

*

ಕನ್ನಡಿಗರೇ ! ಉಜ್ವಲವಾದ ನಿಮ್ಮ ಭಾಷೆಯು ಒಂದಾನೊಂದು ಕಾಲಕ್ಕೆ ಉತ್ತರದ ಬಹು ದೂರದವರೆಗೆ ಮನೆಮಾಡಿಕೊಂಡಿತ್ತೆಂಬ ಸಂಗತಿಯು ನಿಮ್ಮ ಹೃದಯವನ್ನು ಸ್ಫೂರ್ತಿಗೊಳಿಸಲಿ.

— ಆಲೂರ ವೆಂಕಟರಾಯರು

('ಕರ್ನಾಟಕ ಗತವೈಭವ'ದಲ್ಲಿ)


ಮೂಲ ಬಂಗಾಳಿ:
ಹರಪ್ರಸಾದ ಶಾಸ್ತ್ರಿ
ಕನ್ನಡಕ್ಕೆ-

ಮೂವರು ಮಹಾತ್ಮರು

'ವಾಲ್ಮೀಕಿ ವಿಜಯ'ವೆಂಬುದು ಕಳೆದ ಶತಮಾನದಲ್ಲಿ ಬಂಗಾಲಿಯಲ್ಲಿ ರಚಿತವಾದ ಒಂದು ನೀಳ್ಗತೆ. ಲೇಖಕರು ಹರಪ್ರಸಾದ ಶಾಸ್ತ್ರಿ ಎಂಬವರು. ಅಂದು ಬಂಗಾಲಿಯಲ್ಲಿ ಇದೆಷ್ಟು ಜನಪ್ರಿಯವಾಗಿತ್ತೆಂದರೆ ೧೯೦೫ ರ ಹೊತ್ತಿಗೆಯೇ ಇದರ ಇಂಗ್ಲಿಷ್ ಅನುವಾದ ಕೂಡ ಪ್ರಕಟವಾಯಿತು. ಮೂಲದ ಸೊಬಗಿಗೆಲ್ಲೂ ಚ್ಯುತಿ ಬರದಂತೆ ಇದನ್ನು ಕನ್ನಡಿಸಿದವರು ಶ್ರೀದೇವದತ್ತರು.

ರಾಮಾಯಣಪೂರ್ವ ಕಾಲದಲ್ಲಿಯ ಭಾರತದ ತೀರ ಅವ್ಯವಸ್ಥಿತ ಭಾರತದ ಒಂದು ಚಿತ್ರಣವಿದು. ಬುದ್ಧಿಶಕ್ತಿ, ಬಾಹುಶಕ್ತಿ, ಹೃದಯಶಕ್ತಿಗಳನ್ನು ಪ್ರತಿನಿಧಿಸುವಂಥ ಮಹಾತ್ಮರಾದ ವಶಿಷ್ಟ, ವಿಶ್ವಾಮಿತ್ರ, ವಾಲ್ಮೀಕಿಗಳೇ ಇಲ್ಲಿಯ ಮುಖ್ಯ ಪಾತ್ರಗಳು. ಇವು ಮೂರೂ ಶಕ್ತಿಗಳಲ್ಲಿ ಭಿನ್ನತೆಯನ್ನೆಣಿಸುವುದೇ ದೇಶದ ಸಕಲ ದೌರ್ಭಾಗ್ಯಗಳಿಗೆ ಕಾರಣ; ಅವುಗಳಲ್ಲಿಯೇ ಒಂದು ಸಾಮರಸ್ಯವನ್ನು ಕಾಣುವುದೇ ಯಶಸ್ಸಿನ ಮರ್ಮ ಎಂಬುದನ್ನು ಈ ಕಥೆ ಬಿಂಬಿಸುತ್ತದೆ.

ಭಾಗ ೨

ಖಂಡ–೪

೧. ಸಾಧನಗಳ ಶೋಧನೆ

ಶರದಾಕಾಶದಲ್ಲಿ ಗುಂಪು ಗುಂಪಾಗಿ ಅಸಂಖ್ಯ ತಾರೆಗಳು ಗೊಂಚಲು ಗೊಂಚಲಾಗಿ ಚಕಮಕಿಸುತ್ತಿರುವುದನ್ನು ನೀವು ನೋಡುತ್ತಿರುವಾಗ ಅವುಗಳ ನಡು ನಡುವೆ ಹಿಂಜಿದರಳೆಯಂತೆ ಮಂದ ಬಿಳಿ ವಸ್ತುವೊಂದು ಹರಡಿರುವುದು ಕಾಣಬರುವುದು. ದೂರಗನ್ನಡಿಯೊಳಗಿಂದ ನೋಡಿದಾಗ ಅದು ಇನ್ನೂ ಹೆಚ್ಚು ಸ್ಪಷ್ಟವಾಗಿ ಕಾಣಬರುವುದು. ಅದು ಮಸಕಾಗಿ ಮಂಜಾಗಿ ತೋರಿ ಬರುವುದರಿಂದ ಕೆಲವರು ಅದಕ್ಕೆ ಆಕಾಶಗಂಗೆ ಎನುತ್ತಾರೆ.

ವಿಶ್ವಾಮಿತ್ರನು ಬ್ರಹ್ಮ ಮತ್ತು ಋಷಿಗಳೊಡನೆ ಜಗಳಾಡಿ ಧವಳಗಿರಿ ಶಿಖರದ ಮೇಲೆ ಏರಿ ಬಂದಾಗ ಮೊಟ್ಟ ಮೊದಲು ಈ ಆಕಾಶಗಂಗೆಯೇ ಅವನ ಕಣ್ಣಿಗೆ ಬಿದ್ದುದು. ಅವನು ಕೂಡಲೇ ಆಕಾಶಕ್ಕೇರಿ ಅವುಗಳತ್ತ ಹಾರಿದ. ಬಿಟ್ಟ ಬಾಣದಂತೆ ಮಿಗಿಲು ವೇಗದ ಆಕಾಶ ಯಾನದಂತೆ, ಮಿಂಚಿನಂತೆ, ಆಕಾಶದಲ್ಲೇರುತ್ತ ಪ್ರತಿ ಕ್ಷಣಕ್ಕೂ ಲಕ್ಷ ಮೈಲುಗಳ ವೇಗದಿಂದ ಸಾಗಿದ. ಅವನ ಮೈಯೆಲ್ಲ ಕಾದ ಚಿನ್ನದಂತೆ ಥಳಥಳಿಸುತ್ತಿತ್ತು. ದಟ್ಟವಾಗಿ ಮುತ್ತಿದ ಹಾಲ ಮಡ್ಡಿ ಹಿಂಬದಿಕ್ಕೆ ತಾಗುವಂತೆ ಹಿಂದೆ ಜೋತಾಡುತ್ತ ರವಿಯ ಬೆಳಕಿನಲ್ಲಿ ಹೊಳೆಯುತ್ತಿತ್ತು. ಈ ಅಸ್ವಾಭಾವಿಕ ಆಕೃತಿಯನ್ನು ಆಕಾಶದಲ್ಲಿ ಹಗಲಿನಲ್ಲೇ ಕಂಡ; ಭೂಮಿಯ ಮೇಲಿನ ಜನರು ಅದೊಂದು ಧೂಮಕೇತುವಿರಬೇಕೆಂದು ಭಾವಿಸಿದರು. ಸಂಜೆಗತ್ತಲಾದಾಗ ವಸಿಷ್ಠ ತನ್ನ ಧ್ಯಾನಕ್ಕೆಂದು ತನ್ನಾಶ್ರಮದ ಏಕಾಂತ ಸ್ಥಳದಲ್ಲಿ ಸಜ್ಜುಗೊಳ್ಳುತ್ತಿರುವಾಗ ಒಮ್ಮೆಲೆ ಆಕಾಶದಲ್ಲಿ ಈ ಧೂಮಕೇತು ಸಂಚಾರವನ್ನು ಕಂಡನು. ಬರಲಿರುವ ಗಂಡಾಂತರವನ್ನು ನೆನೆದು ಅವನ ಹೃದಯ ನಡುಗಿತು. ಅಂಥ ಮಹಾ ಕಾಳಗದಲ್ಲಿಯೂ ಶಾಂತವಾಗಿದ್ದ ಬ್ರಹ್ಮರ್ಷಿಗಳ ಸಭೆಯಲ್ಲಿಯೂ ನಿಶ್ಚಿಂತವಾಗಿದ್ದ ಅವನ ಹೃದಯವು ಈಗ ಒಮ್ಮೆಲೆ ಭಯದಿಂದ ಜುಮ್ಮುಗಟ್ಟಿ ತಣ್ಣಗಾಯಿತು.

ವಿಶ್ವಾಮಿತ್ರನು ಭೂಮಿಯ ಸುತ್ತಲಿನ ವಾತಾವರಣವನ್ನು ದಾಟಿ ಸ್ತಬ್ಧ ವಾಯು

ಮಂಡಲವನ್ನೂ ಮೀರಿ ಮೇಲೇರಿ ನೈಮಿತ್ತಿಕ ಮೂಲ ವಸ್ತುವಿನ ಸೂಕ್ಷ್ಮ ಆಕಾಶವನ್ನೂ ದಾಟಿದನು. ಮಂಗಳ, ಗುರು ಗ್ರಹಮಂಡಲವನ್ನೂ ದಾಟಿ ಮುಂದುವರಿದನು. ಬಳಿಕ ಒಂದೊಂದಾಗಿ ಸಕಲ ಗ್ರಹಮಂಡಲಗಳನ್ನೂ ದಾಟಿ ಮತ್ತೊಂದು ಸೂರ್ಯಮಂಡಲವನ್ನು ಸೇರಿದನು. ಅದರ ಗ್ರಹಮಂಡಲವನ್ನೂ ದಾಟಿ ಮೂರನೇ ಸೂರ್ಯನ ಬಳಿ ಬಂದನು. ಹೀಗೆ ಒಂದೊಂದಾಗಿ ಸೂರ್ಯಮಂಡಲಗಳನ್ನೆಲ್ಲ ದಾಟುತ್ತ, ಅಸಂಖ್ಯ ಮಂಡಲಗಳನ್ನೂ ಮೀರಿ ಕೊನೆಗೆ ಅನಂತ ಶೂನ್ಯ ಮಂಡಲಕ್ಕೆ ತಲುಪಿದನು. ಆ ಶೂನ್ಯ ಮಂಡಲ ಬಣ್ಣಗೆಟ್ಟಿದ್ದು. ಮನವ ಮೀರಿ ನಿಂತಿದ್ದು. ಅಲ್ಲಿ ಗಾಳಿಯಿಲ್ಲ, ನಾದವಿಲ್ಲ, ಸಕಲವೂ ಸ್ತಬ್ಧ, ರಿಕ್ತ. ಅದಕ್ಕೆ ಆದಿಯಿಲ್ಲ, ಅಂತ್ಯವಿಲ್ಲ. ಅಲ್ಲಿ ಸಕಲವೂ ಸಾಮ್ಯ: ಮೌನ. ಅದಕ್ಕೆ ಬದಿಯಿಲ್ಲ; ಬುಡವೂ ಇಲ್ಲ. ಅದೊಂದು ದಾಟಲಸಾಧ್ಯವಾದ ಭೀಕರ, ದಡವಿಲ್ಲದ ಆಕಾರವಿರದ ಸಾಗರವಾಗಿತ್ತು. ತಾರೆಗಳು ಕಾಣಿಸದಷ್ಟು ದೂರ ಹಿಮ್ಮೆಟ್ಟಿ ಹೋಗಿದ್ದುವು. ಬೆಳಕೂ ಕೂಡ ಅಲ್ಲಿಂದ ಮಬ್ಬಾಗಿ ಕಾಣುತ್ತಿತ್ತು. ವಿಶ್ವಾಮಿತ್ರನ ಮಾನವೀ ಶಕ್ತಿ ಕೈಮೀರಿ, ಅತಿಮಾನವ ಶಕ್ತಿ ಮಾತ್ರ ಅವನನ್ನು ಮುನ್ನುಗ್ಗಿಸುತ್ತಿತ್ತು. ಕಲ್ಪನೆಗೂ ಮೀರಿದ ಆ ಭೀಕರ ಪೊಳ್ಳಿನಲ್ಲೂ ಭಯದ ಎಳೆಕೂಡ ವಿಶ್ವಾಮಿತ್ರನನ್ನು ಸೋಂಕಲಿಲ್ಲ. ತಳ ಬುಡವಿಲ್ಲದ ಅನಂತದಲ್ಲಿ ಅವನು ಅತಿದೂರ ಬಂದದ್ದರಿಂದ ಅಲ್ಲಿ ಒಂದೇ ಸಮನೆ ಸುತ್ತು ಸುತ್ತಾಗಿ ಸುತ್ತುತ್ತಿರುವ ಸ್ವಚ್ಛಂದ ನರ್ತನವ, ಅಸಂಖ್ಯ ಅನಂತ ಅಣುಗಳ ಗೋಳಗಳು ಒಂದು ಅದೃಶ್ಯ ಕೇಂದ್ರದ ಸುತ್ತು ನಿತ್ಯ ಭ್ರಮಣ ನಡೆಸಿರುವುದನ್ನು ಕಂಡ. ತನ್ನ ಸಿದ್ಧಿಗೆ-ಸಾಧನೆಯಾಗುವ ಸಾಮಗ್ರಿಗಳೆಂದು ತಿಳಿದು ವಿಶ್ವಾಮಿತ್ರ, ಅಲ್ಲಿಯೇ ಅದರ ಸಮೀಪದಲ್ಲಿಯೇ ತನ್ನ ಧ್ಯಾನ ಭ್ರಮಣವನ್ನು ನಿಲ್ಲಿಸಿದ.

೨. ಹೊಸ ಬೆಳಕು

ಈ ರೀತಿ ಆ ಅನಂತದ ಪೊಳ್ಳಿನಲ್ಲಿ ಪರಾರ್ಧ ಪರಾರ್ಧ ಅಣು ಕಣಗಳು ಇರುವುದನ್ನು ವಿಶ್ವಾಮಿತ್ರನು ತನ್ನ ಪೂರ್ಣ ಧ್ಯಾನದಿಂದ ಅರಿತುಕೊಂಡ. ಬಳಿಕ ಅವನು ತನ್ನ ದಿವ್ಯ ಆತ್ಮಶಕ್ತಿಯಿಂದ ಅವುಗಳನ್ನು ಆಕರ್ಷಿಸತೊಡಗಿದ. ಮುಂದೆ ಅಸಂಖ್ಯ ನಕ್ಷತ್ರಗಳು, ಪೃಥ್ವಿಗಳು, ಆ ನಿರಾಕಾರ, ನಿಸ್ಸೀಮ ಸಾಧನೆಯೊಳಗೆ ಎಳೆಯಲ್ಪಟ್ಟುವು. ಯಾರು ಹೇಳಬೇಕು? ಮುಂದ ಪ್ರಕಾಶದಲ್ಲಿ ವಿಶ್ವಾಮಿತ್ರ ನೋಡತೊಡಗಿದ. ಮೂಲ ಭೂತಗಳ ಮಹಾ ಹೋರಾಟದಲ್ಲಿ ಭೂಮಿಯ ದಿಕ್ಕೆಟ್ಟು ಅತ್ಯಾಯಕ್ಕಾಗಿ ಸುರಕ್ಷಿತ ಸಗ್ಗವನು ಎದುರು ನೋಡುತ್ತಿರುವ ಅತಿಯೋಗಿಗಳಾ ತಿಯ ಜಲಚರ ಪ್ರಾಣಿಗಳಂತೆ ಅವು ಆರು ಪಾರಿನ ಕಾಜಿನ ತಳದಲ್ಲಿ ಕಾಂಬಂತೆ ಕಂಡವು. ಅನಂತ ಭೀಕರ ಬಿರುಗಾಳಿಯ ಹೊಡೆತಕ್ಕೆ ಛಿನ್ನ ಭಿನ್ನವಾಗಿ ಚೆದುರಿ ಹೋದ ಮೋಡಗಳ ತುಂಡುಗಳೆಲ್ಲ ಪುನಃ ಒಂದೆಡೆಗೂಡುತ್ತಿರುವಂತೆ ಕಂಡಿತು.

ತನ್ನ ಉದ್ದಿಷ್ಟಕ್ಕೆ ಸಾಕಾಗುವಷ್ಟು ಆ ಅಂತರಗಂಗೆಯ ಸಾಮಗ್ರಿ ಬಂತೆಂದು ತಿಳಿದಾಗ ವಿಶ್ವಾಮಿತ್ರ ತನ್ನ ಅಲೌಕಿಕ ಶಕ್ತಿಯಿಂದ ಆ ಅಣುಗಳನ್ನು ಒಂದಕ್ಕೊಂದು ಕೂಡಿಕೊಂಡು ತಮ್ಮ ಸುತ್ತು ತಾವು ತಿರುಗುತ್ತಿರುವಂತೆ ಮಾಡಿದ. ಪ್ರತಿಯೊಂದು ತಾರಾ ರಾಶಿಯೂ ತನ್ನ ಕೇಂದ್ರದ ಸುತ್ತು ತಾನು ತಿರುಗುತ್ತ ಆ ಸುಳಿಯಲ್ಲಿಯೂ ಸುತ್ತುತ್ತಿರುವಂತೆ ಮಾಡಿದ. ಪ್ರತಿ ಕ್ಷಣಕ್ಕೂ ಆ ಪರಿಭ್ರಮಣದ ವೇಗ ಹೆಚ್ಚುವಂತೆ ಮಾಡಿ, ಪ್ರತಿ ಕ್ಷಣಕ್ಕೂ ಅಬ್ಬ ಅಬ್ಬ ಮೈಲುಗಳ ವೇಗ ಬರುವಂತೆ ಮಾಡಿದ. ಭ್ರಮಣದ ವೇಗ ಹೆಚ್ಚುತಿಲ್ಲ ಅಣುಗಳೂ ಒಂದಕ್ಕೊಂದು ಸಮೀಪಿಸುತ್ತ ಬರತೊಡಗಿದುವು. ಹೆಚ್ಚೆಚ್ಚು ಘನೀಭೂತವಾಗತೊಡಗಿದವು. ಗುರುತ್ವ ಭಾರದಿಂದ ಶಾಖ ಉತ್ಪನ್ನವಾಗಿ, ದೊಡ್ಡ ದೊಡ್ಡ ತುಂಡುಗಳು ಹೊಳೆಯತೊಡಗಿದವು. ಕೋಟಿ ಕೋಟ್ಯಂತರ ಮೈಲು ದೂರದಲ್ಲಿದ್ದ ತಾರೆಗಳೆಲ್ಲ ಕಾಣದಂತಾದವು. ಕತ್ತಲಿದ್ದ ದಟ್ಟ ಗಾಢ ಕತ್ತಲೆ [illegible] ನವ ಜಗತ್ತಿನಿಂದ ಮುಸುಗಿ [illegible] ಗಿತು. ಆ ನವಜಗತ್ತಿನಿಂದ ಅನಂತ [illegible] ನಲ್ಲಿಯು ತಳ ಬುಡಗಳಿರದ ಗುಹೆಗಳು [illegible] ಬರತೊಡಗಿದವು. ಭರದಿಂದ [illegible] ಹೊಸ ಬೆಳಕಿನ ಕಿರಣಗಳು ಆ ಅನಂತದಲ್ಲಿ ಬಹು ದೂರ ದೂರದವರೆಗೂ [illegible] ತೀವ್ರತೆಯಿಂದ ಚಾಚುತ್ತ ಪ್ರತಿ ಕ್ಷಣಕ್ಕೂ

ಹನ್ನೆರಡು ಕೋಟಿ ಮೈಲುಗಳ ವೇಗದಿಂದ ಚಲಿಸುತ್ತ ಈ ಹೊಸ ಸೃಷ್ಟಿಯ ಸುದ್ದಿಯನ್ನು ವಸಿಷ್ಠನಿಗೆ ತಿಳಿಸಲು ಧಾವಿಸುತ್ತಿದ್ದವು. ವಿಶ್ವಾಮಿತ್ರ ನೋಡಿದ. ಬೆಳಕು ಚೆನ್ನಾಗಿತ್ತು. ತನ್ನ ಹೊಸ ಸೂರ್ಯಮಂಡಲವು ಸರಿಯಾಗಿ ಸಾಕಾರ ಹೊಂದುತ್ತಿತ್ತು. ಅದರ ತೇಜ, ಬರಲಿರುವ ಕೋಟಿ ಕೋಟಿ ಕಲ್ಪಾಂತಗಳವರೆಗೂ ಕಡಿಮೆಯಾಗದುತಿತ್ತು.

೩. ಹೊಸ ಸೃಷ್ಟಿ

ಆ ತೇಜೋವಲಯ ಥಳ ಥಳಿಸುತ್ತ ತಿರುಗುತ್ತಿದ್ದಂತೆ ಕೆಲ ಕಾಲ ಕಳೆದ ಬಳಿಕ ವಿಶ್ವಾಮಿತ್ರ "ಬುಧ ಉದ್ಭವಿಸಲಿ" ಎಂದ. ಕೂಡಲೇ ಆ ತೇಜೋವಲಯದೊಳಗಿಂದ ಒಂದು ಚಿಕ್ಕ ಮಂಡಲ ಸಿಡಿದು ಹೊರ ಬಂದು, ತನ್ನ ಮೈ ಸುತ್ತ ತಾನೆ ತಿರುಗತೊಡಗಿತು. ಅದರ ಕೆಲ ಅಂಶ ತಣ್ಣಗಾಗಿ, ಒಂದು ಗ್ರಹಾಕಾರವೆತ್ತು, ಬುಧ ಗ್ರಹವಾಗಿ ಭ್ರಮಿಸತೊಡಗಿತು. ವಿಶ್ವಾಮಿತ್ರನು ತನ್ನ ಬುಧ ಚೆನ್ನಾಗಿದ್ದುದನ್ನು ಕಂಡ. ಬಳಿಕ "ಶುಕ್ರ ಉದ್ಭವಿಸಲಿ" ಎಂದ. ಮತ್ತೊಂದು ಚಿಕ್ಕ ಗೋಲ ಆ ತೇಜೋವಲಯದಿಂದ ಹೊರ ಬಂದು ತನ್ನ ಮೈ ಸುತ್ತು ತಾನೆ ತಿರುಗತೊಡಗಿತು. ವಿಶ್ವಾಮಿತ್ರನು ತನ್ನ ಶುಕ್ರ ಚೆನ್ನಾಗಿದ್ದುದನ್ನು ನೋಡಿದ. ಮತ್ತೆ ಅವ "ಭೂಮಿ ಉದ್ಭವಿಸಲಿ" ಎಂದ. ಮತ್ತೊಂದು ಚಿಕ್ಕ ಗೋಲ ಆ ತೇಜೋವಲಯದಿಂದ ಸಿಡಿದು ಹೊರಬಂದು ಗುಡ್ಡ, ಪರ್ವತ, ಹಳ್ಳ-ಕೊಳ್ಳ, ದ್ವೀಪ, ಸಾಗರಗಳಿಂದ ಕೂಡಿದ ಭೂಮಿಯಾಯ್ತು. ತನ್ನ ಈ ಹೊಸ ಭೂಮಿಯ ಮುಂದೆ ಆ ಹಳೆ ಭೂಮಿಯನ್ನು ಹೋಲಿಸಿದಾಗ ಅದು ಶೂನ್ಯಕ್ಕಿಳಿವಷ್ಟು ಈ ಹೊಸ ಭೂಮಿ ಭವ್ಯವಾದುದನ್ನು ವಿಶ್ವಾಮಿತ್ರ ಕಂಡುಕೊಂಡ. ಹೀಗೆ ಆ ಅಪಾರ ಅಣು ಸಾಧನಾ ಸಾಮಗ್ರಿಯಿಂದ ಮೂರೇ ದಿನಗಳ ಅವಧಿಯಲ್ಲಿ ವಿಶ್ವಾಮಿತ್ರನು, ಚಂದ್ರ, ಮಂಗಲ, ಬೃಹಸ್ಪತಿ, ಮತ್ತು ಉಳಿದ ಗ್ರಹಗಳನ್ನೂ ಚಿಕ್ಕ, ಬಾಲಚಿಕ್ಕೆಗಳನ್ನೂ ನಿರ್ಮಿಸಿದ. ಹಳೆ ಸೂರ್ಯಮಂಡಲ ಲೋಕದಲ್ಲಿದ್ದುದನ್ನೆಲ್ಲವನ್ನೂ ಒಂದೂ ಬಿಡದೆ ತನ್ನ ಹೊಸ ಜಗತ್ತಿನಲ್ಲಿ ಸೃಷ್ಟಿಸಿದ. ಆದರೆ ವಿಶ್ವಾಮಿತ್ರನ ಭೂಮಿ, ಸೂರ್ಯ ನಮ್ಮ ಭೂಮಿ ಸೂರ್ಯಗಳಿಗಿಂತ ಲಕ್ಷೋಪಲಕ್ಷ ಪಟ್ಟು ದೊಡ್ಡವಾಗಿದ್ದವು. ನಮ್ಮ ಭೂಮಿಗಿಂತ ವಿಶ್ವಾಮಿತ್ರನ ಸೃಷ್ಟಿ ಅತ್ಯಂತ ಭವ್ಯತರವಾಗಿ ತೋರುತ್ತಿತ್ತು.

೪. ಹೊಸ ನೆಲ

ಆ ಹೊಸ ನೆಲದಲ್ಲಿ ನೀರು, ಗಾಳಿ, ಹಿಮ, ಹುಲ್ಲು, ಗಿಡ, ಅರಣ್ಯ, ಗುಡ್ಡ, ಹಳ್ಳ ಎಲ್ಲವೆಲ್ಲವೂ ನಮ್ಮೀ ಹಳೇ ಭೂಮಿಯಲ್ಲಿದ್ದಂತೆಯೇ ಇದ್ದವು. ಹೆಚ್ಚಿದ್ದುದೆಂದರೆ ತೆಂಗಿನ ಗಿಡ ಮಾತ್ರ. ಆಗ ನಮ್ಮ ಭೂಮಿಯ ಮೇಲೆ ತೆಂಗಿನ ಗಿಡ ಇದ್ದಿಲ್ಲ. ವಿಶ್ವಾಮಿತ್ರನ ಹೊಸ ಭೂಮಿಯಲ್ಲಿ ಹಿಂಸ್ರ ಪಶುಗಳಿದ್ದಿಲ್ಲ. ಬಗೆ ಬಗೆಯ ಬಣ್ಣ ಛಾಯೆಗಳ ರೆಕ್ಕೆ ಪುಚ್ಚಗಳುಳ್ಳ, ಸುಂದರ, ಕಣ್ಮನಗಳಿಗೆ ಆನಂದವೀವ, ಚೆಲ್ವಕ್ಕಿಗಳು ಅವನ ಭೂಮಿಯಲ್ಲಿ ಅಸಂಖ್ಯವಾಗಿದ್ದವು. ಅಲ್ಲಿಯ ಅನೇಕ ಮೋಹಕ ಪ್ರಾಣಿಗಳು ಆನಂದದಾಯಕವಾಗಿದ್ದವು. ಅಲ್ಲಿಯ ಹೂಗಿಡ ಬಳ್ಳಿಗಳೆಲ್ಲ ಸುಗಂಧಯುಕ್ತವಾಗಿರುತ್ತಿದ್ದವು. ಅವುಗಳ ಎಲೆಗಳು ದೇಟುಗಳು ಕೂಡ ಮಧುರವೂ ಕಂಪಿನವೂ ಆಗಿರುತ್ತಿದ್ದವು. ಆ ನೆಲವನ್ನಪ್ಪಿದ ಹಸಿರು ಹುಲ್ಲು ಕೂಡ ನಮ್ಮಲ್ಲಿಯ ಗುಲಾಬಿಯ ಅತ್ತರಿನ ಗಂಧದಿಂದ ಗಮಗಮಿಸುತ್ತಿತ್ತು. ಆಕಾಶದಿಂದಿಳಿದು ಬರುವ ಮಳೆಯೆಲ್ಲವೂ ಗುಲಾಬಿಯ ಪನ್ನೀರಿನಂತಿತ್ತು. ಅಲ್ಲಿಯ ಗಾಳಿಯೆಲ್ಲ ಗುಗ್ಗುಳದ ಅಚ್ಚ ಪರಿಮಳದಿಂದ ಸೂಸಿರುತ್ತಿತ್ತು.

ಅಲ್ಲಿ ಆಹಾರ ಬೆಳೆಯಬೇಕಾಗಿರಲಿಲ್ಲ. ಗಾಳಿ ನೀರು ಅರಣ್ಯಗಳೇ ಆಹಾರವನ್ನು ಒದಗಿಸುತ್ತಿದ್ದವು. ಸಾವಿರ ಸಾವಿರ ವರ್ಷಗಟ್ಟಲೆ ಹೀಗೆಯೇ ನಡೆದಿದ್ದು ಯಾರೂ ಅಲ್ಲಿ ನೆಲವನ್ನು ಕೃಷಿ ಮಾಡಬೇಕಿರಲಿಲ್ಲ. ಜನಸಂಖ್ಯೆ ಮಿತಿ ಮೀರಿ ಬೆಳೆಯುತ್ತ ನಡೆದಾಗ ಮಾತ್ರ ಆ ಬಗ್ಗೆ ಶಂಕೆ ತೋರುತ್ತಿತ್ತು. ಅಲ್ಲಿ ಮನೆ ಮಾರು, ಹಾಸಿಗೆ ಹುಪ್ಪಡಿ, ಯಾವುದೂ ಇರಲಿಲ್ಲ. ಸವಿ ಸೋಂಕಿನ ನಯವಾದ ಹಸಿರು ಹುಲ್ಲೇ ಅಲ್ಲಿ ವಿಶ್ರಾಂತಿ ಸ್ಥಾನವಾಗಿತ್ತು. ವಿಶ್ವಾಮಿತ್ರನು ಪರ್ವತದ ಶಿಖರಗಳಲ್ಲೆಲ್ಲ ಸುಖದಾಯಕ ಗುಹೆ ಗಹ್ವರಗಳನ್ನು, ಮಳೆಗಾಲದಲ್ಲಿ ವಿಶ್ರಾಂತಿಗಾಗಿ ಮಾಡಿಬಿಟ್ಟಿದ್ದನು. ಅಲ್ಲಿಯ ಹಾವು ಚೇಳುಗಳೆಲ್ಲ ಪಶು

ಮುರಿಯುವ ಗಿಡ ಮರಗಳ ನೆರಳಿನಿಂದ ಕೂಡಿ ಬಿಸಿಲು ಬಾರದಂತೆ ಮಾಡಿದ್ದವು. ಮಧ್ಯಾಹ್ನದಲ್ಲಿ ಅಲ್ಲಿ ಹಿಮ ಹರಿದು ಹೋಗಿ ತಂಪಾಗಿರುತ್ತಿದ್ದವು. ನೆಲ ಹೊಲಗಳ ಮೇಲೆಲ್ಲಾ ಸೂರ್ಯನ ಬಿಸಿಲು ಸುಡು ಸುಡುತ್ತಿರುವಾಗ ಆ ಹಾದಿಗಳಲ್ಲಿ ಬಂದು ಕುಳಿತುಬಿಟ್ಟರೆ ಮನಸೋಕ್ತ ಆಹ್ಲಾದಕಾರಕ ತಂಪು ದೊರೆಯುತ್ತಿತ್ತು. ಸ್ವತಃ ವಿಶ್ವಾಮಿತ್ರನೇ ಅಲ್ಲಿಯ ನಿಸರ್ಗಸೌಂದರ್ಯಕ್ಕೆ ಮಾರು ಹೋಗಿದ್ದನು. ಗಿರಿ ಶಿಖರಗಳಿಗೇರಿ ವಿಶ್ರಮಿಸಲು ಅಲ್ಲಿ ಅನುಕೂಲ ಕಲ್ಪಿಸಲಾಗಿತ್ತು. ಗಿರಿ ಶಿಖರಗಳ ತುದಿಯಿಂದ ಸಮುದ್ರ ಪಾತಳಿಯ ವರೆಗೂ ಆ ಸೃಷ್ಟಿಯಲ್ಲಿಯ ಪ್ರತಿಯೊಂದನ್ನೂ ಅವಲೋಕಿಸಲು ಅನುಕೂಲವಾಗುವಂತೆ ಮನುಜರಿಗೆಲ್ಲ ಸಾಧನ ಸಾಮಗ್ರಿಗಳ ಯೋಜನೆಯನ್ನು ವಿಶ್ವಾಮಿತ್ರನು ಹವಣಿಸಿಬಿಟ್ಟಿದ್ದನು.

೫. ಹೊಸ ಮನುಜ

ಆ ಸೃಷ್ಟಿಯಲ್ಲಿಯ ಜನರು? ಆ ಹೊಸ ನೆಲದಲ್ಲಿ ಹೊಸ ರೀತಿಯ ಜನರೇ ಇದ್ದರು. ಆ ಸೃಷ್ಟಿಯೇ ವಿಶ್ವಾಮಿತ್ರನ ಆಯ್ಕೆಯದು. ಅವನ ಜನರೆಲ್ಲರೂ ಸಂಪೂರ್ಣ ಸುಖಿಗಳಾಗಿದ್ದರು. ದುಃಖ ದುಗುಡುಗಳೆಡೆಗೆ ಯಾವ ಒಲವೂ ಅಲ್ಲಿ ಉದ್ಭವಿಸಿದ್ದಿಲ್ಲ. ಅಲ್ಲಿ ವಿಕಾಸಕ್ಕಾಗಿ ಅತ್ಯುತ್ತಮ ತರವಾದಂತಹ ಅವಕಾಶವಿತ್ತು. ಬ್ರಾಹ್ಮಣರ್ರು ಎಂದೆಂದೂ ಬ್ರಹ್ಮನ ಮುಖದಿಂದ ಉದ್ಭವಿಸಿ ಬರಲಿಲ್ಲವೆಂಬುದು ವಿಶ್ವಾಮಿತ್ರನ ಖಚಿತ ಅಭಿಪ್ರಾಯವಾಗಿತ್ತು. ಸವಿತೃ ಮಂತ್ರದ ಧೀಶಕ್ತಿಯ ಸಂಸ್ಕೃತಿಯಿಂದಲೇ ಅವರು ಬ್ರಾಹ್ಮಣರೆಂಬ ಉಚ್ಚ ಸ್ಥಾನದಲ್ಲಿ ಇರುವರೆಂದು ಅವನು ಸಂಬಿದ್ದ. ಆದರೆ ಇತ್ತೀಚೆ ಅವರಲ್ಲಿ ಸ್ವಾರ್ಥ ಹೆಚ್ಚಾಗತೊಡಗಿದ್ದು, ಅವರು ಸಂಪೂರ್ಣವಾಗಿ ನಾಚಿಕೆಯನ್ನೇ ಬಿಟ್ಟುಬಿಟ್ಟಿದ್ದಾರೆ. ಆದ್ದರಿಂದ ಸಕಲರಿಗೂ ಸಮಾನಾವಕಾಶ ಕೊಡಬೇಕೆಂಬ ಉದ್ದೇಶದಿಂದ ಅವರ ಧೀಶಕ್ತಿಯ ವಿಕಾಸಕ್ಕಾಗಿ ವಿಶ್ವಾಮಿತ್ರನು ಅನೇಕ ವಿದ್ಯಾಸಂಸ್ಥೆಗಳನ್ನೂ, ವಿದ್ಯಾಪೀಠಗಳನ್ನೂ ಎಲ್ಲೆಲ್ಲಿಯೂ ಸ್ಥಾಪಿಸಿದ್ದನು. ವಿದ್ಯೆ, ನೀತಿ, ಆಡಳಿತದ ಬಗೆಗಳನ್ನು ಅಭ್ಯಸಿಸಲು, ಯಾವದೊಂದು ಬಗೆಯ ಜನರಿಗೂ ನಿರ್ಬಂಧವಿರಲಿಲ್ಲ. ಈ ಕಾರ್ಯಕ್ಕಾಗಿ ಎಲ್ಲರೂ ಒಂದುಗೂಡಬೇಕಾಗುತ್ತಿತ್ತು. ಬುದ್ಧಿಯೇ ಪೂಜನೀಯ ದೈವತವಾಗಿತ್ತು. ಇದನ್ನುಳಿದು ಇನ್ನೇತಕ್ಕೂ ಪೂಜಾಸ್ಥಾನವಿರಲಿಲ್ಲ. ಎಲ್ಲರೂ ಕೇವಲ ಜ್ಞಾನ ದೇವತೆಯನ್ನು ಮಾತ್ರ ಪ್ರತಿದಿನ ಪೂಜಿಸುತ್ತಿದ್ದರು.

ಮತ್ತೆ ಪರಸ್ಪರ ಮಮತಾಭಾವ? ಅವರೆಲ್ಲರೂ ಪರಸ್ಪರ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಸರ್ವರೂ ಸಮಭಾವದಲ್ಲಿ ಪ್ರತಿಷ್ಠಿತರಾಗಿದ್ದರು. ಯಾರಾದರೊಬ್ಬರು ಯಾವುದೊಂದು ಕ್ಷೇತ್ರದಲ್ಲಿ ಒಂದು ಹೆಜ್ಜೆ ಮುಂದೆ ಹೋದರೆ ಆ ಪ್ರಗತಿಯ ಜ್ಞಾನವನ್ನು ಉಳಿದವರಿಗೂ ಮಾಡಿಕೊಟ್ಟು ತಮ್ಮ ಸರಿಸಮಕ್ಕವರನ್ನು ತರುತ್ತಿದ್ದರು. ವಿಶ್ವಾಮಿತ್ರ ಸೃಷ್ಟಿಯಲ್ಲಿ ಸಕಲರೂ ಒಳ್ಳೆಯವರೂ ಸಯವಿದರೂ ಆಗಿದ್ದರು. ಅಸಹ್ಯವೆಂಬುದೇ ಅಲ್ಲಿ ಯಾರ ಕಣ್ಣಿಗೂ ಬೀಳುತ್ತಿರಲಿಲ್ಲ. ಪ್ರತಿಯೊಬ್ಬರ ಅಂಗಸೌಷ್ಟವವೂ ಅತ್ಯಂತ ಮೋಹಕ ಚೆಲುವಿನದಾಗಿದ್ದು, ಪರಸ್ಪರರನ್ನು ಕಂಡೊಡನೆ ಪರಸ್ಪರರು ಆನಂದತುಂದಿಲರಾಗುತ್ತಿದ್ದರು. ಅಲ್ಲಿ ಒಬ್ಬರನ್ನೊಬ್ಬರು ಕಂಡಾಗ ಮಣಿಯುವುದಾಗಲಿ, ತಲೆದೂಗುವುದಾಗಲಿ, ಕೈಕೈ ಕುಲುಕುವುದಾಗಲಿ ಮಾಡುವದಿರದೆ, ಗಟ್ಟಿಯಾಗಿ ಎದೆ ಎದೆ ಬೆಸೆಯುವಂತೆ ಪ್ರೇಮದಿಂದ ಬಿಗಿದಪ್ಪಿಕೊಳ್ಳುತ್ತಿದ್ದರು. ಎಲ್ಲರೂ ಕಾರ್ಯಚಾಪಲ್ಯದಲ್ಲಿದ್ದು ಪ್ರಗತಿಪಥದಲ್ಲಿ ಮುಂದುವರಿಯುತ್ತಲಿದ್ದರು. ಆ ಹೊಸ ನೆಲದಲ್ಲಿ ಪ್ರತಿಯೊಬ್ಬರೂ ಹೊಸ ಹುರುಪಿನಿಂದ ಎಲ್ಲೆಡೆಗೆ ಅಡಿಯಿಡುತ್ತಿದ್ದರು. ಶಾಸ್ತ್ರೀಯ ಸತ್ಯಸಂಶೋಧನೆಗೆಂದು ಅವರು ಆಗಾಗ ಗಿರಿ ಶಿಖರಗಳನ್ನೇರಿ ಹೋಗುತ್ತಿದ್ದರು. ಸಾಗರದ ಗುಟ್ಟನ್ನು ರಟ್ಟು ಮಾಡಲು ಅದರಲ್ಲಿ ಆಳಕ್ಕಿಳಿದು ಈಜಾಡುತ್ತಿದ್ದರು. ಅನೇಕ ಶೋಧನೆಗಳ ಬೆಂಬತ್ತಿ ಆಕಾಶಪಥದಲ್ಲೂ ತೇಲಾಡುತ್ತಿದ್ದರು. ತಮ್ಮ ಸುಧಾರಣೆಗಾಗಿ ಸಕಲರೂ ಹೀಗೆ ಕಾರ್ಯನಿರತರಾಗಿರುತ್ತಿದ್ದರು. ತತ್ಪರಿಣಾಮವಾಗಿ ಸಮಾಜದ, ವ್ಯಕ್ತಿಯ ಉತ್ಕರ್ಷ ಸಾಧಿಸುತ್ತಲಿದ್ದರು.

ಆ ವಿಶ್ವಾಮಿತ್ರಸೃಷ್ಟಿಯಲ್ಲಿ ಮದುವೆಯ ಬಂಧನವಿರಲಿಲ್ಲ. ಲಗ್ನವಿಲ್ಲದೆಯೇ ಅವರಲ್ಲಿ

ಗಂಡು ಹೆಣ್ಣು ಒಂದಕ್ಕೊಂದು ಪ್ರೇಮಿಸಿ, ಕಾಮಿಸಿ ಕೂಡಿದರೆಂದರೆ ಕೊನೆ ವರೆಗೂ ಕೂಡಿಯೇ ಇರುತ್ತಿದ್ದರು. ಅಲ್ಲಿಯ ಆ ಪ್ರೇಮದ ಸ್ವಭಾವವೇ ಹಾಗಿತ್ತು. ಯಾವದೇ ಕಾರಣಕ್ಕಾಗಿ ಪ್ರೇಮಿಗಳ ಜೋಡಿ ಒಮ್ಮೆ ಬೇರೆಯಾಗಬೇಕಾಗಿ ಬಂದಾಗ, ಪುನರ್ಮಿಲನಕ್ಕಾಗಿ ಅವರಿಬ್ಬರೂ ಕನಿಷ್ಟ ಮೂರು ವರ್ಷಗಳ ವರೆಗೆ ಕಾಯದೆ, ಬೇರೆಯವರನ್ನು ಕೂಡುತ್ತಿರಲಿಲ್ಲ. ಆ ಬಳಿಕ ಜೀರೆ ಯಾರನ್ನು ಕೂಡಿದರೂ ಅದು ತಪ್ಪೆಂದು ಯಾರೂ ಎಣಿಸುತ್ತಿರಲಿಲ್ಲ. ಪರಸ್ವಾಪಹರಣ, ಪರಸ್ತ್ರೀ ಅಪಹರಣಗಳೆಂಬುದೇ ಆ ಜನರಿಗೆ ಗೊತ್ತಿರಲಿಲ್ಲ.

ಅಲ್ಲಿ ಸಕಲರೂ ಸಾಹಿತ್ಯ ಸಂಗೀತ ಕಲಾ ನಿಪುಣರೇ. ಅಲ್ಲಿ ದಿನಾಲೂ ಗೀತ–ನೃತ್ಯ–ನಾಟಕಗಳು ನಡೆಯುತ್ತಿದ್ದು, ಸಕಲರೂ ಭಾಗಿಗಳಾಗುತ್ತಿದ್ದರು. ಅಲ್ಲಿ ಪ್ರತಿ- ದಿನವೂ ಒಂದೊಂದು ಮಹಾ ಉತ್ಸವವಿರುತ್ತಿತ್ತು. ಅಲ್ಲಿ ಭೀತಿಕರ ಅರಸನಾಗಲಿ, ಸೇನಾಪತಿಯಾಗಲಿ ಇರಲೇ ಇಲ್ಲ. ಎಲ್ಲ–ರೊಮ್ಮತದಿ ಎಲ್ಲವೂ ನಡೆದು ಹೋಗುತ್ತಿತ್ತು. ಇನ್ನೊಬ್ಬರ ಗುಪ್ತ ರಹಸ್ಯವನ್ನು ಕಂಡು ಹಿಡಿಯುವುದು. ನೆರೆಹೊರೆಯವರನ್ನು ಪರಸ್ಪರ ಪ್ರೀತಿಸುವುದು ಆ ವಿಶ್ವಾಮಿತ್ರಸೃಷ್ಟಿಯಲ್ಲಿಯ ಜನರಲ್ಲಿ ಒಂದು ಸಾಮಾನ್ಯ ಪ್ರವೃತ್ತಿಯಾಗಿ ಹೋಗಿತ್ತು.

ಹರ್ಷ–ಆನಂದ ಸುಖಗಳಿಂದ ತುಂಬಿ ಹೃದಯ ಹಗುರಾಗಿ ಅಲ್ಲಿಯ ಜನವೆಲ್ಲ ಕುಣಿದಾಡುತ್ತಿತ್ತು. ಮಾನವ ಮಾನವರ ಮಧ್ಯೆ ಭಿನ್ನಾಭಿಪ್ರಾಯ ಉದ್ಭವಿಸಬಹುದಾಗಿದ್ದ ಎಲ್ಲ ಕಾರಣಗಳನ್ನೂ ವಿಶ್ವಾಮಿತ್ರನು ಲಕ್ಷ್ಯಪೂರ್ವಕವಾಗಿ ಅಲ್ಲಿಯ ಮಾನವೀ ಮನದಿಂದ ಕಿತ್ತೆಸೆದು ಬಿಟ್ಟಿದ್ದನು. ಅಲ್ಲಿ ಯಾರಿಗೂ ನಿರಂಕುಶತೆಯ ಬಯಕೆ, ವೈಭವಕ್ಕಾಗಿ ಹಾತೊರೆಯುವಿಕೆ, ಆಸ್ತಿ ಪಾಸ್ತಿ ಮಾಡುವ ಆಸೆಗಳು ಇರಲೇ ಇಲ್ಲ. ಹರ್ಷ, ಆಮೋದ, ಪ್ರಮೋದಗಳೇ ಅಲ್ಲಿ ಸಾಮ್ರಾಜ್ಯ ನಡೆಸಿದ್ದವು. ಇಂದು ಒಬ್ಬ ಇನ್ನೊಬ್ಬನ ಹರ್ಷದಲ್ಲಿ ಭಾಗವಹಿಸಿದ್ದರೆ, ನಾಳೆ ಇನ್ನೊಬ್ಬ ಈ ಒಬ್ಬನ ಹರ್ಷದಲ್ಲಿ ಭಾಗವಹಿಸುತ್ತಿದ್ದ.

ವಿಶ್ವಾಮಿತ್ರಸೃಷ್ಟಿಯಲ್ಲಿ ಮಾನವರು ಮರಣಾಧೀನರಾಗಿದ್ದಿಲ್ಲ. ಆದರೆ ಒಂದು ಗ್ರಹದಿಂದ ಇನ್ನೊಂದು ಗ್ರಹಕ್ಕೆ ಸಾಗಿಸಲ್ಪಡುತ್ತಿದ್ದರು. ಹೀಗೆಯೇ ಸ್ಥಾನಾಂತರಿಸುತ್ತ ಏಳೆಂಟು ಸುತ್ತು ಸುತ್ತಿದ ನಂತರ ಮರಳಿ ಭೂಮಿಗೆ ಬರತ್ತಿದ್ದರು. ಜನ್ಮ ಅಲ್ಲಿ ದ್ವಿವಿಧವಾಗಿತ್ತು: ನವಜನ್ಮ, ಪುನರ್ಜನ್ಮ. ನವ ಜನ್ಮಗಳು ಅತ್ಯಂತ ಸೀಮಿತವಾಗಿದ್ದು ನಿರ್ದಿಷ್ಟ ಸಂಖ್ಯೆಯಲ್ಲಿ ಮಾತ್ರ ದಿನಾಲೂ ನವ ಜನ್ಮವಾಗುತ್ತಿತ್ತು. ಉಳಿದೆಲ್ಲ ಜನ್ಮಗಳೂ ಪುನರ್ಜನ್ಮಗಳೇ. ವಿಶ್ವಾಮಿತ್ರನ ಈ ಸೃಷ್ಟಿ ಕೇವಲ ಅತ್ಯಲ್ಪ ಕಾಲಾವಧಿಯ ವರೆಗೆ ಮಾತ್ರ ಅಸ್ತಿತ್ವದಲ್ಲಿತ್ತು. ನವಜನ್ಮಗಳು ಅಸಂಖ್ಯವಾದಾಗ ಏನಾಗುತ್ತಿತ್ತೋ ಎಂಬುದು ತಿಳಿಯದುತಿತ್ತು.

೬. ಹಾಡಿನ ಹುಟ್ಟು

ಇತ್ತ ಹಿಮಾಲಯದ ಅರಣ್ಯ ಪ್ರದೇಶದಲ್ಲಿ ವಾಲ್ಮೀಕಿಯು ದುಃಖಿಸುತ್ತ, ಶೋಕಿಸುತ್ತ ಪ್ರಲಾಪಿಸುತ್ತ ತಿರುಗುತ್ತಿದ್ದ. ಅವನ ಹೃದಯದಲ್ಲಡಗಿದ ದುಃಖ ಪ್ರಲಾಪಗಳಿಗೆ ಕೊನೆಯೇ ಇರಲಿಲ್ಲ. ತಾನೊಂದು ಪಾಪ ಕೃತಿಗಳ ಮೇರುವನ್ನೇ ನಿರ್ಮಿಸಿದ್ದು, ಅದರ ಭಾರವಿಳಿಯಲು ಏನು ಪ್ರಾಯಶ್ಚಿತ್ತವೆಂದು ಧ್ಯಾನಿಸುತ್ತಿದ್ದಂತೆಲ್ಲ ಅವನ ಹೃದಯವು ಹೌಹಾರಿ ಕಕ್ಕಾವಿಕ್ಕಿಯಾಗುತ್ತಿತ್ತು. ಎಲ್ಲಿಯೂ ಅದಕ್ಕೆ ಶಾಂತಿ ಎಂಬುದು ಕಂಡುಬರಲಿಲ್ಲ. ವಾಲ್ಮೀಕಿ ಮುಂದೆ ಆ ಕಳ್ಳ ದರೋಡೆಗಾರರನ್ನು ಕಾಣಲೇ ಇಲ್ಲ. ಅವರೆಲ್ಲ ಇವನಿಗಾಗಿ ಬಹಳ ಹುಡುಕಾಡಿದರು. ಎಲ್ಲವೂ ವ್ಯರ್ಥ. ಅವರೂ ವಾಲ್ಮೀಕಿಯನ್ನು ಕಾಣಲೇ ಇಲ್ಲ. ವಾಲ್ಮೀಕಿಯ ಎದೆ ಬೆಯ್ಯಿಸುತ್ತಿದ್ದ ಶೋಕಾಗ್ನಿ, ಜನರನ್ನು ಕಂಡೊಡನೆ ಕೆನ್ನಾಲಿಗೆಯ ಜ್ವಾಲೆ ಚಾಚಿ, ಭುಗ್ಗನೆ ಹೊತ್ತುತ್ತಿತ್ತು. ಅಂತೇ ಅವನು ಆ ಅರಣ್ಯವನ್ನೇ ಮನೆಯನ್ನಾಗಿಸಿಕೊಂಡು ಅಲ್ಲಿಯ ಪಶು–ಪಕ್ಷಿಗಳೊಡನೆ ಬಾಂಧವ್ಯ ಬೆಳೆಸಿದನು. ಅವೂ ಇವನ ದುಃಖದಲ್ಲಿ ಭಾಗಿಯಾದವು. ವಾಲ್ಮೀಕಿ ಆ ಪಶು ಪಕ್ಷಿಗಳಿಗೆ ತಿನ್ನಿಸುತ್ತಿದ್ದ. ಮೀಯಿಸುತ್ತಿದ್ದ. ಕೋಮಲತೆಯಿಂದ ಅವುಗಳ ಮೈ ಮೇಲೆ ಕೈಯಾಡಿಸುತ್ತಿದ್ದ. ಹೀಗೆ ಆ ಅರಣ್ಯದಲ್ಲಿ ಅವನು ಕಾಲ ನೂಕುತ್ತಲಿದ್ದ.

ಒಂದು ದಿನ, ಅಲ್ಲಿ ಕ್ರೌಂಚ ಮಿಥುನವೊಂದು

ಪ್ರೇಮಸಲ್ಲಾಪದಲ್ಲಿ ಮಗ್ನವಾಗಿ ಹೋಗಿತ್ತು. ಒಂದು ಇನ್ನೊಂದರ ಮೇಲೆ ಬೀಳುತ್ತ ಕೊಕ್ಕಿನಿಂದ ಕೋಮಲವಾಗಿ ತಿವಿಯುತ್ತ ಒಲವಿನಿಂದ ತೀಡುತ್ತ, ಒಮ್ಮೆ ಮೈದೆಗೆಯುತ್ತ ಒಮ್ಮೆ ಮೈ ಒಕ್ಕಲಾಡುತ್ತ ಸಂಯೋಗಕ್ಕಾಗಿ ಧಡಪಡಿಸುತ್ತಿತ್ತು. ಒಮ್ಮೆ ಒಂದು ಇತ್ತ ತಿರುಗಿ ಮತ್ತೊಂದರ ಮೈ ಮೇಲೆ ಬೀಳುತ್ತಿದ್ದರೆ ಇನ್ನೊಮ್ಮೆ ಮತ್ತೊಂದು ಅದೇ ಆಟ ಆಡುತ್ತಿತ್ತು. ಹೀಗೆಯೇ ಪ್ರೀತಿಯಾಟದಲ್ಲಿ ಟೊಂಗೆಯಿಂದ ಟೊಂಗೆಗೆ ಹಾರುತ್ತ ವಿಚಿತ್ರ ದನಿಯಲ್ಲಿ ಪ್ರೇಮಾಲಾಪ ಮಾಡುತ್ತ, ರೆಕ್ಕೆಗಳನ್ನು ಫಡಫಡಿಸುತ್ತ. ಗಿಮಿ ಗಿಮಿ ತಿರುಗುತ್ತ ಉನ್ಮಾದದ ಶಿಖರದಲ್ಲಿ ಇದ್ದವು. ಅವುಗಳ ಆ ಇಚ್ಛಾರತಿಯನ್ನು ಮೋಹಿತನಾಗಿ ನೋಡುತ್ತ ವಾಲ್ಮೀಕಿ 'ನನಗಿಂತಲೂ ಈ ಜೋಡಿ ಹಕ್ಕಿಗಳು ಎಷ್ಟೊಂದು ಸುಖಿಯಾಗಿವೆ! ನಾನೂ ಹೀಗೆಯೇ ಸುಖದಲ್ಲಿ ಮುಳುಗಿ ಏಕೆ ಲೋಲಾಡಬಾರನು ? ನನಗೂ ಸಾಕಷ್ಟು ಜೊತೆಗಾರರಿದ್ದಾರೆ' ಎಂದುಕೊಂಡ. ಈ ಆನಂದತಂದ್ರಿಯಲ್ಲಿ ಅವನು ಬಹಳ ಹೊತ್ತು ಇರಲಾರದಾದ. ಹಳೆ ನೆನಪುಗಳು ಮುಂಬಂದು ಅವನ ಹೃದಯದ ನಾವೀನ್ಯವನ್ನು ಕಲಕಿದವು.

ಹೀಗೆ ಅವನು ತಂದ್ರಿಯಲ್ಲಿದ್ದಾಗಲೇ ಎಲ್ಲಿಂದಲೋ, ಒಂದು ಬಾಣ ಭಂವ್‌ಗುಡುತ್ತ ಬಂದು ಆ ಜೋಡಿ ಹಕ್ಕಿಗಳಲ್ಲಿಯ ಒಂದನ್ನು ಹೊಡೆದು. ನೆಲಕ್ಕೆ ಕೆಡವಿತು. ಆ ಹಕ್ಕಿ ನೆಲಕ್ಕೆ ಬಿದ್ದು ಸಾಯುವ ಸಂಕಟದಿಂದ ಒದರಹತ್ತಿತು. ಕೂಡಲೆ ಒಬ್ಬ ಬೇಡರವ ಓಡಿ ಬಂದು ನಿರ್ದಯದಿಂದ ಅದರ ಪುಕ್ಕಗಳನ್ನು ಕಿತ್ತತೊಡಗಿದ. ಅದನ್ನು ಕಂಡೊಡನೆ ವಾಲ್ಮೀಕಿ ಕೋಪಾತಿರೇಕದಿಂದ "ಎಲೆ ಕ್ರೂರಿಯಾದ ವ್ಯಾಧನೇ, ಕಾಮಮೋಹಿತ ರತಿಕ್ರೀಡಾನಿರತ ಕ್ರೌಂಚಮಿಥುನದಲ್ಲಿ ಒಂದನ್ನು ನೀನು ನಿರ್ದಯನಾಗಿ ಕೊಂದದ್ದರಿಂದ ಅನಂತಕಾಲದ ವರೆಗೆ ಸುಂದರ ಖ್ಯಾತಿ ನಿನಗೆ ಎಂದೂ ದೊರೆಯದಿರಲಿ." ಎಂದು ತನ್ನಷ್ಟಕ್ಕೇ ತಾನೇ ಈ ನುಡಿ ಹೊರ ಹೊಮ್ಮಿದೊಡನೆಯೇ ಎದುರಿನ ನೀರ್ ಝುರಿಯ ಮೇಲಿನಿಂದಲೇ ಒಬ ದಿವ್ಯವನಿತೆ ತನ್ನ ಸೌಂದರ್ಯ ಪ್ರಭೆಯಿಂದ ಆ ಅರಣ್ಯಪಥವನ್ನು ಬೆಳ ಬೆಳಗಿಸುತ್ತ ಮಿಂಚಿನಂತೆ ಮೂಡಿ ಬಂದುದನ್ನು ವಾಲ್ಮೀಕಿ ಕಂಡ. ಆಕೆಯ ರೂಪ ಲಾವಣ್ಯ ಅಪ್ಸರೆಯರನ್ನೂ ಮೀರಿಸುವಂತಿತ್ತು. ಹುಣ್ಣಿಮೆಯ ಚಂದಿರನಂತೆ ಆಕೆಯ ಚೆಲುವು ಚೇತೋಹಾರಿಯೂ, ಹಿತಕರವೂ ಆಗಿ ನಯನಕ್ಕೆ ಅಪ್ಯಾಯಮಾನವಾಗಿತ್ತು. ಆ ಸುಂದರ ವನಿತೆಯ ಮಧುರ ಸೌಂದರ್ಯವನ್ನು ಕಂಡು ಅತ್ಯಾಶ್ಚರ್ಯವಾಯ್ತು. ಆ ಕ್ರೌಂಚವನ್ನೆತ್ತಲೆಂದು ಚಾಚಿದ ಆ ಬೇಡನ ಕೈ ಅಲ್ಲೇ ಸ್ಥಗಿತವಾಯಿತು. ಪಶು-ಪಕ್ಷಿಗಳೆಲ್ಲ ಬೆರಗುಗೊಂಡು ನಿಂತವು. ಆ ಸೌಂದರ್ಯವತಿ ವಾಲ್ಮೀಕಿಯೆದುರು ಬಂದು ನಿಂತಳು. ಅವನಿಗೆ ಮಾತು ಮೂಕಾಗಿಹೋಗಿತ್ತು. ಆಕೆಯೂ ಅವನಿಗೆ ಮಾತನಾಡಲು ಅವಕಾಶ ಕೊಡದೆ, "ವಾಲ್ಮೀಕಿ, ಅಚ್ಚರಿಪಡಬೇಡ. ನಾನು ಸರಸ್ವತಿ. ಬ್ರಾಹ್ಮಣರ ಸಂರಕ್ಷಕ ಕುಲದೇವತೆ. ನಿನ್ನಂಥ ಮೃದು ಹೃದಯದವನನ್ನು ಬ್ರಾಹ್ಮಣರಲ್ಲೊಬ್ಬರಲ್ಲಿಯೂ ನಾನು ಎಂದೂ ಕಂಡಿಲ್ಲ.

ಆದಕ್ಕೇ ನಾನೀಗ ನನ್ನ ಈ ವೀಣೆಯನ್ನು ನಿನಗೆ ಕರುಣಿಸಲೆಂದು ಬಂದಿರುವೆ. ಈ ವೀಣೆ ನಿನ್ನ ನಿಷ್ಕಂಳಂಕವಾದ ಹಸ್ತವನ್ನು ಇನ್ನು ಮುಂದೆ ಎಂದೆಂದೂ ಅಲಂಕರಿಸುವುದು. ಯಾವಾಗಲೂ ಎರಡನೆಯವರಿಗೆ ಒಳ್ಳೆಯದನ್ನೇ ಮಾಡುವೆನೆಂದೂ ಪರರ ಸುಖ-ಸಂತೋಷಗಳಿಗೇ ಮಾತ್ರ ಇದನ್ನು ಉಪಯೋಗಿಸುವೆನೆಂದೂ ನೀನು ಪ್ರತಿಜ್ಞೆ ಮಾಡಬೇಕಾಗುವದು" ಎಂದು ಆಶೀರ್ವದಿಸಿದಳು.

ವಾಲ್ಮೀಕಿ ಆ ಸರಸ್ವತೀಚರಣಗಳಿಗೆರಗಿದ. ಬಳಿಕ ಆ ವೀಣೆಯನ್ನು ಸ್ವೀಕರಿಸಿದ. ಸರಸ್ವತಿ ಅಂತರ್ಧಾನವಾಗಿ ಹೋಗಿಬಿಟ್ಟಳು.

ಖಂಡ-೫

೧ ಹಳೆಯ ಜಗತ್ತು

ವಿಶ್ವಾಮಿತ್ರನು ಹೊಸ ಸೃಷ್ಟಿಗೈಯಲೆಂದು ಈ ಜಗತ್ತನ್ನು ತೊರೆದು ಹೋದ ಬಳಿಕ ಆವರ ಸ್ಥಿತಿ ಏನಾಗಿರಬಹುದೆಂಬುದನ್ನು ಸಹಜವಾಗಿ ಊಹಿಸಬಹುದು. ಗೊಂದಲ, ಅರಾಜಕತೆ, ಕಳವು, ಕೊಲೆ, ಸುಲಿಗೆಗಳು ಅಲ್ಲಿ ಅವ್ಯಾಹತವಾಗಿ ನಡೆದಿದ್ದವು. ಒಂದೇ ಸಮನೆ ನೆತ್ತರಿನ ಹೊಳೆ ಹರಿಯುತ್ತಿತ್ತು. ಇಂಥ ಅರಾಜಕತೆಯ ಕಾಲದ ಅಲ್ಲೋಲಕಲ್ಲೋಲ ಇತಿಹಾಸದಲ್ಲಿ ಸಾಕಷ್ಟು ವರ್ಣಿತವಾಗಿರುತ್ತದೆ. ಯವನ ರಾಜ್ಯ ದಾಳಿಗಾಗಿ. ಸದ್ಯದ ರಾಜ್ಯ ಬರುವವರೆಗೂ ಭಾರತದಲ್ಲಿ ಎಂತೆಂಥ ಅನಾಹುತಗಳು ಆಗಿ ಹೋದವೋ ಅವುಗಳಂಥವು ಜಗತ್ತಿನ ಬೇರೆ ಯಾವದೇ ಭಾಗದಲ್ಲಿ ಆದ ಉಲ್ಲೇಖವಿಲ್ಲ. ಆದರೂ ಈ ಅನಾಹುತಗಳು. ವಿಶ್ವಾಮಿತ್ರನು ನವ ಸೃಷ್ಟಿ ನಿರ್ಮಾಣಕ್ಕೆಂದು ಹೊರಟು ಹೋದಾಗ ನಡೆದ ಅನಾಹುತಗಳ ಶತಾಂಶಕ್ಕೂ ಸರಿ ಬರಲಾರವು.

ಸಾಮಾನ್ಯವಾಗಿ ಆ ಕಾಲದಲ್ಲಿ ಭೂಮಿಯ ಮೇಲೆ ನಾಲ್ಕು ! ಕುಲಗಳಿದ್ದವು; ಬ್ರಾಹ್ಮಣ, ಕ್ಷತ್ರಿಯ, ರಾಕ್ಷಸ, ! ವಾನರ. ವಿಶ್ವಾಮಿತ್ರನು, ಯವನ, ಮ್ಲೇಚ್ಛ, ಹೂಣ ಕುಲದ ರಾಜ್ಯಗಳನ್ನೆಲ್ಲ ಗೆದ್ದು ಉಧ್ವಂಸ ಮಾಡಿಬಿಟ್ಟಿದ್ದನು. ಅವರ ರಾಜರೆಲ್ಲರೂ ಬಹುಶಃ ರಣರಂಗದಲ್ಲಿ ಮಡಿದಿದ್ದರು. ಉಳಿದ ಅನೇಕರು ಓಡಿ ಹೋಗಿ ವಶಿಷ್ಠರಲ್ಲಿ ಆಶ್ರಯ ಪಡೆದಿದ್ದರು. ಉಳಿದವರೆಲ್ಲಿ ಓಡಿ ಹೋಗಿದ್ದರೋ ಪತ್ತೆಯಿದ್ದಿಲ್ಲ. ಅವರ ರಾಜ್ಯದಲ್ಲೆಲ್ಲ ಕೂಡ ಅರಾಜಕತೆ ಹಬ್ಬಿಬಿಟ್ಟಿತ್ತು. ಕಳ್ಳ, ಕೊಲೆಗಾರ, ಸುಲಿಗೆಗಾರ ಲೂಟಿಗಾರರೆಲ್ಲ ತಂಡ ಕಟ್ಟಿಕೊಂಡು ಹಗಲ ಹಾಡೇ ಕಳವು ಸುಲಿಗೆ ನಡೆಸುತ್ತಿದ್ದರು. ಪಟ್ಟಣಗಳನ್ನೂ ಸುಡುತ್ತಿದ್ದರು. ಊರಿಗೂರೇ ಅವರ ಆಯುಧಕ್ಕಾಹುತಿಯಾಗುತ್ತಿತು. ಆಗ ವಾಲ್ಮೀಕಿಯು ಪುಂಡರ ತಂಡದ ನಾಯಕತ್ವವನ್ನು ಬಿಟ್ಟುಕೊಟ್ಟಿದ್ದನು. ಆದರೆ ಆ ಪುಂಡರ ತಂಡ ಅಳಿದಿದ್ದಿಲ್ಲ. ಅವರು ಚಾಂಡಾಲನಾದ ಗುಹಕ ಎಂಬವನನ್ನು ನಾಯಕನನ್ನಾಗಿ ಮಾಡಿಕೊಂಡು ಸಮಗ್ರ ಹಿಂದುಸ್ಥಾನದಲ್ಲೆಲ್ಲ ಕೊಲೆ-ಸುಲಿಗೆ ನಡೆಸಿದ್ದರು. ಒಂದು ದಿನ ಜಮನೋತ್ರಿಯಲ್ಲಿ ಮರು ದಿನ ಪ್ರಯಾಗದಲ್ಲಿ ಮತ್ತೊಂದು ದಿನ ಶತದ್ರು ಸಂಗಮದಲ್ಲಾದರೆ ಅದರ ಮರು ದಿನ ಸರಯೂ ನದಿ ತೀರದಲ್ಲಿ ಹೀಗೆ ಅವ್ಯಾಹತವಾಗಿ ಕೊಲೆ ಸುಲಿಗೆ ನಡೆಸಿದ್ದರು. ಈ ಕಳ್ಳ ಕಾಕರ ಅಸ್ವಸ್ಥ ಕೃತ್ಯಗಳನ್ನು ನೋಡಿದರೆ ಎಲ್ಲ ವರ್ಣದವರದೂ ಪತನ ನಡೆದು ಕಲಿಯುಗ ಬರಲಿದೆಯೆನಿಸುತ್ತಿತ್ತು. ಈ ದರೋಡೆ ಸುಲಿಗೆ ಗುಂಪುಗಳಲ್ಲಿ ಮ್ಲೇಚ್ಛರು, ಯವನರು, ರಾಕ್ಷಸರು, ವಾನರರು, ಕ್ಷತ್ರಿಯರು ಬ್ರಾಹ್ಮಣರು ಎಲ್ಲರೂ ಕೂಡಿದ್ದು, ಏಕಪಂಕ್ತಿಯಲ್ಲಿ ಅನ್ನ-ನೀರು ನಡೆಯುತ್ತಿತ್ತಲ್ಲದೆ ಒಟ್ಟಾಗಿ ಮಲಗುತ್ತಿದ್ದರು. ಸಕಲರೂ ಕೊಲೆ, ಸುಲಿಗೆಗೈಯುತ್ತ, ವಿಷಯಸುಖ ಭೋಗಿಸುತ್ತ ಒಳ್ಳೇ ಆಢ್ಯತೆ ವೈಭವಗಳಿಂದ ಜೀವಿಸುತ್ತಿದ್ದರು. ಕೊಲೆ ಸುಲಿಗೆಗಳೇ ಅವರ ಮುಖ್ಯ ದಂಧೆಯಾಗಿತ್ತು. ಅವರು ದೇವತೆಗಳ ಹಿತಕ್ಕೂ ಮೀರಿದವರಾಗಿದ್ದರು. ಈ ಭೀಕರ ಅರಾಜಕತೆಯ ಯುಗದಲ್ಲಿ ಒಂದಾದರೂ ಸಮರ್ಥ ರಾಜ್ಯ, ಒಂದಾದರೂ ಪ್ರಮುಖ ದೇಶ ಇದ್ದಿದ್ದರೆ ಈ ಹಾವಳಿಗೆ ಏನಾದರೂ ಮಾಡಬಹುದಿತ್ತು. ಆದರೆ ಅಂಥದು ಯಾವದೊಂದೂ ಇರಲಿಲ್ಲ. ಕೇವಲ ಸ್ವಾರ್ಥೀ ಪೈಪೋಟಿಯ ಗುಂಪುಗಳಿದ್ದು ರಾಷ್ಟ್ರಗಳಲ್ಲಿ ಅನೈತ್ಯ ತುಂಬಿ ಹೋಗಿತ್ತು. ಆಡಳಿತಾಧಿಕಾರವಿದ್ದ ಪಕ್ಷಗಳೂ ಈ ಕೊಲೆ ಸುಲಿಗೆಗಾರರ ಹಾವಳಿಯೇ ಸಾಮ

ಪಾಲು ಒಳಿತೆನಿಸುವಷ್ಟು ಕ್ರೂರವೂ ದುರುಳವೂ ಆಗಿದ್ದವು. ಈ ಕೊಲೆ ಸುಲಿಗೆಗಾರರು ಜನತೆಯನ್ನು ಒಮ್ಮೆಲೆ ಚಂಡಾಡುತ್ತಿದ್ದರು. ಆಪಕೀತ ಪಕ್ಷಗಳು ಅವರನ್ನು ಸಣ್ಣಾಗಿ ದಿನಕ್ಕೊಂದರಂತೆ ಅವಯುವ ಭೇದಿಸುತ್ತ ಅವರ್ಣನೀಯ ವ್ಯಥೆ ಕೊಡುತ್ತ ಕೊಲೆಗೈಯುತ್ತಿದ್ದವು.

ಈ ಸುಮಾರಿಗೇ ರಾವಣನು ಒಳ್ಳೇ ಬಲಶಾಲಿ ರಾಜನಾಗಿದ್ದನು. ಮತ್ತೊಬ್ಬರ ಹೆಂಡಿರನ್ನು ಕದ್ದೊಯ್ಯುವುದು, ಧನ, ಕನಕ ಕೊಳ್ಳೆ ಹೊಡೆಯುವುದು, ರಾಜ್ಯಗಳ ಮೇಲೆ ಹಲ್ಲೆ ಮಾಡುವುದು, ಜನತೆಯನ್ನು ಗೋಳು ಹುಯ್ಯುವುದು, ನೋಯಿಸುವದು ಇವೇ ಮೊದಲಾದವು ಅವನ ಮನೋರಂಜನೆಗಳೂ ಹರ್ಷದ ಕಾರ್ಯಗಳೂ ಆಗಿದ್ದವು. ಅವನ ರಾಜ್ಯದಲ್ಲಿಯೇ ಅವನ ತಮ್ಮ ವಿಭೀಷಣನು ಇದನ್ನೆಲ್ಲ ವಿರೋಧಿಸುತಿದ್ದನು. ರಾವಣನು ಅವನನ್ನು ಸೆರೆಮನೆಯಲ್ಲಿರಿಸಿದ್ದಲ್ಲದೆ ಅವನ ಪರವಾಗಿ ಮಾತನಾಡಿದ ತನ್ನ ಮಂತ್ರಿಯೊಬ್ಬನ ಕಿವಿ, ಮೂಗುಗಳನ್ನು ಕತ್ತರಿಸಿಬಿಟ್ಟಿದ್ದನು. ವಾನರ ರಾಜ್ಯದ ಸುಗ್ರೀವನೊಡನೆ ವಿಭೀಷಣನ ಸಖ್ಯವಾಗುವ ಮಾತು ತನ್ನ ಗೂಢಚಾರರಿಂದ ತಿಳಿದೇ ಸುಗ್ರೀವನ ಸಮಾಚಾರ ತೆಗೆದುಕೊಳ್ಳಲು ತನ್ನ ಇಬ್ಬರು ಅತ್ಯಂತ ಕ್ರೂರಿಗಳಾದ ಖರದೂಷಣರೆಂಬ ರಕ್ಕಸ ನಾಯಕರನ್ನು ರಾವಣನು ದಂಡಕಾರಣ್ಯಕ್ಕೆ ಕಳುಹಿಸಿ ಕೊಟ್ಟಿದ್ದನು.

ವಾನರ ರಾಜ್ಯದಲ್ಲಿಯ ಅರಸು ವಾಲಿಯು ತನ್ನ ವಿರೋಧಿ ಪಕ್ಷವನ್ನು ಮೂಲೆಗುಂಪು ಮಾಡಿಬಿಟ್ಟಿದ್ದನು. ಅವನು ತನ್ನ ತಮ್ಮ ಸುಗ್ರೀವನ ಪತ್ನಿಯೊಡನೆ ಸಂಬಂಧವನ್ನಿಟ್ಟುಕೊಂಡು ಅವಳನ್ನು ತನ್ನ ಬಳಿಯೇ ಇರಿಸಿಕೊಂಡು ಬಿಟ್ಟಿದ್ದನು. ಆ ಭೀಕರ ಅರಣ್ಯದೊಳಗಿನ ಜನಪದವನ್ನು ವಾಲಿಯ ಅನುಚರರು ತಮ್ಮ ಕೊಲೆ–ಸುಲಿಗೆಗಳ ಕಾಟದಿಂದ ತೆರವು ಮಾಡಿಸಿ ಬಿಟ್ಟಿದ್ದರು. ಒಂದು ಕಾಲಕ್ಕೆ ಈ ದಂಡಕಾರಣ್ಯ ಸೀಮೆ ಒಂದು ಒಳ್ಳೆಯ ಜನನಿಬಿಡ ರಾಜ್ಯವಾಗಿತ್ತು. ವಾಲಿಯು ತನ್ನ ಹಾವಳಿಯಿಂದ ಅದನ್ನು ನಿರ್ಜನ ಮಾಡಿ ಅರಣ್ಯಗೈದು ಹುಲಿ–ಸಿಂಹ–ಕರಡಿ ಮೊದಲಾದ ಕ್ರೂರ ಪಶುಗಳ ಆವಾಸವನ್ನಾಗಿಸಿದ್ದನು.

ಬ್ರಾಹ್ಮಣರಲ್ಲಿಯೂ ಎರಡು ಪಕ್ಷಗಳಾಗಿದ್ದವು–ಎರಡೇ ಏಕೆ? ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನು ಸ್ವತಂತ್ರನಾಗಿದ್ದನು. ಈ ಸ್ವತಂತ್ರ ಸಂತೃಪ್ತ ಬ್ರಾಹ್ಮಣ ಕುಲವು ಇಕ್ಕೆಲವಾಗಿ ಬಿಟ್ಟಿತ್ತು. ಅವುಗಳಲ್ಲೊಂದರ ಮುಖ್ಯನಾದ ಪರಶುರಾಮನು ನಿಃಕ್ಷತ್ರಿಯ ಪೃಥ್ವಿ ಮಾಡುವುದಾಗಿ ಪಣವನ್ನು ತೊಟ್ಟಿದ್ದನು. ಈ ಪರಶುರಾಮನು ಸ್ವತಃ ಯಾರಿಗೂ ಬೇಡಾದವನಾಗಿದ್ದನು. ಸಾಗರ ತೀರದ ಬಳಿ ಒಂದು ವಾಸ್ತವ್ಯ ಕಟ್ಟಿಕೊಂಡು ಅಲ್ಲಿಯೇ ಅವನು ವಾಸವಾಗಿದ್ದನು. ಬ್ರಾಹ್ಮಣರು ಅವನ ಉಪದೇಶದಂತೆ ನಡೆಯುವುದರಿಂದ ಕ್ಷತ್ರಿಯರು ಮತ್ತೆ ಪ್ರಬಲರಾಗಿ ಬಿಟ್ಟಿದ್ದರು. ಆದ್ದರಿಂದ ಈ ಬ್ರಾಹ್ಮಣ–ಕ್ಷತ್ರಿಯರಿಬ್ಬರನ್ನೂ ನಾಶಗೊಳಿಸಲು ಅವನು ಬಯಸುತ್ತಿದ್ದನು. ಕೋಟಿ ಕೋಟಿ ಜನಕ್ಕೂ ತಾನೊಬ್ಬನೆ

...ನರಾಗಿ ನಿಂತರೆ ಸಾಕು ಎಂಬ ಗರ್ವವು ಅವನದಾಗಿತ್ತು. ಅವನು ಬ್ರಾಹ್ಮಣರ ಯಜ್ಞ ಕಾರ್ಯದಲ್ಲಿ ಎಂದೂ ಭಾಗವಹಿಸುತ್ತಿರಲಿಲ್ಲ. ಅವನಂತಿರುವ ಉಳಿದವರೂ ಕ್ಷತ್ರಿಯರ ಮಾರಕ ವೈರಿಗಳಾಗಿದ್ದು ತಮ್ಮ ತಮ್ಮ ಮನ ಬಂದಂತೆಯೇ ನಡೆಯುತ್ತಿದ್ದರು. ಉಳಿದ ಬ್ರಾಹ್ಮಣರಿಗೆಲ್ಲ ವಶಿಷ್ಠನೇ ನಾಯಕನಾಗಿದ್ದನು. ಆದರೂ ಆ ಬ್ರಾಹ್ಮಣ ಪಂಗಡಕ್ಕೆ ಅವನು ಏಕೈಕ ನಾಯಕನಾಗಿರಲಿಲ್ಲ. ಆ ಎಲ್ಲ ಜನರ ಮೇಲೆ ಆತನ ಸಂಪೂರ್ಣ ಹಿಡಿತವಿರಲಿಲ್ಲ.

ಅನೇಕ ಕಾರಣಗಳಿಗಾಗಿ ಕ್ಷತ್ರಿಯರ 'ಒಂದು ಪಂಗಡದ ಮೇಲೂ ವಶಿಷ್ಠನ ಉಪಕಾರದ ಹೊರೆಯಿತ್ತು. ಬ್ರಾಹ್ಮಣ–ಕ್ಷತ್ರಿಯರ ಮಧ್ಯೆ ಐಕ್ಯ ಪ್ರಸ್ಥಾಪಿಸಲು ಅವರು ಸತತ ಪ್ರಯತ್ನ ಗೈಯುತ್ತಿದ್ದರು. ಅವರಲ್ಲಿ ಅಯೋಧ್ಯೆ, ಮಿಥಿಲೆಗಳ ಕ್ಷತ್ರಿಯ ರಾಜರು ಮುಖ್ಯರಾಗಿದ್ದರು. ಇನ್ನೊಂದು ಕ್ಷತ್ರಿಯ ಪಕ್ಷವು ಪರಶುರಾಮನು ಕ್ಷತ್ರಿಯ ಕುಲವನ್ನೇ ನಿರ್ಮೂಲ ಮಾಡಬೇಕೆಂದ ಹಾಗೆಯೇ ಬ್ರಾಹ್ಮಣ ಕುಲವನ್ನೇ ನಿರ್ನಾಮ ಮಾಡಲು ಹವಣಿಸುತ್ತಿತ್ತು. ಈ ಗುಂಪಿನಲ್ಲಿ ವಿಶ್ವಾಮಿತ್ರನ ಪಂಗಡವು ಮುಖ್ಯವಾದುದಾಗಿತ್ತು. ವಶಿಷ್ಠರ ಅನುಯಾಯಿಗಳನ್ನುಳಿದು ಉಳಿದವರೆಲ್ಲ ಬ್ರಾಹ್ಮಣರನ್ನು ನೋಯಿಸಲು ಪ್ರಾಣಾರ್ಪಣೆಯ ವರೆಗೂ ಸಿದ್ಧರಿದ್ದರು. ವಿಶ್ವಾಮಿತ್ರನ ಮಂತ್ರಿಗಳೇ, ಖರ, ದೂಷಣ ರಂಥ ರಾಕ್ಷಸರನ್ನು. ಬ್ರಾಹ್ಮಣರ ಯಜ್ಞಕಾರ್ಯ ಗಳನ್ನು ನಾಶಪಡಿಸಲು ಆಹ್ವಾನಿಸುತ್ತಿದ್ದರು. ಇವರು ಕೊಲೆ–ಸುಲಿಗೆಗಾರರು. ತಮ್ಮ ಪ್ರಾಣವನ್ನು ಕೊಡುತ್ತ ಲೂಟಿ ನಡೆಸಿ ದರು. ಈ ಪಕ್ಷದವರಿಗೆ ತುಸುವೂ ದಯೆ ಇರು ತ್ತಿರಲಿಲ್ಲ. ಯಾವುದೇ ಒಂದು ಕ್ಷುಲ್ಲಕ ಕಾರಣಕ್ಕಾಗಿಯೂ ಕಾಳಗವೆದ್ದು ಒಂದೊಂದು ಜನಪದವೇ ನಿರ್ಜನವಾಗಿ ಹೋಗುತ್ತಿದ್ದವು. ಇದಕ್ಕೆ ಅನೇಕ ಉದಾಹರಣೆ ಹೇಳಬಹುದು. ಒಮ್ಮೆ ಒಬ್ಬ ಬ್ರಾಹ್ಮಣ ವಿಶ್ವಾಮಿತ್ರನ ರಾಜಧಾನಿಯಾದ ಕನ್ಯಾಕುಬ್ಜದಲ್ಲಿ ಬಂದು ಸಿಕ್ಕ. ವಿಶ್ವಾಮಿತ್ರನ ಮಂತ್ರಿಯು ಅವನನ್ನು ಹಿಡಿ ಸಿತ್ತು, ಬಾರಕೋಲುಗಳಿಂದ ಅವನನ್ನು ನೆತ್ತರ ಚಿಮ್ಮುವಂತೆ ಥಳಿಸಿ ಅವನ ಕಿವಿ ಮೂಗುಗಳನ್ನು ಕೊಯ್ಯಿಸಿ ಅವನ ಕಿವಿಗಳಲ್ಲಿ ಕಾದ ಸೀಸದ ರಸ ಸುರುವಿಸಿದನು. ಬಳಿಕ ಅನೇಕ ಬೇಟೆಯ ನಾಯಿಗಳನ್ನು ತಂದು ಅವುಗಳೊಡನೆ ಆ ಬ್ರಾಹ್ಮಣನನ್ನು ಒಂದು ಪಂಜರದಲ್ಲಿ ಹಾಕಿಬಿಡಲಾಯಿತು. ಆ ಬೇಟೆ ನಾಯಿಗಳ ಕಾಟ ತಾಳಲಾರದೆ ಆ ಬ್ರಾಹ್ಮಣ ಸಂಕಟದಿಂದ ಚೀರುತ್ತ, ಭಾರದ್ವಾಜ ಋಷಿಯ ನಾಮವನ್ನು ಉಚ್ಚರಿಸಿದ. ಒಳ್ಳೆಯ ಸಾಧು ಭಾರದ್ವಾಜ ಋಷಿ ಅಲ್ಲಿ ಸಮೀಪದಲ್ಲಿಯೇ ಯಮುನಾ ತೀರದಲ್ಲಿ ತನ್ನ ಶಿಷ್ಯರೊಡನೆ ವಾಸಿಸುತ್ತಿದ್ದ. ಆ ವಿಶಾಲ ಅರಣ್ಯಕ್ಕೆಲ್ಲ ಅವನು ಅಧಿಪತಿಯಾಗಿದ್ದು ಅವನು ಪರಶುರಾಮನ ಅಥವಾ ವಶಿಷ್ಠನ ಯಾವ ಪಂಗಡಕ್ಕೂ ಸೇರಿರಲಿಲ್ಲ. ಬ್ರಾಹ್ಮಣ ಈ ಪಕ್ಷ ಪಂಗಡಗಳ ಗೊಂದಲದಿಂದ ನಿರ್ಲಿಪ್ತನಾಗಿರಬೇಕೆಂದು ಅವನ ಮತವಾಗಿತ್ತು. ಒಂದು ಕುಟುಂಬದ ಪುರೋಹಿತ ಪದವನ್ನು ಪಡೆಯಲು ಅವನು ಸಿದ್ಧನಿದ್ದಿಲ್ಲ. ಅಲ್ಲದೆ ಯಾರ ಬಗೆಗೂ ಅವನಲ್ಲಿ ದ್ವೇಷಾಸೂಯೆಗಳು ಇರಲಿಲ್ಲ. ಅಂತೇ ಅವನು ಎಲ್ಲರಿಗೂ ಬೇಕಾದವನಾಗಿ ಎಲ್ಲರಿಂದಲೂ ಮಾನ ಮರ್ಯಾದೆ ಪಡೆಯುತ್ತಿದ್ದ. ಸಾಯುವ ಸಂಕಟದಲ್ಲಿದ್ದ ಈ ಬ್ರಾಹ್ಮಣನ ಮುಖದಿಂದ ಭಾರದ್ವಾಜನ ನಾಮೋಚ್ಚಾರವನ್ನು ಆ ಮಂತ್ರಿಯು ಕೇಳಿದೊಡನೆ ಅವನು ಭಾರದ್ವಾಜನ ಗುಪ್ತಚಾರನೆಂದು ಬಗೆದು ಅವನನ್ನು ಅನೇಕ ರೀತಿಯಿಂದ ಹಿಂಸಿಸಿ ಕೊಂದೇಬಿಟ್ಟ. ಬಳಿಕ ಅವನು ಇಪ್ಪತ್ತು ಜನ ಕೊಲೆ–ಸುಲಿಗೆಗಾರರ ಗುಂಪನ್ನೊಂದು ಕೂಡಿಸಿ ಮರುದಿನವೇ ಭಾರದ್ವಾಜನ ಆಶ್ರಮಕ್ಕೆ ಕೊಳ್ಳಿಯಿಡಿಸಿ ಬೆಂಕಿ ಹಚ್ಚಿಸಿದ. ತನ್ನ ಅಲೌಕಿಕ ದೈವೀ ಸಾಮರ್ಥ್ಯದಿಂದಲೇ ಭಾರದ್ವಾಜ ಹಾಗೂ ಅವನ ಕೆಲವು ಶಿಷ್ಯರು ಈ ಗಂಡಾಂತರದಿಂದ ಉಳಿದುಕೊಂಡರು. ಆದರೆ ಆ ಅರಣ್ಯ ಪ್ರದೇಶವೆಲ್ಲವೂ ಅದರೊಳಗಿನ ಅಸಂಖ್ಯ ಪ್ರಾಣಿಗಳೊಡನೆ ಒಂದೇ ದಿನದಲ್ಲಿ ಅಗ್ನಿಗೆ ಆಹುತಿಯಾಯಿತು

೨. ಭೂಮಿಯ ಮೇಲೆ ಶಾಂತಿ

ಸರಸ್ವತಿ ದೇವಿಯಿಂದ ವೀಣೆ ಆಶೀರ್ವಾದ

ಗಳನ್ನು ಪಡೆದ. ಸುಂದರ ಕವಿತ್ವದ ಸಹಾಯದಿಂದ ರಾಜಗೊಂಡ ವಾಲ್ಮೀಕಿಯು ಹಿಮಾಲಯದ ಅರಣ್ಯವನ್ನು ತೊರೆದು ಕೆಳಗೆ ಜನಪದದೆಡೆಗೆ ಬಂದನು. ಅಲ್ಲಿಯ ದೃಶ್ಯಗಳನ್ನು ನೋಡಿ ಅವನ ಹೃದಯವು ಕರಗಿ ಹೋಯಿತು. ಅವನ ಅತ್ಯಂತ ದುಃಖದಿಂದ ಬಿಕ್ಕಿ ಬಿಕ್ಕಿ ಅಳತೊಡಗಿದ. ಮಾನವೀ ದುಃಖವನ್ನು ಕಂಡು ಅವನ ಕಂಗಳೊಳಗಿಂದ ಕಂಬನಿ ಸುರಿದುದು ಬಹುಶಃ ಇದೇ ಮೊದಲ ಸಲ ಎಂದು ಹೇಳಬಹುದು. ಹೀಗೆ ಕಂಬನಿ ಸುರಿಸುವವರಾದರೂ ಎಷ್ಟು ಜನ? ಆ ಪ್ರತಿಯೊಂದು ಕಂಬನಿಯೂ ಒಂದೊಂದು ಮುತ್ತಾಗಿದ್ದು ಸಾವಿರ ಕಾರ್ಪಣ್ಯಗಳನ್ನೂ ಇಲ್ಲಗೊಳಿಸುವಂತಹದಾಗಿತ್ತು. ಹೀಗೆ ದುಃಖಿಸುತ್ತ, ಹಾಡುತ್ತ ಹಿಂದುಸ್ಥಾನದ ತುಂಬೆಲ್ಲ ವಾಲ್ಮೀಕಿಯು ಸಂಚರಿಸಿದನು. ಆ ಕಾರ್ಯವನ್ನು ತಡೆಯುವ ಸಾಧನ ಅವನಿಗೆ ತಿಳಿದಿರದಿದ್ದರೂ ಅವನದನ್ನು ಇನ್ನು ತಾಳದಾದನು. ಒಂದು ದಿನ ಒಂದು ನದಿಯ ದಡೆಯ ಮೇಲೆ ಅವನು ವೀಣೆ ನುಡಿಸುತ್ತ ಕುಳಿತಾಗ, ಅವರ ನಾದಝರಿಯೊಡನೆ ತನ್ನ ಕಂಬನಿಗಳನ್ನೂ ಸುರಿಸುತ್ತಿರುವಾಗ, ಒಮ್ಮೆಲೆ ಅವನ ಕಿವಿಗಳಿಗೆ ಒಂದು ಭೀಕರ ಸಪ್ಪಳವು ಕೇಳಿ ಬಂತು. ಮೊದ ಮೊದಲು ಅದು ಕೊಲೆ ಸುಲಿಗೆಗಳಲ್ಲಿ ತೊಡಗಿದ ಲೂಟಿಗಾರರ ಕೂಗಾಟದಂತಿದ್ದು ಕೊನೆಗೆ ದುಃಖಿಗಳ ಪ್ರಲಾಪ ಧ್ವನಿಯಾಯಿತು. ವಾಲ್ಮೀಕಿಗೆ ತಡೆಯದಾಯಿತು. ಕೂಡಲೆ ಆ ಸಪ್ಪಳ ಕೇಳಿ ಬರುವೆಡೆಗೆ ಧಾವಿಸಿದ. ಬಹಳ ದಾರಿ ತುಳಿದ ಬಳಿಕ ಒಂದು ದೊಡ್ಡ ಪಟ್ಟಣವೇ ಸೂರೆಗೊಂಡು ಹೋದುದು ಅವನ ಕಣ್ಣಿಗೆ ಬಿತ್ತು. ವಾಲ್ಮೀಕಿ ತನ್ನ ವೀಣೆಯೊಡನೆ ಧಾವಿಸಿ ಬಂದವನೇ ಆ ಲೂಟಿಗಾರ ತಂಡದ ಮುಖಂಡನ ಕೈ ಹಿಡಿದು, "ಇಂಥ ಹೊಲೆಗೆಲಸ ಬಿಟ್ಟುಬಿಡು" ಎಂದ.

'ಎರಡನೆಯವರಿಗಾಗಿ ಶೋಕಿಸುವುದು ಬಹಳ ಪರಿಣಾಮಕಾರಿಯಾದುದಾಗಿದೆ. ನಿನಗಾಗಿ ನೀನು ಅಳುತ್ತಿದ್ದರೆ ಅದಕ್ಕೆ ಯಾರೂ ಲಕ್ಷ್ಯಗೊಡರು. ಎರಡನೆಯವರಿಗಾಗಿ ಅಳುತ್ತಿದ್ದರೋ, ಸಕಲರೂ ಸಂಗಾತಿಯಾಗಿ ಬರುವರು. ನಿನ್ನ ಭಾವನೆ ಆಳವೂ ಶುದ್ಧವೂ ಆಗಿದ್ದರೆ, ಉಳಿದವರ ಪ್ರಲಾಪವೂ ಉಕ್ಕಿ ಬರುವದು.' ವಾಲ್ಮೀಕಿಯ ಹಾಡು, ಅವನ ರೀತಿ, ಅವನ ದುಃಖಗಳು, ಆ ದರೋಡೆ ಪಡೆಯ ಮುಖ್ಯನ ಹೃದಯವನ್ನೂ ತುಸು ಮೃದು ಮಾಡಿತು. ಆ ಸುಲಿಗೆಗಾರ ನಾಯಕ ಒಮ್ಮೆಲೆ ಇವನು ವಾಲ್ಮೀಕಿ ಎಂಬುದನ್ನು ಗುರುತಿಸಿದ. ಅವನಿಗೆ ತಡೆಯದಾಯಿತು. ಕೂಡಲೆ ತನ ಪಡೆಗೆ ಆಜ್ಞೆ ಮಾಡಿದ. ಕೊಲೆ ಸುಲಿಗೆ ನಿಂತಿತು. ಆದರೆ ತನ್ನ ಪಡೆಯೊಳಗಿರುವ ಮ್ಲೇಚ್ಛ, ಯವನ, ಶಬರ ಹಾಗೂ ರಾಕ್ಷಸರ ಮನ ತಿರುಗಿ

ಸುವುದು ಹೇಗೆ? ಆ ನಾಯಕ ಅವರನ್ನು ತಡೆಯಲು ತಾನೇ ಹೋದ. ಅಷ್ಟರಲ್ಲಿ ರಾಕ್ಷಸರು ರಾಜಕುಟುಂಬದವರನ್ನೆಲ್ಲ ತಿಂದು ಮುಗಿಸಿದ್ದರು. ಆದರೂ ಅವನು ಅವರಿಗೆ ತಡೆಯಲು ಕೇಳಿಕೊಂಡ. ಕೇವಲ ನರಭಕ್ಷಣವಲ್ಲದೆ ಮದ್ಯ, ಕೊಲೆಗಳಿಂದಲೂ ಅವರು ಮತ್ತೇರಿದವರಂತಾಗಿದ್ದರು. ಅಂದ ಬಳಿಕ ವಾಲ್ಮೀಕಿಯ ನುಡಿಗೆ ಅವರೇಕೆ ಕಿವಿಗೊಟ್ಟಾರು ? ಅವರು ತಮ್ಮ ಕಾರ್ಯವನ್ನು ರಭಸದಿಂದ ಮುಂದುವರಿಸಲು ಆ ಮುಖ್ಯನು ತನ್ನ ಮುಖ್ಯ ಪಡೆ ಕೂಡಿಸಿ. ಅವರನ್ನು ಆ ಪಟ್ಟಣದಿಂದ ಹೊರದೂಡಲೆತ್ನಿಸಿದನು. ಆ ಗಡಿ ದಾಟಿ ಬಂದೊಡನೆ ರಾಕ್ಷಸರು ಮ್ಲೇಚ್ಛರನ್ನೂ ವಾನರರನ್ನೂ ಕೂಡಿಕೊಂಡು ಆ ಕಳ್ಳ ಪಡೆಯು ನಾಯಕನ ಮೇಲೆಯೇ ಭೀಕರ ಹಲ್ಲೆ ನಡೆಸಿದರು. ಆ ನಾಯಕ ತನ್ನ ಪ್ರಾಣವನ್ನು ಅತ್ಯಂತ ಪ್ರಯಾಸದಿಂದ ಉಳಿಸಬೇಕಾಯಿತು. ಅಲ್ಲಿಯ ದೃಶ್ಯವನ್ನು ಕಣ್ಣಾರೆ ಕಂಡು ಅವನಿಗೆ ಪರಮಾಶ್ಚರ್ಯವಾಯಿತು.

ಅಲ್ಲಿ ವಾಲ್ಮೀಕಿ ತನ್ನ ವೀಣೆಯನ್ನು ನುಡಿಸುತ್ತ "ಬಂಧೋ, ಓ ಮಮ ಬಂಧೋ" ಎಂದು ಸುಶ್ರಾವ್ಯವಾಗಿ ಹಾಡುತ್ತಿದ್ದುದೂ ತನ್ನ ಪಡೆಯವರೆಲ್ಲ ಅದನ್ನು ಚಿತ್ತಗೊಟ್ಟು ಆಲಿಸುತ್ತ ದುಃಖ ತುಂಬಿಕೊಳ್ಳುವುದೂ ಕಂಡುಬಂದಿತು. ಸಾವಿರಾರು ಕಳ್ಳ ಸೈನಿಕರು ಮೌನವಾಗಿ ಕಣ್ಣೀರು ಸುರಿಸುತ್ತಿದ್ದರು. ಜನ ಹತ್ಯೆಯೇ ಯಾರ, ಮುಖ್ಯೋದ್ಯೋಗ, ಜೀವನೋಪಾಯವಾಗಿತ್ತೋ ಅವರೆಲ್ಲರೂ ತಮ್ಮ ತಮ್ಮ ಆಯುಧಗಳನ್ನು ಬಿಸಾಕಿ ಅಳುತ್ತ ಕುಳಿತಿದ್ದರು. ರಾಕ್ಷಸರಿಂದ ವಾಗೂ ಮತ್ತಿತರರಿಂದ ಕೂಡಿದ ಸೈನ್ಯವು ಅವರನ್ನು ಸುತ್ತುಗಟ್ಟಿತ್ತು. ಆದರೆ ಅವರೆಲ್ಲರೂ ಇವರತ್ತ ಕಣ್ಣೆತ್ತಿ ಕೂಡ ನೋಡಲಿಲ್ಲ. ರಾಕ್ಷಸರ ಮುತ್ತಿಗೆ ಬಲವಾದಂತೆಲ್ಲ ವಾಲ್ಮೀಕಿಯ ವೀಣೆಗೆ ದನಿ ಏರತೊಡಗಿತು. ಹಾಡು ತಾರಕಕ್ಕೇರಿತು. ದಯಾ ಯಾಚನೆ, ಮಾನವೀ ಶೋಕದ ಚಿತ್ರಗಳೇ ಆ ಹಾಡಿನ ತಿರುಳಾಗಿದ್ದು, ಅದು ಪ್ರತಿಯೊಬ್ಬರ ಹೃದಯವನ್ನೂ ಮುಟ್ಟಿ ತಟ್ಟಿ ಪ್ರಭಾವ ಬೀರುತ್ತಿತ್ತು. ರಾಕ್ಷಸರು ಕೂಡ ಆ ಹಾಡಿನ ಕರುಣಾಜನಕ ಮಾಧುರ್ಯಕ್ಕೆ ತುಸುವಾಗಿ ಓಲುತ್ತ, ಅದರ ದಯಾಯಾಚನೆಯ ಭಾವದಿಂದ ಪ್ರಭಾವಿತರಾಗತೊಡಗಿದರು. ಎಲ್ಲ ಕೊಲೆ ಸುಲಿಗೆಗಾರರೂ, ಋಭುಗಳ ಹಾಡು ಕೇಳಿದ ಮೇಲೆ ವಾಲ್ಮೀಕಿಗೆ ಬಂದಂಥ ಅವಸ್ಥೆಯನ್ನೇ ಅನುಭವಿಸತೊಡಗಿದರು. ಯವನನಿರಲಿ, ಮ್ಲೇಚ್ಛನಿರಲಿ, ರಾಕ್ಷಸನಿರಲಿ, ವಾನರನಿರಲಿ, ಸಕಲರೂ ಅದರ ಪ್ರಭಾವಕ್ಕೆ ಮನ ಸೋತವರಾಗಿ ಪ್ರೇಮ ಭಾವದಿಂದ ಎದೆದುಂಬಿದವರಂತಾದರು. ಆ ಹಾಡು:

"ಸೈರಿಸಿರಿ. ಬಂಧುಗಳೆ-ಸೈರಿಸಿರಿ. ಆದದ್ದಾಯಿತು. ಇನ್ನು ಮುಂದೆ ಹೀಗೆ ಗೈಯದಿರಿ. ನೀವೇ ಅವರಾಗಿದ್ದರೆ, ಏನೆನಿಸುತ್ತೆಂದು ಭಾವಿಸಿರಿ. ನಿಮ್ಮಂತೆಯೇ ಅವರೂ ಅದೇ ರಕ್ತ ಮಾಂಸದಿಂದ ಕೂಡಿದ ಮಾನವರಲ್ಲವೇ? ನೀವೇ ಗಾಯಗೊಂಡಾಗ ನಿಮಗೆನಿಸುವ ನೋವನ್ನು ಕಂಡುಕೊಳ್ಳಿರಿ. ಚಿಕ್ಕದೊಂದು ಇರಿತವೂ ನಿಮ್ಮನ್ನು ತುಂಬ ನೋಯಿಸುತ್ತಿರುವಾಗ ಪರರ ತಲೆ ಹರಿಯಲೂ ನೀವು ಖಡ್ಗ ಬೀಸುತ್ತೀರಲ್ಲ? ಆಗ ಆ ಪ್ರಾಣಿಗೇನೆನಿಸುವುದೆಂಬುದನ್ನು ಸ್ವತಃ ನೀವು ಭಾವಿಸಿರಿ. ತುಸುವೂ ಹಿಂದೆ ಮುಂದೆ ನೋಡದೆ ಪರರ ಮಕ್ಕಳು ಮರಿಗಳನ್ನು ಕತ್ತರಿಸಿ, ಒಗೆಯುವ ನೀವು ನಿಮ್ಮ ಮಕ್ಕಳುಮರಿಗಳೇ ಹಾಗೆ ಕತ್ತರಿಸಲ್ಪಡುವಾಗ ನಿಮಗೆ ಹೇಗಾಗುವುದೆಂಬುದನ್ನು ಭಾವಿಸಿರಿ."

ಈ ಹಾಡು ಕೇಳಿ ಅವರೆಲ್ಲರೂ ದುಃಖಾತಿಶಯದಿಂದ ನೆಲದ ಮೇಲೆ ಹೊರಳಾಡುತ್ತ ರೊಯ್ಯೆಂದು ದೀರ್ಘವಾಗಿ ರೋದಿಸತೊಡಗಿದರು. ದುಃಖಪೂರಿತ ದನಿಯಲ್ಲಿ, "ಗುರುವೇ ನಮ್ಮನ್ನು ಕಾಪಾಡು.. ಉದ್ಧರಿಸು. ಈ ಪಾಪದಿಂದ ಪಾರಾಗುವ ದಾರಿ ತೋರಿಸು" ಎಂದು ಚೀರಹತ್ತಿದರು.

ಹಾಡು ಮುಂದುವರಿಯಿತು :

"ಸಕಲರನ್ನೂ ಸಹೋದರರೆಂದೇ ಭಾವಿಸಿರಿ. ಎಲ್ಲರೂ ನಿಮ್ಮ ಬಾಂಧವರೇ. ಯಾರೂ ಬೇರೆಯವರಲ್ಲ. ಎಲ್ಲರೂ ಮಾನವರೇ. ನಿಮಗೆ ಚಳಿಗಾಲದ ಚಳಿ ತಗಲುವಂತೆ ಉಳಿದವರಿಗೂ ತಗಲುವುದು. ಬೇಸಿಗೆಯಲ್ಲಿ ನೀವು ಬೆವರಿದಂತೆ ಉಳಿದವರೂ ಬೆವರುವರು. ಅಂದ ಬಳಿಕ ನಿಮಗೂ ಉಳಿದವರಿಗೂ ಭೇದವೇನು? ಅಂತೆಯೇ

ಎಲ್ಲರೂ ಒಂದಾಗಿರಿ. ನಿಮ್ಮೆಲ್ಲರ ಬಾಳನ್ನು ಒಂದೇ ಧ್ಯೇಯದತ್ತ ಒಲಿಯಿಸಿರಿ. ನಾನು ನಿನ್ನವ, ನೀನು ನನ್ನವ, ಆ ಅದೇ ಹಸಿರು ಹುಲ್ಲೇ ನಮ್ಮೆಲ್ಲ ರಿಗೂ ಹಾಸಿಗೆ; ಆ ಅದೇ ನೆಲವೇ ನಮ್ಮೆಲ್ಲರ ಆವಾಸಸ್ಥಾನ. ಆ ಅದೇ ರವಿಯೇ ಸಕಲರಿಗೂ ಬೆಳಕೀಯುವವ. ಆ ಅದೇ ಸೋಮನೇ ಸರ್ವರ ಹೃದಯವನ್ನೂ ತಣಿಸುವವ. ಅಂದ ಬಳಿಕ ನಮ್ಮ ಬಾಳು ಪರಸ್ಪರ ಭಿನ್ನವಾಗಬೇಕೇಕೆ?"

ಇನ್ನೂ ಏನೇನು ಆ ಹಾಡಿನಲ್ಲಿತ್ತೋ ಯಾರು ಹೇಳಬೇಕು? ಆ ಹಾಡು ಎಷ್ಟು ಹೊತ್ತು ನಿನದಿಸುತ್ತಿತ್ತೋ ಯಾರು ಗುರುತಿಸಬೇಕು? ಆ ಅನುಪಮ ಮಂಗಲ ಪಾಠದ ನಿನದವು ಆ ವಾಲ್ಮೀಕಿಯ ಹಾಡಿನಲ್ಲಿ ಎಷ್ಟೊತ್ತು ತುಂಬಿ ಸೂಸುತ್ತಲಿತ್ತೋ ಯಾರು ಹೇಳಬೇಕು?

ಆ ಮಂಗಲ ಮಧುರ ಅರ್ಥಯುಕ್ತ ನಾದವು ಅವರೆಲ್ಲರ ಕೊಲೆ ಸುಲಿಗೆಗಾರ ಉಡುಪು ತೊಡು ಪು ಸಿಂಗಾರ ಸಜ್ಜುಗಳನ್ನೆಲ್ಲ ಕಳಚಿ ಒಗೆಯಿತು. ಎಲ್ಲರೂ ವಾಲ್ಮೀಕಿಯ ಪಾದದೆಡೆ ಬಿದ್ದು ಹೊರ ಳಾಡತೊಡಗಿದರು. ಅವರ ನಾಯಕ ಗುಹಕ ಚಾಂಡಾಲ ಇದನ್ನೆಲ್ಲ ಕಣ್ಣಾರೆ ಕಂಡ. ಅವರ ಅಳುವನ್ನು ಕಿವಿಯಾರೆ ಕೇಳಿದ. ಅವರೆಲ್ಲರೂ ತನ್ನ ಪಾದಕ್ಕೆ ಬೀಳುತ್ತಿರುವುದನ್ನು ಕಂಡು ವಾಲ್ಮೀಕಿ ದೂರ ಸರಿದು ನಿಂತು, "ನಾನು ಸಾಧು ವಲ್ಲ, ಅವತಾರವಲ್ಲ, ಅರಸನೂ ಅಲ್ಲ. ನಿಮ್ಮೆಲ್ಲ ರಂತೆಯೇ ನಾನೂ ಒಬ್ಬ. ನನ್ನ ಪಾದಕ್ಕೆ ಬೀಳುವು ದೇನೂ ಒಳ್ಳೆಯದಲ್ಲ. ನೀವು ಪಾಪ ಮಾಡಿ ದ್ದೀರಿ. ಇನ್ನು ಮುಂದೆ ಪಾಪ ಮಾಡಬೇಡಿರಿ. ನಿಮ್ಮ ಬಾಳಿನ ದಿಕ್ಕನ್ನು ಬದಲಿಸಿರಿ. ಧರ್ಮ ಪಥದಲ್ಲಿ ನಡೆಯಿರಿ. ಅಂದರೆ ನೀವು ಸುಖಿಯಾಗು ವಿರಿ," ಎಂದು ಉಪದೇಶಿಸಿದನು.

ಹೀಗೆ ವಾಲ್ಮೀಕಿಯು ಈ ಸುಲಿಗೆಗಾರರನ್ನೆಲ್ಲ ಸಂತವಿಸುತ್ತಿರುವ ಸಮಯದಲ್ಲಿಯೇ ಪಟ್ಟಣದ ಕಡೆಯಿಂದ ನಾಗರಿಕರ ತಂಡವು, ವಾಲ್ಮೀಕಿಯೆಡೆಗೆ ಆಗಮಿಸುತ್ತಿರುವುದು ತೋರಿ ಬಂತು. ಯಾರು ಕುಂಟರಾಗಿದ್ದರು. ಯಾರು ಕುರುಡಾಗಿದ್ದರು. ಕೆಲ ವರ ಮೈ ತುಂಬ ಗಾಯಗಳಾಗಿ ನೆತ್ತರು, ಸೋರುತ್ತಿತ್ತು. ಕೆಲವರು ಮುದುಕ ತಾಯಿ ತಂದೆಗಳನ್ನು ಹೊತ್ತುಕೊಂಡು ಬರುತ್ತಿದ್ದರು. ಹಲವರು ಚೀರುತ್ತಿರುವ ಮಕ್ಕಳುಮರಿಗಳನ್ನು ಎದೆಗವಚಿಕೊಂಡು ಬರುತ್ತಿದ್ದರು. ತಮ್ಮ ರಾಜ ಕುಲದವರನ್ನೆಲ್ಲ ಕ್ರೂರ ರಕ್ಕಸರು ಹರಿದು ತಿಂದು ಬಿಟ್ಟದ್ದು ಅವರಿಗೆ ತಿಳಿದಿತ್ತು. ಅರಾಜಕತೆಯಲ್ಲಿ ಬಾಳುವುದು ಗಂಡಾಂತರಕಾರಿಯೆಂದೂ ಅಶಿಕ್ಷಿತ ವೆಂದೂ ತಿಳಿದು ಅವರೆಲ್ಲ ವಾಸಸ್ಥಾನಕ್ಕಾಗಿ, ಸುರಕ್ಷಿ ತತೆಗಾಗಿ ಬಂಧು--ಬಾಂಧವ, ಮಿತ್ರರನ್ನು ಅರಸಿ ಹೊರಟಿದ್ದರು. ವಾಲ್ಮೀಕಿಯು ಬೊಟ್ಟು ಮಾಡಿ ಅವರೆಲ್ಲರನ್ನೂ ತೋರಿಸುತ್ತ, "ನೋಡಿ, ನೋಡಿ ರಲ್ಲಿ, ನಿಮ್ಮ ಕ್ರೌರ್ಯ, ಶೌರ್ಯಗಳ ಸ್ಮಾರಕ ಸಮೂಹವನ್ನು!" ಎಂದು ಕಣ್ಣೀರು ಕಪಾಳಗಳ ಮೇಲೆ ಸುರಿ ಸುರಿಯುತ್ತಿದ್ದಂತೆ ಶೋಕಿಸುತ್ತ ನುಡಿದನು. ಪಶ್ಚಾತ್ತಾಪದಗ್ಧರಾದ ಅವರೆಲ್ಲ ರಿಗೂ ತಮ್ಮ ಅಪರಾಧದ ಪರಾಕಾಷ್ಠೆಯ ಅರಿವು ಮೂಡಿತು. ಮುಖ ಭೀಕರವಾಗಿ ಬಿಳಿಚಿ ಹೋಯಿತು. 'ಹೋಗಿರಿ, ಅವರನ್ನೆಲ್ಲ ಮರಳಿ ಕರೆ ತನ್ನಿ." ಎಂದು ವಾಲ್ಮೀಕಿ ನುಡಿದನು. ಆದರೆ ಅವರು ಹಿಂಬಾಲಿಸಿ ಬರುತ್ತಿರುವುದನ್ನು ಕಂಡೊಡನೆ ಆ ದುಃಖೀ ಜನರೆಲ್ಲರೂ ಭಯ ಗೊಂಡು ಒದರುತ್ತ ಚೀರುತ್ತ ಓಡತೊಡಗಿ ದರು. ಒಳ್ಳೆಯ ಮಾತು, ಕೃತಿ ಮಾಡಿದರೂ ದುರುಳ ದುಷ್ಟರನ್ನು ಯಾರೂ ನಂಬರೆಂಬುದು ಅವರೆಲ್ಲರಿಗೆ ಖಾತ್ರಿಯಾಯಿತು. ಅವರೆಲ್ಲರನ್ನೂ ಮರಳಿ ಬರಲು ಮನವೊಲಿಸುವಂತೆ ವಾಲ್ಮೀಕಿ ಯನ್ನೇ ಅವರು ಪ್ರಾರ್ಥಿಸಿದರು. ಆದರೆ ಅವನೂ ಕೂಡ ಒಬ್ಬ ಕೊಲೆಪಾತಕಿಯಲ್ಲವೆಂಬುದು ಆ ಜನರಿಗೆ ಹೇಗೆ ನಂಬಿಕೆಯಾಗಬೇಕು?

ವಾಲ್ಮೀಕಿಯು ಹೇಗೋ ಪ್ರಯತ್ನಿಸಿ ಅವ ರೆಲ್ಲರೂ ಮರಳುವಂತೆ ಮಾಡಿದ. ಆಗಲೂ ಅವನು ತನ್ನ ಆ ಹಾಡನ್ನೇ ಹಾಡಿದ. ಜನತೆಯ ಕ್ಷಮಾಯಾಚನೆ ಬೇಡುವಂತೆ ಅರ್ಥ ಬರುವ ಹಾಡನ್ನು ಅವನು ಅಷ್ಟೊಂದು ಕನಿಕರ ದಿಂದ ಕೋಮಲತೆಯಿಂದ ಹೃದಯ ಕರಗಿ ಸುವ ಮಾಧುರ್ಯದಿಂದ ಹಾಡಿದುದಕ್ಕೇ ಆ ಜನರ ಹೃದಯವೂ ಕೋಮಲಗೊಂಡು, ಪ್ರೇಮ ತುಂಬಿ, ವಾಲ್ಮೀಕಿಯ ಬೇಡಿಕೆಯಂತೆ ಅವರೆಲ್ಲ ಪಟ್ಟಣದತ್ತ ಮರಳತೊಡಗಿದರು. ವಾಲ್ಮೀಕಿ ಯನ್ನೇ ತಮ್ಮ ರಾಜನಾಗೆಂದು ಅಂಗಲಾಚತೊಡ

ಗಿದರು. ಏಕೆಂದರೆ, ಅರಾಜಕ ರಾಜ್ಯದಲ್ಲಿರುವುದು ಸುರಕ್ಷಿತವಾಗಿರಲಿಲ್ಲ. ವಾಲ್ಮೀಕಿಯು ರಾಜನಾಗಲು ಒಪ್ಪದೆ, ಕಳ್ಳರ ತಂಡದ ಮುಖಂಡನಾದ ಗುಹಕ ಚಂಡಾಲನನ್ನೇ ಆ ನಾಡಿಗೆ ಅರಸನನ್ನಾಗಿ ಮಾಡಿದನು. ಮ್ಲೇಚ್ಛರು, ಯವನರು, ವಾನರರು, ರಾಕ್ಷಸರು ಎಲ್ಲರೂ ಒಂದುಗೂಡಿ ಆ ಗುಹಕ ರಾಜ್ಯದಲ್ಲಿ ಸುಖವಾಗಿ ಬಾಳತೊಡಗಿದರು. ಮುಂದೆಂದೂ ಅವರು ಕಳ್ಳತನ, ಕೊಲೆ ಸುಲಿಗೆಗಳ ಮಾತನ್ನೇ ಎತ್ತದೆ ಸಜ್ಜನರಾಗಿ ಜೀವಿಸತೊಡಗಿದರು. ಕೊಲೆ–ಸುಲಿಗೆಗಳಿಗೆ ಹವಣಿಸುವಂಥ ಮನಃಪ್ರವೃತ್ತಿಯೇ ಅವರಲ್ಲಿ ಲಯವಾಗಿ ಹೋಯಿತು. ಆದರೆ ಇತರರು ತಮ್ಮ ಮೇಲೆ ಆ ರೀತಿ ಆಕ್ರಮಣ ಮಾಡಿದಾಗ ಘನ ಘೋರವಾಗಿ ಶೌರ್ಯದಿಂದ ಕಾದಿ ಅವರನ್ನೆಲ್ಲ ಹಿಮ್ಮೆಟ್ಟಿಸುತ್ತಿದ್ದರು. ಹೀಗೆ ಆ ಪ್ರದೇಶದಲ್ಲಿ ಶಾಂತ ಸುರಾಜ್ಯ ನೆಲೆಗೊಂಡಿತು. ಆದರೂ ಈ ಒಂದುಗೂಡಿದ ದೊಡ್ಡ ಕಳ್ಳಕಾಕರ ಗುಂಪು ಯಾವ ಹೊತ್ತಿನಲ್ಲಿ ಏನು ಮಾಡುವುದೋ ಎಂದು ವಾಲ್ಮೀಕಿಗೆ ಒಳಗೊಳಗೇ ಭಯವಿದ್ದೇ ಇತ್ತು. ಅವನು ತಿಂಗಳಿಗೊಂದು ಸಲ ಗುಹಕ ರಾಜನ ಕಡೆಗೆ ಬಂದು ಹೋಗುತ್ತಲಿದ್ದ. ಉಳಿದಾಗಲೆಲ್ಲ ದೇಶದ ಇತರ ಭಾಗಗಳನ್ನು ಸುತ್ತುತ್ತ, ತನ್ನ ದಿವ್ಯ ಹಾಡನ್ನು ಹಾಡುತ್ತ ಸಂಚರಿಸುತ್ತಿದ್ದ. ಬೇಕೆಂದಲ್ಲೆಲ್ಲ ಹೋಗುತ್ತ ಸಂಚಾರ ಮಾಡುತ್ತ ಶಾಂತಿ ಪ್ರಯತ್ನಕ್ಕೆ ತನ್ನನ್ನೇ ಮೀಸಲಾಗಿಸಿಕೊಂಡಿದ್ದ.

ಖಂಡ ೬

೧. ಹಾರಾಡುವ ಪಟ್ಟಣ

ವಿಶ್ವಾಮಿತ್ರನು ತನ್ನ ಹೊಸ ಸೃಷ್ಟಿಯನ್ನು ತನ್ನ ಹೊಟ್ಟೆಯ ಕಂದಮ್ಮನಂತೆ ತನ್ನ ಅಜೇಯ ಶಕ್ತಿ ಸಾಮರ್ಥ್ಯಗಳಿಂದ ರಕ್ಷಿಸುತ್ತಿದ್ದನು. ಅಲ್ಲಿಯ ಜನತೆಯು ಅನುಕೂಲ, ಸುಖೋಪಭೋಗಗಳು ಅವರಿಗೆ ಆಜೀವಪರ್ಯಂತ ದೊರಕುವಂತೆ ಮಾಡುವ ಪ್ರಯತ್ನದಲ್ಲಿ ತನ್ನ ಜೀವನವನ್ನೇ ಗಂಡಾಂತರಕ್ಕೊಡ್ಡಲೂ ಅವನು ಹಿಂದು ಮುಂದು ನೋಡುತ್ತಿರಲಿಲ್ಲ. ಆದರೆ ವೈಯಕ್ತಿಕವಾಗಿ ಅದೆಲ್ಲದರಿಂದ ಅವನಿಗೇನು ಪ್ರಯೋಜನವಿತ್ತು? ಈ ವರೆಗೂ ಕಾರ್ಯಬಾಹುಲ್ಯದಲ್ಲಿ ಅವನಿಗೆ ತನ್ನ ಬಗೆಗೆ ಯೋಚಿಸಲು ಅವಕಾಶವೇ ಇರಲಿಲ್ಲ. ಅವನು ತನ್ನ ಆ ಹೊಸ ಸೃಷ್ಟಿಗೆ ತಾನೇ ಏಕೈಕ ಪ್ರಭುವಾಗಿದ್ದನು.

ಸಾಮಾನ್ಯ ಮರ್ತ್ಯ ಮಾನವನು ಸಂಗಾತಿಯಿಲ್ಲದೆ, ತನ್ನ ಹೃದಯ ತೋಡಿಕೊಳ್ಳಲೂ ಯಾರೂ ಇರದೆ ಇದ್ದಾಗ ಆಗಾಗ ತನ್ನ ಭಾವನೆಗಳೆಲ್ಲ ಬರಡಾದಂತೆ ಒಂಟಿಯಾದಂತೆ ಭಾವಿಸುತ್ತಾನೆ. ಈ ಮಹಾ ವ್ಯಕ್ತಿತ್ವದ ಮನುಷ್ಯ ದೊಡ್ಡ ಅರಸು ವಿಶ್ವಾಮಿತ್ರನು ತನ್ನ ನವೀನ ಸೃಷ್ಟಿಯ ಏಕೈಕ ಪ್ರಭುತ್ವವನ್ನು ಪಡೆದಿದ್ದರೂ ಅವನಿಗೆ ತನ್ನ ಏಕಾಕಿತನದ ಅರಿವಾಗುತ್ತಿತ್ತು. ಅಲ್ಲಿ ಸಕಲವೂ ಸಮೃದ್ಧಿಯಾಗಿತ್ತು. ಆದರೆ ಸುಖವೆಲ್ಲಿತ್ತು? ಅವನ ಸ್ವತಃಕ್ಕೆ ಅಲ್ಲಿ ಏನಿತ್ತು ?

ಅವನು ತನ್ನ ನವೀನ ಸೃಷ್ಟಿಯ ಜನತೆಯೊಡನೆ ಬೆರೆಯುತ್ತಿದ್ದನು. ಆದರೆ ಯಾರೊಡನೆ ಅವನು ತನ್ನ ಜೀವಮಾನವನ್ನೆಲ್ಲ ಕಳೆದಿದ್ದನೋ, ತನ್ನ ಸುಖ–ದುಃಖಗಳಲ್ಲಿ ಯಾರು ಪಾಲುಗಾರರಾಗಿ ಬೆರೆಯುತ್ತಿದ್ದರೋ ಆ ಜನರೆಲ್ಲಿದ್ದರು ? ಹೊಸ ಸೃಷ್ಟಿಯ ಜನರೆಲ್ಲ ಸುಖವಾಗಿದ್ದರು ನಿಜ. ಆದರೆ ವಿಶ್ವಾಮಿತ್ರನು ಭೌಮಿಕ ಜೀವಿಯಾಗಿದ್ದು ದುಃಖಿಸುವದೇ ಅವನ ಹಣೆಬರಹವಾಗಿತ್ತು. ತಾನು ಏಕಾಕಿಯಾಗಿ ದುಃಖಿಸುತ್ತಿರುವಾಗ ತನ್ನ ಮೋರೆ ನೋಡಿ ಸಂತವಿಸಲು ಯೋಗಕ್ಷೇಮ ವಿಚಾರಿಸಿಕೊಳ್ಳಲು ಅವನಿಗೆ ಅಲ್ಲಿ ಯಾರಿದ್ದರು ? ಅವನ ಮಾನಸಿಕ ತಾಪವು ಈ ರೀತಿ ಮಿತಿ ಮೀರಿ ಹೋಗಿತ್ತು.

ಹೀಗೇ ಕೆಲ ದಿನ ಕಳೆದವು. ಕೊನೆಗೆ ಅವನು ತನ್ನ ಹಳೆ ಜಗದಿಂದ ಕೆಲವು ಜನರನ್ನಾದರೂ ಈ ಹೊಸ ಸೃಷ್ಟಿಗೆ ತರಬೇಕೆಂದು ಬಯಸಿದನು. ಈ ಉದ್ದೇಶಕ್ಕಾಗಿ ಅವನೊಂದು ವಿಶಾಲ ಹೊಸ ಪಟ್ಟಣವನ್ನೇ ಕಟ್ಟಿದನು. ತನ್ನ ರಾಜಧಾನಿ ಕನ್ಯಾಕುಬ್ಜವೇ ಇಡಿಯಾಗಿ ಅದರೊಳಗೆ ಹಿಡಿಯುವಂತೆ ಮಾಡಿದ್ದನು. ಹೊಸ ಸೃಷ್ಟಿಯಲ್ಲಿ ವೈರಿಭಯವೇ ಇಲ್ಲದ್ದರಿಂದ ಆ ಹೊಸ ಪಟ್ಟಣಕ್ಕೆ ಕೋಟೆ ಕೊತ್ತಳಗಳನ್ನೇ ಕಟ್ಟಲಿಲ್ಲ. ಆ ಹೊಸ ಪಟ್ಟಣವು ಸುಖಕರ ಹರ್ಮ್ಯ ಪ್ರಾಸಾದಗಳಿಂದಲೂ ಭವ್ಯ ಅರಮನೆಗಳಿಂದಲೂ

ಸುಸಜ್ಜಿತವಾಗಿತ್ತು. ವಿಶ್ವಾಮಿತ್ರನು ಭೂಮಿಗೆ ಬಂದ; ಕನ್ಯಾಕುಬ್ಜಕ್ಕೆ ಬಂದು ತನ್ನ ಮಂತ್ರಿಯನ್ನು ಸಂದರ್ಶಿಸಿದ; ತನ್ನ ಕುಟುಂಬದವರನ್ನೂ ಕಂಡ. ಏಕಾಕಿಯಾದ ಮನುಷ್ಯನು ಈ ಭೂಮಿಯ ಮೇಲೆ ಅವನು ದೇವರೇ ಆಗಿದ್ದರೂ ತನ್ನ ಬಳಗ ಬಂಧುಬಾಂಧವ ನೆರೆಹೊರೆಯೊಡನೆ ಇರುವ ಪನ ಸುಖ ಸಂತೋಷಗಳನ್ನು ಪಡೆಯಲಾರನೆಂದು ವಿಶ್ವಾಮಿತ್ರನಿಗೆ ಅನಿಸಿತು. ಈ ಭೂಮಿಯ ಮೇಲೆಯೇ ಇದ್ದುಬಿಡಬೇಕೆಂದೂ ಒಮ್ಮೆ ಅವನಿಗನಿಸಿತು. ಆಗ ಅವನಿಗೆ ತಾನಿಲ್ಲಿ ಮತ್ತು ತನ್ನ ಹೊಸ ಸೃಷ್ಟಿಯಲ್ಲಿ ಪಡೆದ, ನಡೆಸಿದ ಅಧಿಕಾರದ. ಶಕ್ತಿಯ ಪ್ರಭಾವ ಕಂಡು ಹಾಗೂ ಈ ಭೂಮಿಯ ಮೇಲಿನ ಬ್ರಾಹ್ಮಣರನ್ನು ಸಹ ತನ್ನ ಈ ಜನರನ್ನೇ ಎಲ್ಲರನ್ನೂ ತನ್ನ ಹೊಸ ಸೃಷ್ಟಿಗೆ ಕರೆದೊಯ್ಯಬೇಕೆಂದು ನಿರ್ಧರಿಸಿದನು.

ಈಗ ಕನ್ಯಾಕುಬ್ಜ ಪಟ್ಟಣವೇ ಮೆಲ್ಲ ಮೆಲ್ಲನೆ ಗಾಳಿಯಲ್ಲಿ ಮೇಲೇರತೊಡಗಿತು. ಭೂಮಿಯ ಮೇಲಿನ ಜನರೆಲ್ಲರೂ ಆಶ್ಚರ್ಯದಿಂದ ಈ ಕೌತುಕವನ್ನು ಬೆರಗಾಗಿ ನೋಡತೊಡಗಿದರು. ಈ ಹಾರುವ ಪಟ್ಟಣದಿಂದ ಆಕಾಶದಲ್ಲಿ ಸುಮಧುರವಾದ ಸಂಗೀತ ಕೇಳಿ ಬರತೊಡಗಿತು. ಆ ಪಟ್ಟಣದೊಳಗಿನ ಜನರೆಲ್ಲ ನರ್ತಿಸತೊಡಗಿದರು. ಆದರೆ ಕೆಲವೊಂದು ಎತ್ತರಕ್ಕೆ ಅವರೆಲ್ಲ ಏರಿ ಬಂದ ಬಳಿಕ ಅವರ ಆನಂದವು ದುಃಖವಾಗಿ ಪರಿಣಮಿಸತೊಡಗಿತು. ಅವರಿಗೆ ಉಸುರಾಡಿಸಲಾಗದೆ ಗಂಟಲು ಕಟ್ಟತೊಡಗಿತು. ವಿಶ್ವಾಮಿತ್ರನು ಬುವಿಯ ಮೇಲಿನ ಗಾಳಿಯನ್ನು ಅಲ್ಲಿಗೆ ತರಲು ಪ್ರಯತ್ನಿಸಿದನು. ಆದರೆ ತರಲಾಗಲಿಲ್ಲ. ಹೀಗವನು ಒಂದು ದೊಡ್ಡ ಕುತ್ತಿನಲ್ಲಿ ಸಿಕ್ಕುಬಿದ್ದನು. ಅಲ್ಲೇ ಭೌಮಿಕ ವಾತಾವರಣ ನಿರ್ಮಿಸಲ ಪ್ರಯತ್ನಿಸಿದನು. ಅದೂ ಸಾಧ್ಯವಾಗಲಿಲ್ಲ.

ಬಳಿಕ ಅವನು ಬ್ರಹ್ಮನನ್ನು ಧ್ಯಾನಿಸಿದನು. ಬ್ರಹ್ಮನು ಪ್ರತ್ಯಕ್ಷನಾದೊಡನೆ, "ನೀನು ಇನ್ನು ನನ್ನೊಡನೆ ಜಗಳಾಡಬೇಕೆಂದಿರುವಿಯಾ? ನಾನು ನನ್ನೀ ಜನರೊಡನೆ ನನ್ನ ಹೊಸ ಸೃಷ್ಟಿಗೆ ಹೋಗಬೇಕೆಂದು ಬಯಸುತ್ತಿರಲು ನೀನೇಕೆ ಅದಕ್ಕೆ ಅಡ್ಡ ಬರುತ್ತಿರುವೆ?" ಎಂದು ಆಕ್ರೋಶ ಮಾಡಿದನು.

ಅದಕ್ಕೆ ಬ್ರಹ್ಮನು "ನೀನು ನಿನ್ನ ಹೊಸ ಸೃಷ್ಟಿ ನಿರ್ಮಾಣ ಕಾರ್ಯದಲ್ಲಿ ನಿನ್ನ ತಪಃಶಕ್ತಿಯ ಎಲ್ಲ ಫಲವನ್ನೂ ತೀರಿಸಿಕೊಂಡಿರುವಿ. ಇನ್ನು ಏನು ಮಾಡಲೂ ನಿನ್ನಲ್ಲಿ ಶಕ್ತಿ ಉಳಿದಿಲ್ಲ. ಏನಾದರೂ ಮಾಡಲು ಪ್ರಯತ್ನಿಸಿದರೆ ನಿನ್ನ ಸೃಷ್ಟಿಗೆ ಲಯ ನಿಶ್ಚಿತ. ಶಾಂತವಾಗಿ ವಿವೇಕದಿಂದ ನಡೆ ಎಂದು ಬಿನ್ನವಿಸುವೆ" ಎಂದನು.

"ಇನ್ನು ನಿನ್ನ ಬಾಯಿ ದೊಡ್ಡದಿದ್ದಷ್ಟು ನಿನ್ನ ಮಾತುಗಳೂ ದೊಡ್ಡದೇ ಆಗಿವೆ. ನೀನು ನನಗೆ ವಿವೇಕದಿಂದ ಮುಂದುವರೆ ಎನ್ನುವೆಯಾ? ನೋಡು ಹಾಗಾದರೆ. ನಾನು ನನ್ನ ಸಮಸ್ತ ಶಕ್ತಿಯಿಂದಲೇ ಗಾಳಿಯನ್ನು ತರುವೆ. ಇವರೆಲ್ಲ ಬದುಕಿ ಹೊಸ ಸೃಷ್ಟಿಗೆ ಬರುವರು" ಎನ್ನುತ್ತ ವಿಶ್ವಾಮಿತ್ರನು ವೇಗದಿಂದ ತನ್ನ ಸಮಸ್ತ ಶಕ್ತಿಯುತ್ತ—ಉಚ್ಛ್ವಾಸ ಮಾಡಿದನು.

ಇತ್ತ ಕನ್ಯಾಕುಬ್ಜ ಪಟ್ಟಣವು ಭರದಿಂದ ಕೆಳಗಿಳಿಯತೊಡಗಿತು. ತನ್ನ ಸೃಷ್ಟಿಯೇ ಹೀಗೆ ಭರದಿಂದ ವಿನಾಶದತ್ತ ಸಾಗಿದ್ದನ್ನು ಕಂಡು ಬ್ರಹ್ಮನು ತನ್ನ ಶಕ್ತಿಪ್ರಯೋಗ ಮಾಡಿ, ಆ ಪಟ್ಟಣವು ಮೆಲ್ಲಗೆ ಭೂಮಿಯ ಮೇಲೆ ತನ್ನ ಮೊದಲಿದ್ದ ಸ್ಥಾನದಲ್ಲೇ ಬಂದಿಳಿಯುವಂತೆ ಮಾಡಿದನು. ವಿಶ್ವಾಮಿತ್ರನ ಅನುಯಾಯಿಗಳು, ಬ್ರಾಹ್ಮಣರ ಮೇಲೆ ಭೀಕರ ಅತ್ಯಾಚಾರಗಳನ್ನೆಸಗಲು ಪ್ರಾರಂಭಿಸಿದರಲ್ಲದೆ. ರಾಕ್ಷಸರನ್ನು ಕೂಡಿಕೊಂಡು ಅವರನ್ನು ನಾನಾ ಬಗೆಯಾಗಿ ಪೀಡಿಸತೊಡಗಿದರು.

೨. ಹೊಸ ಸೃಷ್ಟಿಯು ಕೊನೆ

ವಿಶ್ವಾಮಿತ್ರನು ತನ್ನ ಹೊಸ ಸೃಷ್ಟಿಯಿಂದ ಗಾಳಿಯು ಪ್ರವಾಹದಂತೆ ಶೂನ್ಯಾಕಾಶದಲ್ಲಿ ಹರಿದು ಬರುವಂತೆ ಪ್ರಯತ್ನಿಸಿದನು. ಆದರೆ ಅದು ಸಾಧ್ಯವಾಗಲಿಲ್ಲ. ಕೊನೆಗೆ ಕಡು ಕೋಪದಿಂದ ಬ್ರಹ್ಮನನ್ನು ಮತ್ತೆ ಆಹ್ವಾನಿಸಿದನು. ಬ್ರಹ್ಮನು ಬಂದೊಡನೆ "ನನ್ನ ಗಾಳಿಯನ್ನು ಈ ಶೂನ್ಯಾಕಾಶದಲ್ಲಿ ಕೊಂಡೊಯ್ಯಲು ನನಗೆ ದಾರಿಮಾಡಿ ಕೊಡು" ಎಂದು ಕೇಳಿದನು.

ಬ್ರಹ್ಮನು "ಹಾಗೆ ಮಾಡಿ ಕೊಡಲು ಬೇಕಾ

ಗಿರುವ ತಪಃಶಕ್ತಿಯನ್ನೂ ನೀನು ಕಳೆದು ಕೊಂಡುಬಿಟ್ಟಿರುವೆ. ನಿನ್ನಲ್ಲಿಯೇ ಆ ಶಕ್ತಿಯಿಲ್ಲದೆ ನಾನೇನನ್ನೂ ಕೊಡಲಾರೆ" ಎಂದನು.

ಕೋಪದಿಂದ ಕುರುಡಾಗಿ ವಿಶ್ವಾಮಿತ್ರನು ಬ್ರಹ್ಮನನ್ನೇ ಸೆರೆ ಹಿಡಿಯಹೋದನು. ಆದ ರದು ಸಾಧ್ಯವಾಗಲಿಲ್ಲ. ಕೋಪೋದ್ರಿಕ್ತನಾಗಿ ಬ್ರಹ್ಮಸೃಷ್ಟಿಯನ್ನೇ ನಾಶಮಾಡಲು ತನ್ನ ಗದೆಯನ್ನೆತ್ತಿದನು. ಬ್ರಹ್ಮನೆಂದನು: "ಸುಮ್ಮನೆ ಇದ್ದಲ್ಲಿಯೇ ಇದ್ದಂತಿರು. ಹೊಸದೇನನ್ನಾದರೂ ಮಾಡ ಹೋದಿಯೆಂದರೆ ನಿನ್ನ ಸ್ವತಃದ ಸೃಷ್ಟಿ ಯೇ ನುಚ್ಚುನೂರಾಗಿ ಹೋದೀತು."

ವಿಶ್ವಾಮಿತ್ರನು ಅಪಮಾನ ಮಾಡಿ ಬ್ರಹ್ಮನನ್ನು ಕಳಿಸಿಬಿಟ್ಟನು. ಬಳಿಕ ಅವನು ಗದೆಯನ್ನೆತ್ತಿದನು. ಆದರದು ಅವನ ಕೈಯಿಂದ ಜಾರಿ ಕೆಳಗೆ ಬಿದ್ದುಬಿಟ್ಟಿತು. ಬಳಿಕ ಅವನು ಮತ್ತೊಮ್ಮೆ ಅದನ್ನು ಕಸುವಿನಿಂದ ಎತ್ತಿಕೊಂಡನು. ಕೂಡಲೆ ಅವನ ಹೊಸ ಸೃಷ್ಟಿಯಲ್ಲಿ ಬಿರುಕು ಕೊರಕಲುಗಳು ಬಿಡ ತೊಡಗಿದವು. ಗದೆಯನ್ನು ಝಳಪಿಸುತ್ತ ತಿರುವತೊಡಗಿದ. ಕೂಡಲೆ ಅವನ ಸೃಷ್ಟಿಯ ಮೂಲ ಕೀಲಗಳೇ ಸಿಡಿದು ಇಬ್ಭಾಗವಾದವು. ವಿಶ್ವದ ಕೇಂದ್ರಕ್ಕೆ ಹೊಡೆಯಬೇಕೆಂಬುದೇ ಅವನ ಗುರಿಯಾಗಿತ್ತು. ಅದಕ್ಕೇ ಗುರಿಯಿಟ್ಟು ಅವನು ತನ್ನ ಗದೆಯನ್ನು ಸುತ್ತು ಸುತ್ತಾಗಿ ತಿರುವ ತೊಡಗಿದನು. ಆದರೆ ಅವನ ಸೃಷ್ಟಿಯ ಘಟಕ ಗಳೇ ಭಿನ್ನಭಿನ್ನವಾಗತೊಡಗಿದವು. ಹಾಗೇ ಅವನು ಗದೆಯನ್ನು ತಿರುವತೊಡಗಿದಂತೆ ಅವನ ಸೃಷ್ಟಿ ಸಂಪೂರ್ಣವಾಗಿ ಸಿಡಿದು ಹೋಗಿ ಮೊದಲಿನ ತನ್ನ ಆಕಾಶಗಂಗೆಯ ಮೂಲ ಸ್ಥಿತಿಯನ್ನು ಧರಿಸಿತು. ವಿಶ್ವಾಮಿತ್ರನು ಗದೆಯನ್ನು ಬೀಸಿ ಒಗೆದನು. ಕೂಡಲೆ ಅವನು ಕೇಂದ್ರೀಕರಿಸಿದ ಆಕಾಶಗಂಗೆ ಯಲ್ಲಿ ಭೀಕರ ಸದ್ದು ಮಾಡುತ್ತ ಎಲ್ಲಿಂದ ಬಂದಿತ್ತೋ ಅಲ್ಲಿಗೆ ಹರಿದು ಹೋಗಿ ಬಿಟ್ಟಿತು. ಅನಂತಾಕಾಶದ ವಿಶಾಲ ಪೊಳ್ಳೆಲ್ಲವೂ ಮತ್ತೆ ಮೊದಲಿನಂತೆ ಬೆಳಗತೊಡಗಿತು. ಅದ ರಿಂದೇ ಆಕರ್ಷಿಸಿ, ಚಿಕ್ಕಿಗಳೂ ಆಕಾಶಗಂಗೆಯೂ ತಮ್ಮ ತಮ್ಮ ಸ್ವಸ್ಥಾನಕ್ಕೆ ಸೇರಿಕೊಂಡವು. ಆ ವಿಶಾಲ ಶೂನ್ಯದಲ್ಲಿ ಸಾಗರದೊಳಗೆ ಹನಿ ಕೂಡಿ ಹೋಗುವಂತೆ ವಿಶ್ವಾಮಿತ್ರನ ಸೃಷ್ಟಿಯೆ ಲ್ಲವೂ ಕ್ಷಣದೊಳಗೆ ಕೂಡಿ ಹೋಯಿತು. ಈ ಭೂಮಿಯ ಮೇಲಿಂದ ಈಶಾನ್ಯ ದಿಕ್ಕಿನೆಡೆಗೆ ಕಾಣು ವ ಮಿನುಮಿನುಗುತ್ತಿರುವ ನಕ್ಷತ್ರಪುಂಜ ಗಳೆಲ್ಲ ಮತ್ತೆ ಮಾಯವಾಗಿ ಹೋದವು. ವಿಶ್ವಾ ಮಿತ್ರ ಸೃಷ್ಟಿಯಲ್ಲಿ ತುಂಬಿದ್ದ ಅವನ ಜನವೆಲ್ಲ ಅನುಭವಿಸುತ್ತಿದ್ದ ಅನುಕೂಲ, ಸುಖೋಪ ಭೋಗಗಳೆಲ್ಲವೂ ಮಟಾಮಾಯವಾಗಿ ಹೋದವು. ಅಲ್ಲಿಯ ಜನರೆಲ್ಲರೂ ನಿರಾಕಾರ ಅಣುಗಳಲ್ಲಿ ಮುಳುಗಿ ಹೋದರು. ಆ ಆನಂದಕರ ಪರ್ವತ ಬಂಡೆಗಳು, ಆ ಸುಂದರ ಸೃಷ್ಟಿ, ಆ ಅರಮನೆ, ಪ್ರಾಸಾದಗಳು ಆ ರಾಜವೈಭವದ ಹಾದಿ ಬೀದಿ ಗಳು, ಎಲ್ಲವೆಲ್ಲವೂ ಮತ್ತೊಮ್ಮೆ ನಿರಾಕಾರ ಅಣು ಸಾಗರದಲ್ಲಿ ಲೀನವಾಗಿ ಹೋದವು. ಯಾವ ರೀತಿಯ ಒತ್ತಾಯವಿರದ ಮೇಲು ಕೀಳುಗಳ ತಾರತಮ್ಯವಿರದ, ಸರ್ವತ್ರ ಐಕ್ಯ ಅನ್ಯೋನ್ಯತೆಗಳಿದ್ದ ಸರ್ವ ಸಮತೆಯಿದ್ದ ಆ ವಿಶ್ವಾಮಿತ್ರ ಸೃಷ್ಟಿತ ಸಮಾಜವು ಕೊಡ ಅನಂತ ಅಪಾರ ಅನಾದಿ ಶೂನ್ಯದಲ್ಲಿ ಮುಳುಗಿ ಮಾಯವಾಗಿ ಹೋಯಿತು.

೩. ವಿಶ್ವಾಮಿತ್ರನ ಪತನ

ಮತ್ತೆ ವಿಶ್ವಾಮಿತ್ರ ?... ತನ್ನ ಗದೆ ಯನ್ನು ಬೀಸಿ ಒಗೆದೊಡನೆ ಅವನು ಎಚ್ಚರದಪ್ಪಿ ಬಿಟ್ಟನು. ಆದರೆ ಅವನು ಎಲ್ಲಿದ್ದ ? ಅಲ್ಲೆಲ್ಲಾ ದರೂ ಅವನಿಗೆ ಸ್ಥಾನವಿತ್ತೇ? ಆ ಅನಂತಾಕಾಶ ದಲ್ಲೇ ಅವನು ಎಚ್ಚರದಪ್ಪಿದ್ದ. ಅವನಿಗೆ ತನ್ನ ಹೊಸ ಸೃಷ್ಟಿಯ ಸೆಳೆತವಿದ್ದಷ್ಟು ಕಾಲ ಅಲ್ಲಿಯೇ ಮೇಲೆ ಇದ್ದ. ಆದರೆ ನಮ್ಮ ಭೂಮಿ ಯ ಗುರುತ್ವಾಕರ್ಷಣವು ಈಗ ಅವನ ನಿರ್ಜೀವ ವಾದ ಭಾರೀ ದೇಹವನ್ನು ಸೆಳೆಯತೊಡಗಿತು. ಅವನು ಸುತ್ತು ಸುತ್ತಾಡುತ್ತ ಕೆಳಗಿಳಿದು ಬರ ತೊಡಗಿದನು. ಬ್ರಹ್ಮನು ಅವನನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದ. ಆದ್ದರಿಂದಲೇ ವಿಶ್ವಾಮಿತ್ರನು ಅವನನ್ನು ಹೀಯಾಳಿಸಿ ಬೈಯುತ್ತಿದ್ದರೂ ಅವನ ಬಳಿಗೆ ಅನೇಕ ಸಲ ಬಂದಿದ್ದ. ಅವನನ್ನು ಬ್ರಾಹ್ಮಣ ನನ್ನಾಗಿಸಲು ಪ್ರಯತ್ನಿಸಿದ್ದ. ಈಗ ವಿಶ್ವಾ ಮಿತ್ರನು ಉಸಿರಾಡಿಸಲು ಗಾಳಿಯಿಲ್ಲದೆ

"ಕಸ್ತೂರಿ" ಯಿಂದ ನಿಮಗೆ ಉಳಿತಾಯ



ಇದೀಗ ನೀವು ಸಾಬೂನಿಗೆ ಕಡಿಮೆ ಹಣ
ಖರ್ಚು ಮಾಡಿ ಅಧಿಕ ಬಟ್ಟೆಗಳನ್ನು ಒಗೆಯಬಹುದು
ಕಸ್ತೂರಿ ನೀಲಮ್ ಹಾಗೂ ಕಸ್ತೂರಿ ಬಾರ್ ಸೋಪ್
ಗಳನ್ನು ಉಪಯೋಗಿಸುವುದರಿಂದ ಇದು ಸಾಧ್ಯ. ಕಸ್ತೂರಿ
ಸಾಬೂನುಗಳು ಬಹು ಮಿತವ್ಯಯಕರವಾದುದಲ್ಲದೆ, ಪ್ರತಿ ಬಾರ್
ಸೋಪಿನಿಂದಲೂ ಹೆಚ್ಚು ಬಾರಿ ಒಗೆಯಲು ಸಾಧ್ಯವಾಗುತ್ತದೆ. ಇದರಲ್ಲಿ
ವಿಶೇಷ ಡಿಟರ್ ಜೆಂಟ್‌ಗಳು ಮಿಶ್ರಿತವಾಗಿರುವುದರಿಂದ ನಿಮ್ಮ
ಉಡುಪುಗಳು ಬಿಳುಪಿಗಿಂತಲೂ ಅತ್ಯಧಿಕ ಉಜ್ವಲವಾಗಿರುತ್ತವೆ.

<u>ನಿಮ್ಮ ಸಮಸ್ಯೆಗಳನ್ನು ಹೋಗಲಾಡಿಸಿಕೊಳ್ಳಿರಿ. ಕಸ್ತೂರಿ ಸಾಬೂನುಗಳನ್ನು ಇಂದೇ ಉಪಯೋಗಿಸಿರಿ.</u>

ತಯಾರಕರು ಶ್ರೀ ರಾಮಕೃಷ್ಣ
ಆಯಿಲ್ ಮಿಲ್ಸ್ ಮಂಗಳೂರು

WOODY-SROM-KAN-782D

ಸಾಯುತ್ತಿದ್ದಾನೆಂಬುದು ಕಂಡು ಬಂದೊಡನೆ ಬ್ರಹ್ಮನು ಭೂಮಿಯಿಂದ ಗಾಳಿಯನ್ನು ಸೆಳೆದು ಕೊಂಡೊಯ್ದು ಅದನ್ನು ವಿಶ್ವಾಮಿತ್ರನ ಬಳಿಗೆ ತಂದು ಬಿಟ್ಟನು. ಅಂತೇ ವಿಶ್ವಾಮಿತ್ರನು ತನ್ನ ಪ್ರಾಣ ಕಳೆದುಕೊಳ್ಳದೆ ಕೇವಲ ಎಚ್ಚರದಪ್ಪಿದವನಾಗಿ, ಸುತ್ತು ಸುತ್ತಾಡಿ ತಿರುಗುತ್ತ ಕೆಳಕ್ಕೆ ಬೀಳತೊಡಗಿದ್ದನು. ಅವನ ಬಾಯಿಯಿಂದ ನೆತ್ತರು ಸೋರುತ್ತಿತ್ತು. ಅವನ ಮೈ ಬಾತು ಹೋಗಿತ್ತು. ಅವನು ಒಂದೇ ಸವನೆ ಕೆಳಕೆಳಕ್ಕೆ ಇಳಿದು ಬೀಳುತ್ತಲಿದ್ದನು. ಅವನ ಈ ಪತನ ಎಷ್ಟು ಕಾಲದ ವರೆಗೆಂಬುದನ್ನು ಯಾರು ಹೇಳಬೇಕು?

ಖಂಡ–೭

೧. ಯಜ್ಞ

ಇಂದು ಜಗತ್ತಿನ ಸರ್ವನಾಶವು ಸನ್ನಿಹಿತವಾದಂತೆ ತೋರುತ್ತದೆ. ಇಂದದು ಬದುಕಿ ಉಳಿದರೆ ಮಾತ್ರ ಅದರ ಮೇಲೆ ವಾಸಿಸುವ ಮಾನವರೆಂಬ ಪ್ರಾಣಿಗಳೂ ಬದುಕಿ ಬಾಳನ್ನು ಮುಂದುವರಿಸಬಹುದು. ಇಂದದು ಸುರಕ್ಷಿತವಾಗಿ ಪಾರಾಗಿ ಉಳಿದರೆ ಮಾತ್ರ ಬ್ರಾಹ್ಮಣರೂ ಬೇರೆ ಜಾತಿ ಪಂಗಡದವರೂ ಭೂಮಿಯ ಮೇಲೆ ಬದುಕಿ ಉಳಿಯಬಹುದು. ಸೃಷ್ಟಿಯು ಇಂದು ಬದುಕಿ ಉಳಿದರೆ ಮಾತ್ರ ಮುಂದೆ ಸುರಕ್ಷಿತವಾಗಿ ಉಳಿಯುವ ಸಂಭವವಿದೆ.

ಇಂದು ಕೌಶಾಂಬಿಯ ರಾಜನು ಯಜ್ಞ ಮಾಡುವವನಿದ್ದಾನೆ. ಬುವಿಯ ಮೇಲಿನ ಆಕಾಶದೊಳಗಿನ ಸರ್ವರೂ ಆಮಂತ್ರಿತರಾಗಿದ್ದಾರೆ. ಆ ಯಜ್ಞ ವಿಧಾನಗಳೆಲ್ಲ ಈಗೊಂದು ವರ್ಷ ಕಾಲದಿಂದಲೂ ಹೆಚ್ಚಾಗಿ ನಡೆದು ಬಂದಿದ್ದವು. ಕೌಶಾಂಬಿಯ ಸುತ್ತು ಮುತ್ತಲಿನ ವಿಶಾಲ ಬೈಲು ಪ್ರದೇಶವೆಲ್ಲ ಪ್ರಾಣಿಮಾತ್ರರಿಂದ ಕಿಕ್ಕಿರಿದು ತುಂಬಿ ಹೋಗಿತ್ತು. ಆದರೂ ಹೃದಯದೊಳಗೆ ಯಾರಿಗೂ ಸಮಾಧಾನವಿರಲಿಲ್ಲ. ಈ ಅಪಾರ ಮಾನವೀಸಾಗರ ಸಮೂಹದಲ್ಲಿ, ಪರಸ್ಪರ ವಿರೋಧ, ವೈರ, ಹಗೆತನದ ಭಾವನೆಯು ಮಹತ್ತರವಾಗಿದ್ದುದರಿಂದ ಯಾವುದೇ ಒಂದು ಕ್ಷುಲ್ಲಕ ವಿಷಯವು ಕೂಡ ಕ್ಷಣಮಾತ್ರದಲ್ಲಿ ಭೀಕರ ರೂಪ ತಾಳಿ ಭಯಂಕರ ವಿನಾಶ ಕಾರ್ಯಕ್ಕೆ ಎಡೆಗೊಡಬಹುದಾಗಿತ್ತು. ಸದ್ಯಕ್ಕೆ ಅದು ಹಾಗೆಯೇ ನಡೆಯುತ್ತಿತ್ತು.

ಕೌಶಾಂಬಿಯ ಅರಸು ಶೂರ್ಯವಂಶದವನಿದ್ದು ಬ್ರಾಹ್ಮಣ ಪಕ್ಷಪಾತಿಯಾಗಿದ್ದನು. ಅವನು ಈ ಯಜ್ಞಕಾರ್ಯದ ಅಧ್ವರ್ಯುವೆಂದು ವಶಿಷ್ಠನಿಗೆ ಆಚಾರ್ಯಪಟ್ಟವಿತ್ತಿದ್ದನು. ಇದರಿಂದ ವಿಶ್ವಾಮಿತ್ರ ಪರಶುರಾಮನ ಪಕ್ಷದ ಜನರಿಗೆ ಅಸೂಯೆಯೆನಿಸಿ ಉದ್ವೇಗವಾಗಿತ್ತು. ವಿಶ್ವಾಮಿತ್ರನ ಮಂತ್ರಿ, ತನ್ನ ಪಕ್ಷಕ್ಕೆ ಖರ, ದೂಷಣ, ವಾನರ ಅರಸು ವಾಲಿಯನ್ನು ಕರೆಸಿಕೊಂಡಿದ್ದನು. ಅನೇಕ ಕೊಲೆ ಸುಲಿಗೆಗಾರರ ನಾಯಕರನ್ನೂ ಧನ ಕನಕ ನೀಡಿ ಬಹು ಕಾಲದಿಂದ ತನ್ನ ಪಕ್ಷದಲ್ಲಿರಿಸಿಕೊಂಡಿದ್ದನು. ಈಗ ಅವರೂ ಬಂದು ಅವನನ್ನು ಕೂಡಿಕೊಂಡಿದ್ದರು. ವಶಿಷ್ಟ ಪಕ್ಷದ ಬ್ರಾಹ್ಮಣರೂ ಅಯೋಧ್ಯಾ ಮಿಥಿಲಾ ಪಟ್ಟಣಗಳ ರಾಜರೂ, ಯಜ್ಞದ ಉಳಿದ ಕಾರ್ಯವನ್ನು ಪೂರೈಸಲು ಭದ್ರತೆ ನಡೆಸಿದ್ದರು. ವಶಿಷ್ಟರ ಸಂರಕ್ಷಣೆಯಲ್ಲಿದ್ದ ಪಾರದ, ಹೂಣರೂ ಶಸ್ತ್ರಪ್ರಾಣಿಗಳಿಗಾಗಿ ವಶಿಷ್ಟರನ್ನು ಸಂರಕ್ಷಿಸಲು ಯಜ್ಞವೇದಿಕೆಯ ಸುತ್ತುಮುತ್ತೆಲ್ಲ ಕಾವಲಿದ್ದರು. ಶಾಂತಿ ರಾಜ್ಯದ ರಾಜನಾದ ಗುಹಕನೂ ತನ್ನ ಜನರೊಡನೆ ಅಲ್ಲಿ ಬಂದಿದ್ದನು. ಇವರೆಲ್ಲರಲ್ಲಿ ಒಂದು ಒಪ್ಪಂದವಾಗುವಂತೆ ನೋಡಿಕೊಳ್ಳುವುದೂ ಅಥವಾ ಹೋರಾಟವನ್ನು ತಡೆಯುವುದೂ ಅವನ ಪ್ರಥಮ ಕರ್ತವ್ಯವಾಗಿತ್ತು. ಇವೆರಡು ಸಾಧಿಸದೆ ಹೋದರೆ ಅನ್ಯಾಯದ ಪಕ್ಷದೊಡನೆ ಅವನು ಯುದ್ಧ ಮಾಡಲೂ ಸಿದ್ಧನಾಗಿದ್ದನು.

ಮತ್ತೆ ವಾಲ್ಮೀಕಿ?...ಅವನು ಎಲ್ಲೆಡೆಗೂ ಸುತ್ತಾಡುತ್ತ ಪ್ರತಿಯೊಬ್ಬರನ್ನೂ ಮುಟ್ಟಿ ತಟ್ಟಿ ಸಂತಯಿಸುತ್ತ ಅಳುತ್ತ, ದುಃಖಿಸುತ್ತ ಸಂಚರಿಸುತ್ತಿದ್ದನು. ಆದರೆ ಯಾರೂ ಅವನನ್ನು ಲಕ್ಷಿಸಲಿಲ್ಲ. ವಾಲ್ಮೀಕಿಯ ದುಃಖ ಕಲ್ಲನ್ನೂ ಕರಗಿಸುವಂತಹದಾಗಿತ್ತು. ಆದರೆ ಈ ರಾಜಕಾರಣಿಗಳೆಂಬುವವರು ಉಚ್ಚ ಕುಲದವರೆಂಬುವರು ಉದಾರ ಹೃದಯಿಗಳೆಂದು ಬಡಾಯಿ ಕೊಚ್ಚಿಕೊಂಬುವವರು ಇದ್ದ ತಮ್ಮ ಅಧಿಕಾರಕ್ಕೇ ಅಂಟಿಕೊಂಡಿರುವ ಹೆಂಡಿರು ಮಕ್ಕಳ ಬಲಿ ಕೊಡಲು ಹಿಂದು ಮುಂದು

ಸೈಯದ್ ಅಬೀರನು ಅಂಗಡಿ ತೆರೆದ...

ಅಲ್ಲೊಂದು ಹಳ್ಳಿಗೆ ವಿದ್ಯುತ್ ತಂತು

ಹೊರ ಪ್ರಪಂಚಕ್ಕೆ ತಿಳಿದೇ ಇಲ್ಲದಂತೆ ಹಳ್ಳಿಗಾಡಿನಲ್ಲಿ ಹುದುಗಿರುವ ಕುಗ್ರಾಮಗಳಿಗೂ ಕೆನರಾ ಬ್ಯಾಂಕಿನ ಶಾಖೆಗಳು ಹಬ್ಬಿವೆ; ಹಸನಾದ ಬದುಕಿನ ಭರವಸೆಯನ್ನು ಅಲ್ಲಿಗೆಲ್ಲ ತಲುಪಿಸಿವೆ. ಅವಕಾಶ ಬೇಕೆನ್ನುವ ಜನರಿಗಾಗಿ, ಅಭಿವೃದ್ಧಿ ಅಗತ್ಯವೆನ್ನುವ ಸಂದರ್ಭಗಳಿಗಾಗಿ, ಅಲ್ಲಿನ್ನೂ ಕಾಣದೆ ಇರುವ ಸೌಲಭ್ಯಗಳಿಗಾಗಿ–ನಾವು ಕಾಯುತ್ತಿದ್ದೇವೆ ಮತ್ತು ಅವುಗಳನ್ನು ಕಾಣುತ್ತಿದ್ದೇವೆ.

ಗ್ರಾಮಗಳ ವಿಕಾಸಕ್ಕಾಗಿ ಕೆನರಾ ಬ್ಯಾಂಕಿನ ಪ್ರಯತ್ನದಲ್ಲಿ, ಅಲ್ಪ ಬಡ್ಡಿಯ ಸಾಲಗಳ ನೀಡಿಕೆ ಕೇವಲ ಒಂದು ಭಾಗ. ಬ್ಯಾಂಕಿನ ಯತ್ನದಲ್ಲಿ ಬಹಳಷ್ಟು ಸೇರಿದೆ. ಇದೀಗ ಸಮುದಾಯದ ಕ್ಷೇಮಾಭ್ಯುದಯದ ಯತ್ನದಲ್ಲಿ ಕೆನರಾಬ್ಯಾಂಕ್ ಸಂಪೂರ್ಣ ಸಹಭಾಗಿ!

ಕೆಲವೊಮ್ಮೆ ಸಹಕಾರ ಸಂಘಗಳ ಸ್ಥಾಪನೆ, ಹಲವುಕಡೆ ರಸ್ತೆಗಳ ನಿರ್ಮಾಣ; ಅಲ್ಲಲ್ಲಿ ಕಸುಬು – ಕುಶಲ ಕಲೆಗಳ ಶಿಕ್ಷಣ ಅಲ್ಲದೆ ಮಿತವ್ಯಯದ ಪ್ರಚಾರ, ಅಕ್ಷರ ಜ್ಞಾನ.

ಜನಸಾಮಾನ್ಯರ ಹಿತದ ಆಸಕ್ತಿ ಹೊತ್ತ

SERVING TO GROW GROWING TO SERVE CANARA BANK

ಕೆನರಾ ಬ್ಯಾಂಕ್

(ಭಾರತ ಸರ್ಕಾರದ ಸಂಪೂರ್ಣ ಸ್ವಾಮ್ಯ)

ಪ್ರಧಾನ ಕಛೇರಿ:
ಬೆಂಗಳೂರು 560 002

1073 ಕೋಟಿ ರೂ. ಏರಿಸಿದ ಠೇವಣಿಗಳು
687 ಕೋಟಿ ರೂ. ನೀಡಿದ ಮುಂಗಡಗಳು
1100 ಕ್ಕೂ ಹೆಚ್ಚು ಶಾಖೆಗಳು
68 ಲಕ್ಷಕ್ಕೂ ಹೆಚ್ಚು ಗ್ರಾಹಕರು

ನೂರಾರು ಸಣ್ಣ ಪುಟ್ಟ ರೀತಿಗಳಲ್ಲಿ, ನೂರಾರು ಬೇರೆ ಬೇರೆ ಸ್ಥಳಗಳಲ್ಲಿ – ಕೆನರಾ ಬ್ಯಾಂಕಿನಿಂದ ಪ್ರಗತಿಗೆ ಪ್ರೋತ್ಸಾಹ






maa CB 1 C Kan-78

ನೋಡದಂಥವರು. ಇಂಥವರೆಲ್ಲರ ಹೃದಯುಗಳು ಕಲ್ಲಿಗಿಂತಲೂ ಕಲ್ಲಾದ ಸಾಮಗ್ರಿಯಿಂದ ಮಾಡಿದವುಗಳಿರಬೇಕು. ಲಕ್ಷೋಪಲಕ್ಷ ಮಾನವ ಪ್ರಾಣಿಗಳಿಗಾಗುವ ಆತ್ಯಂತಿಕ ದುಃಖ ಅವರ ಜೀವನವನ್ನೇ ಹುರಿದು ಬಿಡುವ ದುಃಖಗಳಿಗೆ ಕಾರಣವಾಗಲು ತುಸುವೂ ಹೃತ್ತಾಪವೆನಿಸಿಕೊಳ್ಳದೆ ಅವರೊಡನೆ ಚಿನ್ನಾಟವಾಡುತ್ತಿರುವಂಥವರಿಗೆ ವಾಲ್ಮೀಕಿಯ ಈ ಶೋಕ ದುಃಖಗಳನ್ನು ಕಂಡು ಅವರ ಹೃದಯ ಕರಗೀತೇ? ಅದೇನೇ ಇರಲಿ, ವಾಲ್ಮೀಕಿ ಮಾತ್ರ ಅವಿಶ್ರಾಂತನಾಗಿದ್ದ. ಅವನು ಒಮ್ಮೆ ವಶಿಷ್ಟರ ಕಡೆ ಒಮ್ಮೆ ಖರ–ದೂಷಣರ ಕಡೆಗೆ ಹೋಗುತ್ತ ಅವರ ಕೈ ಹಿಡಿದು ಕೇಳಿಕೊಳ್ಳುತ್ತಲಿದ್ದ. ಅಲ್ಲಿ ಕೂಡಿದ ಸೈನಿಕರೂ ಸಾಮಾನ್ಯ ಜನರೂ ವಾಲ್ಮೀಕಿಯ ಆರ್ತತೆಯನ್ನು ಕಂಡು ಕರಗಿ ಹೋಗಿದ್ದರು. ಆದರೆ ಪ್ರಮುಖರೆಂಬುವರು ರಾಜಕಾರಣಿಗಳು, ಎಲ್ಲ ದಯೆ ದಾಕ್ಷಿಣ್ಯ ಕೋಮಲತೆಯನ್ನು ತೊರೆದು ಬಿಟ್ಟು ಅವನೆಡೆ ಕಣ್ಣೆತ್ತಿ ಕೂಡ ನೋಡಲು ಮನಸ್ಸು ಮಾಡುತ್ತಿರಲಿಲ್ಲ.

ಕೊನೆಗೆ ವಶಿಷ್ಟರು ಯಜ್ಞಾಗ್ನಿಯನ್ನು ಪ್ರಜ್ವಲಿಸಲು ಆಜ್ಞೆ ಮಾಡಿದರು. ಅಧ್ವರ್ಯ ಆಚಾರ್ಯರು ವೇದಿಕೆಯನ್ನು ಏರತೊಡಗಿದರು. ವಾಲ್ಮೀಕಿಯ ಆಶೆ ಕಮರಿ ಹೋಗಿ ಅವನು ನೆಲದ ಮೇಲೆ ಹೊರಳಾಡುತ್ತ ಶೋಕಿಸ–ತೊಡಗಿದ. ಗುಹಕನು ಅವನನ್ನು ಸಮಾಧಾನಗೊಳಿಸಲು ಯತ್ನಿಸಿದನು. ಯಜ್ಞಾಗ್ನಿ ಹೊತ್ತಿದ ಕೂಡಲೇ ನೆತ್ತರಿನ ಹೊಳೆಯೇ ಹರಿಯುವದೆಂಬುದು ಅಲ್ಲಿ ನೆರೆದವರಿಗೆಲ್ಲ ತಿಳಿದೇ ಇತ್ತು. ಬ್ರಾಹ್ಮಣರು ಯಜ್ಞಾಗ್ನಿಯನ್ನು ಹೊತ್ತಿಸಲು ವೇದಿಕೆಯತ್ತ ನಡೆದು ಬಂದೊಡನೇ ವಿರೋಧಿ ಪಕ್ಷದವರು ಸಾಯುಧರಾಗಿ ವೇದಿಕೆಯ ಬಳಿ ಬಂದು ಸಿದ್ಧರಾಗಿ ನಿಂತರು. ಎರಡೂ ಪಕ್ಷದವರೂ ಅತ್ತ ಕಡೆಗೆ ಸಜ್ಜಾಗಿ ಬಂದು ಮೇಲ್ವಾಯಲು ಸಿದ್ಧರಾಗಿ ನಿಂತರು. ಗುಹಕನು ಇವರಿಬ್ಬರ ಮಧ್ಯೆ ಸಾಧ್ಯವಾದರೆ ಅನಾಹುತ ತಡೆಯಬೇಕೆಂದು ನಡುವೆ ಬಂದು ನಿಂತನು. ವಾಲ್ಮೀಕಿಯು ವೇದಿಕೆಯನ್ನು ಹತ್ತಿ ಹೋದವನೇ ಬ್ರಾಹ್ಮಣರ ಕೈಯೊಳಗಿನ ಮಂತ್ರಾಗ್ನಿ ಕಾಷ್ಠಗಳನ್ನು ಸೆಳೆದುಕೊಂಡು ಬಿಟ್ಟನು. ಕೂಡಲೆ ಮುಂಬಂದು ಯಜ್ಞವೇದಿಕೆಯ ಮಧ್ಯದ ಅಗ್ನಿಕುಂಡದಲ್ಲಿ ಕುಳಿತುಬಿಟ್ಟನು. ಬ್ರಾಹ್ಮಣರು ಅವನನ್ನು ಕುಂಡದಿಂದ ಹೊರಗೆಳೆದು ಬದಿಗೆ ನೂಕಿದರು. ಮುನ್ನೂರು ಸಹಾಯಕ ಅಧ್ವರ್ಯುಗಳು ಮುಂಬಂದು ಅವನ ಕೈಕಾಲುಗಳನ್ನು ಕಟ್ಟಿ ಅಲುಗಾಡದಂತೆ ಮಾಡಲು ಹವಣಿಸಿದರು. ಹೀಗೆ ಅಲ್ಲಿ ಗೊಂದಲವೇ ಗೊಂದಲೆದ್ದಿತು. ಬ್ರಾಹ್ಮಣರು ಮತ್ತೆ ಯಜ್ಞಾಗ್ನಿಯನ್ನು ಪ್ರಜ್ವಲಿಸಲು ಉಜ್ಜುಗಿಸಿದರು. ಆಗ ಎಲ್ಲಿಂದಲೋ ಕೆಲವು ಹನಿ ನೀರು ಒಮ್ಮೆಲೆ ಅವರ ಮೈ ಮೇಲೆ ಪಟ ಪಟ ಬಿದ್ದುಬಿಟ್ಟವು. ಮೇಲೆ ಆಕಾಶದಲ್ಲಿ ಒಂದೂ ಮೋಡವಿರಲಿಲ್ಲ. ಆದರೂ ನೀರ ಹನಿಗಳು ಬಿದ್ದವು. ಅವು ಅಪವಿತ್ರವೆಂದು ಬ್ರಾಹ್ಮಣರು ಭಾವಿಸಿ ತಮಗೆ ಮೈಲಿಗೆಯಾಯಿತೆಂದು ಬಗೆದು ಮಡಿಯಾಗಿ, ಬರಲು ಪುನಃ ಸ್ನಾನಕ್ಕೆ ಹೋದರು. ಬರಲಿದ್ದ ವಿನಾಶೀ ಪ್ರಲಯ ಕೆಲ ಕ್ಷಣ ಮುಂದೆ ಬಿದ್ದಂತಾಯಿತು. ಎಲ್ಲರ ಮನಸ್ಸಿನಲ್ಲಿಯೂ ಒಂದು ವಿಲಕ್ಷಣ ಹೇಳಲಾರದ, ಅಸ್ಪಷ್ಟ ದುರ್ಭಯದ ಪ್ರಭಾವವು ತಾಂಡವವಾಡುತ್ತಿತ್ತು. ಬಹುಶಃ ಒಂದು ಭೀಕರ ಯುದ್ಧವೇ ಆಗಬಹುದೆಂದು ಎಲ್ಲರಿಗೂ ಅನಿಸುತ್ತಿತ್ತು.

೨. ಮರೆವಿನಲ್ಲಿಯ ಅನುಧ್ಯಾನ

ವಿಶ್ವಾಮಿತ್ರನು ಒಂದೇ ಸಮನೆ ಕೆಳ ಕೆಳಕ್ಕೆ ಬೀಳುತ್ತಲೇ ಇದ್ದನು. ಅವನು ಹೀಗೆ ಬೀಳುತ್ತಿರುವಾಗಲೂ ಬ್ರಹ್ಮನು ವಿಶ್ವಾಮಿತ್ರನಿಗೆ ಮೆಲ್ಲ ಮೆಲ್ಲನೆ ಅರಿವು ಮೂಡುವಂತೆ ಮಾಡಿದನು. ತನ್ನರಿವಿಗೆ ತಾನು ಮರಳುವಾಗ ಮಾನವನು ತನ್ನ ಮನದಲ್ಲಿ ಮೂಡುತ್ತಿದ್ದ ಭಾವನೆಗಳನ್ನು ಎಂತು ಅಳೆಯಬಲ್ಲನು? ವಿಶ್ವಾಮಿತ್ರನು "ನಾನು ಎಲ್ಲಿರುವೆ?" ಎಂದುಕೊಳ್ಳುತ್ತ ತನ್ನ ಕಣ್ಣು ತೆರೆಯಲು ಪ್ರಯತ್ನಿಸಿದನು. ಅವನು ಕಣ್ತೆರೆದು ನೋಡಿ, ಮತ್ತೆ ಕಣ್ಣು ಮುಚ್ಚಿ ಮತ್ತೆ ಎಚ್ಚರ ತಪ್ಪಿದನು. ಹೀಗೇ ಮತ್ತೆ ಮತ್ತೆ ಎಚ್ಚರಾಗುತ್ತ ಎಚ್ಚರ ತಪ್ಪುತ್ತಲೇ ಇದ್ದನು. "ನಾನೆಲ್ಲಿ ಹೊರಟಿರುವೆ?" ಎಂದವನು ಯೋಚಿ


ನಿಮ್ಮ ಮಗುವಿಗೆ ಹೆಚ್ಚು ಶಕ್ತಿಯನ್ನು ಕೊಡುತ್ತದೆ,
ಅವನನ್ನು ಮುಂದಿಡುತ್ತದೆ...
ಕೋಕೋ-ಸ್ವಾದಿಷ್ಟ ಬೋರ್ನ್‌ವಿಟಾ.
ಬೋರ್ನ್‌ವಿಟಾದಲ್ಲಿ ಈಗ ಅಧಿಕ ಕೋಕೋ ಇರುವುದರಿಂದ ಅದು ಅಧಿಕ ರುಚಿಕರ ಹಾಗೂ ಅಧಿಕ ಆರೋಗ್ಯಪೂರ್ಣವಾಗಿದೆ.
ಮಾತ್ರವಲ್ಲ, ಬೋರ್ನ್‌ವಿಟಾ ಮಾಲ್ಟ್, ಹಾಲು ಮತ್ತು ಸಕ್ಕರೆಗಳ ಎಲ್ಲಾ ಪೌಷ್ಟಿಕ ಉತ್ತಮಿಕೆಯಿಂದ ತುಂಬಿದೆ.
ಎರಡು ಚಾ ಚಮಚ ಬೋರ್ನ್‌ವಿಟಾವನ್ನು ಒಂದು ಕಪ್ ಬಿಸಿ ಹಾಲಿಗೆ ಸೇರಿಸಿದಾಗ ಅದು ಅತ್ಯಂತ ರುಚಿಕರವಾದ, ಶಕ್ತಿದಾಯಕ ಪೇಯವಾಗುತ್ತದೆ.
ನಿಮ್ಮ ಮಕ್ಕಳಿಗೆ ಬೋರ್ನ್‌ವಿಟಾವನ್ನು ಪ್ರತಿದಿನ ಎರಡಾವರ್ತಿ ಕೊಡಿರಿ. ಅದು ಅವರ ಶಾರೀರಿಕ ಬೆಳವಣಿಗೆಗೆ ಅವಶ್ಯವಿರುವ ಹೆಚ್ಚಿನ ಶಕ್ತಿಯನ್ನು ಒದಗಿಸಲು ನೆರವಾಗುತ್ತದೆ. ಮತ್ತು ನಿಮಗೂ ಅದು ಬೇಕು...ಅವರೊಂದಿಗೆ ಅವರಂತೆ ಇರುವುದಕ್ಕಾಗಿ!
Cadbury's
Bournvita
The ideal health drink for strength, vigour and taste
500 g net
75
ಹಣ ಉಳಿಸುವ 500 ಗ್ರಾಮ್‌ನ ರಿಫಿಲ್ ಪ್ಯಾಕ್ ಕೊಳ್ಳಿರಿ.
ಮುಖ್ಯ ಸಂಗತಿ:
ಈ ಪ್ಯಾಕನ್ನು ತೆರೆದ ಕೂಡಲೇ ಅದರಲ್ಲಿರುವ ಪುಡಿಯನ್ನು
ಹಾಕಿಡಿರಿ. ಅದರಿಂದ ಅದರ ತಾಜಾ ಗುಣ ಉಳಿಯುತ್ತದೆ
ಕ್ಯಾಡ್‌ಬರಿಸ್
ಬೋರ್ನ್‌ವಿಟಾ
ಅಧಿಕ ಕೋಕೋ ಯುಕ್ತ: ಅಧಿಕ ರುಚಿಕರ, ಅಧಿಕ ಆರೋಗ್ಯಪೂರ್ಣ!
OBM-8376 B KN

ಸಿದ. ಒಮ್ಮೆ ಅವನಿಗೆ ತಾನು ಸರಕಪ್ಪಾರದ ಸನಿಹಕ್ಕೆ ಬಂದಂತೆ ಭಾಸವಾಯಿತು. ಕೂಡಲೆ ಭಯದಿಂದ ಮತ್ತೆ ಎಚ್ಚರದಪ್ಪಿಹೋಯಿತು.

ಒಮ್ಮೆ ಅವನು, "ನನ್ನ ಹೊಸ ಸೃಷ್ಟಿ ಎಲ್ಲಿದೆ?" ಎಂದು ಒದರುತ್ತಿದ್ದ; ಮರುಕ್ಷಣವೆ ಎಚ್ಚರದಪ್ಪುತ್ತಿದ್ದ. "ಒಳ್ಳೆಯದಕ್ಕೇ ಅದು ಇಲ್ಲದಾಯಿತು. ಆದರೆ ನಾನು ಭೂಮಿಯ ಮೇಲೆಯೇ ಇದ್ದಿದ್ದರೆ..." ಎಂದೊಮ್ಮೆ ಯೋಚಿಸುತ್ತಿದ್ದ. ಮತ್ತೆ ಎಚ್ಚರದಪ್ಪುತ್ತಿದ್ದ. "ನಾನೇಕೆ ಇಷ್ಟೊಂದು ಮಹತ್ವಾಕಾಂಕ್ಷಿಯಾಗಿದ್ದೆ? ನಾನೇಕೆ ಮಹಾತ್ಮನಾಗಬಯಸಿದ್ದೆ? ನಾನೇಕೆ ತಪಶ್ಚರ್ಯ ಮಾಡಿದೆ? ವಿಜಯವನ್ನೇಕೆ ಬಯಸಿದೆ? ಮತ್ತೆ ಎಲ್ಲವನ್ನೂ ಏಕೆ ಕಳೆದುಕೊಂಡೆ? ಎಲ್ಲಿಗೆ ಹೊರಟಿರುವೆನೋ ನಾನರಿಯೆ? ತಿರುಗಿ ಬರಲು ಶಕ್ತಿಯೇ ಉಳಿದಿಲ್ಲ. ಕಣ್ದೆರೆದು ನೋಡಲು ಕೂಡ ನಾನು ಅಸಮರ್ಥನಾಗಿರುವೆ" ಎಂದು ಬಡಬಡಿಸುತ್ತಿದ್ದ.

ಹೀಗೆಲ್ಲ ಪರಿತಪಿಸುತ್ತ ವಿಶ್ವಾಮಿತ್ರ ರೋದಿಸತೊಡಗಿದ. ಯಜ್ಞದೊಳಗಿನ ಬ್ರಾಹ್ಮಣರ ಮೈ ಮೇಲೆ ಉದುರಿದ ಹನಿಗಳು ಇವನ ಕಂಬನಿಗಳೇ. ಅಳು ಅವನನ್ನು ಅಧೀರನನ್ನಾಗಿಸಿತು. ಮತ್ತೆ ಮತ್ತೆ ಎಚ್ಚರದಪ್ಪುತ್ತಿದ್ದ. ಋಭುಗಳು ಮತ್ತೆ ಆ ಬಂಧುಭಾವದ ಹಾಡು ಹಾಡುತ್ತಿರುವಂತೆ ಅವನಿಗೆ ಭಾಸವಾಗುತ್ತಿತ್ತು. "ಮಾನವನು ತನ್ನ ಬಾಂಧವರ ಮೇಲೆ ಅಧಿಕಾರ ನಡೆಸಲು ಪ್ರಯತ್ನಿಸದಿರುತ್ತಿದ್ದರೆ ಎಂದೋ ಎಲ್ಲರೂ ಬಂಧುಗಳಂತಾಗಿ ಹೋಗುತ್ತಿದ್ದರು. ರಾಜನು ತನ್ನ ಕರ್ತವ್ಯವನ್ನು ಸರಿಯಾಗಿ ನಡೆಸಿದ್ದರೆ ಎಂದೋ ಎಲ್ಲರೂ ಬಂಧುಗಳಾಗಿರುತ್ತಿದ್ದರು" ಹೀಗೆಂದು ಹಾಡಿದಂತೆ ಹಾಡು ಕೇಳಿಸಿದಂತೆ ಅವನಿಗೆ ಭ್ರಮೆಯಾಗುತ್ತಿತ್ತು. ಆಗ ಅವನು ತನ್ನ ಹೃದಯಾಂತರಾಳದೊಳಗೇ ಇನ್ನು ತಾನು ಮಹತ್ವಾಕಾಂಕ್ಷಿಯಾಗೆನೆಂದು ನಿಶ್ಚಯಿಸುತ್ತಿದ್ದ. ಬಳಿಕ ಅವನು ಎಚ್ಚತ್ತ. ಪರರ ಕಲ್ಯಾಣಕ್ಕಾಗಿಯೇ ತನ್ನ ಜೀವನವನ್ನು ಮೀಸಲಿಡುವೆನೆಂದು ನಿಶ್ಚಯಿಸಿದ. ಮತ್ತೆ ಎಚ್ಚರದಪ್ಪಿದ. ಒಂದೇ ಸಮನೆ ಕೆಳಕ್ಕೆ ಬೀಳತೊಡಗಿದ.

೩. ವಾಲ್ಮೀಕಿ ವಿಜಯ

ಬ್ರಾಹ್ಮಣರು ಸ್ನಾನ ಮಾಡಿ ಮಡಿಯಾಗಿ ತಿರುಗಿ ಬಂದಾಗ, ಒಂದು ದೊಡ್ಡ ಮಾನವಾಕೃತಿ ಆ ಯಜ್ಞವೇದಿಕೆಯ ಅಗ್ನಿಕುಂಡದ ಮೇಲೆಯೇ ಇಳಿದು ಬರುತ್ತಿರುವುದನ್ನು ಕಂಡರು. ಎಲ್ಲರೂ ಅತ್ತ ಕಡೆಗೇ ನೋಡ ತೊಡಗಿದರು. ಎಲ್ಲರೂ ಭಯಭೀತರಾದರು. ಪ್ರತಿಯೊಬ್ಬರೂ ಗರ ಹೊಡೆದವರಂತಾಗಿ ಬಾಯ್ದೆರೆದು ಭಯಾಶ್ಚರ್ಯದಿಂದ ಆ ವಿಲಕ್ಷಣ ದೃಶ್ಯವನ್ನು ನೋಡತೊಡಗಿದರು. ವಾಲ್ಮೀಕಿಯನ್ನು ಹಿಡಿದುಕೊಂಡವರು ಅವನ ಕೈ ಬಿಟ್ಟರು. ವಾಲ್ಮೀಕಿಯು ಅಗ್ನಿಕುಂಡದೆಡೆಗೆ ಓಡಿ ಹೋದವನೇ ಅಲ್ಲಿ ಒಂದು ಭಾರೀ ಮಾನವಾಕೃತಿ ಬಿದ್ದಿರುವುದನ್ನು ಕಂಡ. ತನ್ನ ದಿವ್ಯ ಜ್ಞಾನದಿಂದ ಸತ್ತಂತೆ ಬಿದ್ದಿದ್ದ ಆ ಶರೀರವು ವಿಶ್ವಾಮಿತ್ರನದೇ ಎಂಬುದನ್ನು ಗ್ರಹಿಸಿದ. ಕೂಡಲೆ ಅವನ ದುಃಖದ ಕೊಡಿಯೊಡೆಯಿತು. ಅವನ ವೀಣೆಯು ಶೋಕರಸದ ಪರಮಾವಧಿಯಲ್ಲಿ ಮಿಡಿಯತೊಡಗಿತು. ಕಣ್ಣೊಳಗಿಂದ ನೀರು ಧಾರಾಕಾರ ಸುರಿಯತೊಡಗಿದವು. "ನೋಡಿರಿಲ್ಲಿ, ಕ್ಷುಲ್ಲಕ ಅನಾಮಧೇಯ ಜನರೇ ನೋಡಿರಿ. ಕಾಣಿರಿಲ್ಲಿ, ದೈವವು ಈ ವಿಶ್ವಾಮಿತ್ರನ ಗತಿಯನ್ನು ಹೇಗೆ ಮಾಡಿದೆ. ಇವನೋ ಮಹಾಪುರುಷ. ಹೊಸ ಸೃಷ್ಟಿಯನ್ನೇ ಸೃಷ್ಟಿಸಿದವ. ಬ್ರಹ್ಮನಿಗಿಂತಲೂ ಮೂರು ಗೇಣು ಎತ್ತರಕ್ಕೆ ಹಾರಿದ! ಈ ಮಹಾಯೋಧನ ಈ ಮಹಾ ತಪಸ್ವಿಯ ಈ ಮಹಾತ್ಮನ ಅವಸ್ಥೆ ಎಂಥ ಕರುಣಾಜನಕವಾಗಿದೆ, ಗುರುತಿಸಿರಿ, ವಿಶ್ವಾಮಿತ್ರನ ಸೃಷ್ಟಿ ಹೇಗೆ ಮಾಯವಾಯಿತು, ಅವನ ಉನ್ನತ ಬ್ರಹ್ಮಪಟ್ಟ ಹೇಗೆ ಕಳಚಿತು, ಅವನ ಮಾನವತ್ವವೇ ಹೇಗೆ ಇಲ್ಲದಾಯಿತು. ಜೀವನದ ಜಾಡೇ ಇರದೆ ಇಲ್ಲಿ ಅವನು ಹೇಗೆ ಬಿದ್ದಿರುವ, ಕಣ್ತೆರೆದು ನೋಡಿರಿ. ಇವನಿಗೆ ಎಂಥ ದುಃಖವಾಗಿದ್ದೀತೆಂಬುದನ್ನು ಯೋಚಿಸಿರಿ. ವಿಶ್ವಾಮಿತ್ರನಂಥ ವಿಶ್ವಾಮಿತ್ರನ ಗತಿಯೇ ಹೀಗಾದ ಬಳಿಕ ನೀವಾರು, ನಿಮ್ಮ ಗತಿ ಏನಾಗಬಹುದೆಂಬುದನ್ನು ಊಹಿಸಿರಿ! ನೋಡಿರಿಲ್ಲಿ, ಸ್ವತಃ ಬ್ರಹ್ಮನೇ ವಿಶ್ವಾಮಿತ್ರನ ಬಳಿ ಕುಳಿತು ಅವನ ಅಧೋಗತಿಗಾಗಿ ಶೋಕಿಸುತ್ತಿ

ಈಗ...! ಚುರುಕಾದ ಜೀವನಕ್ಕಾಗಿ ಶಕ್ತಿ ಕೊಡುವ ಇಂಧನ ಪಡೆಯಿರಿ.



ಬೂಸ್ಟ್

ಮಾಲ್ಟ್ ಚಾಕೊಲೆಟ್ ಹಾಲಿನ ಪೇಯ

ರೈಲಿಗೆ ಇಂಧನ ಹೇಗೆ ಅಗತ್ಯವೋ, ನಿಮಗೂ ಸಹ ದಿನವನ್ನು ಉಲ್ಲಾಸದಿಂದ ಆರಂಭಿಸಲು ಪ್ರತಿದಿನ ಇಂಧನ ಅಗತ್ಯ. ದಿನವಿಡೀ ಎಲ್ಲ ಕೆಲಸಗಳನ್ನು ಚಟಚಟನೆ ಮಾಡಿಕೊಂಡು ಹೋಗಲು ನಿಮಗೆ ಶಕ್ತಿ ನೀಡುವ ಇಂಧನ ಬೇಕು.

ಆದ್ದರಿಂದಲೇ ಪ್ರತಿದಿನ ಬೆಳಗ್ಗೆ ನಿಮಗೆ ಬೂಸ್ಟ್ ಅಗತ್ಯ. ಮಕ್ಕಳಿಗಂತೂ ಇದರ ಅಗತ್ಯ ಇನ್ನೂ ಹೆಚ್ಚು. ಏಕೆಂದರೆ ಮಕ್ಕಳ ಶಕ್ತಿ ಆಟ-ಪಾಠಗಳಲ್ಲೇ ಹೆಚ್ಚಾಗಿ ವ್ಯಯವಾಗುತ್ತದೆ

ಅವರಿಗೆ ಬೂಸ್ಟ್ ಕೊಡಿ. ಇದು ಹೊಸ ಮಾಲ್ಟ್ ಚಾಕೊಲೆಟ್ ಹಾಲಿನ ಪೇಯ. ಪೌಷ್ಟಿಕ ಆಹಾರದ ಬಗ್ಗೆ ಒಳ್ಳೆಯ ಅನುಭವ ಪಡೆದಿರುವ "ಹಾರ್ಲಿಕ್ಸ್"ನ ತಯಾರಕರೇ ಈ ಪೇಯವನ್ನು ತಯಾರಿಸಿದ್ದಾರೆ.

ಕೆನೆಯಿಂದ ಸಮೃದ್ಧವಾದ ಬೂಸ್ಟ್ ನಿಮಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತದೆ. ಏಕೆಂದರೆ ಅದನ್ನು ಗಟ್ಟಿಯಾದ ಕೆನೆಹಾಲು, ಗೋಧಿ, ಬಾರ್ಲಿ, ಮಾಲ್ಟ್ ಮತ್ತು ಕೋಕೊ ಸತ್ವಗಳಿಂದ ತಯಾರಿಸಲಾಗಿದೆ

ನಿಮ್ಮ ಮಕ್ಕಳ ಬೆಳವಣಿಗೆಗೆ. ಬೂಸ್ಟ್, ಇಂತಹುದೇ ಇತರ ಯಾವ ಚಾಕೊಲೆಟ್ ಪೇಯ ಹೊಂದಿರುವುದಕ್ಕಿಂತ ಹೆಚ್ಚು ಪೌಷ್ಟಿಕಾಂಶಗಳನ್ನು ಒಳಗೊಂಡಿದೆ.

ಬೂಸ್ಟ್‌ನಲ್ಲಿರುವ ಕೆನೆಭರಿತ ಮಾಲ್ಟ್ ಚಾಕೊಲೆಟ್ ಸವಿ ನಿಮ್ಮ ಇಡೀ ಕುಟುಂಬಕ್ಕೆ ಬಹಳ ಪ್ರಿಯವಾಗುತ್ತದೆ. ಪ್ರತಿದಿನ, ನಿಮ್ಮ ದಿನವನ್ನು ಉಲ್ಲಾಸದಿಂದ ಪ್ರಾರಂಭಿಸಲು ಬೂಸ್ಟ್ ಅತ್ಯುತ್ತಮ ಸಾಧನ.

ಎರಡು ಸೈಜ್‌ಗಳಲ್ಲಿ ದೊರೆಯುತ್ತದೆ.

'ಹಾರ್ಲಿಕ್ಸ್'ನ ತಯಾರಕರಿಂದ

ದ್ದಾನೆ; ಅವನ ತಾಪವನ್ನು ಎಣೆಯಿಲ್ಲದಷ್ಟು ಅನುಭೋಗಿಸಿದ ವಶಿಷ್ಠರು ಕೂಡ ವಿಶ್ವಾಮಿತ್ರನಿಗಾಗಿ ಕೋಮಲಾಂತಃಕರುಣೆಯಾಗಿ ಕಣ್ಣೀರುಗರೆಯುತ್ತಿದ್ದಾರೆ. ಆದ್ದರಿಂದ ನೀವೆಲ್ಲರೂ ನಿಮ್ಮ ನಿಮ್ಮ ವಾದ ವಿವಾದ ಅಂತಃಕಲಹಗಳನ್ನು ತ್ಯಜಿಸಿ ಶಾಂತರಾಗಿರಿ. ಈ ಜೀವನ, ಈ ಬಾಳು ಕೇವಲ ಕೆಲ ದಿನಗಳದು ಮಾತ್ರ" ಎಂದು ವಾಲ್ಮೀಕಿ ಹಾಡತೊಡಗಿದನು.

ಎಲ್ಲರೂ ಶಾಂತತೆಯಿಂದ ವಾಲ್ಮೀಕಿ–ವೀಣೆಯ ಕರುಣಾಜನಕ ಗೀತವನ್ನು ಆಲಿಸಿದರು. ಎಲ್ಲ ಹೃದಯಗಳೂ ಮಿದುವಾಗಿ ಪಶ್ಚಾತ್ತಾಪ ತುಂಬಿಕೊಂಡವು. ಎಲ್ಲರೂ ಬಿಕ್ಕಿ ಬಿಕ್ಕಿ ಅಳತೊಡಗಿದರು, ಶಸ್ತ್ರಾಸ್ತ್ರಗಳನ್ನು ದೂರ ಒಗೆದು ಬಿಟ್ಟರು. ಜಗಳ, ವಾದ ವಿವಾದಗಳನ್ನು ತೊರೆದರು. ಕ್ರಮೇಣ ಅವರ ಮನಸ್ಸಿನಲ್ಲಿ ಒಂದು ನಿಶ್ಚಿತ ಬದಲಾವಣೆಯಾಯಿತು.

ವಿಶ್ವಾಮಿತ್ರನೀಗ ಮೆಲ್ಲಗೆ ಚೇತರಿಸಿಕೊಳ್ಳತೊಡಗಿದ್ದ. ಅವನ ಕಿವಿಗಳಿಗೆ ವೀಣಾಧ್ವನಿ, ದೂರ ದೂರದಿಂದ ಕೇಳಿ ಬರುವಂತಿತ್ತು. ಅವನಿಗೆ ಎಚ್ಚರದಪ್ಪಿದ್ದು, ಭೀಕರ ದೃಶ್ಯಗಳ ಕನಸು ಕಾಣುತ್ತಲಿದ್ದನು. ಕ್ರಮೇಣ ಅವನ ಮೈ ತಂಪಾಗತೊಡಗಿ ಬಹಳ ಹೊತ್ತಿನ ಮೇಲೆ ಅವನು ಕಣ್ದೆರೆದನು. ವಾಲ್ಮೀಕಿಯ ಹಾಡು ನಡೆದೇ ಇತ್ತು. ಅದರ ಮನ ಒಲಿಸುವ ಮೆದುದನಿ, ಸೌಮ್ಯ ಅನುನಯಗಳು ಕರುಣೆಗಾಗಿ ಆಲ್ಪರಿಯುತ್ತಿರುವುದು ಅವನ ಹೃದಯವನ್ನು ಶಲ್ಯದಿಂದ ತಿವಿದಂತಾಗುತ್ತಿತ್ತು. ವಿಶ್ವಾಮಿತ್ರ ಕಣ್ದೆರೆದೊಡನೆ ಅವನಿಗೆ ಎದುರೇ ನಿಂತಿದ್ದ ಬ್ರಹ್ಮನು ಕಂಡುಬಂದ. ಅಲ್ಲಿ ಕೂಡಿದ್ದ ಜನಜಂಗುಳಿಗೂ ಬ್ರಹ್ಮನ ದೈವೀ ಆಕೃತಿಯು ಅವನೊಡನೆಯೇ ಬಂದ ದೇವರ್ಷಿ ಬ್ರಹ್ಮರ್ಷಿಗಳ ಗಡಣ ಸಹಿತವಾಗಿ ಕ್ರಮೇಣ ಕಾಣ ಬರತೊಡಗಿತು. ಕಂಬನಿಗಳಿಂದ ತೊಯ್ದ ಕಪೋಲದೊಡನೆ ವಿಶ್ವಾಮಿತ್ರನು ಬ್ರಹ್ಮನಿಗೆ ತಲೆವಾಗಿಸುತ್ತ ಕರ ಜೋಡಿಸಿ ಶೋಕಿಸುತ್ತ ಕ್ಷಮಾಯಾಚನೆ ಮಾಡಿದನು. ಬ್ರಹ್ಮನು ಕೂಡಲೇ ವಿಶ್ವಾಮಿತ್ರನನ್ನು ಕೈಗಳಿಂದ ಎತ್ತಿ ತಬ್ಬಿಕೊಂಡು ಮುದ್ದಿಡುತ್ತ, "ಕಂದಾ, ಇಂದು ನೀನು ಬ್ರಾಹ್ಮಣನಾದೆ" ಎಂದನು. ವಿಶ್ವಾಮಿತ್ರನು ದುಃಖಿಸುತ್ತ ಬ್ರಹ್ಮನಡಿಗಳ ಮೇಲೆ ಹೊರಳಾಡಿದನು. ವಾಲ್ಮೀಕಿಯ ಹಾಡು ನಡೆದೇ ಇತ್ತು.

ಬ್ರಹ್ಮ ಕರುಣಾಪಾತ್ರ ವಿಶ್ವಾಮಿತ್ರನು "ನಾನೆಲ್ಲಿರುವೆ ?" ಎಂದನು. ಬ್ರಹ್ಮನು "ನೀನು ಭೂಮಿಯ ಮೇಲಿರುವೆ" ಎಂದು ಹೇಳಿ, "ಕೂಡಲೆ ನಿನ್ನ ದುಃಖವೆಲ್ಲವೂ ಮಾಯವಾಗುವಂತೆ ಮಾಡುವೆ" ಎಂದವನೇ ಕೈಯೊಳಗಿನ ಕಮಂಡಲದ ಮಂತ್ರಪೂತ ನೀರನ್ನು ಅವನ ಮೇಲೆ ಚಿಮುಕಿಸಿದನು. ಕೂಡಲೆ ವಿಶ್ವಾಮಿತ್ರನಿಗೆ ಆರಾಮವೆನಿಸಿ ಅವನ ಆಯಾಸಲ್ಲವೂ ಮಾಯವಾಯಿತು. ವಿಶ್ವಾಮಿತ್ರನು ಎದ್ದು ನಿಂತು ನೋಡುತ್ತಾನೆ. ಜನರೆಲ್ಲರೂ ಕಂಬನಿ ಸುರಿಸುತ್ತಿದ್ದಾರೆ. ಆಚೆಗೆ ಮಾತ್ರ ಒಬ್ಬನು ಹಾಡುತ್ತಿದ್ದಾನೆ!

ವಶಿಷ್ಠನು ಧಾವಿಸಿ ಬಂದವನೇ ವಿಶ್ವಾಮಿತ್ರನನ್ನು ಆಲಂಗಿಸಿಕೊಂಡ. ವಿಶ್ವಾಮಿತ್ರನ ದುಃಖೀ ದಿನಗಳಲ್ಲಿ ವಶಿಷ್ಠನ ಮನಸ್ಸು ಕನಿಕರದಿಂದ ತುಂಬಿಹೋಗಿತ್ತು. ವಿಶ್ವಾಮಿತ್ರನು ಬ್ರಾಹ್ಮಣನಾಗಬಯಸಿದಾಗ ಇದ್ದ ಅವನ ವಿರೋಧ ಭಾವನೆಗಳೆಲ್ಲ ಈಗ ಅಳಿದುಹೋಗಿದ್ದವು; ಸಮೂಲ ನಾಶವಾಗಿದ್ದವು. ಕಾಠಿಣ್ಯವೆಲ್ಲವೂ ಮಾಯವಾಗಿತ್ತು. ಅವನು ತನ್ನ ಕೈಗಳಿಂದಲೇ ಮಂತ್ರಪೂತ ಯಜ್ಞೋಪವೀತವನ್ನು ವಿಶ್ವಾಮಿತ್ರನಿಗೆ ತೊಡಿಸುತ್ತ, "ಬಂಧೋ, ಇಂದು ನಾವು ಒಂದಾದೆವು. ನೀನು ಬ್ರಾಹ್ಮಣನಾದೆ. ಬಾ, ಪರಸ್ಪರ ಆಲಂಗಿಸೋಣ" ಎಂದನು. ವಿಶ್ವಾಮಿತ್ರನು "ಸಾಧೋ, ಸುದೈವದ ಮದವೇರಿದ್ದ ನಾನು ನಿನಗೆ ಬಗೆ ಬಗೆಯಿಂದ ಪೀಡಿಸಿದೆ. ತೊಂದರೆ ಕೊಟ್ಟೆ. ಬಿರುಸು ಮಾತನಾಡಿದೆ. ಇಂದು ನನ್ನ ಕ್ಲೇಶ ಕಂಡು ನಿನ್ನ ಕಂಗಳು ಕಂಬನಿದುಂಬಿದವು. ಆದರೆ ನಿನ್ನ ಕ್ಲೇಶ ನೋಡಿ ನಾನೆಂದೂ ಅತ್ತಿಲ್ಲ. ಇಂದು ನನ್ನ ಕಂಗಳು ಮೊದಲ ಸಲ ಕಂಬನಿದುಂಬಿದುದು ನಿನ್ನ ಕರುಣೆಯಿಂದಲೇ. ಮತ್ತೆ ಓ ಬ್ರಹ್ಮಾ, ನೀನೇ ಸೃಷ್ಟಿಕರ್ತ. ಓ ನಿನ್ನನ್ನೆಷ್ಟು ಅಪಮಾನ ಮಾಡಿದೆ. ನಿನ್ನನ್ನು ಬಂಧಿಸಿದವನೆಂದು ಕೂಡ ದೂಷಿಸಿದೆ. ಆದರೆ ನೀನೋ ನನ್ನ ಈ ಸಂಕಟ ಕಾಲದಲ್ಲಿ ನನಗೆ ಜೀವದಾನ ಮಾಡಿರುವೆ. ನಿನ್ನ ದಯೆ ಅಪಾರವಾದುದು" ಎಂದು ಗದ್ಗದಿಸಿದ. ಬ್ರಹ್ಮನು "ಕಂದಾ, ನಿನ್ನಂತಹ ಮಹಾತ್ಮರುಗಳನ್ನು ಕ್ಷಮಿಸದಿದ್ದರೆ

ನಮ್ಮ ಠೇವಣಿ ಯೋಜನೆಗಳಲ್ಲಿ ನಿಮ್ಮ ಉಳಿತಾಯವನ್ನಿಟ್ಟು ಈ ಸಜ್ಜನರ ಸಮೂಹಕ್ಕೆ ಸೇರಿರಿ.



‘ಸ್ಟೇಟ್ ಬ್ಯಾಂಕಿನಲ್ಲಿ ನನಗೊಂದು ಕರೆಂಟ್ ಅಕೌಂಟ್ ಇದೆ. ದೈನಂದಿನ ವಹಿವಾಟುಗಳಿಗೆ ಅದು ಅತ್ಯಂತ ಅನುಕೂಲವಾಗಿದೆ.’



‘ರಿಕರಿಂಗ್ ಡಿಪಾಸಿಟ್ ಅಕೌಂಟಿನಲ್ಲಿ ಜಮೆ ಮಾಡಲು ಅವರು ಒಂದು ನಿಶ್ಚಿತ ರಕಮನ್ನು ಪ್ರತಿ ತಿಂಗಳೂ ನನಗೆ ಕೊಡುತ್ತಾರೆ, ಹಣ ವೃದ್ಧಿ ಹೊಂದಲು ಅದೆಷ್ಟು ಉತ್ತಮ ರೀತಿ!’



‘ನಾನು ಕೇವಲ ರೂ. 5 ರಿಂದ ನನ್ನದೇ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ತೆರೆದೆ.’



‘ಸ್ಟೇಟ್ ಬ್ಯಾಂಕು ನನ್ನ ಕ್ಲಾಸಿಗೇನೇ ಬಂದುಬಿಟ್ಟು. ಮೈನರ್ಸ್ ಅಕೌಂಟ್ ತೆರೆಯಲು ಅಮ್ಮ ನಂಗೆ ಹಣ ಕೊಟ್ಟು.’



‘ರಿಇನ್ವೆಸ್ಟ್‌ಮೆಂಟ್ ಪ್ಲಾನ್‌ನಲ್ಲಿ ನಾನು ನನ್ನ ಠೇವಣಿಗಳ ಮೇಲೆ ಬಡ್ಡಿಯನ್ನು ಸಂಪಾದಿಸುವುದು ಮಾತ್ರವಲ್ಲ, ಬಡ್ಡಿಯ ಮೇಲೆ ಬಡ್ಡಿಯನ್ನೂ ಸಂಪಾದಿಸುತ್ತೇನೆ.’



‘ನನಗೆ ಟರ್ಮ್ ಡಿಪಾಸಿಟ್‌ಗಳಿಂದ ಪ್ರತ್ಯೇಕವಾಗಿ ವರಮಾನ ಸಿಗುತ್ತದೆ.’



‘ನನ್ನ ಬಿಡಿ ಪೈಸೆಗಳನ್ನು ನಾನು ನನ್ನ ಜನತಾ ಡಿಪಾಸಿಟ್ ಅಕೌಂಟಿನಲ್ಲಿ ಉಳಿಸಿಡುತ್ತೇನೆ. ಈ ಪ್ರಕಾರ ನಾನು ಈಗಾಗಲೇ ತುಂಬಾ ಹಣ ಉಳಿಸಿದ್ದೇನೆ—ರೂ. 100 ಕ್ಕಿಂತಲೂ ಹೆಚ್ಚು!’

ಕುಟುಂಬದ ಪ್ರತಿಯೊಬ್ಬರ ಆವಶ್ಯಕತೆಗೂ ಸೂಕ್ತವಾಗುವ ಠೇವಣಿ ಯೋಜನೆ ನಮ್ಮಲ್ಲಿದೆ. ನಿಮಗೆ ಅತ್ಯಂತ ಅನುಕೂಲವಾದ ಯೋಜನೆಯನ್ನು ಆಯ್ದುಕೊಳ್ಳಿರಿ. ಹೆಚ್ಚಿನ ವಿವರಗಳಿಗಾಗಿ ನಮ್ಮ 4,800 ಕ್ಕೂ ಮಿಕ್ಕಿದ ಆಫೀಸುಗಳಲ್ಲಿ ಯಾವುದಾದರೊಂದಕ್ಕೆ ಬಂದು ನಮ್ಮನ್ನು ಕಾಣಿರಿ.

ಸ್ಟೇಟ್ ಬ್ಯಾಂಕ್

ಸೃಷ್ಟಿಕರ್ತನ ಕ್ಷಮಾಗುಣವೇ ವ್ಯರ್ಥವೆನಿಸು ವದು" ಎಂದ.

ವಶಿಷ್ಠ ವಿಶ್ವಾಮಿತ್ರರನ್ನು ಅನುಸರಿಸಿ, ಸಕಲ ಬ್ರಾಹ್ಮಣ ಕ್ಷತ್ರಿಯರೂ ತಮ್ಮ ತಮ್ಮ ಸೈನಿಕ ಉಡುಪು ತೊಡುಪು ಆಯುಧಗಳನ್ನು ಕಳಚಿ ಒಗೆದು ಪರಸ್ಪರ ಆಲಂಗಿಸತೊಡಗಿದರು. ತಮ್ಮ ತಮ್ಮ ಮನದೊಳಗಿನ ಕೇಡು ವಿಚಾರಗಳನ್ನೆಲ್ಲ ಆಡಿ ತೋರಿಸಿ ಪರಸ್ಪರ ಕ್ಷಮಾಯಾಚನೆ ಮಾಡತೊಡಗಿದರು. ಗುಹಕ ಚಂಡಾಲನು ಆ ಭೀಕರ ಪ್ರಸಂಗ ಹೀಗೆ ಸುಖಾಂತವಾಗಿ ಕೊನೆಗೊಂಡುದನ್ನು ಕಂಡು ಆನಂದಾತಿರೇಕದಲ್ಲಿ ತಾನೆಲ್ಲಿ ಕುಣಿದಾಡತೊಡಗುವೆನೋ ಎಂದು ಭೀತಿಗೊಂಡ.


ತನ್ನ ಯಜ್ಞ ಈ ರೀತಿ ಕೊನೆಗೊಂಡುದುದಕ್ಕೆ ಕೌಶಾಂಬಿಯ ರಾಜ ಮೊದ ಮೊದಲು ದುಃಖ ಪಟ್ಟರೂ ಈ ಸುಖಾಂತ ಕೊನೆ ಕಂಡು ಅವನೂ ಹರ್ಷಭರಿತನಾದ. ಯಜ್ಞಕ್ಕಾಗಿ ಕೂಡಿಸಿದ್ದ ಅಮೂಲ್ಯ ವಸ್ತುಸಂಗ್ರಹವನ್ನೆಲ್ಲ ವಿಶ್ವಾಮಿತ್ರನ ಈ ಯಜ್ಞೋಪವೀತ ಧಾರಣ ಸಮಾರಂಭದ ನೆವ ಮಾಡಿ ದಾನ ಮಾಡಿಬಿಟ್ಟ.

ವಾಲ್ಮೀಕಿಯೋ ಬಂಧುತ್ವದ ಗೀತ ಹಾಡುತ್ತ. ಆನಂದಾತಿರೇಕದಿಂದ ಕುಣಿದಾಡುತ್ತಲಿದ್ದ. ತನ್ನ ಬಳಿ ಬಂದವರನ್ನೆಲ್ಲ ಅಪ್ಪಿಕೊಂಡ. ಸ್ಪೃಶ್ಯಾಸ್ಪೃಶ್ಯ ಭೇದವಿಲ್ಲದೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮ್ಲೇಚ್ಛ, ಯವನ, ರಾಕ್ಷಸ, ವಾನರ ಎಲ್ಲರನ್ನೂ ಅಪ್ಪಿಕೊಂಡ. ಕೊನೆಗೆ ಹಾಡುತ್ತ ಕುಣಿಯುತ್ತ ಬ್ರಹ್ಮನ ಬಳಿಗೆ ಬಂದು ಅವನನ್ನೂ ಅಪ್ಪಿಕೊಂಡ! ವಾಲ್ಮೀಕಿ ಬಾಯ್ದೆರೆದು ಮಾತನಾಡಬೇಕೆಂಬಷ್ಟರೊಳಗೆ ಬ್ರಹ್ಮನು ಅವನನ್ನು ಗುರುತಿಸಿ ಅಪ್ಪಿಕೊಂಡು, "ವಾಲ್ಮೀಕಿ, ಇಂದಿನ ವಿಜಯ ನಿನ್ನದೇ !" ಎಂದ. ವಶಿಷ್ಠನೂ ತಾನು ನಿಂತಲ್ಲಿಂದ ಮುಂದೆ ಬಂದು, ಅವನನ್ನಪ್ಪಿಕೊಂಡು, "ವಾಲ್ಮೀಕಿ, ಇಂದಿನ ಸಮಸ್ತ ವಿಜಯವೂ ನಿನ್ನದೇ" ಎಂದು, "ವಾಲ್ಮೀಕಿಗೆ ಜಯ, ವಾಲ್ಮೀಕಿಗೆ ವಿಜಯ" ಎಂದು ಘೋಷಿಸಿದ. ನಾಲ್ಕೂ ನಿಟ್ಟಿನಿಂದ ಜನಸ್ತೋಮ, "ವಾಲ್ಮೀಕಿ ವಿಜಯ, ವಾಲ್ಮೀಕಿ ವಿಜಯ" ಎಂದು ಘೋಷಿಸಿದರು.

ರಾತ್ರಿಯಾಗುತ್ತ ಬಂತು. ಎಲ್ಲರೂ ಒದ್ದೆ ಕಣ್ಣು ಒರೆಸಿಕೊಳ್ಳುತ್ತಲೇ ತಂತಮ್ಮ ಬಿಡಾರಗಳಿಗೆ ಹೊರಟರು. ಅರಾಜಕತೆ ಇನ್ನು ಇಲ್ಲದಾಯಿತೆಂದು ಎಲ್ಲರಿಗೂ ಅನಿಸಿತು. ವಿಶ್ವಾಮಿತ್ರನು ಬ್ರಾಹ್ಮಣನಾಗಿಬಿಟ್ಟದ್ದರಿಂದ ಸಿಂಹಾಸನವನ್ನು ಬಿಟ್ಟುಕೊಟ್ಟನು. ಕನ್ಯಾಕುಬ್ಜದ ರಾಜ್ಯಕ್ಕೆ ಅವನ ವಂಶಜರು ಅಧಿಕಾರಿಗಳಾಗಿ ಪಟ್ಟವೇರಿದರು.

ಹೊರಡುವ ಮುಂದೆ ಬ್ರಹ್ಮನು ಆ ಮೂವರೂ ಋಷಿಗಳನ್ನು– ವಶಿಷ್ಟ, ವಿಶ್ವಾಮಿತ್ರ, ವಾಲ್ಮೀಕಿ– ಕರೆದು, "ಭೂಮಿಯ ಮೇಲಿನ ಮಾನವರೆಲ್ಲ ಒಂದುಗೂಡಿ ಬಾಳುವಂತೆ ಮಾಡಲು ನಾರಾಯಣನೇ ಸ್ವತಃ ಅವತರಿಸಲಿದ್ದಾನೆ. ಅವನ ಆಗಿನ ಕರ್ತವ್ಯದ ಬಗ್ಗೆ ನೀವು ಮೂವರೂ ಕೂಡಿ ಯೋಚಿಸಿ ಕಾರ್ಯಕ್ರಮ ಗೊತ್ತುಪಡಿಸಿರಿ" ಎಂದು ಆಜ್ಞೆ ಮಾಡಿದನು. ವಿಶ್ವಾಮಿತ್ರನೂ ವಾಲ್ಮೀಕಿಯೂ ವಶಿಷ್ಠನೊಡಗೂಡಿ ಅವನ ಆಶ್ರಮಕ್ಕೆ ಹೊರಟು ನಡೆದು ಬ್ರಹ್ಮನ ಆಜ್ಞೆಯ ಮೇರೆಗೆ ಅಲ್ಲಿಯೇ ಪರಸ್ಪರ ವಿಚಾರ ವಿನಿಮಯ ಮಾಡಬೇಕೆಂದು ಗೊತ್ತುಪಡಿಸಿಕೊಂಡರು.

✡



Printed & published by P. S. Bhat for the Jayakarnataka News Printers Private Ltd. at the Samyukta Karnataka Press, Koppikar Road, Hubli. 580020- Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramanian Phone: 842201; New Delhi: P. R. Chopra Phone: 224130.

KASTURI PRICE: 1-25 Regd. No. KRNG
Registered with the Registrar of Newspapers for India under No. 3633/57